
# ಸಹಕಾರ ತತ್ವಗಳು ಮಾರ್ಗ ಸೂಚಿ




**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಸೌಹಾರ್ದ ಸಹಕಾರಿ ಸೌಧ, ನಂ.68, 17&18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055

ದೂ : 080-23378375-80, ವೆಬ್ ತಾಣ : www.Souharda.coop

# ಸಹಕಾರ ತತ್ವಗಳು
# ಮಾರ್ಗ ಸೂಚಿ

– ಶಶಿಧರ ಎಲೆ

ಸಹಕಾರ ಸಂಘಗಳ ಅಪರ ನಿಬಂಧಕರು (ನಿ)

# COOPERATIVES PRINCIPLES
# GUIDELINE NOTES

- SHASHIDAR YALE

Additional Registrar of Cooperative Societies (Retd)

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ಬೆಂಗಳೂರು
2022

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

# ಸಹಕಾರ ತತ್ವಗಳು – ಮಾರ್ಗ ಸೂಚಿ


**ಪ್ರಕಾಶಕರು** : **ವ್ಯವಸ್ಥಾಪಕ ನಿರ್ದೇಶಕರು,**
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಸೌಹಾರ್ದ ಸಹಕಾರಿ ಸೌಧ, ನಂ.68, 17&18ನೇ ಅಡ್ಡರಸ್ತೆ ಮಧ್ಯೆ,
ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055
ದೂರವಾಣಿ: 080–23378375–80
ಇ–ಮೇಲ್: souharda@souharda.coop
ವೆಬ್‌ಸೈಟ್: www.souharda.coop

**ಮುದ್ರಣ ವರ್ಷ** : ಸೆಪ್ಟೆಂಬರ್ 2022

**ಪುಟಗಳು** : 84

**ಪ್ರತಿಗಳು** : 500

**ಬೆಲೆ** : 60/–

**ವಿನ್ಯಾಸ** : **ಶಂಕರ್ ಎಸ್**

**ಮುದ್ರಕರು** :

# ಪರಿವಿಡಿ


| ವಿಷಯಗಳು | ಪುಟ ಸಂಖ್ಯೆ |
|---|---|
| ಸಹಕಾರ ತತ್ವಗಳು – ಮಾರ್ಗಸೂಚಿ | 7–11 |
| 1ನೇ (ಒಂದನೇ) ತತ್ವ ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ | 12–19 |
| 2ನೇ (ಎರಡನೇ) ತತ್ವ ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ | 20–30 |
| 3ನೇ (ಮೂರನೇ) ತತ್ವ ಸದಸ್ಯ ಆರ್ಥಿಕ ಭಾಗವಹಿಸುವಿಕೆ | 31–41 |
| 4ನೇ (ನಾಲ್ಕನೇ) ತತ್ವ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ | 42–50 |
| 5ನೇ (ಐದನೇ) ತತ್ವ ಶಿಕ್ಷಣ, ತರಬೇತಿ ಮತ್ತು ಮಾಹಿತಿ | 51–60 |
| 6ನೇ (ಆರನೇ) ತತ್ವ ಸಹಕಾರ ಸಂಘಗಳ ನಡುವೆ ಸಹಕಾರ | 61–70 |
| 7ನೇ (ಏಳನೇ) ತತ್ವ ಸಾಮಾಜಿಕ ಕಳಕಳಿ | 71–80 |


**ಟಿಪ್ಪಣಿ :** ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆಯ ಇಂಗ್ಲೀಷ್ ನ COOPERATIVE PRINICPLES -GUIDELINE NOTES ನ ಕನ್ನಡ ಭಾವನುವಾದ ಆಧರಿತ ಪುಸ್ತಕ ಋಣಭಾರ : ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ (ಗ್ರಂಥಋಣ) ಬ್ರುಸೆಲ್ಸ ಬೆಲ್ಜಿಯಂ.

## ಮುನ್ನುಡಿ

ಶ್ರೀ ಶಶಿಧರ ಎಲೆಯವರು ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು ಸಹಕಾರ ಇಲಾಖೆಯಲ್ಲಿ 35 ವರ್ಷಗಳ ಸುದೀರ್ಘ ಅನುಭವ. ಸಹಕಾರ ಸಂಘಗಳ ಸಹಾಯಕ ನಿಬಂಧಕರಾಗಿ ಸಹಕಾರ ಇಲಾಖೆಯಲ್ಲಿ ಪ್ರಾರಂಭವಾದ ಅವರ ಸೇವೆ ರಾಜ್ಯದಾದ್ಯಂತ ಸಹಕಾರ ಇಲಾಖೆಯ ಹಲವು ಗುದ್ದೆಗಳಲ್ಲಿ ಹಾಗೂ ಸಹಕಾರ ಸಂಸ್ಥೆಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ಅನುಭವ. ಇದರ ಜೊತೆಗೆ ಸಹಕಾರ ಶಿಕ್ಷಣ, ತರಬೇತಿ ಕಾರ್ಯಕ್ರಮಗಳಲ್ಲಿ ವಿಶೇಷ ಆಸಕ್ತಿ. ಸಹಕಾರಿ ಕ್ಷೇತ್ರದ ಹಲವು ವಿಷಯಗಳ ಬಗ್ಗೆ ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಿಗೆ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಸಹಕಾರ ಕಾನೂನು ಅದಕ್ಕೆ ವಿಶೇಷ ವಿವರಣೆಯನ್ನು ಹೊಂದಿದ ಪುಸ್ತಕವನ್ನು ಬರೆದಿರುತ್ತಾರೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಹಿರಿಯ ಸಹಕಾರಿಗಳು ನಿವೃತ್ತ ಸಹಕಾರಿ ಇಲಾಖಾಧಿಕಾರಿಗಳು ಬರೆದಿರುವ ಸಹಕಾರಿ ಕ್ಷೇತ್ರದ ಬಗ್ಗೆ ಮತ್ತು ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಆಯ್ಕೆ ಮಾಡಿ ಪ್ರತಿವರ್ಷ ವಾರ್ಷಿಕ ಸಾಮಾನ್ಯ ಸಭೆಯ ದಿನದಂದು ಬಿಡುಗಡೆಮಾಡುತ್ತ ಬಂದಿದೆ. ಸಹಕಾರಿಗಳಿಗೆ ಈ ಪುಸ್ತಕಗಳ ಮೂಲಕ ಸಹಕಾರ ಕ್ಷೇತದ್ರ ಬಗ್ಗೆ ಜ್ಞಾನವನ್ನು ಹೆಚ್ಚಿಸುವ ಕಾರ್ಯ ಮಾಡುತ್ತಿದೆ. ಈ ಕಾರ್ಯವನ್ನು ಅನೇಕ ಸಹಕಾರಿಗಳು ಹಾಗೂ ಅಧಿಕಾರಿಗಳು ಕೂಡ ಮೆಚ್ಚಿರುವುದು ಸ್ವಾಗತಾರ್ಹ ಹಾಗೂ ಸಂಯುಕ್ತ ಸಹಕಾರಿಗೆ ಹೆಮ್ಮೆ ತಂದಿದೆ.

ಪ್ರಸ್ತುತ ಶ್ರೀ ಶಶಿಧರ ಎಲೆಯವರು ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ಪ್ರಸ್ತುತ ಪಡಿಸಿದ ಸಹಕಾರ ತತ್ವಗಳ ಮಾರ್ಗಸೂಚಿ ಟಿಪ್ಪಣಿಗಳನ್ನು ಕನ್ನಡದಲ್ಲಿ ಭಾಷಾಂತರ ಮಾಡಿ ಪುಸ್ತಕರೂಪದಲ್ಲಿ ಸಿದ್ಧಪಡಿಸಿದ ಪುಸ್ತಕ ಇದಾಗಿದೆ.

ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ತತ್ವಗಳು ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಸಹಕಾರ ತತ್ವಗಳ ನೈಜ ಅರ್ಥ ಪ್ರಾಮಾಣಿಕ ಅನುಷ್ಠಾನಕ್ಕಾಗಿ ಸಹಕಾರಿಗಳು ಈ ಪುಸ್ತಕವನ್ನು ಒಮ್ಮೆ ಅಧ್ಯಯನ ಮಾಡುವುದು ಅಗತ್ಯ. ಶ್ರೀಯುತ ಶಶಿಧರ ಎಲೆಯವರು ಸಿದ್ಧಪಡಿಸಿದ ಈ ಪುಸ್ತಕವನ್ನು ಸಂಯುಕ್ತ ಸಹಕಾರಿಗೆ ಮುದ್ರಣ ಹಾಗೂ ಪ್ರಕಾಶನಕ್ಕಾಗಿ ಒದಗಿಸಿರುವುದಕ್ಕಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತು ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಹಕಾರಿ ಕ್ಷೇತ್ರದ ಆಸಕ್ತ ಸಹಕಾರಿಗಳು ಸಹಕಾರಿ ಇಲಾಖಾಧಿಕಾರಿಗಳು ಸಹಕಾರಿ ಕಾರ್ಯಕರ್ತರು, ಈ ಪುಸ್ತಕದ ಪ್ರಯೋಜನವನ್ನು ಪಡೆದು ಸಹಕಾರ ಕ್ಷೇತ್ರದ ಬಗ್ಗೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಂಯುಕ್ತ ಸಹಕಾರಿಯ ಹಾಗೂ ಶ್ರೀ ಶಶಿಧರ ಎಲೆಯವರು  ಪ್ರಯತ್ನವೂ ಸಾರ್ಥಕವಾಗುತ್ತದೆ.

**– ಜಿ. ನಂಜನಗೌಡ**
**ಅಧ್ಯಕ್ಷರು**

# ಸಹಕಾರ ತತ್ವಗಳು – ಮಾರ್ಗ ಸೂಚಿ

**ಪರಿಚಯ :**

ವಿಶ್ವದ ಆರ್ಥಿಕ ಬೆಳವಣಿಗೆಯಲ್ಲಿ ಸಹಕಾರ ಸಂಘಗಳು ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬಂದಿವೆ. ಸಹಕಾರ ವಲಯ ಇತರೆ ವಲಯಕ್ಕಿಂತ ವಿಭಿನ್ನ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿವೆ. ಬಂಡವಾಳ ಹೂಡಿಕೆ ಯಜಮಾನಿಕೆಯ ಔದ್ಯೋಗಿಕ ಸಂಸ್ಥೆಗಳಲ್ಲಿ ಶ್ರೀಮಂತರು ಮಾತ್ರ ಭಾಗಿದಾರರಾಗಲು ಸಾಧ್ಯ. ಸಾಮಾನ್ಯ, ಅತಿ ಸಾಮಾನ್ಯ, ಕಾರ್ಮಿಕರು, ಸಣ್ಣ ಉದ್ದಿಮೆದಾರರು, ಉದ್ಯೋಗಸ್ಥರು, ಸದಸ್ಯರಾಗಿ ಸಂಪತ್ತು ಸೃಷ್ಟಿಸಲು ಕಾರಣರಾಗಿರುತ್ತಾರೆ. ಬಡವಬಲ್ಲಿದನ ಮಧ್ಯೆ ಇರುವ ಅಸಮಾನತೆಯ ಕಂದರ ನಿರ್ಮೂಲನೆ ಮಾಡಲು ಇರುವ ಮಾರ್ಗ, ಸಹಕಾರ ಮಾರ್ಗ. ಅಸಮಾನತೆಯನ್ನು ಹೋಗಲಾಡಿಸದಿದ್ದಲ್ಲಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಪರಿಸರದ ಮತ್ತು ರಾಜಕೀಯ ದುಷ್ಪರಿಣಾಮಗಳು ಊಹಿಸಲು ಅಸಾಧ್ಯ.

ಈ ದಿಸೆಯಲ್ಲಿ 1895ರಲ್ಲಿ ಲಾಭದಾಯಕವಲ್ಲದ ಸಂಸ್ಥೆಯಾಗಿ, ಸಾಮಾಜಿಕ ಔದ್ಯೋಗಿಕ ಸಂಸ್ಥೆಯಾಗಿ ಸಹಕಾರ ಸಂಘಗಳನ್ನು ರೂಪುಗೊಳಿಸುವ ಉದ್ದೇಶದಿಂದ ಅಂತರಾಷ್ಟ್ರೀಯ ಮೈತ್ರಿ ಸಂಸ್ಥೆ ಉದಯವಾಯಿತು. ಅಂದಿನಿಂದ ಸಹಕಾರ ತತ್ವಗಳ ವಕ್ತಾರನಾಗಿ ಕರ್ತವ್ಯ ನಿರ್ವಹಿಸುತ್ತಿದೆ. 100 ರಾಷ್ಟ್ರಗಳ 300 ಸಂಸ್ಥೆಗಳ ಸದಸ್ಯತ್ವ ಹೊಂದಿದೆ. 1995ರ ಸಾಮಾನ್ಯ ಸಭೆಯಲ್ಲಿ ಸಹಕಾರ ಅಸ್ಮಿತೆ, ಮೌಲ್ಯಗಳು ಮತ್ತು ತತ್ವಗಳು (ವಿವರಣೆ "The statement") ಮತ್ತು ವಾಖ್ಯಾನವನ್ನು ಅಂಗೀಕರಿಸಲಾಯಿತು.

ಪ್ಯಾರಿಸ್‌ನ 1937ರ, ವಿಯನ್ನಾದ 1966ರ ಮ್ಯಾಂಚಸ್ಟರ್‌ನ 1995ರ ಅಧಿವೇಶನಗಳು ಸಹಕಾರ ತತ್ವಗಳನ್ನು ಪುನಃರೂಪಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿರುತ್ತದೆ.

ಇಂಗ್ಲೇಂಡ್‌ನ ರಾಕ್‌ಡೇಲ್ ಅಗ್ರಗಾಮಿಗಳ ವಸ್ತು ಸಂಗ್ರಹಾಲಯದಲ್ಲಿ ಸಹಕಾರ ಅಸ್ಮಿತೆಯ ಬಗ್ಗೆ ಹೀಗೆಂದು ಬರೆಯಲಾಗಿದೆ. "ಸಹಕಾರ ಆದರ್ಶವು ಮಾನವ ಸಮಾಜದಷ್ಟೇ ಹಳೆಯದು. ಸಂಘರ್ಷ ಮತ್ತು ಸ್ಪರ್ಧೆಯಾಗಿ ಆರ್ಥಿಕ ಪ್ರಗತಿಗಾಗಿ ಕಲ್ಪನೆ ಮೂಡಿದ್ದು ಮಾತ್ರ ನವೀನ. 19ನೇ ಶತಮಾನದಲ್ಲಿ ಅಭಿವೃದ್ಧಿಗೊಂಡ ಈ ಕಲ್ಪನೆ ಸಮಾಜದ ಸಂವಿಧಾನದಲ್ಲಿಯೇ ಅಂತರ್ಗತವಾದ ಕಲ್ಪನೆಯಾಗಿದ್ದು ಅದರ ಅಭಿವ್ಯಕ್ತಿ ಮಾತ್ರ ಎಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ಆದರೆ ರಭಸ ಆರ್ಥಿಕ ಬೆಳವಣಿಗೆಯ ಮಹಾಪೂರದಲ್ಲಿ ಇದು ನಶಿಸುತ್ತಿದೆ. ಮತ್ತು ಮರೆಯಲಾಗುತ್ತಿದೆ".

ಸಹಕಾರ ತತ್ವಗಳನ್ನು ರಾಕ್‌ಡೇಲ್ ತತ್ವಗಳು ಎಂದು ಕರೆಯಲಾದರೂ ರಾಕ್‌ಡೇಲ್ ಅಗ್ರಗಾಮಿಗಳಲ್ಲದೆ ವಿವಿಧ ದೇಶಗಳಲ್ಲಿ ಅದರಲ್ಲಿಯೂ ಪ್ರಾನ್ಸ್‌ನ ಚಾರ್ಲ್‌ಗೈಡ್ ಕೆನಡಾದ ಕುಬೆಕ್‌ನಲ್ಲಿನ, ಆಲ್ಫನ್ಸೊ ಮತ್ತು ಡೊಲಿಮನ್‌ಡೆಸ್‌ಜರ್ನಿಸ್ ಜರ್ಮನಿಯ ಡೆಲಿಛ್‌ನಲ್ಲಿ ಫ್ರೆಡ್ರಿಕ್ ವಿಲ್‌ಹೆಲ್ಮ್‌ರಾಫಿಸನ್ ಮತ್ತು ಹೆರ್ಮನ್‌ಷ್ಲೂಝ್, ಐರ್ಲೆಂಡ್‌ನ ಹೊರೆಸ್‌ಪ್ಲಂಕೆಟ್ ಸ್ಪೇನ್‌ನ ಮೋಂಡ್ರಗಾವ್‌ನ ಫಾದರ್ ಜೋಸ್ ಮರಿಯಾ ರವರ ಕೊಡುಗೆಯನ್ನು ಮರೆಯಲಾಗದು.

1995ರಲ್ಲಿ ತತ್ವಗಳನ್ನು ಪುನರ್‌ರೂಪಿಸಲಾಯಿತಾದರೂ ಅಂದಿನಿಂದ ಸಮಾನ ಮತ್ತು ಆರ್ಥಿಕತೆ ವಿಶ್ವಾದ್ಯಂತ ಬದಲಾಗಿದೆ, ಬದಲಾಗುತ್ತಿದೆ. ತಾಂತ್ರಿಕವಾಗಿ ಕ್ರಾಂತಿಯಾಗಿದೆ. ಈ ದೃಷ್ಟಿಯಿಂದ ಸಹಕಾರ ತತ್ವಗಳ ಪಾಲನೆ ಬಗ್ಗೆ ಮತ್ತೊಮ್ಮೆ ಅಭ್ಯಯಿಸಿ ಮಾರ್ಗದರ್ಶಿ ಟಿಪ್ಪಣಿ ತಯಾರಿಕೆಯನ್ನು ಮನಗಂಡು ಅಂತರಾಷ್ಟ್ರೀಯ ಮೈತ್ರಿ ಸಂಸ್ಥೆಯು ಒಂದು ಸಮಿತಿ ರಚಿಸಿ ತಜ್ಞರು ಅವಲೋಕನ ಮಾಡಿ ಅದನ್ನು ತಯಾರಿಸಲು ಕಾರ್ಯರೂಪಿಸಿತು. ಮೂರು ವರ್ಷಗಳ ಪರಿಶ್ರಮದಿಂದ ವಿಶ್ವಾದ್ಯಂತ ಸಹಕಾರ ಸಂಘಗಳನ್ನು ಅಧ್ಯಯನ ಮಾಡಿ ಮಾರ್ಗದರ್ಶಿ ಟಿಪ್ಪಣಿಗಳನ್ನು ತಯಾರು ಮಾಡಿದೆ. ಈ ಟಿಪ್ಪಣಿ ಪುಸ್ತಕವನ್ನು ಕನ್ನಡಕ್ಕೆ ಭಾವಾನುವಾದ ಮಾಡಿ ಮೂಲಕ್ಕೆ ಧಕ್ಕೆ ಭಾರದಂತೆ ನಿರೂಪಣೆ ಮಾಡಲಾಗಿದೆ. ಸಮಿತಿಯ ಪಟ್ಟಿ ಮೈತ್ರಿ ಸಂಸ್ಥೆಯ ಅಧ್ಯಕ್ಷರು ತತ್ವಸಮಿತಿಯ ಅಧ್ಯಕ್ಷರ ಅಭಿಪ್ರಾಯಗಳನ್ನು ಈ ಕೆಳಕಂಡಂತೆ ಒದಗಿಸಿದೆ.

**ವಿಶ್ವದಲ್ಲಿನ ಸಹಕಾರ ಅಸ್ಮಿತೆಯ (Identity )ವಿವರಣೆ ನೀಡುವ ಜವಾಬ್ದಾರಿ ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆಯದಾಗಿದೆ.**

- "ಸಹಕಾರ ಮೌಲ್ಯಗಳು ಮತ್ತು ಸಹಕಾರ ತತ್ವಗಳ ಬಗ್ಗೆ ವಿಶ್ವಾದ್ಯಂತ ಅತ್ಯಂತ ಪ್ರಾಮುಖ್ಯತೆಗಳಿಸಿದೆ. ಸಾರ್ವಜನಿಕ ನೀತಿಗಳಲ್ಲಿ ಇವುಗಳನ್ನು ಉಲ್ಲೇಖಿಸಲಾಗುತ್ತಿದೆ. ಅನೇಕ ರಾಷ್ಟ್ರಗಳಲ್ಲಿ ವಿಶ್ವ ಸಂಸ್ಥೆ ಮತ್ತು ಅಂತರಾಷ್ಟ್ರೀಯ ಕಾರ್ಮಿಕ ಒಕ್ಕೂಟ ಶಾಸನಗಳಲ್ಲಿ ಇವುಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ".
- 1844ರಿಂದ ಒಪ್ಪಿಕೊಂಡ ಸಹಕಾರ ತತ್ವಗಳು ಕಾಲಕಾಲಕ್ಕೆ ಸನ್ನಿವೇಶಕ್ಕೆ ತಕ್ಕಂತೆ ಬದಲಾಗುತ್ತಿದ್ದು, ಈ ತತ್ವಗಳ ತಿದ್ದುಪಡಿ ಅವಶ್ಯಕತೆ ಇದೆಯೇ ಎಂಬುದರ ಬಗ್ಗೆ 2011, 2012ರ ಸಾಮಾನ್ಯ ಸಭೆ ಪರಿಶೀಲಿಸಿತು ಮತ್ತು ತತ್ವಗಳ ಪಾಲನೆಗೆ ಸೂಕ್ತ ಮಾರ್ಗದರ್ಶನದ ಅವಶ್ಯಕತೆಯನ್ನು ಗಣನೆಗೆ ತೆಗೆದುಕೊಂಡಿತು. ಇದರ ಪರಿಣಾಮವಾಗಿ "ತತ್ವಗಳ ಸಮಿತಿ" ರಚಿಸಲಾಗಿ ಈ ಸಮಿತಿಯು ಮೂರು ವರ್ಷಗಳ ಕಠಿಣ ಪರಿಶ್ರಮದೊಂದಿಗೆ "ಮಾರ್ಗದರ್ಶಿ ಟಿಪ್ಪಣಿ"ಯನ್ನು ರಚಿಸಿದೆ.
- ತತ್ವಗಳು "ಜೀವಂತ"ವಾಗಿದೆ. ವಾಣಿಜ್ಯ, ಆರ್ಥಿಕ ಪರಿಸರ ಮತ್ತು ಬೇಡಿಕೆಯ ಜಾಲ ವಿಶ್ವಾದ್ಯಂತ ಬದಲಾವಣೆಯಾಗುತ್ತಿದೆ. ಸಹಕಾರ ಸಂಘಗಳ ನೊಂದಣಿ ಮಾಡುವ, ನಿಯಂತ್ರಣ ಮಾಡುವವರ ಅಥವ ವಿಶ್ವದ ಸ್ಥಳೀಯ, ರಾಷ್ಟ್ರೀಯ ಪ್ರಾದೇಶಿಕ ಆರ್ಥಿಕತೆಯ ಮೇಲ್ವಿಚಾರಕರಿಗೂ ಕೂಡ ಇದು ಮಾರ್ಗದರ್ಶಿಯಾಗಿದೆ.
- ವಿಶ್ವದ ಆರ್ಥಿಕತೆಯ ಮೇಲೆ ಒದಗಬಹುದಾದ ಯಾವುದೇ ಬೆದರಿಕೆಯನ್ನು ಅದರ ಬಹುತ್ವವೇ ಎದುರಿಸಬಲ್ಲದು ಎಂಬುದು ಸಹಕಾರಿಗಳ ನಂಬುಗೆ.
- ವಿಶ್ವದ ಆರ್ಥಿಕತೆಯಲ್ಲಿ ಸಹಕಾರ ಸಂಘಗಳ ತಮ್ಮ ವ್ಯವಹಾರಗಳಲ್ಲಿ ಅತಿ ಹೆಚ್ಚಿನ ವೈವಿಧ್ಯಯಮಗೊಳಿಸುವುದು ಸಹಕಾರದ ಆರೋಗ್ಯಕರ ಬೆಳವಣಿಗೆ ಯ ಅವಶ್ಯಕತೆಯಾಗಿದ್ದು ಈ ದಿಸೆಯಲ್ಲಿ ಸಾರ್ವಜನಿಕರೊಡನೆ ಚರ್ಚೆ ಅವಶ್ಯವಿದ್ದು ಅಂತರಾಷ್ಟ್ರೀಯ ಮೈತ್ರಿ ಸಂಸ್ಥೆ ನಾಯಕತ್ವ ವಹಿಸುತ್ತದೆ.
- ಪ್ರಸಕ್ತವಾಗಿ ಮತ್ತು ಭವಿಷ್ಯದಲ್ಲಿ ಈ ಮಾರ್ಗದರ್ಶಿಯು ವೇಗವರ್ಧಕವಾಗಿ ಕಾರ್ಯನಿರ್ವಹಿಸುತ್ತದೆ ಎಂಬುದು ನಮ್ಮ ನಂಬುಗೆಯಾಗಿದೆ.

**ಪಾಲಿನ್‌ಗ್ರೀನ್**

**ಅಧ್ಯಕ್ಷರು, ಅಂತರಾಷ್ಟ್ರೀಯ ಮೈತ್ರಿ ಸಂಸ್ಥೆ.**

- ಅಂತರ ರಾಷ್ಟ್ರೀಯ ಮೈತ್ರಿ ಸಂಸ್ಥೆಯ ಸಹಕಾರ ಅಸ್ಮಿತೆಯ ವಿವರಣೆಯ ಅವಿಭಾಜ್ಯ ಅಂಗ ಸಹಕಾರ ತತ್ವಗಳು.
- ಸಹಕಾರ ತತ್ವಗಳು ಎರಡು ಆಯಾಮಗಳನ್ನು ಹೊಂದಿವೆ. ಮೊದಲನೆಯದು ಸಹಕಾರ ಸಂಘವು ಸ್ವಯಂ ಇಚ್ಛೆ ಮೇರೆಗೆ ತಮ್ಮ ಸಾಮಾನ್ಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆಗಳ ಮತ್ತು ಆಕಾಂಕ್ಷೆಗಳ ಪೂರೈಕೆಗಾಗಿ ವ್ಯಕ್ತಿಗಳು ರೂಪಿಸಿಕೊಂಡಿರುವ ಸಂಘ. ಎರಡನೆಯದು ಆಸೆ ಆಕಾಂಕ್ಷೆಗಳನ್ನು ಸಮೂಹ ಒಡೆತನ ಮತ್ತು ಪ್ರಜಾಸತ್ತಾತ್ಮಕ ನಿಯಂತ್ರಿತ ಔದ್ಯೋಗಿಕ ಸಂಸ್ಥೆ.
- ಸದಸ್ಯರ ಅವಶ್ಯಕತೆ ಆಕಾಂಕ್ಷೆಗಳ ಈಡೇರಿಕೆಗಾಗಿ ದೈನಂದಿನ ಆಡಳಿತದಲ್ಲಿ ರೂಢಿಸಿಕೊಂಡಿರುವ ಏಳು ಸಹಕಾರ ತತ್ವಗಳು ಇದರ ಬುನಾದಿ/ತಳಪಾಯ
- ಸಹಕಾರ ತತ್ವಗಳು ಶಿಲಾಶಾಸನಗಳಲ್ಲ ಅಥವ ಕಡ್ಡಾಯ ನಿಯಮಗಳಲ್ಲ ಆದರೆ ನೈತಿಕತೆ ಮತ್ತು ದೂರದೃಷ್ಟಿಯಿಂದ ಆಯಾ ರಾಷ್ಟ್ರದ ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ, ಶಾಸನಬದ್ಧ ನಿಯಂತ್ರಣ ವ್ಯವಸ್ಥೆಗೊಳಪಟ್ಟಂತೆ ಅನುಸರಿಸುವುದು.

- ಸಹಕಾರ ಸಂಘಗಳು ಮಾತ್ರ ಅಂತರಾಷ್ಟ್ರೀಯವಾಗಿ ಒಪ್ಪಿತ ವ್ಯಾಖ್ಯೆಯುಳ್ಳ, ಮೌಲ್ಯಗಳುಳ್ಳ, ತತ್ವಗಳುಳ್ಳ, ಔದ್ಯೋಗಿಕ ಸಂಸ್ಥೆಗಳಾಗಿವೆ.
- ಈ ಮಾರ್ಗದರ್ಶಿಯ ಸಹಕಾರ ತತ್ವಪಾಲನೆಗೆ ವಿವರಣಾತ್ಮಕವಾಗಿ ಪ್ರಾಯೋಗಿಕ ಅನುಷ್ಠಾನದ ಬಗ್ಗೆ ಮಾಹಿತಿ ನೀಡುತ್ತದೆ. ಇದರ ಪ್ರಥಮ ವೀಕ್ಷಕರು ಮುಂದೆ ರೂಪುಗೊಳ್ಳುತ್ತಿರುವ ಯುವ ನಾಯಕರು.
- ಸಹಕಾರ ತತ್ವಗಳನ್ನು ರೂಢಿಗೆ ತರುವ, ವಿಶ್ವದ್ಯಾಂತ, ಸಹಕಾರ ಶಿಕ್ಷಕರು, ಶಿಕ್ಷಣಾರ್ಥಿಗಳು ಪೀಳಿಗೆಯಿಂದ ಪೀಳಿಗೆಗೆ ಸಹಕಾರ ತತ್ವಗಳ ಪಾಲನೆಯ ಕ್ರಮಗಳನ್ನು ಮುಂದುವರಿಸಲು ಈ ಮಾರ್ಗದರ್ಶಿಯು ಸಹಾಯವಾಗುತ್ತದೆ.
- ಈ ಸಹಕಾರ ತತ್ವ ಮಾರ್ಗದರ್ಶಿ ಟಿಪ್ಪಣಿಯನ್ನು ತತ್ವ ಸಮಿತಿಯು ಡಾವಿಡ್‌ರೋಡ್ರಿಗಸ್ ಅಂತರಾಷ್ಟ್ರೀಯ ಸಹಕಾರ ವಸತಿ, ಅಧ್ಯಕ್ಷರು ಆಳವಾಗಿ ಅಧ್ಯಯನ ನಡೆಸಿದ ನಂತರ ಕರಡನ್ನು ಅನೇಕ ಸಂಸ್ಥೆಗಳಿಗೆ ಕಳುಹಿಸಿ ಸಲಹೆ, ಸೂಚನೆಗಳನ್ನು ಪಡೆದು ಸೂಕ್ತವಾಗಿ ಅಂತಿಮ ರೂಪನ್ನು ನೀಡಿರುತ್ತದೆ.
- ಸಹಕಾರ ತತ್ವಗಳು ಜಡ್ಡ ಅಲ್ಲ, ಸದಾಚಾಲನಶಕ್ತಿ ಪಡೆದಿರುತ್ತದೆ. ಚಳುವಳಿಯು ಎದುರಿಸುವ ನೂತನ ಸವಾಲು ಮತ್ತು ಅವಕಾಶಗಳಿ ಗನುಗುಣವಾಗಿ ವಿಕಾಸಹೊಂದುತ್ತದೆ.

**ಜೀನ್–ಲೂಯೀಸ್‌ಬಾನ್ಸೆಲ್**

**ತತ್ವ ಸಮಿತಿ ಅಧ್ಯಕ್ಷರು.**

**ತತ್ವ ಸಮಿತಿ ಸದಸ್ಯರು**

1. ಜೀನ್–ಲೂಯೀಸ್‌ಬಾನ್ಸೆಲ್ – ಫ್ರಾನ್ಸ್ (ಅಧ್ಯಕ್ಷರು)
2. ಅಖಿರಾ ಬಾನ್ಸಾಯ್ – ಜಪಾನ್
3. ಸುಲೇಮಾನ್ ಚಾಂಬೋ – ಟಾಂಜಾನಿಯಾ
4. ಡಾಂಟೇ ಕ್ರಾಕೊಜ್ನಾ – ಅರ್ಜಂಟೈನಾ
5. ರಾಮೋನ್ ಇಂಪಿರೀಯಲ್ ಝುನೀಗಾ – ಮೆಕ್ಸಿಕೋ
6. ಅಕೈರಾ ಕುರಿಮಾಟೋ – ಜಪಾನ್
7. ಜಾನ್ ಅಂಡರ್ಸ್ ಲಾಗೋ – ಸ್ವೀಡನ್
8. ಮೆರ್ವಿನ್ ವಿಲ್ಸನ್ – ಯುನೈಟೆಡ್ ಕಿಂಗ್‌ಡಮ್

**ಕರಡಿನ ಮೊದಲ ಲೇಖಕರು**

ತತ್ವ – 1 ಸ್ವಯಂ ಹಾಗೂ ಮುಕ್ತ ಸದಸ್ಯತ್ವ

ಅಕೈರಾ ಕುರಿಮಾಟೋ

ಜಪಾನಿನ ಬಳಕೆದಾರರ ಸಹಕಾರ ಸಂಸ್ಥೆ

ತತ್ವ – 2 ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ (ನಿಯಂತ್ರಣ)

ಜೀನ್ – ಪ್ರಾಂಕೋಸ್ ಡ್ರಪ್ಯೆರಿ

ಆರ್.ಇ.ಸಿ.ಎಂ.ಎ. ಪ್ಯಾರಿಸ್ ಫ್ರಾನ್ಸ್ ಇದರ ಮುಖ್ಯ ಸಂಪಾದಕರು.

ತತ್ವ – 3 ಸದಸ್ಯ ಆರ್ಥಿಕ ಭಾಗವಹಿಸುವಿಕೆ

ಜೀನ್ – ಲೂಯೀಸ್ ಬಾನ್ಸೆಲ್

ಪತ್ತಿನ ಸಹಕಾರಿ

ತತ್ವ – 4 ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ –

ಸೊಂಜಾ ನೋವ್‌ಕೊವಿಕ್ ಫ್ರಾನ್ಸ್

ಸೇಂಟ್ ಮೆರಿಸ್ ಯೂನಿವವರ್ಸಿಟಿ, ನೋವಾ ಸ್ಕಾಟೀಯಾ ಕೆನಡಾ

ತತ್ವ – 5 ಶಿಕ್ಷಣ, ತರಭೇತಿ, ಮಾಹಿತಿ (ಪ್ರಚಾರ)

ಮೆರ್ವಿನ್ ವಿಲ್ಸನ್ ಮತ್ತು ಲಿಂಡಾಷಾ

ಸಹಕಾರ ಕಾಲೇಜ್ ಯು.ಕೆ

ತತ್ವ – 6 ಸಹಕಾರ ಸಂಘಗಳ ನಡುವೆ ಸಹಕಾರ–

ಇಮಿಲಿ ಲಿಪ್ಪಾಯ್ ಶೆನೆ– ಮಟ್ಟಾಡೇವೀಸ್,

ಆರಾನ್‌ರಿಸೆರ್ ಯು.ಎಸ್.ಎ.

ತತ್ವ – 7 ಸಮುದಾಯದ ಬಗ್ಗೆ ಕಳಕಳಿ

ಡಾಂಟೇಕ್ರಾಸೋಗ್ನ,

ಸ್ಕೂಲ್ ಆಫ್ ಲಾ, ಬ್ಯೂನಸ್‌ಏರೀಸ್ ವಿಶ್ವ ವಿದ್ಯಾಲಯ ಅರ್ಜೆಂಟೈನಾ

**ಸಹಕಾರ ಸಂಘದ ವಾಖ್ಯಾನ**

ಸಹಕಾರ ಸಂಘವೆಂದರೆ ವ್ಯಕ್ತಿಗಳ ಸ್ವಾಯತ್ತತೆಯಿಂದ ಒಟ್ಟುಗೂಡಿ ತಮ್ಮ ಸಾಮಾನ್ಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆಗಳ ಮತ್ತು ಆಕಾಂಕ್ಷೆಗಳನ್ನು ಪೂರೈಸಲು ಜಂಟಿ ಯಜಮಾನಿಕೆಯ ಪ್ರಜಾಸತ್ತಾತ್ಮಕ ಹತೋಟಿಯುಳ್ಳ ಸ್ವತಂತ್ರ ಸಂಘವಾದ ಔದ್ಯೋಗಿಕ ಸಂಸ್ಥೆ

**ಸಹಕಾರ ಮೌಲ್ಯಗಳು**

ಸಹಕಾರ ಸಂಘಗಳು ಮೌಲ್ಯಗಳಾದ ಸ್ವಸಹಾಯ, ಸ್ವಯಂ ಜವಾಬ್ದಾರಿ, ಪ್ರಜಾಪ್ರಭುತ್ವ, ಸಮಾನತೆ, ಬಂಡವಾಳ (ಮೌಲ್ಯ ವರ್ಧಿಕ) ಮತ್ತು ಒಗ್ಗಟ್ಟುಗಳ ಮೇಲೆ ನಿಂತಿದೆ. ಸಹಕಾರ ಸ್ಥಾಪಕರಾದ ಪರಂಪರೆಯಾಗಿ ಸಹಕಾರ ಸಂಘಗಳ ಸದಸ್ಯರು ನೈತಿಕ ಮೌಲ್ಯಗಳಾದ ಪ್ರಾಮಾಣಿಕತೆ, ಮುಕ್ತ ಮನಸ್ಸು, ಸಾಮಾಜಿಕ ಜವಾಬ್ದಾರಿ ಮತ್ತು ಇತರರ ಬಗ್ಗೆ ಕಾಳಜಿ ವಹಿಸುವುದಾಗಿರುತ್ತದೆ.

**1. ಸ್ವಯಂ ಮತ್ತು ಮುಕ್ತ ಸದಸ್ಯತ್ವ**

ಸಹಕಾರ ಸಂಘಗಳು ಸ್ವಯಂ ಸಂಸ್ಥೆಗಳು. ಸದಸ್ಯತ್ವದ ಜವಾಬ್ದಾರಿ ಹೊರಲು ಒಪ್ಪುವ ಸೇವೆಯನ್ನು ಉಪಯೋಗಿಸಿಕೊಳ್ಳುವ ಎಲ್ಲ ವ್ಯಕ್ತಿಗಳಿಗೂ ತೆರೆದಿದೆ. ಲಿಂಗ, ಸಾಮಾಜಿಕ, ಜನಾಂಗೀಯ, ರಾಜಕೀಯ ಅಥವ ಧಾರ್ಮಿಕ ಭೇದ ಭಾವಗಳಿ

ರುವುದಿಲ್ಲ.

**2. ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ (ನಿಯಂತ್ರಣ)**

ಸಹಕಾರಿ ಸಂಘಗಳ ಪ್ರಜಾಸತ್ತಾತ್ಮಕ ಸದಸ್ಯ ನಿಯಂತ್ರಣವುಳ್ಳ ಸಂಸ್ಥೆಗಳು, ಸದಸ್ಯರು ನೀತಿಗಳ ರೂಪಿಸುವಲ್ಲಿ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳವಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುತ್ತಾರೆ.

**3. ಸದಸ್ಯ ಆರ್ಥಿಕ ಪಾಲ್ಗೊಳ್ಳುವಿಕೆ**

ಸಹಕಾರ ಸಂಘದ ಒಂಡವಾಳವನ್ನು ಸದಸ್ಯರು ಹೂಡಿಕೆ ಮಾಡಿ ಪ್ರಜಾಸತ್ತಾತ್ಮಕ ವಾಗಿ ನಿಯಂತ್ರಿಸುತ್ತಾರೆ. ಕನಿಷ್ಠ ಒಂದು ಭಾಗವಾದರೂ ಸಾಮಾನ್ಯವಾಗಿ ಎಲ್ಲ ಸದಸ್ಯರ ಆಸ್ತಿಯಾಗಿರುತ್ತದೆ. ಸದಸ್ಯತ್ವದ ಷರತ್ತಾಗಿ ಹೂಡಿಕೆ ಮಾಡಿರುವ ಬಂಡವಾಳದ ಮೇಲೆ ಸೀಮಿತ ಪರಿಹಾರವನ್ನು ಇದ್ದಲ್ಲಿ ಪಡೆಯುತ್ತಾರೆ. ಉಳಿತಾಯ (ಲಾಭ) ವೇನಾದರೂ ಇದ್ದಲ್ಲಿ ಸದಸ್ಯರು ಮುಂದಿನ ಉದ್ದೇಶಗಳಿಗಾಗಿ ವಿನಿಯೋಗಿಸುತ್ತಾರೆ. ಸಹಕಾರ ಸಂಘ ಅಭಿವೃದ್ಧಿ ಪಡಿಸಲು, ಆಪದ್ಧನ ಸೃಷ್ಟಿಸುವುದರಿಂದ, ಅದರ ಒಂದು ಭಾಗವನ್ನಾದರೂ ಭಾಗ ಮಾಡುವಂತಿಲ್ಲ ಸಹಕಾರ ಸಂಘದೊಡನೆ ಸದಸ್ಯರ ವ್ಯವಹಾರಕ್ಕನುಗುಣವಾಗಿ ಪ್ರತಿಫಲ ನೀಡುವುದು: ಸದಸ್ಯರು ಒಪ್ಪಿದ ಇತರೆ ಚಟುವಟಿಕೆಗಳಿಗೆ ಬೆಂಬಲ ನೀಡುವುದು.

**4. ಸ್ವಾಯುತ್ತತೆ ಮತ್ತು ಸ್ವಾತಂತ್ರ್ಯ**

ಸಹಕಾರ ಸಂಘಗಳು ಸದಸ್ಯರಿಂದ ನಿಯಂತ್ರಿಸಲ್ಪಟ್ಟ ಸ್ವಾಯತ್ತ ಸ್ವಸಹಾಯ ಸಂಸ್ಥೆಗಳು, ಇತರೆ ಸಂಸ್ಥೆಗಳೊಡನೆ ಸರ್ಕಾರವನ್ನೂ ಸೇರಿ ಒಪ್ಪಂದಗಳಿಗೆ ಒಳಗಾದರೆ ಅಥವ ಬಾಹ್ಯಮೂಲಗಳಿಂದ ಬಂಡವಾಳ ಸಂಗ್ರಹಿಸುವುದಾದರೆ ಸದಸ್ಯರ ಪ್ರಜಾಸತ್ತಾತ್ಮಕ ಹತೋಟಿ ಮತ್ತು ಸಹಕಾರ ಸಂಘದ ಸ್ವಾಯತ್ತತೆಗೆ ಧಕ್ಕೆ ಬಾರದ ಷರತ್ತಿಗೆ ಒಳಪಟ್ಟಿರುತ್ತದೆ.

**5. ಶಿಕ್ಷಣ, ತರಭೇತಿ ಮತ್ತು ಮಾಹಿತಿ (ಪ್ರಚಾರ)**

ಸಹಕಾರ ಸಂಘಗಳು ತನ್ನ ಸದಸ್ಯರಿಗೆ, ಚುನಾಯಿತ ಪ್ರತಿ ನಿಧಿಗಳಿಗೆ ವ್ಯವಸ್ಥಾಪಕರುಗಳಿಗೆ ಮತ್ತು ನೌಕರರಿಗೆ, ಶಿಕ್ಷಣ ಮತ್ತು ತರಭೇತಿ ಒದಗಿಸುತ್ತವೆ. ಇವರು ಸಹಕಾರ ಸಂಘದ ಅಭಿವೃದ್ಧಿಗೆ ಧಕ್ಷತೆಯಿಂದ ತಮ್ಮ ಕೊಡುಗೆ ನೀಡುತ್ತಾರೆ. ಸಾರ್ವಜನಿಕರಿಗೆ ಮಾಹಿತಿ ಒದಗಿಸುತ್ತಾರೆ. ಅದರಲ್ಲಿಯೂ ಯುವ ಜನತೆ ಮತ್ತು ಅಭಿಪ್ರಾಯ ರೂಡಿಸಿಕೊಳ್ಳುವ ನಾಯಕರಿಗೆ, ಸಹಕಾರ ಸಂಘದ ಪ್ರಕೃತಿ ಮತ್ತು ಪ್ರತಿಫಲಗಳ ಬಗ್ಗೆ ಪ್ರಚುರ ಪಡಿಸುತ್ತಾರೆ.

**6. ಸಹಕಾರ ಸಂಘಗಳ ನಡುವೆ ಸಹಕಾರ**

ಸಹಕಾರ ಚಳುವಳಿಯಲ್ಲಿ ಸಹಕಾರ ಸಂಘಗಳು ತನ್ನ ಸದಸ್ಯರಿಗೆ ಪರಿಣಾಮಕಾರಿ ಯಾಗಿ ಮತ್ತು ಧಕ್ಷತೆಯಿಂದ ಸೇವೆಸಲ್ಲಿಸಲು, ಸ್ಥಳೀಯ, ರಾಷ್ಟ್ರೀಯ, ಪ್ರಾದೇಶಿಕ ಮತ್ತು ಅಂತರಾಷ್ಟ್ರೀಯ ರಚನೆಗಳ ಮೂಲಕ ಒಗ್ಗೂಡಿ ಕಾರ್ಯ ನಿರ್ವಹಿಸುತ್ತವೆ.

**7. ಸಮುದಾಯದ ಬಗ್ಗೆ ಕಳಕಳಿ**

ಸದಸ್ಯರು ಒಪ್ಪದ ನೀತಿಗೆ ಅನುಸಾರ ತಮ್ಮ ಸಮುದಾಯದ ಸ್ಥಿರ ಅಭಿವೃದ್ಧಿಗೆ ಸಹಕಾರ ಸಂಘಗಳು ಶ್ರಮಿಸುತ್ತವೆ.

ಈ ಮೇಲೆ ತಾತ್ಪರ್ಯಗಳನ್ನು ಒದಗಿಸಿದ್ದು ಮುಂದೆ ವಿವರಣಾತ್ಮಕವಾಗಿ ಪ್ರತಿಯೊಂದು ತತ್ವಗಳನ್ನು ವಿಶ್ಲೇಷಿಸಿ ಮಾರ್ಗದರ್ಶಿ ಟಿಪ್ಪಣಿ ಒದಗಿಸಲಾಗಿದೆ.

# 1ನೇ (ಒಂದನೇ) ತತ್ವ

# ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ

ಸಹಕಾರ ಸಂಘಗಳು ಸ್ವಯಂ ಪ್ರೇರಿತ ಸಂಸ್ಥೆಗಳು, ಸದಸ್ಯತ್ವದ ಜವಾಬ್ದಾರಿ ಗಳನ್ನು ಒಪ್ಪಿಕೊಳ್ಳಲು ಇಚ್ಛೆ ಇದ್ದು ಸೇವೆಗಳನ್ನು ಉಪಯೋಗಿಸಿಕೊಳ್ಳಲು ಶಕ್ತರಾದವರೆಲ್ಲರಿಗೂ ಯಾವುದೇ ಲಿಂಗ, ಸಾಮಾಜಿಕ, ವರ್ಣ, ರಾಜಕೀಯ ಅಥವ ಧಾರ್ಮಿಕ ತಾರತಮ್ಯವಿಲ್ಲದೆ ಸದಸ್ಯತ್ವದ ಮುಕ್ತ ಅವಕಾಶವಿದೆ. (ಸದಸ್ಯತ್ವ ತೆರೆದಿದೆ)

## 1. ಪರಿಚಯ:–

ಈ ಸಹಕಾರ ತತ್ವವು ಒಂದು ಪ್ರಧಾನ ತತ್ವವಾಗಿ 19ನೇ ಶತಮಾನದಿಂದಲೂ ಇರುತ್ತದೆ. ಸದಸ್ಯತ್ವ ಬಯಸುವವರೆಲ್ಲರಿಗೂ ಯಾವುದೇ ತಾರತಮ್ಯ ಮಾಡದೆ ಸದಸ್ಯತ್ವ ನೀಡುವುದು. ಸಹಕಾರ ಸಂಘಗಳೇ ಸ್ವಯಂ ಪ್ರೇರಿತ ಸಂಸ್ಥೆಗಳಾಗಿ ರುವುದರಿಂದ ಸದಸ್ಯರು ಸ್ವಯಂ ಪ್ರೇರಿತರಾಗಿ ಸದಸ್ಯರಾಗಿ ಸಂಘದ ಕಾರ್ಯಾಚರಣೆ ಯಲ್ಲಿ ಬದ್ಧತೆ ತೋರುವುದನ್ನು ಖಾತ್ರಿ ಪಡಿಸುತ್ತದೆ. ಜನರನ್ನು ಸಹಕಾರಿಗಳನ್ನಾಗಿ ಮಾಡಲಾಗದು. ಇತರರೊಡನೆ ಸೇರಿ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆಗಳನ್ನು ಹಂಚಿಕೊಳ್ಳುವ ಮನೋಭಾವನೆಯು ಸ್ವಯಂ ಪ್ರೇರಿತವಾಗಿರಬೇಕು.

1937ರ ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆಯ ವಿಶ್ವ ಸಮ್ಮೇಳನದಲ್ಲಿ ಇದನ್ನು ಮೊದಲ ತತ್ವವಾಗಿ ಪರಿಗಣಿಸಬೇಕೆಂದು ನಿರ್ಧರಿಸಲಾಯಿತು. 1966 ವಿಯಾನ್ನಾ ಸಮ್ಮೇಳನದಲ್ಲಿ ಇದನ್ನು ಪುನರುಚ್ಚರಿಸಲಾಯಿತು. 1995ರ ಮ್ಯಾಂಚಸ್ಟರ್‌ನ ಸಮ್ಮೇಳನದಲ್ಲಿ ತತ್ವಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸಲಾಗಿ ಇದನ್ನು ಅದೇ ರೀತಿಯಲ್ಲಿ ಉಳಿಸಿಕೊಳ್ಳಲಾಯಿತು.

ಸಂಘಟಿತರಾಗಲು ಇರುವ ಸ್ವಾತಂತ್ರ್ಯದ ಹಕ್ಕನ್ನು ಈ ಮೊದಲ ತತ್ವವು ಎತ್ತಿ ಹಿಡಿಯುತ್ತದೆ. ವಿಶ್ವ ಸಂಸ್ಥೆಯ ಮಾನವ ಹಕ್ಕುಗಳು ಇದನ್ನು ಪ್ರತಿಪಾದಿಸುತ್ತದೆ. ಸಹಕಾರ ಸಂಘವನ್ನು ಸೇರುವುದು ಅಥವ ಬಿಡುವುದು ಅವರವರ ವಿವೇಚನೆಗೆ ಬಿಡುವುದು ಯುಕ್ತವಾಗುತ್ತದೆ.

ಸಹಕಾರ ಚಳುವಳಿಯನ್ನು ಹುಟ್ಟು ಹಾಕಿದ ರಾಕ್‌ಡೇರ್ ಅಗ್ರಗಾಮಿಗಳು (1840ರಲ್ಲಿ) ಎಲ್ಲರನ್ನು ಒಳಗೊಳ್ಳುವ ಮತ್ತು ಯಾರನ್ನು ಬಹಿಷ್ಕರಿಸದೆ, ತಾರತಮ್ಯ ಮಾಡದೆ ಆ ಕಾಲದಲ್ಲಿಯೇ ಸಾಮಾಜಿಕವಾಗಿ ಪ್ರಗತಿದಾಯಕವಾಗಿ ಮತ್ತು ಪ್ರಗತಿಪರ ಚಿಂತನಾಶೀಲರಾಗಿದ್ದುದನ್ನು ಮೆಚ್ಚಬೇಕಾಗಿದೆ. ಮಹಿಳೆಯರು ಮತ್ತು ಎಲ್ಲ ಸಮಾಜದ ಎಲ್ಲ ಸ್ಥರದ ಜನರನ್ನು ಸದಸ್ಯರನ್ನಾಗಿ ಒಳಗೊಂಡಿದ್ದರು ಎಂಬುದು ಗಮನಿಸಬೇಕಾದ ಅಂಶವಾಗಿದೆ.

## 2. ಪದಗಳು ಮತ್ತು ಪದಪುಂಜಗಳ ಅರ್ಥೈಸುವಿಕೆ

'ಸಹಕಾರ ಸಂಘಗಳು ಸ್ವಯಂ ಪ್ರೇರಿತ ಸಂಸ್ಥೆಗಳು' ಒಂದು "ಸ್ವಯಂ ಪ್ರೇರಿತ ಸಂಸ್ಥೆ" ಎಂದರೆ ಸದಸ್ಯರು ಸ್ವತಂತ್ರ ಆಯ್ಕೆಯಿಂದ ಸಂಸ್ಥೆ ಸ್ಥಾಪಿಸಿರುತ್ತಾರೆ ಎಂದು ಅರ್ಥ. ಸ್ವಯಂ ಪ್ರೇರಿತ ಸಂಸ್ಥೆಯಾದ್ದರಿಂದ ಅವು ಸ್ವತಂತ್ರತೆ ಮತ್ತು ಹಕ್ಕುಗಳನ್ನು ಹೊಂದಿರಬೇಕು. ಸದಸ್ಯರು ಅದನ್ನು ರಚಿಸಲು ಸ್ವತಂತ್ರತೆ ಹೊಂದಿರಬೇಕು ಮತ್ತು ಇದಕ್ಕೆ ಕಾಯ್ದೆಯಾತ್ಮಕ ರಕ್ಷಣೆ ಇರಬೇಕಾಗುತ್ತದೆ.

"ಎಲ್ಲ ವ್ಯಕ್ತಿಗಳಿಗೂ ತೆರೆದಿದೆ" "ಮುಕ್ತವಾಗಿದೆ" ಎಂಬುದು ಪ್ರತಿ ಒಬ್ಬ ವ್ಯಕ್ತಿಯ ಘನತೆಯನ್ನು ಎತ್ತಿಹಿಡಿಯುತ್ತದೆ ಮತ್ತು ಸಹಕಾರ ಸಂಘವು ಅವರ ಒಳಗೊಳ್ಳುವ ಹಕ್ಕಿಗೆ ಬದ್ಧತೆ ತೋರಿದಂತಾಗುತ್ತದೆ. 19ನೇ ಶತಮಾನದಿಂದಲೇ ಇದು ಮೂಲಭೂತ ತತ್ವವಾಗಿ ಹೊರಹೊಮ್ಮಿದೆ. ಸದಸ್ಯರಾಗಬಯಸುವವರಿಗೆ ಯಾವುದೇ ಅಡೆತಡೆಗಳಾಗಬಾರದು. ಸಹಕಾರ

ಸಂಘದ ಉದ್ಧೇಶವೇನಿದೆ ಅದೊಂದೇ ಸೀಮಿತ ಗೊಳಿಸಬಹುದಾಗಿದೆ.

"ಸೇವೆಗಳನ್ನು ಉಪಯೋಗಿಸಲು ಶಕ್ತರಾಗಿರಬೇಕು" ಎಂಬುದು ಸಹಕಾರ ಸಂಘವನ್ನು ಯಾವುದೋ ಒಂದು ಸ್ಪಷ್ಠ ಉದ್ದೇಶಕ್ಕಾಗಿ ಸ್ಥಾಪಿತವಾಗಿದೆ ಎಂಬುದನ್ನು ಒಪ್ಪುತ್ತದೆ. ಅನೇಕ ಸಂದರ್ಭಗಳಲ್ಲಿ ಯಾವುದೋ ಒಂದು ರೀತಿಯ ಸದಸ್ಯರು ಅಥವ ಸೀಮಿತ ಸದಸ್ಯರಿಗೆ ಮಾತ್ರ ಸೇವೆ ಒದಗಿಸಬಲ್ಲದ್ದಾದಾಗ ಸದಸ್ಯತ್ವವನ್ನು ಮಿತಗೊಳಿಸ ಬೇಕಾಗುತ್ತದೆ. ಉದಾಹರಣೆಗೆ ಮೀನುಗಾರಿಕೆ ಸಹಕಾರ ಸಂಘಗಳು ತಮ್ಮ ಕಾರ್ಯ ವ್ಯಾಪ್ತಿಯ ಮೀನುಗಾರರಿಗೆ ಮಾತ್ರ ಸದಸ್ಯತ್ವ ನೀಡಬಲ್ಲವು. ಗೃಹ ನಿರ್ಮಾಣ ಸಹಕಾರ ಸಂಘಗಳು ತಾವು ನಿವೇಶನ ನೀಡಬಲ್ಲಷ್ಟರನ್ನು ಮಾತ್ರ ಸದಸ್ಯರನ್ನಾಗಿ ಹೊಂದಬಹುದು. ಇದಲ್ಲದೆ, ಬಳಕೆದಾರರ, ವಿಮೆ, ಪತ್ತು ಮತ್ತು ಬ್ಯಾಂಕಿಂಗ್ ವಲಯ ಸಹಕಾರ ಸಂಘಗಳು ಮಿತಿಯನ್ನು ಇಟ್ಟುಕೊಳ್ಳಬಾರದು.

"ಸದಸ್ಯರ ಜವಾಬ್ದಾರಿಗಳನ್ನು ಒಪ್ಪಿಕೊಳ್ಳಲು ಇಚ್ಛೆ ಇದ್ದು" ಸದಸ್ಯತ್ವವು ಅವರಿಗೆ ಮುಕ್ತವಾಗಿದ್ದಾಗ ಅವರೂ ಕೂಡ ಸದಸ್ಯರಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಇಚ್ಛಾಸಕ್ತರಾಗಿರುತ್ತಾರೆ ಎಂಬುದನ್ನು ತೋರಿಸುತ್ತದೆ.

"ಜವಾಬ್ದಾರಿ" ಎಂಬುದು ತಾವು ನಿರ್ವಹಿಸಬೇಕಾದ ಕರ್ತವ್ಯದ ದ್ಯೋತಕವಾಗಿರುತ್ತದೆ

"ಸದಸ್ಯತ್ವ" ಎನ್ನುವುದು ವ್ಯಕ್ತಿಗಳ ಒಟ್ಟಿಗೆ ಸೇರಿ ಪ್ರಜಾಸತ್ತಾತ್ಮಕ ನಿಯಂತ್ರಣವುಳ್ಳ ಸಾಮೂಹಿಕ ಒಡೆತನವುಳ್ಳ ಸಹಕಾರಿ ಔದ್ಯೋಗಿಕ ಸಂಸ್ಥೆಯ ಕೇಂದ್ರ ಬಿಂದು. ಪ್ರಾಥಮಿಕ ಸಹಕಾರ ಸಂಘಗಳಲ್ಲಿ ವ್ಯಕ್ತಿಗಳು ಸದಸ್ಯರಾದರೆ 'ಒಕ್ಕೂಟ' ಮತ್ತು 'ಮಹಾಮಂಡಳ' ಗಳಲ್ಲಿ 'ಸಂಸ್ಥೆ'ಗಳೇ ಸದಸ್ಯರು.

"ತಾರತಮ್ಯ" ಎನ್ನುವುದು ನ್ಯಾಯಯುತ ಅಲ್ಲದೆ ಅಥವ ಪಕ್ಷಪಾತ ರಹಿತವಾಗಿ ವಿವಿಧ ರೀತಿಯ ಎಲ್ಲ ವರ್ಗಗಳಿಗೂ ಸದಸ್ಯತ್ವ ಒದಗಿಸುವುದಾಗಿದೆ. "ಲಿಂಗ, ಸಾಮಾಜಿಕ, ವರ್ಗ, ರಾಜಕೀಯ ಅಥವ ಧಾರ್ಮಿಕ ತಾರತಮ್ಯ" ಎಂಬ ಪದಪುಂಜಗಳು "ಇಲ್ಲದ" ಎಂಬುದು ನಾಮ ಪದವಾದ ತಾರತಮ್ಯ' ಎಂಬುದರ ಮೇಲೆ ಪ್ರಭಾವ ಬೀರುತ್ತದೆ. ಆದುದರಿಂದ ಸದಸ್ಯತ್ವವನ್ನು ಯಾವುದೇ "ತಾರತಮ್ಯ ಇಲ್ಲದೇ" ವೈಯುಕ್ತಿಕ ಏನೇ ವ್ಯತ್ಯಾಸಗಳಿದ್ದರೂ ನೀಡತಕ್ಕದ್ದು.

### 3. ಮಾರ್ಗದರ್ಶನ ಟಿಪ್ಪಣಿ:–

**ಸ್ವಯಂ ಪ್ರೇರಿತ ಸಂಸ್ಥೆಗಳು:–**

ಈ ತತ್ವದ ಪಾಲನೆಯು ಸರಿಯಾಗಿ ಆಗುತ್ತಿಲ್ಲ ಎಂಬುದಕ್ಕೆ ಜಗತ್ತಿನಾದ್ಯಂತ ಅನೇಕ ಉದಾಹರಣೆಗಳಿವೆ. ಹಲವೆಡೆ ಸದಸ್ಯತನವನ್ನು ಮದುವೆ ನಂತರದಲ್ಲಿ ನಿಂತುಹೋಗುವಂತೆ ಮಾಡುವುದು ಸಹಕಾರ ಸಂಘಗಳನ್ನು ಆರ್ಥಿಕ ವಾಹನಗಳಾಗಿ ಪರಿಗಣಿಸಿ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಕಡ್ಡಾಯಗೊಳಿಸುವುದು, ಸರ್ಕಾರದ ಕಾರ್ಯಕ್ರಮಶಾಸನಬದ್ಧ, ತೆರಿಗೆ ಮತ್ತು ಆಡಳಿತ ವ್ಯವಸ್ಥೆಯ ವಿನಾಯ್ತಿಗಳಿಗಾಗಿ, ಹೂಡಿಕೆದಾರರ ಲಾಭಕ್ಕಾಗಿ ಸಂಸ್ಥೆಗಳನ್ನು ಸ್ಥಾಪಿಸುವುದು ಮೂಲಭೂತ ಧ್ಯೇಯವನ್ನು ಪಾಲಿಸದೇ ತತ್ವವನ್ನು ಉಲ್ಲಂಘಿಸಿದಂತಾಗುತ್ತದೆ.

ಈ ಮೊದಲ ತತ್ವದ ಉಲ್ಲಂಘನೆಯಿಂದ ಸಹಕಾರ ಜಳುವಳಿಯು ಸತ್ವವನ್ನು ಕಳೆದುಕೊಂಡಂತಾಗುತ್ತದೆ. ಇದರಿಂದ ವ್ಯಕ್ತಿಗಳು ಒಟ್ಟುಗೂಡಿ ತಮ್ಮ ಸಾಮಾನ್ಯ ಅವಶ್ಯಕತೆಗಳು ಆಕಾಂಕ್ಷೆಗಳನ್ನು ಈಡೇರಿಸಲು ಸ್ವಾಯತ್ತ ಸ್ವಯಂ ಪ್ರೇರಿತ ಸಂಸ್ಥೆ ಕಟ್ಟುವ, ಬೆಳವಣಿಗೆಯು ಕುಂಟಿತಗೊಳ್ಳುತ್ತದೆ. ಕಡ್ಡಾಯ ಸದಸ್ಯತ್ವದಲ್ಲಿ ಸದಸ್ಯತ್ವ ನೆಪಮಾತ್ರಕ್ಕೆ ಆಗುತ್ತದೆ. ಭಾಗವಹಿಸುವಿಕೆ ಸಾಧ್ಯವಾಗುವುದಿಲ್ಲ. ಕಡ್ಡಾಯವಾಗಿ ಸದಸ್ಯತ್ವ ಕೊನೆಗೊಳಿಸಿದಲ್ಲಿ ಅದೂ ಕೂಡ ಅವರ ಮೂಲಭೂತ ಹಕ್ಕುಚ್ಯುತಿ ಮಾಡಿದಂತಾಗುತ್ತದೆಯಲ್ಲದೇ ಸದಸ್ಯತನದ ಕರ್ತವ್ಯ ಜವಾಬ್ದಾರಿಯಿಂದ ವಿಮುಖರನ್ನಾಗಿ ಮಾಡಿದಂತಾಗುತ್ತದೆ. ಇದರಿಂದಾಗಿ ಈ ಮೂಲಭೂತ ಮೊದಲ ತತ್ವವನ್ನು ಉಲ್ಲಂಘಿಸಿದಂತಾಗುತ್ತದೆ.

ಸ್ಪರ್ಧಾತ್ಮಕ ಪ್ರಪಂಚದಲ್ಲಿ ಸಹಕಾರ ಸಂಘಗಳು ಸ್ಥಿರತೆಯಿಂದ ಸದೃಡವಾಗಿ ಕರ್ತವ್ಯ ನಿರ್ವಹಿಸಬೇಕಾಗಿರುವುದು

ಈ ದಿನದ ಅವಶ್ಯಕತೆ, ಇದನ್ನು ಸಾಧಿಸಬೇಕೆಂದಲ್ಲಿ ಸದಸ್ಯರು ಸ್ವಯಂಪ್ರೇರಿತರಾಗಿ ಸಂಘದ ಚಟುವಟಿಕೆಯಲ್ಲಿ ಭಾಗವಹಿಸುವುದು ಅತಿ ಅವಶ್ಯ. ಮತದಾನದ ಹಕ್ಕುಳ್ಳವರು ಸಂಘದ ಚಟುವಟಿಕೆಯಲ್ಲಿ ಪಾಲ್ಗೊಂಡಾಗ ಮಾತ್ರ ಸಂಘ ಉಳಿಯಲು ಸಾಧ್ಯ. ಅದು ಇಲ್ಲದೆ ಸಂಘ ನಡೆಸಲಾಗುವುದಿಲ್ಲ. ಸೀಮಿತ ಆಧಾಯವಿದ್ದಲ್ಲೂ ಕೂಡ ಅವರು ಹೆಚ್ಚಿನ ಷೇರು ರೂಪದಲ್ಲಿ ಬಂಡವಾಳವನ್ನು ತೊಡಗಿಸುವುದೂ ಅವಶ್ಯ, ಸಹಕಾರ ಸಂಘದ ಮೂಲ ಭೂತ ಗುಣವಾಗಿ ಚುನಾಯಿತ ಆಡಳಿತ ಮಂಡಳಿ ಸದಸ್ಯರು ಸ್ವಯಂ ಸೇವಕರಂತೆ ಕರ್ತವ್ಯ ನಿರ್ವಹಿಸಬೇಕು. ಸದಸ್ಯರು ದೈನಂದಿನ ಸಂಘದ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಆಗಲೇ ಸಂಘವು ಯಶಸ್ವಿಯಾಗಿ ಕಾರ್ಯ ನಿರ್ವಹಿಸಬಲ್ಲದು.

"ಸಹಕಾರ ಸಂಘಗಳು ಸ್ವಯಂ ಸೇವಾ ಸಂಸ್ಥೆಗಳು" ಎನ್ನುವ ಘೋಷಣೆ ಸದಸ್ಯರ ಸಂಘದಲ್ಲಿನ ಬದ್ಧತೆಯನ್ನು ಎತ್ತಿ ತೋರಿಸುತ್ತದೆ. ಜನರನ್ನು "ಸಹಕಾರಿ" ಗಳನ್ನಾಗಿ ಮಾಡಲಾಗದು. ಸರ್ಕಾರ ಅಥವ ಇತರರು ಅವರನ್ನು ಸದಸ್ಯರಾಗಲು ಒತ್ತಾಯಿಸಬಾರದು. ಎಲ್ಲಿ ಆರ್ಥಿಕಒತ್ತಡದಿಂದಾಗಲಿ ಸರ್ಕಾರದ ನಿಯಮಗಳಿಂದಾಗಲಿ ಸದಸ್ಯರಾದಲ್ಲಿ 'ಸಹಕಾರ ಸಂಘದ ಮುಕ್ತ ಮತ್ತು ಸ್ವಯಂ ಪ್ರೇರಿತ ಸದಸ್ಯತ್ವ'ದ ಬಗ್ಗೆ ಅವರಲ್ಲಿ ಪ್ರಜ್ಞೆ ಮೂಡುವಂತೆ ಶಿಕ್ಷಣ ನೀಡಿ ತೊಡಗಿಸಿಕೊಳ್ಳುವಂತೆ ಮಾಡುವ ವಿಶೇಷ ಜವಾಬ್ದಾರಿಯನ್ನು ಸಹಕಾರ ಸಂಘವು ಹೊರಬೇಕಾಗುತ್ತದೆ. ಇದರಿಂದ ಈ ತತ್ವಕ್ಕೆ ಅವರು ಸ್ವಯಂ ಪ್ರೇರಿತರಾಗಿ ಒತ್ತಾಸೆ ನೀಡುತ್ತಾರೆ.

ಕೆಲವು ರಾಷ್ಟ್ರಗಳಲ್ಲಿ, ಸಹಕಾರ ಸಂಘಗಳು ಸರ್ಕಾರದ ಪ್ರಾಯೋಜಿತ ಏಕಸ್ವಾಮ್ಯ ಔದ್ಯೋಗಿಕ ಸಂಸ್ಥೆಗಳಾಗಿ ರೂಪಿತವಾಗಿವೆ. ಈ ಸಂದರ್ಭದಲ್ಲಿ ಅಧಿಕೃತ ಸೇವಾ ವ್ಯಾಪ್ತಿಯ ಪರಿಧಿಯೊಳಗೆ ವಾಸವಿರುವವರಿಗೆ ಸದಸ್ಯತ್ವ ತೆರೆದಿರುತ್ತದೆ. ಅದರಿಂದ ಅವಶ್ಯ ಸೇವೆ ಪಡೆಯಲು ಸದಸ್ಯತ್ವವನ್ನು ಸರ್ಕಾರ ನಿರೀಕ್ಷೆ ಮಾಡುವುದಿಲ್ಲ. ಉದಾಹರಣೆಗೆ ದೂರವಾಣಿ, ವಿದ್ಯುಚ್ಛಕ್ತಿ ವಿತರಣೆ ಸಂಘಗಳಲ್ಲಿ, ಧಾರ್ಮಿಕ ಅಥವ ಇತರೆ ಕಾರಣಗಳಿಂದ ಸದಸ್ಯತ್ವದಿಂದ ಹೊರಗುಳಿಯುವುದಕ್ಕೆ ಅವಕಾಶವಿರುತ್ತದೆ.

ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವವೆಂದರೆ ಸದಸ್ಯರು ತಮ್ಮ ಆಯ್ಕೆ ಮೇರೆಗೆ ಸದಸ್ಯತ್ವವನ್ನು ಹಿಂಪಡಯಬಹುದು. ಕೆಲವು ವಿಧದ ಸಹಕಾರ ಸಂಘಗಳಲ್ಲಿ ಕೆಲವು ಷರತ್ತುಗಳನ್ನು ವಿಧಿಸಬಹುದಾಗಿದೆ. ಆದರೂ ಷರತ್ತುಗಳು ಅತಿ ಕಡಿಮೆಯಾಗಿರ ತಕ್ಕದ್ದು. ಉದಾರಹಣೆ: ವಸತಿ ಸಹಕಾರ ಸಂಘದಲ್ಲಿ ನೂತನ ಸದಸ್ಯನಿಗೆ ವಾಸವಿರುವ ಹಕ್ಕನ್ನು ಹಸ್ತಾಂತರ ಮಾಡಬೇಕಾಗುತ್ತದೆ. ಕೃಷಿ ಅಥವ ಕೂಲಿಕಾರರ ಸಹಕಾರ ಸಂಘದಲ್ಲಿ ಸದಸ್ಯತ್ವ ಹಿಂಪಡೆತವನ್ನು ಹಂತ ಹಂತವಾಗಿ ನಿರ್ಗಮಿಸುವ ಅವಕಾಶ ನೀಡಬೇಕಾಗುತ್ತದೆ. ಏಕೆಂದರೆ ಇದರಿಂದ ಸಂಘದ ಬಂಡವಾಳಕ್ಕೆ ಧಕ್ಕೆವುಂಟಾಗುತ್ತದೆ. ಆದರೆ ಅವರ ಹಿಂಪಡೆತದ ಹಕ್ಕನ್ನು ಗೌರವಿಸಲೇಬೇಕಾಗುತ್ತದೆ.

**ಸದಸ್ಯತ್ವ:**

ಸಹಕಾರ ಸಂಘದ ಸದಸ್ಯರು ವ್ಯಕ್ತಿಗಳು ಅಥವ ಸಂಸ್ಥೆಗಳು (ಕಾನೂನಾತ್ಮಕ ವಾಗಿ ವ್ಯಕ್ತಿಗಳು) ಸಹಕಾರ ಸಂಘದ ಸೇವೆಯನ್ನು ಉಪಯೋಗಿಸಿಕೊಳ್ಳುವವರು ಅಥವ ವ್ಯವಹಾರದಲ್ಲಿ ಬಳಕೆದಾರರಾಗಿ ಕೆಲಸಗಾರರಾಗಿ, ಉತ್ಪಾದಿತರಾಗಿ ಅಥವ ಸ್ವತಂತ್ರ ಉದ್ದಿಮೆದಾರರಾಗಿ ಭಾಗವಹಿಸಿರುತ್ತಾರೆ. ಸಹಕಾರ ಸಂಘದ ವಿಧದ ಮೇರೆಗೆ ಇದು ಅವಲಂಭಿತವಾಗಿರುತ್ತದೆ. ಸಂಘದ ಪ್ರಮುಖ ವ್ಯವಹಾರಿಕ ನಿರ್ಧಾರಗಳಲ್ಲಿ ಸದಸ್ಯರು, ಭಾಗೀಧಾರರು, ಸಹ–ಯಜಮಾನರು ಮತ್ತು ಸಹ–ನಿರ್ಧಾರ ತೆಗೆದುಕೊಳ್ಳುವವರೂ ಆಗಿರುತ್ತಾರೆ.

ಏಳು ಸಹಕಾರ ತತ್ವಗಳಲ್ಲಿಯೂ 'ಸದಸ್ಯತ್ವ'ವೇ ಕೇಂದ್ರವಾದ ವಸ್ತು ಮತ್ತು ಅದೇ ಅತ್ಯಂತ ಶಕ್ತಿಯುತವಾದದ್ದು. ಸದಸ್ಯತ್ವ ಎಂದರೆ ಸಹಕಾರ ಸಂಘ ಮತ್ತು ಜನರ ನಡುವೆ ಇರುವ ಸೇವೆ ಒದಗಿಸುವ ಒಂದು ವಿಶೇಷ ಸಂಬಂಧ ಅದುವೇ ಅದರ ಸತ್ವ. ಸಂಬಂಧವು ಸಂಘವು ನಡೆಸುವ ವ್ಯವಹಾರವನ್ನು ವ್ಯಾಖ್ಯಾನಿಸುತ್ತದೆ. ವ್ಯವಹಾರದ ರೀತಿಯ ಮೇಲೆ

ಪರಿಣಾಮ ಬೀರುತ್ತದೆ ಮತ್ತು ಭವಿಷ್ಯದ ಯೋಜನೆಯನ್ನು ರೂಪಿಸುತ್ತದೆ. ಸದಸ್ಯರ ಅತಿಹೆಚ್ಚಿನ ಸೇವೆ ಪೂರೈಕೆಯೇ ಸದಸ್ಯಕೇಂದ್ರೀಕೃತ ಎಂಬುದಾಗಿರುತ್ತದೆ. ಅದೇ ಸಂಘದ ಅಸ್ತಿತ್ವಕ್ಕೆ ಪ್ರಥಮ ಕಾರಣವಾಗಿರುತ್ತದೆ.

ಇತರೆ ಖಾಸಗಿ ಕಂಪನಿಗಳಲ್ಲಿ ಗ್ರಾಹಕರು ಹೂಡಿಕೆದಾರರು, ಕೆಲಸಗಾರರು ಮತ್ತು ವ್ಯವಸ್ಥಾಪಕರೂ ಬೇರೆಯವರೇ ಆಗಿರುತ್ತಾರೆ. ಆದರೆ ಸಹಕಾರ ಸಂಘದಲ್ಲಿ ಅವರೇ ಎರಡೂ ಆಗಿದ್ದು ಅದಕ್ಕಿಂತ ವಿಭಿನ್ನವಾಗಿದ್ದು ಪ್ರಜಾಸತ್ತಾತ್ಮಕ ನಿಯಂತ್ರಣವನ್ನು ಹೊಂದಿದೆ. ಸಹಕಾರ ಸಂಘಗಳು ಉಪಯೋಗಿಸುವವರ ಚಾಲಿತ (ಸದಸ್ಯ ಚಾಲಿತ) ಸಂಸ್ಥೆಗಳು, ಅವರಿಂದಲೇ ಸ್ಥಾಪಿತ ಅವರದೇ ಆದ, ಅವರ ಸಾಮಾನ್ಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಶ್ಯಕತೆ ಮತ್ತು ಆಕಾಂಕ್ಷೆಗಳನ್ನು ಈಡೇರಿಸುವ ಸಂಸ್ಥೆಯಾಗಿದೆ.

ಅನೇಕ ವಾಣಿಜ್ಯ ಸಂಸ್ಥೆಗಳು ಗ್ರಾಹಕರನ್ನು ಸಗಟು ಕ್ಲಬ್, ವಾಣಿಜ್ಯ ನಿಷ್ಠೆ ಯೋಜನೆಗಳು ಮತ್ತಿತರೆ ಯೋಜನೆಗಳಲ್ಲಿ ನಕಲಿ 'ಸದಸ್ಯತ್ವ' ಎಂಬ ಅಮಿಷಗಳಿಗೆ ಒಡ್ಡುತ್ತಿದ್ದಾರೆ. ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ 'ಸದಸ್ಯತ್ವ'ದ ಮಹತ್ವವನ್ನು ಇದು ಬಿಂಬಿಸುತ್ತದೆ. ಈ ಯೋಜನೆಗಳಿಗಿಂತ ಅತ್ಯಂತ ವಿಭಿನ್ನವಾದದ್ದು. 'ಸಹಕಾರ ಸದಸ್ಯತ್ವ' ವ್ಯಾಪಾರ ನಿರ್ಧಾರಗಳಲ್ಲಿ ಗ್ರಾಹಕ ಒಳಗೊಳ್ಳುವಿಕೆ ಎಂದು ತೋರಿಕೆಯ ಅಸ್ತ್ರವಾಗಿ ಆ ಸಂಸ್ಥೆಗಳ 'ಸದಸ್ಯತ್ವ' ಉಪಯೋಗಿಸುತ್ತವೆ ಎಂಬುದನ್ನು ಅರಿಯಬೇಕು.

**ಎಲ್ಲ ವ್ಯಕ್ತಿಗಳಿಗೂ ಮುಕ್ತವಾಗಿದೆ.**

ಸದಸ್ಯನಾಗಲು 'ಮುಕ್ತ ಸದಸ್ಯ' ಎನ್ನುವ ಅಂಶವು ಯಾವುದೇ ಉನ್ನತ ಮಿತಿ ಹೇರಬಾರದು ಎಂಬುದನ್ನು ಸೂಚಿಸುತ್ತದೆ. ಒಂದು ಬಳಕೆದಾರರ ಸಹಕಾರ ಸಂಘದಲ್ಲಿ ಸದಸ್ಯತ್ವದ ಷೇರು ಬಂಡವಾಳ ಕಡಿಮೆ ಇರಬೇಕು. ಆದರೆ ಬಂಡವಾಳ ಹಿಗ್ಗಿಸಲು ಹೆಚ್ಚುವರಿ ಷೇರು ಮೊತ್ತ ತೊಡಗಿಸಲು ಉತ್ತೇಜಿಸಬಹುದು. ಉತ್ಪಾದನ ಮತ್ತು ನೌಕರರ ಸಹಕಾರ ಸಂಘಗಳಲ್ಲಿ (ಪತ್ತಿನ) ಹೆಚ್ಚಿನ ಷೇರು ಬಂಡವಾಳದ ಅವಶ್ಯಕತೆ ಇರುತ್ತದೆ. ಆದರೆ ಕನಿಷ್ಠ ಷೇರು ಬಂಡವಾಳದ ಮೊತ್ತ ಹೆಚ್ಚಿಗೆ ಇರಿಸುವುದರಿಂದ ಸದಸ್ಯರಾಗ ಬಯಸುವವರಿಗೆ ಅದು ಹೊರೆಯಾಗಬಹುದು. ಒಂದು ಹೆಚ್ಚಿನ ಷೇರು ಮೊತ್ತದ ತೀರ ಅಗತ್ಯತೆ ಇದ್ದಲ್ಲಿ ಕಂತು ರೂಪದಲ್ಲಿ ಪಾವತಿಗೆ ಅವಕಾಶ ಮತ್ತು ಷೇರು ಖರೀದಿಸಲು ಇತರೆ ಸಂಸ್ಥೆಗಳಿಂದ ಸಾಲದ ವ್ಯವಸ್ಥೆ ಮಾಡಬಹುದಾಗಿದೆ.

ಮಾಧ್ಯಮಿಕ ಸಹಕಾರ ಸಂಘಗಳು ಎಲ್ಲಿ ಸದಸ್ಯತ್ವವು ಇತರೆ ಸಹಕಾರ ಸಂಘಗಳಿಗೆ ಸದಸ್ಯತ್ವ ಅವಕಾಶವಿದೆಯೋ ಅಲ್ಲಿಯೇ ಅತಿ ಹೆಚ್ಚಿನ ಷರತ್ತು ವಿಧಿಸದೆ ಸದಸ್ಯತ್ವ ನೀಡುವುದು ಮತ್ತು ಅದರಿಂದ ಸೇವೆ ನೀಡುವುದು ಕೂಡ ಮುಖ್ಯವಾಗಿರತಕ್ಕದ್ದು ಅಪೇಕ್ಷಣೀಯ. ಪ್ರಾಥಮಿಕ, ಸಣ್ಣ ಸಹಕಾರ ಸಂಘಗಳಿಗೆ ಹೊರೆ ಎನ್ನಬಹುದಾದ ಮೊತ್ತವನ್ನು ಷೇರಿಗಾಗಿ ನಿಗದಿಪಡಿಸಬಾರದು.

**ಸದಸ್ಯತ್ವದ ಜವಾಬ್ದಾರಿಯನ್ನು ಒಪ್ಪಿಕೊಳ್ಳುವ**

ಸದಸ್ಯರ ಜವಾಬ್ದಾರಿಗಳು ಮತ್ತು ಕರ್ತವ್ಯಗಳೂ ಒಂದು ಸಹಕಾರ ಸಂಘದಿಂದ ಮತ್ತೊಂದು ಸಹಕಾರ ಸಂಘಕ್ಕೆ ವಿಭಿನ್ನವಾಗಿರುತ್ತದೆ. ಆದರೆ ಮತದಾನದ ಹಕ್ಕು, ಸಭೆಗಳಲ್ಲಿ ಭಾಗವಹಿಸುವಿಕೆ, ಸಹಕಾರ ಸಂಘದ ಸೇವೆಗಳನ್ನು ಉಪಯೋಗಿಸುವುದು ಬಂಡವಾಳವನ್ನು ಒದಗಿಸುವುದು ಅನಿಯಮಿತ ಸಹಕಾರ ಸಂಘಗಳಲ್ಲಿ ನಷ್ಟಗಳನ್ನು ಹಂಚಿಕೊಳ್ಳುವ ಜವಾಬ್ದಾರಿಯನ್ನು ಸದಸ್ಯರು ಹೊಂದಿರುತ್ತಾರೆ.

ಸದಸ್ಯರ ಜವಾಬ್ದಾರಿ ಬಗ್ಗೆ ಒಂದೇ ಸಮನಾದ ಒತ್ತಾಯ ಅಗತ್ಯ. ಆದರೆ ಸದಸ್ಯರು ಅದನ್ನು ಇಚ್ಛಾಪೂರ್ವಕವಾಗಿ ಮತ್ತು ಔಚಿತ್ಯದಿಂದ ಹೊರಬೇಕು, ಹೊಂದಬೇಕು. ಉದಾಹರಣೆಗೆ ಕೃಷಿ ಸಹಕಾರ ಸಂಘದಲ್ಲಿ ಅವರ ಉತ್ಪನ್ನಗಳನ್ನು

ಸಹಕಾರ ಸಂಘದಿಂದಲೇ ಮಾರಾಟ ಮಾಡುವುದು ಮತ್ತು ಕೃಷಿ ಅಗತ್ಯತೆಗಳನ್ನು ಸಂಘದಿಂದಲೇ ಕೊಳ್ಳುವುದು ಅದರ ಕೃಷಿ ಯಂತ್ರಗಳನ್ನೇ ಬಳಸುವುದು ಸಂಘದ ಉಪಯುಕ್ತತೆ ಪಡೆಯುವುದರಿಂದ ಅದು ಸಂಘದ ಸಶಕ್ತತೆಯನ್ನು ಹೆಚ್ಚಿಸಿ ಮಾರುಕಟ್ಟೆಯಲ್ಲಿ ತನ್ನ ಚೌಕಾಶಿ ಶಕ್ತಿಯನ್ನು ವೃದ್ಧಿಸುತ್ತದೆ. ಮಾರುಕಟ್ಟೆಯಲ್ಲಿನ ಕಾಯ್ದೆ ಕಾನೂನುಗಳನ್ನು ಶಕ್ತಿಗಳನ್ನು ಸಹಕಾರ ಸಂಘಗಳು ಎದುರಿಸಲೇ ಬೇಕಾಗಿದೆ.

ಕೆಲವು ಸಹಕಾರ ಸಂಘಗಳು ತಮ್ಮ ಸದಸ್ಯರು ಅನಾನುಕೂಲ ಪರಿಸ್ಥಿತಿಯಲ್ಲಿ ಮಾತ್ರ ಸಂಘವನ್ನು ಅವಲಂಭಿಸುವುದು ಮತ್ತು ಅನುಕೂಲ ಪರಿಸ್ಥಿತಿಯಲ್ಲಿ ಇತರರನ್ನು ಅವಲಂಭಿಸುವುದನ್ನು ಕಾಣುತ್ತಲಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಅಂತಹ ಸದಸ್ಯರ ಮೇಲೆ ನಿರ್ಧಾಕ್ಷಿಣ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಅವರು ಸಂಘದ ಸದಸ್ಯರಾಗಿ ತಮ್ಮ ಜವಾಬ್ದಾರಿ ಹೊರುವುದಿಲ್ಲ ಮತ್ತು ಕರ್ತವ್ಯ ವಿಮುಖರಾಗಿರುತ್ತಾರೆ ಎಂದು ಸಾಬೀತು ಪಡಿಸುತ್ತಾರೆ.

**ತಾರತಮ್ಯವಿಲ್ಲದೆ:**

ಮಾನವ ಸಮಾಜದ ವೈವಿದ್ಯತೆಯನ್ನು ಸಹಕಾರ ಚಳುವಳಿಯು ಆರಂಭದಿಂದಲೂ ಸಂಭ್ರಮಿಸಿದೆ. ಸಮಾಜದ ವಿವಿಧ ಗುಂಪುಗಳು, ವರ್ಗಗಳು, ಜನಾಂಗಗಳನ್ನು, ವಿವಿಧ ರಾಜಕೀಯ ಸಿದ್ದಾಂತ ಹೊಂದಿದವರು, ವಿವಿಧ ಧರ್ಮಗಳಲ್ಲಿ ನಂಬಿಕೆ ಇರಿಸಿದವರನ್ನು ಒಗ್ಗೂಡಿಸಲು ಯತ್ನಿಸಿದೆ. ಮಾನವ ಸಮಾಜದ ವೈವಿಧ್ಯತೆಯನ್ನು ಸ್ವಾಗತಿಸುವುದೇ ಸಹಕಾರದ ಪ್ರಮುಖ ಗುಣವಾಗಿದೆ. ಇದು ಮೊದಲ ಸಹಕಾರ ತತ್ವದಲ್ಲಿ ಬಿಂಬಿತವಾಗಿದೆ.

ವೈಯಕ್ತಿಕ ಗುಣದಿಂದಾಗಿ ಯಾವುದೇ ವ್ಯಕ್ತಿಗೆ ಸದಸ್ಯತ್ವ ನಿರಾಕರಿಸಬಾರದು. ಮೊದಲ ತತ್ವದಲ್ಲಿ ತಾರತಮ್ಯವನ್ನು ನಿಷೇದಿಸಿದೆ ಎಂಬುದು ನಿಚ್ಚಲ ಅಂಶ.

ಮೊದಲ ತತ್ವದಲ್ಲಿ "ಲಿಂಗ, ಸಾಮಾಜಿಕ, ವರ್ಣ, ರಾಜಕೀಯ ಅಥವ ದಾರ್ಮಿಕ ತಾರತಮ್ಯ" ಎಂಬ ಪದಗಳ ಸೇರ್ಪಡೆ ಮತ್ತಿನ್ನಾವುದೇ ತಾರತಮ್ಯಗಳನ್ನು ಮಾಡಬಾರದು ಎಂದೇ ದ್ವನಿಸುತ್ತದೆ ಹೊರತು ಮಾಡಬಹುದು ಎಂದು ಹೇಳುವುದಿಲ್ಲ. ವಿಶ್ವ ಸಂಸ್ಥೆಯ ಅಂತರರಾಷ್ಟ್ರೀಯ ಮಾನವ ಹಕ್ಕುಗಳು ಘೋಷಣೆ ಕೂಡ 1966 ಅಂತರರಾಷ್ಟ್ರೀಯ ನಾಗರೀಕ ಮತ್ತು ರಾಜಕೀಯ ಹಕ್ಕುಗಳ ಕೂಟ ಕೂಡ ಇದನ್ನೇ ದ್ವನಿಸುತ್ತದೆ.

1995ರಲ್ಲಿ ಸಹಕಾರ ತತ್ವಗಳ ಪುನರ್ ರಚನೆ ನಂತರ ಸಮಾಜವು ಅನೇಕ ಬದಲಾವಣೆ ಕಂಡಿದೆ. ಮಾನವನ ವೈವಿದ್ಯಮತೆಯನ್ನು ಸಂಭ್ರಮಿಸುವ ವಾತಾವರಣ ಜಗತ್ತಿನಾದ್ಯಂತ ಪಸರಿಸಿದೆ. ಸ್ವಾಗತಿಸುತ್ತದೆ. ಎಲ್ಲ ಜನರ ಸಮಾನತೆಯ ಹಕ್ಕನ್ನು ಗೌರವಿಸುವ ಬದ್ದತೆ ಕಂಡುಬಂದಿದೆ. "ತಾರತಮ್ಯವಿಲ್ಲದೆ" ಎಂಬ ಈ ತತ್ವದ ಅಂಶವನ್ನು ಸಹಕಾರ ಸಂಘಗಳು ಕರ್ತವ್ಯವಾಗಿ ಸವಾಲಾಗಿ ಸ್ವೀಕರಿಸಬೇಕು ಮತ್ತು ಎಲ್ಲರಿಗೂ ಸದಸ್ಯತ್ವ ನೀಡಬೇಕು. ಯಾವ ರಾಷ್ಟ್ರಗಳಲ್ಲಿ, ಸಂಸ್ಕೃತಿಗಳಲ್ಲಿ ಧಾರ್ಮಿಕ ನಂಬಿಕೆ, ವರ್ಣ, ಲಿಂಗ, ಬೇಧಗಳು ಕಂಡುಬರುತ್ತವೆಯೋ ಅಂತಹ ರಾಷ್ಟ್ರಗಳಲ್ಲಿ ಇದನ್ನು ಸವಾಲಾಗಿ ಸ್ವೀಕರಿಸಬೇಕಿದೆ.

ಎಲ್ಲ ಜನರಿಗೂ ಮುಕ್ತವಾಗಿರಲು, ಒಳಗೊಳ್ಳಲು ಸಹಕಾರ ಸಂಘಗಳು ಗುಣಾತ್ಮಕ ಕ್ರಿಯೆಗಳನ್ನು ತೆಗೆದುಕೊಳ್ಳಬೇಕು. ಸಂಘದ ಪರಿಸರವು ವಿಕಲಚೇತನರಿಗೂ ಸ್ನೇಹಿಯಾಗಿರುವಂತೆ ಮಾರ್ಪಡಿಸಬೇಕಾಗುತ್ತದೆ. ಕಣ್ಣು ಕಾಣದವರಿಗೆ, ಅರೆದೃಷ್ಟಿ ಇರುವವರಿಗೆ ಅನುಕೂಲಕರ ವಾತಾವರಣ ಸೃಷ್ಟಿ ಮಾಡಬೇಕು. ಸಹಕಾರ ಸೇವೆ ಪಡೆಯಲು ವಿಶೇಷ ಸಹಾಯ ಹಸ್ತ ನೀಡಬೇಕು. ನೂತನವಾಗಿ ಸದಸ್ಯರಾದವರು ಅನಕ್ಷರಸ್ತರು, ಸಂಖ್ಯೆ ಜ್ಞಾನ ಇಲ್ಲದವರೂ ಸದಸ್ಯರಾಗಿ ಭಾಗವಹಿಸಲು ಅವಕಾಶ ಕಲ್ಪಿಸಬೇಕು.

ವಯಸ್ಸಿನ ಆಧಾರದ ಮೇರೆಗೆ ತಾರತಮ್ಯ ಮಾಡುವುದನ್ನು ಪ್ರಶ್ನಿಸಬೇಕಿದೆ. ಚಿಕ್ಕ ವಯಸ್ಸಿನ ಸದಸ್ಯರು ಚುನಾವಣೆಯಲ್ಲಿ

ಭಾಗವಹಿಸುವುದನ್ನು ಪ್ರೋತ್ಸಾಹಿಸಬೇಕು. ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ವಯಸ್ಸಾದವರು ನಿರ್ಗಮಿಸಬೇಕು. ಇದರಿಂದ ತರಭೇತಿ ಮೂಲಕ ಯುವ ಸದಸ್ಯರ ಭಾಗವಹಿಸುವಿಕೆಯಿಂದ ಪ್ರಜಾಪ್ರಭುತ್ವ ನವೀಕರಣ ವಾಗತ್ತದೆ. ಸಹಕಾರ ಸದಸ್ಯತ್ವವುನಿರಂತರ ನವೀಕರಣಗೊಳ್ಳುತ್ತಿರಬೇಕು. ಸಹಕಾರ ಸಂಘದ ವ್ಯವಹಾರವು ಸುಸ್ಥಿರವಾಗಲು ಯುವ ಸದಸ್ಯರು ಭಾಗವಹಿಸಬೇಕು. ಹಳೇ ಸದಸ್ಯರು ಹೊಸಬರಿಗೆ ಅವಕಾಶ ನೀಡದೇ ಇರುವುದನ್ನು ಗುರುತಿಸಬೇಕು. ಮುಂದಿನ ಜನಾಂಗದ ಸದಸ್ಯರಿಂದಲೇ ಸಂಘವು ಶಕ್ತಿಯುತವಾಗುವುದು. ಸಹಕಾರ ಸದಸ್ಯತ್ವವು ಪ್ರತಿ ನಿಧಿತ್ವವೂ ಸಂಖ್ಯಾತ್ಮಕವಾಗಿ ಇದನ್ನು ಅಭಿವ್ಯಕ್ತಿ ಪಡಿಸಬೇಕು. ಮುಂದಿನ ಪೀಳಿಗೆಗೆ ಪ್ರೋತ್ಸಾಹಿಸಲು ಅನೇಕ ರಾಷ್ಟ್ರಗಳಲ್ಲಿ ಯುವ ಮತ್ತು ವಿದ್ಯಾರ್ಥಿ ಸಹಕಾರ ಸಂಘಗಳನ್ನು ಪ್ರೋತ್ಸಾಹಿಸಲಾಗುತ್ತಿದೆ. ಸಹಕಾರ ಔದ್ಯೋಗಿಕ ಸಂಸ್ಥೆಯನ್ನು ಅನುಭವಿಸಲು ಅದರ ಲಾಭಗಳನ್ನು ಅರಿಯಲು ಅಪೇಕ್ಷಿಸಲು ಯುವ ಜನತೆಗೆ ಅವಕಾಶವಾಗಿ ಮುಂದೆ ಸಹಕಾರ ಚಳುವಳಿಯಲ್ಲಿ ಇತರೆ ಬೃಹತ್ ಸಹಕಾರ ಸಂಘಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿದಂತಾಗುತ್ತದೆ.

**ಲಿಂಗ ಸಮಾನತೆ.**

ಕಳೆದ ಮೂರು ದಶಕಗಳಲ್ಲಿ ಅಂತರರಾಷ್ಟ್ರೀಯ, ಸ್ಥಳೀಯ, ಪ್ರಾಂತೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಲಿಂಗ ಸಮಾನತೆಯನ್ನು ಖಾತ್ರಿಗೊಳಿಸಿಕೊಳ್ಳಲು ವಿಶೇಷ ಯತ್ನಗಳು ನಡೆದಿವೆ. ಆದರೆ ಪ್ರಗತಿ ತೀರ ಮಂದಗತಿಯಲ್ಲಿದೆ. ಉದಾಹರಣೆಗೆ ಬಳಕೆದಾರರ ಸಹಕಾರ ಸಂಘಗಳಲ್ಲಿ, ಮಹಿಳೆಯರು ಸಂಸಾರದಲ್ಲಿ ಪಾರಂಪಿರೆವಾಗಿ ಅವರ ಪಾತ್ರದಿಂದಾಗಿ ಬಹುತೇಕ ಸದಸ್ಯರಿದ್ದರೂ ಅನೇಕ ಸಹಕಾರ ಸಂಘಗಳಲ್ಲಿ ಪುರಷರೇ ಆಡಳಿತ ಮತ್ತು ವ್ಯವಸ್ಥಾಪನೆಯಲ್ಲಿ ಮುನ್ನೆಲೆಯಲ್ಲಿ ರುವುದನ್ನು ಕಾಣುತ್ತೇವೆ. ಉತ್ಪಾದನಾ ಸಹಕಾರ ಸಂಘಗಳಲ್ಲಿ ಮಹಿಳೆಯರನ್ನು ಸದಸ್ಯತ್ವದಿಂದ ಹೊರಗಿಡಲಾಗಿದೆ. ಇದಕ್ಕೆ ಕಾರಣ ಆವರಿಗೆ ಆಸ್ತಿಯ ಮೇಲೆ ಹಕ್ಕು ಇಲ್ಲದೇ ಇರುವುದಾಗಿದೆ. ಆದರೆ ಬಹುತೇಕ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವವರು ಅವರೇ ಆಗಿರುತ್ತಾರೆ. ಸಹಕಾರ ಸಂಘಗಳು ಶಿಕ್ಷಣ ಮತ್ತು ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮಹಿಳೆಯರು ಭಾಗವಹಿಸುವಂತೆ ಖಾತ್ರಿ ಪಡಿಸಿಕೊಳ್ಳಬೇಕು.

ಕೆಲವು ರಾಷ್ಟ್ರಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ಮಹಿಳೆಯರು ಪುರುಷರಡಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಪರಿಗಣಿಸಲಾಗುತಿದ್ದು ಅಲ್ಲಿ ಮಹಿಳೆಯರದೇ ಆದ ಸಹಕಾರ ಸಂಘಗಳನ್ನು ಆರಂಭಿಸಿ ತಮಗೆ ಧ್ವನಿ ಒದಗಿಸಿಕೊಳ್ಳುವುದೇ ಧಾರ್ಮಿಕ ಮತ್ತು ಸಾಂಸ್ಕೃತಿಕ ಲಿಂಗ ಅಸಮಾನತೆಯನ್ನು ಹೋಗಲಾಡಿಸಬಹುದಾಗಿದೆ. ಅವುಗಳು ಪತ್ತು, ಬ್ಯಾಂಕಿಂಗ್ ಸೇವೆಗಳು, ಗ್ರಾಹಕ ಅಂಗಡಿಗಳು ಕೃಷಿ, ಕರಕುಶಲವಸ್ತುಗಳ ತಯಾರಿಕೆಗಳ ಗುಡಿ ಕೈಗಾರಿಕೆಯಲ್ಲಿ ತೊಡಗಿಸಿಕೊಂಡಿವೆ. ಈ ಸಹಕಾರ ಸಂಘಗಳು ಮೊದಲ ತತ್ವವನ್ನು ಉಲ್ಲಂಘಿಸುತ್ತಿವೆ ಎಂದೆನ್ನಲಾಗುವುದಿಲ್ಲ. ಏಕೆಂದರೆ ಅವರ ಅನಾನುಕೂಲತೆ ಮತ್ತು ತಾರತಮ್ಯವನ್ನು ಹೋಗಲಾಡಿಸಲು ಸ್ಥಾಪಿಸಿರುವ ಸಂಘಗಳಿವು. ಔದ್ಯೋಗಿಕ ಚಟುವಟಿಕೆಗಳು, ನಾಯಕತ್ವ ಹುದ್ದೆಗಳು ಮತ್ತು ಇತರೆ ಚಟುವಟಿಕೆಗಳಲ್ಲಿ ವಂಚಿತರಾದ ಮಹಿಳೆಯರು ಲಿಂಗ ಅಸಮಾನತೆ ಇರುವ ಸಂಸ್ಕೃತಿಗಳಲ್ಲಿ ಅದನ್ನು ಮೀರಿ ಸಹಕಾರ ವ್ಯವಹಾರ, ವ್ಯವಸ್ಥಾಪನೆ ಬಂಡವಾಳ ಸೃಷ್ಟಿಯಲ್ಲಿ ತೊಡಗಿಸಿಕೊಳ್ಳಲು ಅವಕಾಶವಾಗಿದೆ. ಈ ಅವಕಾಶಗಳು ಇನ್ನೂ ಹೆಚ್ಚಿನ ಬೃಹತ್ ಸಹಕಾರ ಸಂಘಗಳಲ್ಲಿ ಅವಶ್ಯ ಅನುಭವ ಮತ್ತು ನೈಪುಣ್ಯವನ್ನು ಒದಗಿಸುತ್ತವೆ. ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ತಾರತಮ್ಯ ಮತ್ತು ಅನಾನುಕೂಲತೆಯನ್ನು ಎದುರಿಸಲು ಅವರು ತೋರಿರುವ ಪ್ರತಿಕ್ರಿಯೆಯಾಗಿದ್ದು ಮೊದಲ ತತ್ವದ ಉಲ್ಲಂಘನೆಯಾಗುವುದಿಲ್ಲ.

ಈ 21ನೇ ಶತಮಾನದಲ್ಲಿ ಗಂಡು, ಹೆಣ್ಣು ಎಂಬ ಎರಡು ಮಾತ್ರ ಎಂಬುದು ಎಲ್ಲ ಜನರನ್ನು ಪ್ರತಿನಿಧಿಸುತ್ತಿಲ್ಲ. ತೃತೀಯ ಲಿಂಗಿಗಳನ್ನು ಪರಿಗಣಿಸುವ ಅವಶ್ಯಕತೆ ಇದೆ. ಅವರಿಗೂ ಸಮಾನ ಅವಕಾಶಗಳನ್ನು ಒದಗಿಸಬೇಕು. ಮೊದಲ ತತ್ವದ ತಾರತಮ್ಯ ಎಸಗದ ನೀತಿ ಅವರಿಗೂ ಅನ್ವಯವಾಗುತ್ತದೆ.

ಸಾಮಾಜಿಕ, ವರ್ಣ ಅಥವ ಧರ್ಮ ತಾರತಮ್ಯವಿಲ್ಲದೇ ಮುಕ್ತ:

ಮೊದಲನೇ ತತ್ವವು ಯಾವುದೇ ಸಾಮಾಜಿಕ, ವರ್ಣ, ರಾಜಕೀಯ ಅಥವ ಧಾರ್ಮಿಕ ತಾರತಮ್ಯವಿಲ್ಲದೇ ಮುಕ್ತ ಸದಸ್ಯತ್ವವನ್ನು ಒತ್ತಿಹೇಳುತ್ತದೆ. ಕೆಲವು ಸಹಕಾರ ಸಂಘಗಳು ಧಾರ್ಮಿಕ, ಸಾಂಸ್ಕೃತಿಕ ಅಥವ ವರ್ಣದ ಅಲ್ಪ ಸಂಖ್ಯಾತರ ಸೇವೆಗಾಗಿಯೇ ಸ್ಥಾಪಿತವಾಗಿವೆ. ಅದರಲ್ಲಿ ಕೆಲವು ಸಹಕಾರ ಸಂಘಗಳ ಬಡತನ ನಿರ್ಮೂಲನೆ ಆರ್ಥಿಕ ಒಳಗೊಳ್ಳುವಿಕೆಗೆ ಕಾರಣವಾಗಿ ಹೆಮ್ಮೆಯ ಚಾರಿತ್ರ್ಯ ಹೊಂದಿವೆ. ಹಲವು ಇತರೆ ಜನಾಂಗದವರಿಗೂ ಸದಸ್ಯತ್ವವನ್ನು ಮುಕ್ತವಾಗಿರಿಸಿವೆ. ಹೊರಗಿರಿಸುವಿಕೆ ಮತ್ತು ಅನಾನುಕೂಲತೆಗಳನ್ನು ಹೋಗಲಾಡಿಸುವ ಸಲುವಾಗಿ ರೂಪುಗೊಂಡಿರುವ ಜನಾಂಗೀಯ ಆಧಾರಿತ ಅಲ್ಪ ಸಂಖ್ಯಾತ ಸಹಕಾರ ಸಂಘಗಳು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಹಕ್ಕು ಅವರಿಗಿರುತ್ತದೆ. ಆದರೆ ಅವು ಇತರರನ್ನು ತಾರತಮ್ಯದಿಂದ ಕಾಣುವುದು, ಇತರೆ ಸಾಂಸ್ಕೃತಿಕ ಗುಂಪುಗಳ ಈ ತರಹೆಯ ಸಹಕಾರ ಸಂಘಗಳಿಗೆ ಪ್ರತಿರೋದಿಸದೆ ಅವರಲ್ಲಿಯೇ ಸದಸ್ಯರೇತರರನ್ನು ಶೋಷಿಸುವುದು ಮತ್ತು ಒಟ್ಟಾರೆ ಸಹಕಾರ ಚಳುವಳಿಯ ಅಭಿವೃದ್ಧಿಯಲ್ಲಿ ಭಾಗವಹಿಸುವ ಜವಾಬ್ದಾರಿಯನ್ನು ಹೊಂದಿರಬೇಕು.

ಸಹಕಾರ ಸಂಘದ ಸದಸ್ಯರು ಯಾವುದೇ ರಾಜಕೀಯ ಪಕ್ಷಕ್ಕೆ, ಧಾರ್ಮಿಕ ಅಥವ ಸಾಂಸ್ಕೃತಿಕ ಗುಂಪಿಗೆ ಸೇರಲು ಸರ್ವಸ್ವತಂತ್ರರು. ಆದರೆ ಇತರೆ ಸದಸ್ಯರನ್ನು ತಾರತಮ್ಯದಿಂದ ಕಾಣಬಾರದು. ರಾಬರ್ಟ್ ಓವನ್‌ರವರು ನೀಡಿದ ಆದರ್ಶದಂತೆ ಆರಂಭದಿಂದಲೂ ಸಹಕಾರ ಚಳುವಳಿಯು ಎಲ್ಲ ರಾಜಕೀಯ ಸಿದ್ಧಾಂತ ನಂಬುಗಸ್ಥರಿಗೆ ತೆರೆದಿದೆ, 1832ರಲ್ಲಿ ನಡೆದ ಓವೆನ್‌ರ ಸಹಕಾರ ಸಮ್ಮೇಳನ ಈ ಕೆಳಕಂಡಂತೆ ಠರಾವು ಮಾಡಿದೆ. ಪುನಃ 1937ರಲ್ಲಿ 'ರಾಜಕೀಯ ಮತ್ತು ಧಾರ್ಮಿಕ ತಟಸ್ಥತೆ' ತತ್ವವನ್ನು ಒಳಗೊಂಡ ಸಹಕಾರ ತತ್ವಗಳ ಪುನರ್ಪರಿಶೀಲನಾ ಸಭೆಯಲ್ಲಿ ಪುನರುಚ್ಛರಿಸಲಾಯಿತು.

"ಏನೇ ಆದರೂ ಸಹಕಾರ ವಿಶ್ವವು ವಿವಿಧ ಧಾರ್ಮಿಕ, ರಾಜಕೀಯ ಪಕ್ಷಗಳ ಜನರನ್ನು ಹೊಂದಿರುತ್ತದೆ. ಓವನ್‌ರ ಅಥವ ಇತರೆ ಯಾವುದೇ ವ್ಯಕ್ತಿಗಳಾದ ಸಹಕಾರಿಗಳನ್ನು ಯಾವುದೇ ಧಾರ್ಮಿಕ ಅಥವ ರಾಜಕೀಯ ಹೊಂದಿರುವುವರೆಂದು ಗುರುತಿಸುವುದಿಲ್ಲವೆಂದು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಲಾಯಿತು".

ಇದೇ ರೀತಿಯಲ್ಲಿ ರಾಕ್‌ಡೇಲ್ ಅಗ್ರಗಾಮಿಗಳ ನಡವಳಿಕೆ ನಿಯಮಗಳನ್ನು 1860ರ ಪರಿಚಯ ಕಂಡಿಕೆಯಲ್ಲಿ ತಿಳಿಸಿದೆ.

"ಸಮಾಜದಲ್ಲಿ ಈಗ ಇರುವ ವಿವಿಧ ಧಾರ್ಮಿಕ ಅಥವ ರಾಜಕೀಯ ವ್ಯತ್ಯಾಸಗಳ ಬಗ್ಗೆ ಹಾಲಿ ಸಹಕಾರ ಚಳುವಳಿಯು ಪ್ರಸ್ಥಾಪಿಸುವುದಿಲ್ಲ(ಮೂಗು ತೂರಿಸುವುದಿಲ್ಲ) ಆದರೆ ಸಾಮಾನ್ಯ ಬಂಧನವಾದಿ ಸ್ವಹಿತಾಸಕ್ತಿ, ಸರ್ವರಿಗೂ ಫಲಪ್ರದವಾಗುವಂತೆ ಶಕ್ತಿ ಮಾರ್ಗಗಳು ಮತ್ತು ಪ್ರತಿಭೆಗಳನ್ನೂ ಒಗ್ಗೂಡಿಸುವುದೇ ಆಗಿದೆ".

ಈ ಸಹಕಾರ ತತ್ವಗಳು ಪ್ರತಿ ಪುನರ್ ಪರಿಶೀಲನೆ ಮತ್ತು ಪುನರ್ ರಚನೆಯಲ್ಲಿ ರಾಜಕೀಯ ಮತ್ತು ಧಾರ್ಮಿಕ ತಟಸ್ಥತೆಯನ್ನು ಮುಂದುವರಿಸಿಕೊಂಡು ಬರಲಾಗಿದೆ.

ಸಹಕಾರ ಸಂಘವು ಯಾವುದೇ ರಾಜಕೀಯ ನಿಲುವನ್ನು ಹೊಂದಿದ್ದರೂ ಅದು ಸದಸ್ಯರಾಗುವವರು ತಮ್ಮದೇ ನಿಲುವನ್ನು ಹೊಂದುವುದಕ್ಕೆ ಅಡ್ಡಿಯಾಗುವುದಿಲ್ಲ. ರಾಜಕೀಯ ತಟಸ್ಥೆಯು ಈ ಮೊದಲು ಸಹಕಾರ ತತ್ವದಲ್ಲಿ ಅಂತರ್ಗತವಾಗಿದೆ. ರಾಜಕೀಯ ತಟಸ್ಥತೆಯನ್ನು ರಾಜಕೀಯ ಉದಾಸೀನತೆ ಎಂದು ಭಾವಿಸಬಾರದು. ಸದಸ್ಯರ ಹಿತಾಸಕ್ತಿ ಕಾಪಾಡಲು ಸಹಕಾರ ಸಂಘಗಳು "ಪ್ರಜೆ/ನಾಗರೀಕ"ನಾಗಿ ವರ್ತಿಸಬೇಕಾಗುತ್ತದೆ. ಇತರೆ ನಾಗರೀಕ ಸಂಸ್ಥೆ/ಸಮಾಜ ಅಥವ ರಾಜಕೀಯ ಸಂಬಂಧವುಳ್ಳ ಸಂಸ್ಥೆಗಳೊಡನೆ ಸಂಬಂಧಗಳನ್ನಿರಿಸಿಕೊಳ್ಳಬೇಕಾಗುತ್ತದೆ. ಬಂಡವಾಳ ಹೂಡಿಕೆ ವ್ಯವಹಾರಿಕ ಸಂಸ್ಥೆಗಳಿಗೆ ಅನುಕೂಲಕರವಾಗಿ ಸಹಕಾರ ಸಂಸ್ಥೆಗಳಿಗೆ ಅನಾನುಕೂಲಕರ ರಾಷ್ಟ್ರೀಯ ನೀತಿಗಳು, ಕಾಯ್ದೆಗಳು, ತೆರಿಗೆಗಳು, ವ್ಯವಹಾರ ನಿಯಮಗಳು ರೂಪುಗೊಳ್ಳವುದನ್ನು ತಡೆಯಬೇಕಾಗುತ್ತದೆ. ಇದು ಸಹಕಾರ ಸಂಘಗಳಿಂದ ನೇರವಾಗಿ ಅಥವ ತಮ್ಮ ರಾಷ್ಟ್ರೀಯ ಮಹಾಮಂಡಳ ಅಥವ ಉತ್ತುಂಗ ಸಂಸ್ಥೆಗಳಿಂದಾಗಬಹುದು. ಫ್ರಾನ್ಸಿನ ಪ್ರಖ್ಯಾತ ಆರ್ಥಿಕ ತಜ್ಞ ಮತ್ತು ಸಹಕಾರ

ಚಳುವಳಿಯ ನೇತಾರ ಚಾರ್ಲ್ಸ್‌ಗೈಡ್ "ಸಹಕಾರದ ಹಿತಾಸಕ್ತಿಗೆ ಸಂಬಂಧಿಸಿದ ಬೃಹತ್ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಸಹಕಾರ ಸಂಘಗಳು ಚರ್ಚಿಸಲು ಯಾವುದೇ ಕಾರಣದಿಂದ ಯಾವತ್ತಿಗೂ ಹಿಂಜರಿಯಬಾರದು" ಎಂದು ತಿಳಿಸಿರುತ್ತಾರೆ.

ಸಾಮಾಜಿಕ ವರ್ಗ ಅಥವ ಜಾತಿ, ಸಾಹುಕಾರರಾಗಲಿ, ಬಡವರಾಗಲಿ ಅವರು ಸಹಕಾರ ಸಂಘದ ಸದಸ್ಯರಾಗಲು ಯಾವುದೇ ಪರಿಣಾಮ ಬೀರುವುದಿಲ್ಲ. ಯಾವುದೇ ವೈಯಕ್ತಿಕ ಗುಣಗಳಾಗಲಿ ಅಥವ ಇತರೆ ಸಾಮಾಜಿಕ ವಿಭಿನ್ನತೆಗಳಾಗಲಿ ಮುಕ್ತ ಸದಸ್ಯದ ತತ್ವಕ್ಕೆ ಕುಂದುತರಬಾರದು. ಸದಸ್ಯರಾಗಬಯಸುವವರಿಗೆ ವರ್ಗವೂ ತಾರತಮ್ಯದ ವಿಷಯವಾಗಬಾರದು. ವರ್ಗ ವ್ಯತ್ಯಾಸವು ಕೇವಲ ಮೇಲ್ನೋಟಕ್ಕಾಗಿ ರುತ್ತದೆಯೇ ಹೊರತು ಅದು ತಾರತಮ್ಯಕ್ಕೆ ಕಾರಣವಾಗಬಾರದು ಸಾಂಸ್ಕೃತಿಕ ವ್ಯತ್ಯಾಸಗಳು ಗುರುತರವಾಗಿ ಕಂಡುಬಂದರೂ ಅದನ್ನು ಮಾನವ ವೈವಿಧ್ಯತೆಯ ವೈಭವಯುತ ಕಾಮನಬಿಲ್ಲು ಎಂದೇ ಪರಿಗಣಿಸಬೇಕು ಹೊರತಾಗಿ ಸದಸ್ಯತ್ವನೀಡಲು ಮಿತಿಗೊಳಿಸಬಾರದು.

ಸಹಕಾರ ಸಂಘಗಳು ಸಾಮಾಜಿಕ ಪ್ರಗತಿಯ ಸಂಸ್ಥೆಗಳು ಪೂರ್ವಾಗ್ರಹ ಪೀಡಿತರಾಗಿ ತಾರತಮ್ಯ ಮಾಡುವುದನ್ನು ಸಂಸ್ಥಾನ ಮಾಡಿದವರ ಇಚ್ಛೆಯಂತೆ ಸವಾಲಾಗಿ ಸ್ವೀಕರಿಸಬೇಕು. ವಿಶೇಷವಾಗಿ ಈ ಮೊದಲ ತತ್ವವು ಅನ್ವಯವಾಗುವಂತೆ 'ಮುಕ್ತ ಸದಸ್ಯತ್ವವು ತಾರತಮ್ಯವನ್ನು ಹೋಗಲಾಡಿಸಬೇಕು. ಸಮಾಜದ ಎಲ್ಲ ಗುಂಪುಗಳು ಭಾಗವಹಿಸಲು ಅನುವಾಗುವಂತೆ ಎಲ್ಲ ಅಡೆತಡೆಗಳು, ಅಡ್ಡಿ–ಆತಂಕ ಗಳನ್ನು ಬಗೆಹರಿಸಿ ಸದಸ್ಯತ್ವಕ್ಕೆ ಪ್ರೋತ್ಸಾಹಿಸಬೇಕು.

## 4. ಭವಿಷ್ಯದಲ್ಲಿ ಪರಿಗಣಿಸಬೇಕಾದ ವಿಷಯಗಳು ಸದಸ್ಯರೇತರೊಡನೆ ವ್ಯವಹಾರ

ಸದಸ್ಯರೇತರರೊಡನೆ ವ್ಯವಹಾರ ಮತ್ತು ಅವರಿಗೆ ಸೇವೆ ಒದಗಿಸುತ್ತಿರುವ ಸಹಕಾರ ಸಂಘಗಳಲ್ಲಿ ಎಷ್ಟರ ಮಟ್ಟಿಗೆ (ಯಾವ ಮಟ್ಟಕ್ಕೆ) ಇದು ನಡೆಯುತ್ತಿದೆ ಎಂಬ ಚರ್ಚಿಸುವ ವಿಷಯವಾಗಿದೆ. ಸದಸ್ಯರೇತರೊಡನೆ ವ್ಯವಹರಿಸಿ ಸಹಕಾರ ಸಂಘದ ಆರ್ಥಿಕತೆಯನ್ನು ಹಿಗ್ಗಿಸುವುದನ್ನು ಒಪ್ಪಬಹುದಾದರೂ, ಸದಸ್ಯರೇತರರ ವ್ಯವಹಾರವೇ ಸದಸ್ಯರಿಗಿಂತ ಹೆಚ್ಚಾದರೆ ಇದನ್ನು ಪರಿಶೀಲಿಸಬೇಕಾಗುತ್ತದೆ. ಮೊದಲನೆಯದಾಗಿ ಮೊದಲತತ್ವವಾದ ಮುಕ್ತ ಮತ್ತು ಸ್ವಯಂ ಸದ್ಯತ್ವವನ್ನು ಪಾಲಿಸಲಾಗುತ್ತಿದೆಯೇ ರೂಢಿಗೆ ತರಲಾಗಿದೆಯೇ? ಸಹಕಾರ ಸಂಘದ ಸೇವೆ ಪಡೆಯುತ್ತಿರುವವರು ಸದಸ್ಯತ್ವರಾಗಿಲ್ಲದಿದ್ದಲ್ಲಿ ಸದಸ್ಯರನ್ನಾಗಿ ಸೇರ್ಪಡೆಗೊಳಿಸಲು ದಾರಿಗಳನ್ನು ಕಂಡು ಹಿಡಿದು ಸದಸ್ಯರಾಗಲು ಪ್ರೋತ್ಸಾಹಿಸಬೇಕು. ಸಹಕಾರ ತತ್ವ ಐದು (5)ರಂತೆ ಜನರನ್ನು ಶಿಕ್ಷಿತರನ್ನಾಗಿ ಮಾಡಿ ಸದಸ್ಯತನದಿಂದ ಆಗುವ ಲಾಭಗಳ ಬಗ್ಗೆ ತಿಳಿಸಿ ಸದಸ್ಯರಿಗೆ ಅನುಕೂಲಕರ ಸ್ಥಿತಿ ನಿರ್ಮಿಸಬೇಕು.

ಅದೇ ರೀತಿಯಲ್ಲಿ ಸದಸ್ಯರು ಸಹಕಾರ ಸಂಘದ ಸೇವೆಗಳ್ನು ಉಪಯೋಗಿಸಿ ಕೊಳ್ಳದಿದ್ದಲ್ಲಿ ಅದಕ್ಕೆ ಕಾರಣಗಳೇನು ಎಂದು ವಿಶ್ಲೇಷಿಸಿ ಅವರು ಸದಸ್ಯರಾಗಿ ಮುಂದುವರಿಯುವ ಹಕ್ಕನ್ನು ಕಾಪಾಡಬೇಕು.

**ಮೊದಲ ತತ್ವವನ್ನು ಬೃಹತ್ ಸಹಕಾರ ಗುಂಪುಗಳಲ್ಲಿ ನಿರ್ವಹಣೆ**

ಬೃಹತ್ ಮತ್ತು ಸಂಕೀರ್ಣ ಗುಂಪುಗಳು ಯಾವುವು ಇತರೆ ವ್ಯವಹಾರಗಳು ಮತ್ತು ಉಪವ್ಯವಹಾರ, ವ್ಯಾಪಾರ ನಡೆಸುತ್ತಿರುವವು ಹೇಗೆ ಮುಕ್ತ ಮತ್ತು ಸ್ವಯಂಸದಸ್ಯತ್ವದ ತತ್ವವನ್ನು ಪಾಲಿಸುತ್ತವೆ, ನಿರ್ವಹಿಸುತ್ತವೆ? ಈ ಸಂಸ್ಥೆಗಳು ಯಾವ ರೀತಿಯಲ್ಲಿ ಈ ತತ್ವವನ್ನು ಪಾಲಿಸಬಹುದಾಗಿದೆ ಅದರ ಉಪಯೋಗ ಪಡೆಯುತ್ತಿರುವವರು ಮತ್ತು ಭಾಗೀದಾರರುಗಳಿಗೆ ಉತ್ತರದಾಯಿಯಾಗಿ ಮುಕ್ತ ಸದಸ್ಯತ್ವ ಮತ್ತು ತಾರತಮ್ಯ ಮಾಡಬಾರದಂತಹ ಈ ತತ್ವಪಾಲಿಸುವಲ್ಲಿ ಆಯ್ಕೆಯ ಸ್ವಾತಂತ್ರ್ಯವನ್ನು ಹೊಂದಿವೆ .

# 2ನೇ (ಎರಡನೇ) ತತ್ವ

# ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ

ಸಹಕಾರ ಸಂಘಗಳು ಸದಸ್ಯರಿಂದ ನಿಯಂತ್ರಿಸಲ್ಪಟ್ಟ ಪ್ರಜಾಸತ್ತಾತ್ಮಕ ಸಂಸ್ಥೆಗಳು, ಅವರು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮತ್ತು ನೀತಿಗಳನ್ನು ರೂಪಿಸುವಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುತ್ತಾರೆ. ಪ್ರಾಥಮಿಕ ಸಹಕಾರ ಸಂಘಗಳು ಮತ್ತು ಇತರೆ ಮಟ್ಟದ ಸಹಕಾರ ಸಂಘಗಳು ಪ್ರಜಾಸತ್ತಾತ್ಮಕವಾಗಿ ರಚನೆಯಾಗಿರುವುದರಿಂದ ಎಲ್ಲರೂ ಸಮಾನ ಮತದಾನದ ಹಕ್ಕನ್ನು ಉಳ್ಳವರಾಗಿರುತ್ತಾರೆ. (ಒಬ್ಬ ಸದಸ್ಯ ಒಂದು ಮತ).

## 1 ಪರಿಚಯ:

**ಪ್ರಜಾಪ್ರಭುತ್ವ ಎಂಬುದು ಒಂದು ಸರಳ ಪರಿಕಲ್ಪನೆ :**

ಆಡಳಿತ ಅಥವ ನಿಯಂತ್ರಣ ಸಂಸ್ಥೆಯ ಬಹುಮತ ಸದಸ್ಯರ ನಿರ್ಧಾರದಿಂದ ನಡೆಯುತ್ತದೆ. ರೂಡಿಯಲ್ಲಿ ಮಾನವ ಸಂಸ್ಥೆಯಲ್ಲಿ ಪ್ರಜಾಸತ್ತಾತ್ಮಕ ಆಡಳಿತ ಒಂದು ಸಂಕೀರ್ಣ ಕಾರ್ಯ. ಸಹಕಾರ ಸಂಘಗಳಲ್ಲಿನ ಸುಗಮ ಆತಳಿತವೂ ಇದರಿಂದ ಹೊರತೇನಲ್ಲ.

ಕಳೆದ ಎರಡು ಶತಮಾನಗಳ ಚರಿತ್ರೆಯಲ್ಲಿ ರಾಜಕೀಯ ಮಟ್ಟದಲ್ಲಿ ಸಾಮಾನ್ಯವಾಗಿ ನಡೆಯುತ್ತಿರುವ ಸಂಗ್ರಾಮ, ಮತ್ತೂ ವಿಶ್ವದ ಅನೇಕ ಭಾಗಗಳಲ್ಲಿ ಈಗಲೂ ನಡೆಯುತ್ತಲೇ ಇದೆ. ಪ್ರಜಾಪ್ರಭುತ್ವವನ್ನು ಹಕ್ಕುಗಳ ಗುಚ್ಚ ಎಂದೆನ್ನಬಹುದು: ಒಂದು ರಾಜ್ಯ, ರಾಷ್ಟ್ರದ ಸರ್ಕಾರ ಅಥವ ಸಂಸ್ಥೆಯಲ್ಲಿ ಭಾಗವಹಿಸುವ ಹಕ್ಕು 19ನೇ ಶತಮಾನದ ಮಧ್ಯ ಭಾಗದಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಿದಾಗ ಪ್ರಜಾಸತ್ತಾತ್ಮಕ ಸದಸ್ಯ ನಿಯಂತ್ರಣ ತತ್ವವೇ ಬುನಾದಿ, ಅದರಲ್ಲಿಯೂ ಮಹಿಳೆಯರನ್ನೂ ಒಳಗೊಂಡಂತೆ ಸರ್ವ ಸದಸ್ಯರೂ ಅದರ ಅನ್ವಯಿಕೆ (ಮಹಿಳೆಯರೂ ಓಳಗೊಂಡಂತೆ). ಆಸ್ತಿಯಲ್ಲಿ ಹಕ್ಕು ಅಥವ ಲಿಂಗಬೇಧವಿಲ್ಲದಂತೆ ಸರ್ವರಿಗೂ ಮತದಾನದ ಹಕ್ಕು.

ಸಹಕಾರ ಸಂಘಗಳಲ್ಲಿ, 'ಪ್ರಜಾಪ್ರಭುತ್ವ' ಎಂದೊಡನೆ ಅದು ಹಕ್ಕು ಮತ್ತು ಜವಾಬ್ದಾರಿಗಳನ್ನು ಒಳಗೊಂಡಿರುತ್ತದೆ. ಅದು ಸಹಕಾರ ಸಂಘದ ಒಳಗಡೆ ಪ್ರಜಾಪ್ರಭುತ್ವ ವನ್ನು ಪೋಷಿಸಬೇಕಾದುದನ್ನು ಹೇಳುತ್ತದೆ ಮತ್ತು ಅದು ಸಾಮಾಜಿಕ ಮೌಲ್ಯವುಳ್ಳ ಮತ್ತು ಅತಿ ಅವಶ್ಯ ಕಾರ್ಯವಾಗಿರುತ್ತದೆ. ಸಹಕಾರ ಸಂಘದ ಅತಿ ಮುಖ್ಯ ಲಾಭವೆಂದರೆ ನಾಗರೀಕ ಸಮಾಜದ ಉತ್ಕೃಷ್ಟ ಮಣ್ಣಿನಲ್ಲಿ ಪ್ರಜಾಪ್ರಭುತ್ವದ ಆಳವಾದ ಬೇರುಗಳನ್ನು ಗಟ್ಟಿಗೊಳಿಸುತ್ತದೆ.

ಪ್ರಜಾಸತ್ತಾತ್ಮಕ ವಿಧಿ ವಿಧಾನಗಳೇ ತಾನೇ ತಾನಾಗಿ ಸಾಮರ್ಥ್ಯ ವೃದ್ಧಿಸುವುದಿಲ್ಲ. ಸುಸ್ಥಿರ ಪ್ರಜಾಸತ್ತಾತ್ಮಕ ವ್ಯವಸ್ಥೆ ನೆಲೆಗೊಳ್ಳುವಂತಾಗಲು, ಉತ್ತಮ ಪ್ರಜಾಸತ್ತಾತ್ಮಕ ಕಾಯ್ದೆಗಳು, ಆಡಳಿತ ನಿಯಮಗಳು, ವಿಧಿವಿಧಾನಗಳು, ಉತ್ತಮ ವ್ಯವಹಾರ ನಿರ್ವಹಣೆ ಮತ್ತು ಸಂಸ್ಥೆ ನಿರ್ವಹಣೆಯ ಮಾದರಿ ಅತಿ ಅಗತ್ಯ, ಪ್ರಜಾಪ್ರಭುತ್ವ ಎಂದರೆ ಅದು ಕೇವಲ ಚುನಾವಣೆ ಮತ್ತು ಮಹಾಸಭೆಗಳಿಗೆ ಸೀಮಿತವಾಗಿರುವುದಿಲ್ಲ. ಆದು ಪ್ರಜಾಸತ್ತಾತ್ಮಕ ಮತ್ತು ಅನುಷ್ಠಾನ ಅಧಿಕಾರಗಳ ಪ್ರತ್ಯೇಕತೆ, ಸದಸ್ಯರ ಹತೋಟಿಯಲ್ಲಿ ನಿಗ್ರಹ ಮತ್ತು ಸಮತೋಲನವನ್ನು ಇಟ್ಟುಕೊಳ್ಳುವುದಾಗಿದೆ. ಸಹಕಾರ ಸಂಘದ ಚುನಾವಣೆಗಳು, ಆಡಳಿತ ತಂತ್ರಗಾರಿಕೆ, ಲೆಕ್ಕಪರಿಶೋಧನೆಗಳ ಮೇಲ್ವಿಚಾರಣೆ, ಆಡಳಿತ ವರದಿಗಳು, ಸದಸ್ಯರಿಗೆ ಅರಿವಾಗುವಂತೆ ಮಾಡಲು ವಿವಿಧ ಅಂಗಗಳ ರಚನೆಯ ಅಗತ್ಯತೆ ಇದೆ.

ಸಹಕಾರ ಚಳುವಳಿಯ ಆರಂಭದ ದಿನಗಳಿಂದಲೂ ಈ ಎರಡನೆಯ ಪ್ರಜಾಪ್ರಭುತ್ವದ ತತ್ವ ಸಹಕಾರ ಸಂಘಗಳ ಬಹು ಮುಖ್ಯ ತತ್ವವಾಗಿದೆ. ಸಹಕಾರ ಆಡಳಿತದ ಹೃದಯ ಮತ್ತು ಆತ್ಮವಾಗಿರುತ್ತದೆ. ಸದಸ್ಯರು ತಮ್ಮ ಹಕ್ಕನ್ನು ಸ್ವಾಯತ್ತತೆ ಮತ್ತು ಸ್ವಾತಂತ್ರ್ಯದಿಂದ ಚಲಾಯಿಸಿ ಸಾರ್ವಭೌಮತ್ವತೆಯಿಂದ ಪ್ರಜಾಸತ್ತಾತ್ಮಕ ವಿಧಿವಿಧಾನಗಳನ್ನು ಅನುಸರಿಸಲು ಒಪ್ಪಿರುತ್ತಾರೆ. ಪ್ರತಿಯೊಂದು ಸಹಕಾರ ಸಂಘವು ಸದಸ್ಯರ ಪ್ರಜಾಸತ್ತಾತ್ಮಕ ಹತೋಟಿ/ ನಿಯಂತ್ರಣವನ್ನು ಅಳವಡಿಸಿಕೊಂಡಿರುತ್ತದೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಗಳು ಅನೇಕ ಪ್ರಜಾಸತ್ತಾತ್ಮಕ ಒಪ್ಪಂದ/ಒಡಂಬಡಿಕೆಗಳನ್ನು ಒಳಗೊಂಡಿರುತ್ತದೆ. ಕೆಲವು ವರ್ಷಗಳಿಗೊಮ್ಮೆ ತಮ್ಮ ಪ್ರತಿನಿಧಿಗಳನ್ನು ಚಿನಾಯಿಸುವುದು ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸುವುದು, ದೈನಂದಿನ ವ್ಯವಹಾರಗಳಲ್ಲಿ ನಿರ್ಧಾರಗಳಲ್ಲಿ ಸದಸ್ಯರನ್ನು ನಿರಂತರವಾಗಿ ತೊಡಗಿಸಿಕೊಳ್ಳುವುದು ಪ್ರಜಾಸತ್ತಾತ್ಮಕ ಒಪ್ಪಂದ ಒಡಂಬಡಿಕೆಗಳಲ್ಲಿ ಸದಸ್ಯರು ಚರ್ಚಾತ್ಮಕ ಮತ್ತು ಭಾಗಿತ್ವದ ಕಡೆಗೆ ಸಹಕಾರ ಸಂಘಗಳು ಬಾಗುತ್ತದೆ. ಬಹುಮುಖ್ಯ ನೀತಿ ರೂಪಿಸುವಲ್ಲಿ, ಪ್ರಸ್ಥಾಪಿಸುವಲ್ಲಿ ಮತ್ತು ಸಾಮಾನ್ಯವಾಗಿ, ವಾರ್ಷಿಕ ಮಹಾಸಭೆಗಳಲ್ಲಿ, ಚುನಾವಣೆಗಳಲ್ಲಿ ಮತ್ತು ಹಿರಿಯ ಆಡಳಿತ ಮಟ್ಟದಲ್ಲಿ ಸದಸ್ಯರನ್ನು ತೊಡಗಿಸಿಕೊಳ್ಳಬೇಕಾಗುತ್ತದೆ.

ಸದಸ್ಯರು ಸಹಕಾರ ಸಂಘಗಳ ಚಟುವಟಿಕೆಗಳಲ್ಲಿ ಹೆಚ್ಚು ಪಾಲ್ಗೊಳ್ಳುವಂತೆ ಮಾಡಲು ಅನೇಕ ಸಹಕಾರ ಸಂಘಗಳಲ್ಲಿ ಕೆಲವು ಉತ್ತೇಜನಗಳನ್ನು ನೀಡುತ್ತಿವೆ. ಸಭೆಗಳಲ್ಲಿ ಊಟದ ವ್ಯವಸ್ಥೆ, ಪಾಲ್ಗೊಳ್ಳುವಿಕೆಗನುಗುಣವಾಗಿ ಬೋನಸ್, ಚೀಟಿ ಮೂಲಕ ಪಾರಿತೋಷಕಗಳನ್ನು ನೀಡುವುದು. ಏನೇ ಆದರೂ ಸಹಕಾರ ಸಂಘಗಳು ಕೇವಲ ಪ್ರೋತ್ಸಾಹಕ ಕ್ರಿಯೆಯನ್ನು ಅವಲಂಭಿಸಬಾರದು.

5ನೇ ಸಹಕಾರ ತತ್ವವಾದ ಸದಸ್ಯ ಶಿಕ್ಷಣ, ತರಭೇತಿ ಮತ್ತು ಮಾಹಿತಿ/ಪ್ರಚಾರ ಇದನ್ನು ಪ್ರಚುರಪಡಿಸಿ ಸದಸ್ಯರಿಗೆ ಶಿಕ್ಷಣ ಮತ್ತು ಮಾಹಿತಿ ನೀಡಿ ಸಹಕಾರ ಸಂಘದಲ್ಲಿ ಪ್ರಜಾಸತ್ತಾತ್ಮಕ ನಿಯಂತ್ರಣದಲ್ಲಿನ ಹಕ್ಕು ಜವಾಬ್ದಾರಿಗಳನ್ನು ಅರಿಯುವಂತೆ ಮತ್ತು ಆಚರಿಸುವಂತೆ ಮಾಡಬೇಕು. ಸಹಕಾರ ಸಂಘಗಳು ನೂತನ ಪ್ರಯೋಗಗಳನ್ನು ಸದಸ್ಯರ ಭಾಗವಹಿಸುವಿಕೆಯನ್ನು ಖಾತ್ರಿ ಪಡಿಸಿಕೊಳ್ಳಲು ಮಾಡಬಹುದು. ಉದಾಹರಣೆ ವಿದ್ಯುನ್ಮಾನ ಮತದಾನ, ಯುವ ಸಹಕಾರಿಗಳಿಗೆ ತರಭೇತಿ ಮತ್ತು ಪ್ರೋತ್ಸಾಹ, ಯುವ ನಿರ್ದೇಶಕರಿಗೆ ತರಭೇತಿ ಮತ್ತು ಮತ್ತಷ್ಟು ಯುವಕರು ಸಹಕಾರ ಸಂಘಗಳಲ್ಲಿ ತೊಡಗಿಸಿಕೊಳ್ಳು ವಂತಾಗಬೇಕು.

ಪ್ರಜಾಸತ್ತಾತ್ಮಕ ನಿಯಂತ್ರಣ ಹತೋಟಿ ತತ್ವವನ್ನು ಅನುಷ್ಠಾನಗೊಳಿಸುವಲ್ಲಿ ಅತಿ ಮುಖ್ಯ ಸವಾಲು ಚರ್ಚೆಗಳಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುವುದೇ ಆಗಿದೆ. ಚರ್ಚೆಗಳಾಗದೆ, ಕೇವಲ ಜಗಳಗಳಾಗದೇ ಕ್ರಿಯಾತ್ಮಕ ಆರೋಗ್ಯಕರ ಚಿಂತನ ಮಂಥನ ಕಾರ್ಯಕ್ರಮವಾಗಿ ಪ್ರಜಾಸತ್ತಾತ್ಮಕ ರಚನೆಯು ಪರಿವರ್ತಿತಗೊಳ್ಳಬೇಕಿದೆ. ಸದಸ್ಯರು ಸಕ್ರಿಯ ಸದಸ್ಯರಾಗಿ ಚುನಾವಣೆಗಳಲ್ಲಿ ತಾವು ಕೂಡ ಅಭ್ಯರ್ಥಿಗಳಂತಾಗಬೇಕು.

## 2. ಪದಗಳು ಮತ್ತು ಪದ ಪುಂಜಗಳ ವ್ಯಾಖ್ಯಾನ:

"ಸಹಕಾರ ಸಂಘಗಳು ಅವುಗಳ ಸದಸ್ಯರಿಂದ ನಿಯಂತ್ರಿತ ಪ್ರಜಾಸತ್ತಾತ್ಮಕ ಸಂಸ್ಥೆಗಳು. ಅವರು ನೀತಿ ನಿರೂಪಣೆಗಳನ್ನು ರೂಪಿಸುವಲ್ಲಿ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳವು ದರಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುತ್ತಾರೆ" ಪ್ರಜಾಸತ್ತಾತ್ಮಕ ಸಂಸ್ಥೆಯಲ್ಲಿ ಸದಸ್ಯರದೇ ಅಂತಿಮ ಅಧಿಕಾರ ಎಂಬುದು ನಿಶ್ಚಿತ ಗುಣ. ಈ ವಾಕ್ಯವು ಸಹಕಾರ ಸಂಘವನ್ನು ಸದಸ್ಯರೇ ಅಂತಿಮವಾಗಿ ನಿಯಂತ್ರಿಸುತ್ತಾರೆ ಎಂಬುದನ್ನು ಒತ್ತಿ ಧ್ವನಿಸುತ್ತದೆ. ಚುನಾವಣೆಗಳ ಮೂಲಕ ತಮ್ಮ ಪ್ರತಿನಿಧಿಗಳನ್ನು ಆರಿಸುವಲ್ಲಿ ದೈನಂದಿನ ವ್ಯವಹಾರಗಳಲ್ಲಿ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವುದರಲ್ಲಿ ಪ್ರಜಾಸತ್ತಾತ್ಮಕವಾಗಿ ಕ್ರಿಯಾತ್ಮಕವಾಗಿ ಮತದಾನದ ಹಕ್ಕುಳ್ಳ ಸದಸ್ಯರಾಗಿ ಭಾಗವಹಿಸುತ್ತಾರೆ ಎಂಬ ಅಂಶವನ್ನು ಒತ್ತಾಯಿಸುತ್ತದೆ. ಸರ್ವ ಸದಸ್ಯರ ಸಭೆ ತೆಗೆದುಕೊಳ್ಳಬೇಕಾದ ಅತಿ ಪ್ರಮುಖ ತಂತ್ರಗಾರಿಕೆಯುಕ್ತ ನೀತಿಗಳು ನಿರ್ಧಾರಗಳು ಮತ್ತು ಚುನಾಯಿತ ಆಡಳಿತ ಮಂಡಳಿಗೆ ನಿರ್ಧಾರ ತೆಗೆದುಕೊಳ್ಳಲು ಬಿಡಬೇಕಾದ ನಿರ್ಧಾರಗಳ ವಿಷಯಗಳಾವುವು ಎಂಬುದರ ಬಗ್ಗೆ ಸಹಕಾರ ಸಂಘವೇ ನಿರ್ಧರಿಸತಕ್ಕದ್ದು. (ನಮ್ಮ ರಾಜ್ಯದಲ್ಲಿ ಕಾಯ್ದೆ ಕಾನೂನುಗಳಲ್ಲಿ ಅಡಕವಾಗಿದೆ.)

"ಚುನಾಯಿತ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸುತ್ತಿರುವ ಪುರುಷರು ಮತ್ತು ಮಹಿಳೆಯರು ಸದಸ್ಯರಿಗೆ ಹೊಣೆಗಾರರು" ಸದಸ್ಯರ ಅಲ್ಪಾವಧಿಯ ಮತ್ತು ದೀರ್ಘಾವಧಿಯ ಲಾಭಗಳಿಗಾಗಿ ಚುನಾಯಿತ ಹುದ್ದೆಗಳು ಧರ್ಮದರ್ಶಿತ್ವ ಹೊಂದಿದೆ ಎಂಬುದನ್ನು ಈ ವ್ಯಾಕ್ಯವು ನೆನಪಿಸುತ್ತದೆ. ಸಹಕಾರ ಸಂಘವು ಚುನಾಯಿತ ಅಧಿಕಾರಿಗಳಾದಲ್ಲಿ ಇವರಿಗೆ ವರದಿ ಮಾಡಿಕೊಳ್ಳುವ ಅಧಕಾರಿಗಳೂ ಮತ್ತು ನೌಕರರದೂ ಅಲ್ಲ. ಸಹಕಾರ ಸಂಘಗಳು ಸದಸ್ಯರ ಜಂಟಿ ಯಜಮಾನತ್ವದ್ದಾಗಿದೆ. ಚುನಾಯಿತ ಅಧಿಕಾರಿಗಳು ತಮ್ಮ ಎಲ್ಲ ಕ್ರಿಯೆಗಳಿಂದ ಸದಸ್ಯತ್ವಕ್ಕೆ ಹೊಣೆಗಾರರು. ಕೇವಲ ಚುನಾವಣೆ ಸಮಯದಲ್ಲಿ

ಅವರ ಪೂರ್ಣಾವಧಿಯವರೆಗೆ.

"ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಸದಸ್ಯರು ಸಮಾನ ಮತದ ಹಕ್ಕನ್ನು ಹೊಂದಿರುತ್ತಾರೆ (ಒಬ್ಬ ಸದಸ್ಯ ಒಂದು ಮತ)" ಪ್ರಾಥಮಿತ ಸಂಘದಲ್ಲಿ ಸಾಂಪ್ರದಾಯಿಕವಾಗಿ ಮತದಾನದ ಹಕ್ಕನ್ನು ಈ ಪದ ಪುಂಜವು ವಿವರಿಸುತ್ತದೆ. 1995ರಲ್ಲಿ ತತ್ವಗಳನ್ನು ಪುನರ್ ರೂಪಿಸುವಾಗ್ಯೆ ಬಹುತೇಕ ಸಹಕಾರ ಸಂಘದಲ್ಲಿ ಒಂದು ರೀತಿಯ ಸದಸ್ಯರಿದ್ದರು. ಈ ಸಹಕಾರ ಸಂಘಗಳಲ್ಲಿ ಸಮಾನ ಮತದಾನ ಹಕ್ಕು ಒಬ್ಬ ಸದಸ್ಯ ಒಂದು ಮತ ಎಂಬುದು ಸ್ವಯಂ ವೇಧ್ಯವಾಗಿದೆ. ಬಹುಬಾಗಿತ್ವದ ಅಥವ ಮಿಶ್ರತಳಿ ಸಹಕಾರ ಸಂಘಗಳಲ್ಲಿ ತಮ್ಮದೇ ಆದ ಸಕಾರಣಗಳಿಗಾಗಿ ವಿಭಿನ್ನ ರೀತಿಯ ಕ್ರಮ ಅನುಸರಿಸುತ್ತಿವೆ.

"ಇತರೆ ಮಟ್ಟದಲ್ಲೂ ಸಹಕಾರ ಸಂಘಗಳನ್ನು ಪ್ರಜಾಸತ್ತಾತ್ಮಕವಾಗಿ ರಚಿಸಲಾಗುತ್ತಿದೆ" ಪ್ರಾಥಮಿಕ ಮಟ್ಟದಲ್ಲಿ ಅಲ್ಲದೆ ಇತರೆ ಮಟ್ಟದಲ್ಲಿ ವಿಭಿನ್ನವಾಗಿರುವುದನ್ನು ಕಾಣುತ್ತಲಿದ್ದೇವೆ. ಸಂದರ್ಭಕ್ಕೆತಕ್ಕಂತೆ ಯಾವುದು ಪ್ರಜಾಪ್ರಭುತ್ವ ಎಂಬುದನ್ನು ಸಹಕಾರ ಚಳುವಳಿಯೇ ನಿರ್ಧರಿಸಬೇಕಾಗಿದೆ. ಈ ಪದ ಪುಂಜವು ಮಾಧ್ಯಮಿಕ ಮತ್ತು ಉತ್ತುಂಗಮಟ್ಟದಲ್ಲಿ ವಿವಿಧ ಆಸಕ್ತಿಗಳಂತೆ ಪ್ರಮಾಣಾನುಸಾರ ಮತದಾನವನ್ನು ಅಳವಡಿಸಿಕೊಳ್ಳಲಾಗಿದೆ. ಇದು ಸದಸ್ಯತ್ವ ಪಡೆದಿರುವ ಸಹಕಾರ ಸಂಘಗಳ ಗಾತ್ರ ಮತ್ತು ಅವುಗಳ ಬದ್ಧತೆಯನ್ನು ಅವಲಂಭಿಸಿದೆ. ಮಾಧ್ಯಮಿಕ ಮತ್ತು ಉತ್ತುಂಗ ಸಹಕಾರ ಸಂಘಗಳಲ್ಲಿ ಈ ತತ್ವವು ಪ್ರಗತಿದಾಯಕವಾಗಿಲ್ಲ. "ಪ್ರಜಾಸತ್ತಾತ್ಮಕ ರೀತಿಯಲ್ಲಿ ರೂಪುಗೊಳ್ಳಬೇಕು" ಎಂಬುದು ಸದಾಶಯವಾಗಿದೆ. ಆಗಿಂದಾಗ್ಯೆ ಪರಿಸ್ಥಿತಿಯನ್ನು ಪ್ರಜಾಸತ್ತಾತ್ಮಕವಾಗಿರುವಂತೆ ನೋಡಿಕೊಳ್ಳಲು ಪರಮಾರ್ಶಿಸಬೇಕಾಗಿದೆ. ಸಣ್ಣ ಸಹಕಾರ ಸಂಘಗಳು ತಮ್ಮನ್ನು ಕಡೆಗಣಿಸಿವೆ ಎಂದುಕೊಂಡಲ್ಲಿ ಅದು ಅತೃಪ್ತಿದಾಯಕವಾದ ಸಂಗತಿಯಾಗುತ್ತದೆ.

## 3. ಮಾರ್ಗದರ್ಶಿ ಟಿಪ್ಪಣಿ:

**ಪ್ರಜಾಸತ್ತಾತ್ಮಕ ಆಡಳಿತ ಮತ್ತು ಒಪ್ಪಂದಗಳು :**

ಸಹಕಾರ ಪ್ರಜಾಪ್ರಭುತ್ವವು ಅನೇಕ ತಾಂತ್ರಿಕ ಬೆಳವಣಿಗೆಗಳ ಲಾಭವನ್ನು ಪಡೆಯಬೇಕು. ಸಹಕಾರ ಸಂಘದಲ್ಲಿ ಸದಸ್ಯರನ್ನು ತೊಡಗಿಸಿಕೊಳ್ಳುವಂತೆ ಮಾಡಲು ಆಧುನಿಕ ಮೊಬೈಲ್ ಮತ್ತು ಇಂಟರ್‌ನೆಟ್ ಸಂವಹನ ತಾಂತ್ರಿಕತೆಯನ್ನು ಬಳಸಿಕೊಳ್ಳಬಹುದಾಗಿದೆ.

ಏನೇ ಆದರೂ ಸಾಮಾನ್ಯ ಸಭೆಗಳಲ್ಲಿ ಸದಸ್ಯರ ವೈಯುಕ್ತಿಕ ಭೇಟಿಯನ್ನು ಅಲ್ಲಗಳೆಯಲಾಗದು. ಸದಸ್ಯರ ನಡುವೆ ನಡೆಯುವ ಸಂವಾದಗಳು, ಚರ್ಚೆಗಳು, ಮತದಾನ ಮಾಡುವಲ್ಲಿ, ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಸದಸ್ಯರು ಸಹಕಾರ ಕಾಯ್ದೆ ಕಾನೂನುಗಳು ಉಪನಿಯಮಗಳ ರೀತಿ ವರ್ತಿಸುವುದು ಘನಾತ್ಮಕವಾಗಿಲ್ಲದೆ ಗುಣಾತ್ಮಕವಾಗಿ ಪ್ರಾಮುಖ್ಯತೆ ಪಡೆಯುತ್ತದೆ.

ಸಹಕಾರ ಸಂಘವನ್ನು ಪೂರ್ವ ನಿರ್ಧಾರದಂತೆ ಆಡಳಿತ ನಡೆಸಲಾಗುವುದಿಲ್ಲ. ಪ್ರತಿ ಸಹಕಾರ ಸಂಘವು ತನ್ನ ರಾಷ್ಟ್ರೀಯ ಕಾಯ್ದೆಗಳು, ಬೌಗೋಳಿಕ ಕಾರ್ಯಮಿತಿ ವ್ಯವಹಾರಗಳ ಗಾತ್ರ, ವ್ಯವಹಾರದ ಸ್ವರೂಪ, ಉದ್ದೇಶಗಳಿಗನುಸಾರವಾಗಿ ಅದಕ್ಕೆ ತಕ್ಕಂತೆ ಸೂಕ್ತವಾದ ಪ್ರಜಾಸತ್ತಾತ್ಮಕ ಆಡಳಿತ ಸ್ವರೂಪ ಮತ್ತು ಉಪನಿಯಗಳನ್ನು ಹೊಂದಬೇಕಾಗುತ್ತದೆ. ಮಾಡಿದಂತಹ ವ್ಯವಸ್ಥೆಯು ಕೆಲವೇ ಹಿತಾಸಕ್ತರ ಹಿಡಿತದಲ್ಲಿರದಂತೆ ನಿಜವಾಗಿಯೂ ಪರಿಣಾಮಕಾರಿಯಾಗಿ ಸದಸ್ಯರ ನಿಯಂತ್ರಣದಲ್ಲಿರುವಂತೆ ನೋಡಿಕೊಳ್ಳಬೇಕು. ಕೇವಲ ನೆಪ ಮಾತ್ರಕ್ಕೆ ಪ್ರಜಾಸತ್ತಾತ್ಮಕ ನಿಯಂತ್ರಣ ಎಂದೆನಿಸಿಕೊಳ್ಳಬಾರದು. ಯಾವುದೇ ಪ್ರಜಾಪ್ರಭುತ್ವದಲ್ಲಿ ಕೆಲವೇ ಶಕ್ತರು ಪೂರ್ಣ ಹಿಡಿತದಲ್ಲಿಟ್ಟುಕೊಳ್ಳುವ ತೊಡಕು ಇದ್ದೇ ಇರುತ್ತದೆ. ಆದರೆ ಇದನ್ನು ಎಲ್ಲ ಸದಸ್ಯರು ತಮ್ಮ ಹಕ್ಕುಗಳನ್ನು ಗೌರವಿಸುವ ಮತ್ತು ಸಹಕಾರ ಸಂಘದ ಪ್ರಜಾಪ್ರಭತ್ವ ವಿಧಿಗಳಲ್ಲಿ ಭಾಗವಹಿಸುವ ಮೂಲಕ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿ ನಿಲ್ಲುವ ಮೂಲಕ ಅಂತಹ ಶಕ್ತಿಗಳಿಂದ ರಕ್ಷಿಸಿಕೊಳ್ಳಬೇಕು. ಇದರ ಕಡಿಮೆ ಮಟ್ಟದ ಭಾಗವಹಿಸುವಿಕೆ ಅಂತಹವರಿಗೆ ಸುಲಭವಾಗಿ ಧಕ್ಕಿಸಿಕೊಳ್ಳುವ ಅವಕಾಶ ಕಲ್ಪಿಸಿದಂತೆ ಮಾಡುತ್ತದೆ. ಅವರು ಸಿಬ್ಬಂದಿಯಾಗಬಹುದು, ಮಧ್ಯಮಟ್ಟದ ಮತ್ತು ಹಿರಿಯ ವ್ಯವಸ್ಥಾಪಕರಾಗಬಹುದು ಅಥವ ಚುನಾವಣಾಗುಂಪುಗಳಾಗಬಹುದು. ತದನಂತರ ಅದೇ ಮುಂದಿನ ಚುನಾವಣೆಗೆ ನಿಯಮಗಳು ಮತ್ತು ಅರ್ಹತೆಗಳನ್ನು

ನಿರ್ಧರಿಸುವಂತಾಗಬಹುದು.

ಸಹಕಾರ ಸಂಘದ ಗಾತ್ರ ಅಥವ ಬೆಳವಣಿಗೆಯ ಮಟ್ಟ ಯಾವುದೇ ಇದ್ದರೂ ಸದಸ್ಯತ್ವವನ್ನು ಅರ್ಥಪೂರ್ಣವಾಗಿಸುವುದು ಮತ್ತು ಸದಸ್ಯರನ್ನು ಸಂಘದ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು ಅತ್ಯಂತ ಕಷ್ಟಕರವಾದ ಕೆಲಸವಾಗಿರುತ್ತದೆ. ಅನೇಕ ಸಹಕಾರ ಸಂಘಗಳಲ್ಲಿ ಮಾಹಿತಿ ಹಂಚಿಕೆ, ತರಭೇತಿ ಶಿಕ್ಷಣದ ಅವಕಾಶಗಳಿಲ್ಲದೇ ಮತ್ತು ಸದಸ್ಯರ ಭಾಗಿತ್ವಕ್ಕೆ ಅವಶ್ಯ ಮಾರ್ಗಗಳಿಲ್ಲದೇ ಸಹಕಾರ ಸಂಘದ ಸದಸ್ಯತ್ವತನದಿಂದ ತೆಗೆಯುವುದು ಅವರ ಯಜಮಾನಿಕೆ ಮತ್ತು ನಿಯಂತ್ರಣ ಕ್ರಮವನ್ನು ಮತ್ತಷ್ಟು ಕುಗ್ಗಿಸಿದಂತಾಗುತ್ತದೆ. ಸಹಕಾರ ಸಂಘದ ಚಟುವಟಿಕೆ ಅರ್ಥ ಪಡಿಸಿಕೊಳ್ಳದೇ ನೂತನವಾಗಿ ಸದಸ್ಯತ್ವ ಪಡೆಯುವುದು ಮತ್ತು ಇತರರು ಅದರ ಪರವಾಗಿ ಷೇರುಧನ ಭರ್ತಿ ಮಾಡುವಂತಹ ಸಂದರ್ಭಗಳಲ್ಲಿ ಈ ತೊಡಕು ಮತ್ತಷ್ಟು ಉಲ್ಬಣಗೊಳ್ಳುತ್ತದೆ. ನೂತನ ಸಹಕಾರ ಸಂಘಗಳು ಮತ್ತು ಸಣ್ಣ ಸಹಕಾರ ಸಂಘಗಳಲ್ಲಿ ಸದಸ್ಯತ್ವವನ್ನು ಅರ್ಥ ಪೂರ್ಣವಾಗಿಸುವುದು ಸುಲಭವಾಗಬಹುದು. ಏನೇ ಆದರೂ ಸಂಘದ ಗಾತ್ರ ಮತ್ತು ಅಭಿವೃದ್ಧಿ ಮಟ್ಟ ಎಷ್ಟೇ ಇದ್ದರೂ ಸದಸ್ಯತ್ವವನ್ನು ಅರ್ಥ ಪೂರ್ಣವಾಗಿಸುವುದು ಮತ್ತು ಸದಸ್ಯರ ಭಾಗಿತ್ವವನ್ನು ಪ್ರೋತ್ಸಾಹಿಸುವುದು ಎಲ್ಲ ಸಹಕಾರ ಸಂಘಗಳಿಗೆ ಕಷ್ಟಕರವಾಗಿರುತ್ತದೆ. 5ನೇ ಸಹಕಾರ ತತ್ವವಾದ ನಿರಂತರ ಶಿಕ್ಷಣ ಮತ್ತು ತರಭೇತಿಗೆ ಇದು ಸವಾಲಾಗಿಯೇ ಇರುತ್ತದೆ ಮತ್ತು ಅದರ ಪ್ರಾಮುಖ್ಯತೆಯನ್ನು ಪುನರುಚ್ಛರಿಸುತ್ತದೆ. ದೊಡ್ಡ ಸಹಕಾರ ಸಂಘಗಳಲ್ಲಿ ಎಲ್ಲಿ ಅದರ ಉಪ ಮತ್ತು ಗುಂಪುರಚನೆಗಳಿರುತ್ತವೆಯೋ ಅಲ್ಲಿ ಸದಸ್ಯರು ಅದರ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯನ್ನು ಅರಿತವರಾಗಿರಬೇಕು. ಸದಸ್ಯ ಸಹಕಾರ ಸಂಘಗಳಿಂದ ಹೆಚ್ಚು ಪ್ರಾತಿನಿಧ್ಯವು ಆಡಳಿತ ಮಂಡಳಿಯಲ್ಲಿರುವಂತೆ ಖಾತ್ರಿ ಪಡಿಸಿಕೊಳ್ಳಬೇಕಾಗುತ್ತದೆ.

ಅನೇಕ ಸಹಕಾರ ಸಂಘಗಳಲ್ಲಿ ಸಾಂಪ್ರಧಾಯಿಕವಾಗಿ ಒಂದೇ ತರಹೆಯ ಸದಸ್ಯತ್ವವನ್ನು ಹೊಂದಲಾಗಿರುತ್ತದೆ. ಸಹಕಾರ ಸಂಘಗಳ ಈ ಏಕ ಸದಸ್ಯತ್ವ ವಿಧ ಅದರಲ್ಲಿಯೂ ಬಳಕೆದಾರರ ಸಹಕಾರ ಸಂಘಗಳಲ್ಲಿದ್ದ ಈ ರೂಪ ಸಹಕಾರ ತತ್ವಗಳನ್ನು ರೂಪಿಸುವುದರ ಮೇಲೆ ತನ್ನ ಪ್ರಭಾವವನ್ನು ಬೀರಿರುತ್ತದೆ. ನೂತನ ರೀತಿಯ ಸಹಕಾರ ಸಂಘಗಳು ವಿವಿಧ ರೀತಿಯ ಭಾಗೀದಾರರನ್ನು ಉಳ್ಳ ಸಹಕಾರ ಸಂಘಗಳು ಸದಸ್ಯತ್ವವನ್ನು ಅರ್ಥಪೂರ್ಣ ಗೊಳಿಸುವಲ್ಲಿ ಸವಾಲು ಮತ್ತು ಜವಾಬ್ದಾರಿಯನ್ನು ಎದುರಿಸುತ್ತಿವೆ. ಸದಸ್ಯರ ಅವಶ್ಯಕತೆ ಆಸೆ ಆಕಾಂಕ್ಷೆಗಳ ಪರಸ್ಪರ ಸಹಾಯ (ಉದ್ದೇಶ ಸಾಧನೆಯೇ) ಸಹಕಾರ ಸಂಘದಲ್ಲಿ ಸದಸ್ಯರ ಭಾಗಿತ್ವದ ಚಲನಾ ಶಕ್ತಿಯಾಗಿರುತ್ತದೆ.

**ವೈವಿಧ್ಯತೆಯ ಪ್ರತಿಫಲನ:**

ಸಹಕಾರ ಸಂಘದ ಜವಾಬ್ದಾರಿಯುತ ಸ್ಥಾನಗಳಿಗೆ ಆಯ್ಕೆಯಾಗಿರುವವರು ಸದಸ್ಯತ್ವದ ವೈವಿಧ್ಯತೆಯ ಪ್ರತಿ ನಿಧಿಗಳಾಗಿರಬೇಕು. ಅದು ಇಲ್ಲದಿದ್ದಲ್ಲಿ ಪ್ರಾತಿನಿಧ್ಯವಿಲ್ಲದ ವರ್ಗಗಳ ಸದಸ್ಯ ಪುರುಷ ಮತ್ತು ಮಹಿಳೆಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಬೇಕಾಗುತ್ತದೆ. ಕೆಲವು ವರ್ಗದ ಸದಸ್ಯರಿಗೆ, ಮಹಿಳೆಯರಿಗೆ ಸ್ಪರ್ಧಿಸಲು ಏನಾದರೂ ಅಡೆತಡೆಗಳಿದ್ದಲ್ಲಿ ಅವುಗಳನ್ನು ನಿವಾರಿಸಿ ಅವರು ಹೊರಗುಳಿಯದಂತೆ ಸೂಕ್ತ ಅವಕಾಶಗಳನ್ನು ಕಲ್ಪಿಸಬೇಕು.

ಯುವ ಸದಸ್ಯರಿಗೆ ಶಿಕ್ಷಣ ಮತ್ತು ತರಭೇತಿ ಒದಗಿಸುವುದರಿಂದ ಯುವ ಜನತೆ ಚುನಾವಣೆಯಲ್ಲಿ ಪಾಲ್ಗೊಳ್ಳುವುದನ್ನು ಹೆಚ್ಚಳಗೊಳಿಸಬಹುದು. ವಿವಿಧ ಸದಸ್ಯ ಮರ್ಗಗಳು ಪ್ರಾತಿನಿಧ್ಯ ದೊರೆಯುವಂತೆ ಮೀಸಲಾತಿ ವ್ಯವಸ್ಥೆಯನ್ನು ಮಾಡಬಹುದು. ಆದರೆ ಇದೇ ಎಲ್ಲ ಕಾಲಕ್ಕು ರಾಮಭಾಣವಾಗುವುದಿಲ್ಲ ಮತ್ತು ಯಾವಾಗಲೂ ಸರಿಎನ್ನಲಾಗುವುದಿಲ್ಲ ಆಗಿಂದಾಗ್ಯೆ ಇದರ ಪುನರ್ ವಿಮರ್ಷೆ ಆಗತ್ಯ.

**ಮುಕ್ತತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆ**

ಅತ್ಯುತ್ತಮ ಪ್ರಜಾಸತ್ತಾತ್ಮಕ ಆಡಳಿತದ ಕಾವಲು ಪದಗಳು ಮುಕ್ತತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆ. ಚುನಾಯಿತ ಸಮಿತಿಗಳ, ಆಡಳಿತಮಂಡಳಿಗಳ ಕಾರ್ಯಸೂಚಿಗಳು, ಸಭೆಯ ಠರಾವುಗಳು ಸದಸ್ಯರಿಗೆ ದೊರೆಯುವಂತಿರಬೇಕು. ಸಹಕಾರ ಸಂಘಗಳಲ್ಲಿ ವಿದ್ಯುನ್ಮಾನ ಸೌಲಭ್ಯಗಳು, ಇಂಟರ್‌ನೆಟ್ ಇದ್ದಲ್ಲಿ ಆನ್‌ಲೈನ್‌ನಲ್ಲಿ ಲಭ್ಯವಿರುವಂತೆ ಮಾಡುವುದು.

ವಾಣಿಜ್ಯ ಸ್ಪಂದನೆಗಳು, ನಿಯಂತ್ರಕರ ಅವಶ್ಯಕತೆಗಳು ಮತ್ತು ನೌಕರರ ಖಾಸಗಿತನ ದಾಖಲಾತಿಗಳು ಮುಕ್ತತೆಗೆ ಮಿತಿಗಳಾಗಿರಬಹುದು. ಏನೇ ಆದರೂ ಸಹಕಾರ ಸಂಘಗಳು ಆ ಮಿತಿ ಒಳಗೆ ಪ್ರಮುಖ ವಾಣಿಜ್ಯ ನಿರ್ಧಾರಗಳಲ್ಲಿ ಸದಸ್ಯರಿಗೆ ಆಡಳಿತ ಮಂಡಳಿಯು ಹೊಣೆಗಾರಿಕೆ ಹೊಂದಿದೆ ಎಂಬುದಕ್ಕೆ ಸದಸ್ಯರಿಗೆ ಚರ್ಚಿಸಲು ಅವಕಾಶವಿರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಯಾವುದೇ ಬಲವಾದ ಕಾರಣಕ್ಕಾಗಿ ಗೌಪ್ಯತೆಯನ್ನು ಕಾಪಾಡಿಕೊಳ್ಳ ಬೇಕಾದ ಸದಸ್ಯರ ಸಾರ್ವಭೌಮತೆಗೆ ಧಕ್ಕೆ ಇಲ್ಲದಂತೆ ಸದಸ್ಯರಿಗೆ ವಿವರಿಸಿ ಸಕಾರಣಗಳನ್ನು ನೀಡಿ ಸಮರ್ಥಿಸಿಕೊಳ್ಳುವುದು ಆಡಳಿತ ಮಂಡಳಿ ಕರ್ತವ್ಯವಾಗುತ್ತದೆ.

ಸಹಕಾರಿ ಅಗ್ರಗಾಮಿಗಳ ಸಾಂಪ್ರದಾಯಿಕೆಯಂತೆ ಚುನಾಯಿತ ಪ್ರತಿ ನಿಧಿಗಳು ಸದಸ್ಯರು ಯಾವುದೇ ಆರ್ಥಿಕ ತರಭೇತಿ ಹೊಂದಿದ್ದರೂ ಅವರಿಗೆ ಅರ್ಥವಾಗುವ ರೀತಿಯಲ್ಲಿ ಲೆಕ್ಕಗಳು, ಆರ್ಥಿಕ ವರದಿಗಳು ಮತ್ತು ವ್ಯವಹಾರದ ಸ್ಥಿತಿಗತಿ ಕಾರ್ಯಾಚರಣೆ ವರದಿಗಳನ್ನು ತಲುಪುವಂತೆ ಮಾಡುತ್ತಿದ್ದರು. ಚುನಾಯಿತ ಪ್ರತಿ ನಿಧಿಗಳಾಗಿ ಸರ್ವಸದಸ್ಯರ ಸಭೆಗಳಲ್ಲಿ ವರದಿಗಳು ಲೆಕ್ಕಗಳು ಮತ್ತು ಅವರು ತೆಗೆದುಕೊಂಡಿರುವ ಕ್ರಮಗಳನ್ನು ಸದಸ್ಯರಿಗೆ ತಿಳಿಸಬೇಕು. ಸದಸ್ಯರಿಗೆ ಚರ್ಚಿಸಲು ಅನುವಾಗುವಂತೆ ಸಹಕಾರ ಸಂಘದ ಕಾಯ್ದೆ ಕಾನೂನು ಉಪನಿಯಮ ರೀತಿ ಸಾಕಷ್ಟು ಮೊದಲೆ ಕಾರ್ಯ ಸೂಚಿ ಮತ್ತು ಇತರೆ ಮಾಹಿತಿಯನ್ನು ಸಾಕಷ್ಟು ಮುಂಗಡವಾಗಿ ಸಮಯಕ್ಕೆ ಸರಿಯಾಗಿ ಒದಗಿಸಬೇಕಾಗುತ್ತದೆ.

ಖಾಸಗಿ ಬಂಡವಾಳ ಹೂಡಿಕೆ ವ್ಯವಹಾರಗಳನ್ನು ಸಹಕಾರ ಸಂಘಗಳಿಗೂ ಇರುವ ಪ್ರಮುಖ ವ್ಯತ್ಯಾಸ, ಇಲ್ಲಿರುವ ಪ್ರಜಾಸತ್ತಾತ್ಮಕ ಸದಸ್ಯತ್ವ ಹತೋಟಿ/ನಿಯಂತ್ರಣ. ಮತ್ತೊಂದು ಪ್ರಮುಖ ವ್ಯತ್ಯಾಸವೆಂದರೆ ವ್ಯವಹಾರಿಕ ಉದ್ಯಮದಲ್ಲಿ ಸದಸ್ಯ ಯಜಮಾನರು ಊಹೆ ಮಾಡಲಾಗದ ಭಾಗಿತ್ವವನ್ನು ಹೊಂದಿರುತ್ತಾರೆ. ಸಹಕಾರ ಸಂಘಗಳು ಅತ್ಯುತ್ತಮ ಮುಕ್ತ, ಪಾರದರ್ಶಕ ಮತ್ತು ಹೊಣೆಗಾರಿಕೆ ಉಳ್ಳ. ಪ್ರಜಾಸತ್ತಾತ್ಮಕ ರೂಢಿಗಳನ್ನು ಹೊಂದಬೇಕು. ಪ್ರತಿ ಪ್ರಜಾಸತ್ತಾತ್ಮಕ ರೂಢಿಯು ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಪರಿಶ್ರಮಯುತ ವಿಮರ್ಶಾತ್ಮಕ ಮೌಲ್ಯಮಾಪನಕ್ಕೆ ಒಳಪಡತಕ್ಕದ್ದು.

**ಚುನಾಯಿತ ಪ್ರತಿ ನಿಧಿಗಳ ತೆಗೆದುಹಾಕುವಿಕೆ ಮತ್ತು ಹಿಂತಿರುಗಿ ಪಡೆಯುವುದು:**

ಸಹಕಾರದ ನಿಯಮ ವಿಧಿವಿಧಾನಗಳು ಚುನಾಯಿತ ಪ್ರತಿನಿಧಿಗಳು ತಮ್ಮ ಹುದ್ದೆ ಗಳನ್ನು ದುರುಪಯೋಗಿಸಿಕೊಂಡಾಗ ಚುನಾಯಿತ ಪ್ರತಿ ನಿಧಿಗಳಾಗಿ ತಮ್ಮ ಕರ್ತವ್ಯ ಜವಾಬ್ದಾರಿಗಳನ್ನು ನಿಭಾಯಿಸಲು ವಿಫಲರಾದಲ್ಲಿ ಸದಸ್ಯರಿಗೆ ಸಮಂಜಸ ಪ್ರಜಾಸತ್ತಾತ್ಮಕ ವಿಧಿಗಳ ಮೂಲಕ ತೆಗೆದುಹಾಕುವ ಮತ್ತು ಹಿಂದಕ್ಕೆ ಪಡೆಯುವ ನಿಯಮಗಳನ್ನು ಹೊಂದಿರಬೇಕು.

**ಒಂಬುಡ್ಸಮನ್‌ನ ಪಾತ್ರ (ಪಂಚಾಯ್ತಿದಾರರು):**

ದೊಡ್ಡ ಸಹಕಾರ ಸಂಘಗಳು ಸದಸ್ಯರ ದೂರುಗಳನ್ನು ಪರಿಶೀಲಿಸಲು ಸ್ವತಂತ್ರ ಒಂಬುಡ್ಸ್‌ಮನ್ (ಪಂಚಾಯ್ತಿದಾರರನ್ನು) ಹೊಂದಬಹುದು. ಸದಸ್ಯರಿಗೆ ಪ್ರಜಾಸತ್ತಾತ್ಮಕ ಭಾಗವಹಿಸುವಿಕೆಗೆ ಅವಕಾಶ ದೊರೆಯದ ಬಗ್ಗೆ ಅಥವ ಪ್ರಜಾಸತ್ತಾತ್ಮಕ ವಿಧಿಧಿಧಾನಗಳ ದುರುಪಯೋಗದ ಬಗ್ಗೆ ಮತ್ತು ಸಹಕಾರ ಸಂಘದ ಸದಸ್ಯ ಸೇವೆಗಳ ಬಗ್ಗೆ ದೂರು ಸಲ್ಲಿಸಲು ಅವಕಾಶವಿರಬೇಕು.

**ಅತ್ಯುತ್ತಮ ಆಡಳಿತ ಸಂಹಿತೆ ಮತ್ತು ಅತ್ಯುತ್ತಮ ರೂಢಿಗಳು:**

ಅತಿ ಮಹತ್ವದ 1990ರ ದಶಕದಲ್ಲಿ ಅತ್ಯಂತ ದೊಡ್ಡ ಕಂಪನಿಗಳಲ್ಲಿ ಆಡಳಿತ ವಿಫಲತೆಗಳನ್ನು ಕಾಣಲಾಯಿತು. ಇದರಿಂದ ಕಂಪನಿ ಆಡಳಿತದ ಅವಶ್ಯಕತೆಯನ್ನು ಮನಗಾಣಲಾಯಿತು. ಇದು 1992ರ ಕ್ಯಾಡ್‌ಬರಿ ಆಯೋಗ (ಕಮಿಷನ್) ನೇಮಕಾತಿಗೆ ಕಾರಣವಾಯಿತು ಮತ್ತು ಮುಂದೆ 1995ರಲ್ಲಿ ಗ್ರೀನ್‌ಬರಿ ಆಯೋಗ ಮತ್ತು ಹ್ಯಾಂಪ್‌ಲ್ ವರದಿ 1998ಕ್ಕೆ ಕಾರಣವಾಯಿತು. ಇವೆಲ್ಲವೂ ಕಂಪನಿಗಳ ಆಡಳಿತದಲ್ಲಿ ಅತ್ಯತ್ತಮ ರೂಢಿಗಳನ್ನು ಅಳವಡಿಸಿಕೊಳ್ಳಲು ಸಹಕಾರಿಯಾಯಿತು. ಪರಿಣಾತ್ಮಕಾರಿ ಸಹಕಾರಿ ಕಾಯ್ದೆ ಪ್ರಜಾಸತ್ತಾತ್ಮಕ ನಿಯಂತ್ರಣವನ್ನು ರಕ್ಷಿಸಿದೆ. ಎಲ್ಲಿ ಸಹಕಾರ ಕಾಯ್ದೆ ಪರಿಣಾಮಕಾರಿಯಾಗಿಲ್ಲ ಅಲ್ಲಿ ಸಹಕಾರ ಸಂಘಗಳ ಉಪನಿಯಮ (ಉಪವಿಧಿ)ಗಳು ಅತ್ಯುತ್ತಮ ಕಾರ್ಪೊರೇಟ್ ರೂಡಿ ನಿಯಮಗಳನ್ನು ಖಾತ್ರಿ ಪಡಿಸಿಕೊಂಡಿವೆ. ಇವು ಚುನಾಯಿತ ಪ್ರತಿನಿಧಿಗಳ ವ್ಯವಸ್ಥಾಪಕರುಗಳ ಹಿತಾಸಕ್ತಿ, ಬಡ್ಡಿ ರಿಜಿಸ್ಟರ್‌ಗಳು, ಪಾರಿತೋಷಕ ಮತ್ತು ಅತಿಥಿ ಸತ್ಕಾರ ಪಡೆದ–ನೀಡಿದ ರಿಜಿಸ್ಟರ್, ವಾರ್ಷಿಕ ಆಡಳಿತಮಂಡಳಿ ವರದಿ,

ಲೆಕ್ಕಪರಿಶೋಧನ ವರದಿಗಳನ್ನು ಒಳಗೊಂಡಿರುತ್ತದೆ.

ಸಹಕಾರ ಸಂಘಗಳಲ್ಲಿ ದೈನಂದಿನ ವ್ಯವಹಾರಗಳಲ್ಲಿ ಚುನಾಯಿತ ಪ್ರತಿನಿಧಿಗಳ ಪಾತ್ರ ಭಿನ್ನ (ಇತರೆ) ವ್ಯವಹಾರಿಕ ಔದ್ಯೋಗಿಕ ಸಂಸ್ಥೆಗಳಿಗಿಂತ ಬೇರೆಯದೇ ಆಗಿರುತ್ತದೆ. ಸಹಕಾರ ಸಂಘದ ಸದಸ್ಯರು ಸಹಕಾರ ಸಂಘದಲ್ಲಿ ದ್ವಿಪಾತ್ರವನ್ನು ನೆರವೇರಿಸುತ್ತಾರೆ. ಅದರ ಪ್ರತಿಫಲವನ್ನು ಪಡೆಯುತ್ತಾರೆ ಮತ್ತು ಪ್ರಜಾಸತ್ತಾತ್ಮಕ ನಿಯಂತ್ರಣವನ್ನೂ ಮಾಡುತ್ತಾರೆ. ಹಿತಾಸಕ್ತಿ ಸಂಘರ್ಷ ನೀತಿ ನಿರೂಪಣೆಗಳು ಎಲ್ಲ ಸದಸ್ಯರ ಮೇಲೂ ಪರಿಣಾಮ ಬೀರುವ ನಿರ್ಧಾರ ತೆಗೆದುಕೊಳ್ಳುವ ಚುನಾಯಿತ ಪ್ರತಿನಿಧಿಗಳ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಧಕ್ಕೆ ತರಬಾರದು. ಎಲ್ಲ ಸದಸ್ಯರ ಮೇಲೆ ಪರಿಣಾಮ ಬೀರುವ ಯಾವುದೇ ನಿರ್ಧಾರದಲ್ಲಿ ಚುನಾಯಿತ ಪ್ರತಿನಿಧಿಗಳು ಅನಿವಾರ್ಯವಾಗಿ ಆಸಕ್ತಿ ಹೊಂದಿಯೇ ಇರುತ್ತಾರೆ. ಆ ನಿರ್ಧಾರಗಳಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಹೊರಗಿಡುವುದಾದರೆ, ಚುನಾಯಿತರಲ್ಲದ ಅಧಿಕಾರಿಗಳ ಕೈಯಲ್ಲಿ ಅಥವ ನೇಮಕವಾದ ಅಥವ ಸಹಮತದಿಂದ ಆದ ಆಡಳಿತ ಮಂಡಳಿ ಸದಸ್ಯರಿಗೆ ದ್ರೋಹವೆಸಗುವಂತಹ ನಿರ್ಧಾರ ತೆಗೆದುಕೊಳ್ಳಲು ಅವಕಾಶ ನೀಡಿದಂತಾಗುತ್ತದೆ. ಚುನಾಯಿತ ಪ್ರತಿನಿಧಿಗಳನ್ನು ಇತರೆ ಸದಸ್ಯರಿಗೆ ದೊರೆಯದ ಸೌಲಭ್ಯವನ್ನು ತಮ್ಮ ಸ್ವಂತ ವೈಯುಕ್ತಿಕ ಹಿತಾಸಕ್ತಿಗೆ ಸಂಬಂಧಿಸಿದ್ದಲ್ಲಿ ಅವರನ್ನು ಆ ನಿರ್ಧಾರ ತೆಗೆದುಕೊಳ್ಳುವಲ್ಲಿ ಹೊರಗಿಡುವುದು ಸೂಕ್ತವಾಗುತ್ತದೆ.

ಕಾರ್ಪೋರೇಟ್ ಆಡಳಿತ ಸಂಹಿತೆಗಳಲ್ಲಿ ಉದ್ಭವಿಸುವ ಪ್ರಮುಖ ಅಂಶಗಳಲ್ಲಿ, ಪ್ರಮುಖ ವ್ಯವಹಾರಿಕ ನಿರ್ಧಾರಗಳಲ್ಲಿ ಆಡಳಿತ ಮಂಡಳಿಗಳು ತನ್ನ ಸದಸ್ಯರ ಸಲಹೆ ಪಡೆಯುವುದಾಗಿದೆ. ಉದಾಹರಣೆ: ಇತರೆ ಉದ್ಯಮಗಳನ್ನು ವಹಿಸಿಕೊಳ್ಳುವುದು, ಬಿಟ್ಟುಕೊಡುವುದು ಅಥವ ಇತರೆ ಸಹಕಾರ ಸಂಘಗಳ ವ್ಯವಹಾರಗಳನ್ನು ವಹಿಸಿ ಕೊಳ್ಳುವುದು ಮತ್ತು ಅದರಿಂದ ಈ ಸಹಕಾರ ಸಂಘದ ಸ್ವರೂಪವೇ ಬದಲಾಗುವುದು. ಈ ರೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸಹಕಾರ ಸಂಘಗಳ ಕಾಯ್ದೆ ಮತ್ತು ಉಪನಿಯಮಗಳಲ್ಲಿ ಸದಸ್ಯರ ಅನುಮೋದನೆ ಪಡೆಯುವ ಬಗ್ಗೆ ಮತ್ತು ಸಲಹೆ ಪಡೆಯುವ ಬಗ್ಗೆ ಅತ್ಯುತ್ತಮವಾಗಿ ನಿಹಿತಗೊಂಡಿದೆ. ಒಂದು ಸಮಯ ವಾಸ್ತವಿಕವಾಗಲಿ ಅಥವ ವ್ಯವಹಾರಿಕವಾಗಲಿ ಆಡಳಿತ ಮಂಡಳಿ ಸದಸ್ಯರನ್ನು ಒಳಗೊಳ್ಳಲು ಸಾಧ್ಯವಾಗದ ಪಕ್ಷದಲ್ಲಿ ಸದಸ್ಯರಿಂದ ಅನುಮೋದಿತ ವ್ಯವಹಾರಿಕ ಮತ್ತು ತೊಡಕು ಸಹಿತ ವ್ಯವಸ್ಥಾಪನ ತಂತ್ರಗಾರಿಕೆಯ ರೂಪುರೇಖೆಯ ಒಳಗಡೆ ಇರತಕ್ಕದ್ದು.

ಆಡಳಿತ ಸಂಹಿತೆ ಮತ್ತು ವಿಧಿವಿಧಾನಗಳ ಸಂಕೀರ್ಣತೆ ಅವಶ್ಯವಾಗಿ ಸಹಕಾರ ಸಂಘದ ಅಭಿವೃದ್ಧಿ ಗಾತ್ರವನ್ನು ಅವಲಂಭಿಸಿರುತ್ತದೆ. ಬೃಹತ್ ಮತ್ತು ಫಲಿತ ಸಹಕಾರ ಸಂಘ ಸಾವಿರಾರು ಅಥವ ಲಕ್ಷಾಂತರ ಸದಸ್ಯರುಳ್ಳ ಸಹಕಾರ ಸಂಘಕ್ಕಿಂತ ನೂತನವಾಗಿ ಆರಂಭವಾದ ಇತ್ತೀಚಿನ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿರುವ ಸಹಕಾರ ಸಂಘಗಳಿಗೆ ಸರಳ ಮತ್ತು ಕಡಿಮೆ ಸಂಕೀರ್ಣದ ವಿಧಿವಿಧಾನಗಳು, ಸಂಹಿತೆಯ ಅವಶ್ಯಕತೆಯಿದೆ. ಬೃಹತ್  ಆದ ಸಹಕಾರ ವ್ಯವಹಾರ ನಡೆಸುತ್ತಿರುವ ಸಂಘಕ್ಕೆ ವಿವರವಾದ ಆಡಳಿತ ಪುಸ್ತಕದ ಅವಶ್ಯಕತೆ ಇದೆ. ಸಹಕಾರ ಸಂಘವು ಚಿಕ್ಕದಾಗಲಿ ದೊಡ್ಡದಾಗಲಿ ಮೂಲಭೂತ ಅತ್ಯುತ್ತಮ ಆಡಳಿತ ಸಂಹಿತೆ ಮತ್ತು ಅತ್ಯುತ್ತಮ ರೂಡಿಗಳ ಅನುಷ್ಠಾನದ ಅಗತ್ಯತೆ ಇದ್ದೇ ಇದೆ. ಇದು ಸದಸ್ಯರ ಸಾರ್ವಭೌಮ್ಯತೆ ಮತ್ತು ಹಕ್ಕುಗಳನ್ನು ಕಾಪಾಡುತ್ತದೆ/ಖಾತ್ರಿಪಡಿಸುತ್ತದೆ.

ಬಹು ಶ್ರೇಣಿಯ ಪ್ರಜಾಸತ್ತಾತ್ಮಕ ರಚನೆಯುಳ್ಳ ಸಹಕಾರ ಸಂಘಗಳಲ್ಲಿ ಪ್ರಾಥಮಿಕ ಮಟ್ಟದ ಸಾದಾರಣ ಸದಸ್ಯರು ಪ್ರಜಾಸತ್ತಾತ್ಮಕ ಹಕ್ಕುಗಳಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಅದು ವ್ಯವಹಾರಿಕವಾಗಿರುಬಹುದು. ಆಡಳಿತ ಮಂಡಳಿಯ ಚುನಾವಣೆಯಲ್ಲಾಗಬಹುದು. ಚುನಾಯಿತ ಪ್ರತಿ ನಿಧಿಗಳು ಅಷ್ಟೇ ಶ್ರೇಣಿಯ ರಚನೆಯಾದರೂ ಸಾಧಾರಣ ಸದಸ್ಯರಿಗೆ ಹೊಣೆಗಾರರಾಗಿರುತ್ತಾರೆ.

ಸಹಕಾರ ಸಂಘದಲ್ಲಿನ ಚುನಾಯಿತ ಸದಸ್ಯರು ಮತ್ತು ಅಧಿಕಾರಿಗಳು ಮತ್ತು ದೈನಂದಿನ ವ್ಯವಹಾರಿಕ ವ್ಯವಸ್ಥಾಪನೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರು ಮತ್ತು ಹಿರಿಯ ವ್ಯವಸ್ಥಾಪಕ ನಡುವಿನ ಆಡಳಿತ ಜವಾಬ್ದಾರಿಗಳಲ್ಲಿನ ಅಂತರಗಳ ಬಗ್ಗೆ ಚುನಾಯಿತ ಆಡಳಿತ ಮಂಡಳಿ ಸದಸ್ಯರು ಅರಿವು/ತಿಳುವಳಿಕೆ ಹೊಂದಿರಬೇಕು. ಸಮರ್ಥ ದೈನಂದಿನ ವ್ಯವಹಾರಗಳಿಗಾಗಿ ವ್ಯವಹಾರ ನಡೆಸುತ್ತಿರುವ ಸಿಬ್ಬಂದಿ ನಡುವೆ ಚುನಾಯಿತ ಆಡಳಿತ ಮಂಡಳಿ ಸದಸ್ಯರು ಹಸ್ತಕ್ಷೇಪ ಮಾಡಬಾರದು. ಅವರು ಸದಸ್ಯ ಅನುಮೋದಿತ ವ್ಯವಹಾರಗಳನ್ನು ಅನಷ್ಠಾನಗೊಳಿಸುತ್ತಿರುತ್ತಾರೆ. ಅದಕ್ಕೆ ಸರಿಯಾಗಿ ಮುಖ್ಯ ಕಾರ್ಯನಿರ್ವಾಹಕರು

ಮತ್ತು ಹಿರಿಯ ವ್ಯವಸ್ಥಾಪಕರು ಸದಸ್ಯರು ಪ್ರಜಾಸತ್ತಾತ್ಮಕವಾಗಿ ನಿಯಂತ್ರಣವನ್ನು ಒಳಗೊಂಡ ವ್ಯವಹಾರಿಕ ನಿರ್ಧಾರಗಳನ್ನು ಸದಸ್ಯರ ಹಕ್ಕುಗಳನ್ನು ಗೌರವಿಸಬೇಕು. ಸಹಕಾರ ಸಂಘಗಳಲ್ಲಿ ಮುಖ್ಯ ಕಾರ್ಯ ನಿರ್ವಾಹಕರನ್ನು, ಹಿರಿಯ ವ್ಯವಸ್ಥಾಪಕರುಗಳನ್ನು ಆಡಳಿತ ಮಂಡಳಿಯ ಸದಸ್ಯರಾಗಿ ಹೊಂದಬಹುದು. ಆದರೆ ಬಹು ಸಂಖ್ಯೆಯಲ್ಲಲ್ಲ. ಇದರಿಂದ ಅವರೂ ಕೂಡ ಆಡಳಿತದ ಜವಾಬ್ದಾರಿಯಲ್ಲಿ ಪಾಲ್ಗೊಂಡಂತೆ ಆಗುತ್ತದೆ. ಏನೇ ಆದರೂ ಹಿರಿಯ ವ್ಯವಸ್ಥಾಪಕರು ಆಡಳಿತ ಮಂಡಳಿಯ ಪೂರ್ಣಾವಧಿಯ ಸದಸ್ಯರಲ್ಲದಿದ್ದರೂ ಆಡಳಿತ ಮಂಡಳಿಗೆ ಆಡಳಿತ ವಿಷಯದಲ್ಲಿ ಮತ್ತು ಪ್ರಮುಖ ವ್ಯವಹಾರಿಕ ವಿಷಯಗಳಲ್ಲಿ ತಮ್ಮ ಸಲಹೆ ಮಾರ್ಗದರ್ಶನವನ್ನು ನೀಡಬೇಕಾದುದು ಅವರ ಕರ್ತವ್ಯವಾಗುತ್ತದೆ.

**ಚುನಾಯಿತ ಕಛೇರಿಯ ಜವಾಬ್ದಾರಿಯ ಒಪ್ಪುವಿಕೆ ಮತ್ತು ನೀತಿ ಸಂಹಿತೆಯ ಪಾಲನೆ:**

ಪ್ರತಿ ಚುನಾಯಿತ ಸದಸ್ಯರು ತಮ್ಮ ನೈತಿಕ ನಡವಳಿಕೆ ಮತ್ತು ನಡವಳಿಕೆಯ ನೀತಿ ಸಂಹಿತೆಯನ್ನು ಪಾಲಿಸುವ ವೈಯಕ್ತಿಕ ಜವಾಬ್ದಾರಿಯನ್ನು ಹೊಂದಿರುತ್ತಾರೆ. ನಡವಳಿಕೆಯ ನೀತಿ ಸಂಹಿತೆಯು ಉಪನಿಯಮದ ಭಾಗವಾಗಿರತಕ್ಕದ್ದು. ಇದನ್ನು ಪ್ರತಿ ಚುನಾಯಿತ ಸದಸ್ಯರು ಕಡ್ಡಾಯವಾಗಿ ತಪ್ಪದೆ ಪಾಲಿಸಬೇಕು. ಪ್ರತಿ ಸದಸ್ಯ, ನೌಕರ ಮತ್ತು ಸಾರ್ವಜನಿಕರಿಗೆ ದೊರೆಯುವಂತೆ ಪ್ರಕಟಿಸಬೇಕು.

**ಆಡಳಿತ ಮಂಡಳಿ ಪರಿಣತಿ ಮತ್ತು ಲೆಕ್ಕಪರಿಶೋಧನೆ ನೈಪುಣ್ಯ:**

ಪ್ರಜಾಸತ್ತಾತ್ಮಕ ವಿಧಿಯು ಆಡಳಿತ ಮಂಡಳಿಯು ಅಧಿಕಾರಿಗಳನ್ನು ಜವಾಬ್ದಾರಿ ಯಾಗಿಸುವ ಜವಾಬ್ದಾರಿಯನ್ನಾಗಲಿ ಅಥವ ಪರಿಣಾಮಕಾರಿ ಮತ್ತು ತಕ್ಕನಾದ ಆಡಳಿತ ಪರಿಣತಿ ಆಗಲಿ ಅಥವ ಚಾಕಚಕ್ಯತೆಯನ್ನಾಗಿ ಹೊಂದಿರುತ್ತದೆ ಎಂಬುದನ್ನು ಖಾತ್ರಿ ಪಡಿಸುವುದಿಲ್ಲ.

ಆಡಳಿತ ಮಂಡಳಿಯು ವಾರ್ಷಿಕ ಲೆಕ್ಕಪರಿಶೋಧನೆಯ ವರದಿಯನ್ನು ಒಟ್ಟಾಗಿ ಅರ್ಥ ಮಾಡಿಕೊಳ್ಳುವ ನೈಪುಣ್ಯತೆಯನ್ನು ಹೊಂದಿರಬೇಕಾಗಿ ಸಲಹೆ ಮಾಡಲಾಗಿದೆ. ಇದರಿಂದ ಪರಿಣಾಮಕಾರಿ ಆಡಳಿತ ನಿಯಂತ್ರಣ ಮಾಡಬಹುದಾಗಿದೆ. ಲೆಕ್ಕಪರಿಶೋಧನೆಯಲ್ಲಿ ಆಡಳಿತ ಮಂಡಳಿಯ ವೈಫಲ್ಯಕಂಡುಬಂದಲ್ಲಿ ಆ ವಿಫಲತೆಯನ್ನು ಹೋಗಲಾಡಿಸಲು ಆಡಳಿತ ಮಂಡಳಿಗೆ ಯೋಜನಾಬದ್ಧ ತರಬೇತಿ ನೀಡಬೇಕಾಗುತ್ತದೆ ಅಥವ ಆಡಳಿತ ಮಂಡಳಿಯ ಇಲ್ಲದ ನೈಪುಣ್ಯವನ್ನು ಪಡೆದಿರುವವರನ್ನು ಆಡಳಿತ ಮಂಡಳಿಗೆ ಸಹಮತದಿಂದ ನೇಮಕಾತಿ ಮಾಡಿಕೊಳ್ಳಬೇಕು ಅಥವ ಸದಸ್ಯರಲ್ಲಿ ನೈಪುಣ್ಯ ಪಡೆದಿರುವವರಿದ್ದರೆ ಅವರು ಚುನಾವಣೆಯಲ್ಲಿ ನಿಲ್ಲಲು ಪ್ರೋತ್ಸಾಹ ನೀಡಬೇಕು.

**ಶಿಕ್ಷಣ ಮತ್ತು ಅಭಿವೃದ್ಧಿ ಅವಕಾಶಗಳು ಮತ್ತು ವಿಧ್ಯಾರ್ಹತೆಗಳು:**

ಸಹಕಾರ ಸಂಘದ ಆಡಳಿತ ಕುಸಿದಾಗ ಅಥವ ಕಷ್ಟಕ್ಕೆ ಸಿಲುಕಿದಾಗ ಮುಖ್ಯ ವ್ಯವಹಾರ ಮಾಧ್ಯಮವು ಆಡಳಿತದಲ್ಲಿರಬೇಕಾದ ಅತ್ಯಾಧುನಿಕತೆ ಇಲ್ಲವೆಂದು ಜರಿಯುತ್ತದೆ. ಚುನಾಯಿತ ಆಡಳಿತ ಮಂಡಳಿಯಲ್ಲಿ ಇದರ ಕೊರತೆಯಿಂದಾಗಿ ಹಿಗಾಗಿದೆ ಎಂದು ದೂರುತ್ತದೆ. ಇದರಿಂದಾಗಿ ಪ್ರಜಾಸತ್ತಾತ್ಮಕ ಸದಸ್ಯ ನಿಯಂತ್ರಣದಿಂದ ಉತ್ತಮ ಆಡಳಿತ ಸಾಧ್ಯವಿಲ್ಲ ಎಂದೇನು ಆಗುವುದಿಲ್ಲ. ಆಡಳಿತದಲ್ಲಿ ಅತ್ಯಾಧುನಿಕ ಸ್ಪರ್ಷ ಇರುವಂತೆ ನೋಡಿಕೊಳ್ಳಲು ಆಡಳಿತ ಮಂಡಳಿ ಸದಸ್ಯರಿಗೆ ತರಬೇತಿ ಅವಶ್ಯ. ಎಲ್ಲ ಸಹಕಾರ ಸಂಘಗಳಲ್ಲಿಯೂ ಅದರಲ್ಲಿಯೂ ಸರ್ಕಾರದ ನಿಯಮಗಳನ್ನು ಪಾಲಿಸಬೇಕಾದ ಉದಾಹರಣೆ: ಬ್ಯಾಂಕಿಂಗ್, ವಿಮೆ ಕ್ಷೇತ್ರದ ಸಹಕಾರ ಸಂಘಗಳಲ್ಲಿ, ಆಡಳಿತದ, ವಿಷಯದ ಪರಿಣತಿ ಉಳ್ಳ ಪಾತ್ರಕ್ಕೆ ತಕ್ಕಂತೆ ಸದಸ್ಯರು ಚುನಾವಣೆಯಲ್ಲಿ ಆಹುದ್ದೆಗಳಿಗೆ ಸ್ಪರ್ಧಿಸುವಂತೆ ಅರ್ಹತೆಯನ್ನು ನಿಗದಿಪಡಿಸಬಹುದಾಗಿದೆ ಮತ್ತು ಸಹಕಾರ ತತ್ವ ಮೌಲ್ಯಗಳಿಗೆ ಬದ್ಧರಾಗಿರಬೇಕು.

ಎಲ್ಲ ಸಹಕಾರ ಸಂಘಗಳು ಚುನಾಯಿತ ಹುದ್ದೆಗೆ ಸ್ಪರ್ಧಿಸಲು ಅರ್ಹತೆ ನಿಗದಿ ಪಡಿಸುವುದು ಸಿಂಧುವೇ ಎಂಬುದನ್ನು ಪರಿಶೀಲಿಸಬೇಕು. ಸರ್ವಸದಸ್ಯರ ಸಭೆಯು ಅದನ್ನು ಪರಿಶೀಲಿಸಿ ಹುದ್ದೆಗೆ ತಕ್ಕ ಅರ್ಹತೆ ಬಗ್ಗೆ ನಿಗದಿಪಡಿಸಬೇಕು. ಅದು ಇಂತಹ ಕ್ರಮವನ್ನು ಪ್ರೋತ್ಸಾಹಿಸಬೇಕು ಮತ್ತು ಒಪ್ಪಬೇಕು. ಏನೇ ಆದರೂ ಇದರಿಂದ ಸದಸ್ಯರು ಚುನಾವಣೆಯಲ್ಲಿ ಭಾಗವಹಿಸುವುದನ್ನು ತಡೆಯುವಂತಾಗಬಾರದು ಮತ್ತು ಅನರ್ಹಗೊಳಿಸು ವಂತಾಗಬಾರದು.

ಸದಸ್ಯರಿಗೆ ವಿದ್ಯಾರ್ಹತೆ(ಅರ್ಹತೆ)ಯ ಅಗತ್ಯತೆ ಇದೆ. ಸದಸ್ಯರಿಗೆ ಆ ಅರ್ಹತೆಗಳಿಸಲು ತರಭೇತಿಯ ಅವಕಾಶಗಳನ್ನು ಕಲ್ಪಿಸಬೇಕಾಗುತ್ತೆದೆ.

ಎಲ್ಲಿ ಅರ್ಹತೆಯ ಅವಶ್ಯಕತೆಯಿದೆ ಅಲ್ಲಿ ಈಗಾಗಲೆ ಅರ್ಹತೆ ಹೊಂದಿರುವವರು ಅಧಿಕಾರ ಧಕ್ಕಿಸಿಕೊಂಡು ಸಂಘದ ಪೂರ್ತಿನಿಯಂತ್ರಣ ಹೊಂದುವ ಅಪಾಯವಿರುತ್ತದೆ. ಅದರಲ್ಲಿಯೂ, ನಿಯಂತ್ರಿತ ಮತ್ತು ಬೃಹತ್ ಸಹಕಾರ ಸಂಘಗಳಲ್ಲಿ ಇದಕ್ಕೆ ಹೆಚ್ಚಿನ ಅವಕಾಶವಾಗುತ್ತದೆ. ಆದುದರಿಂದ ವಿದ್ಯಮಾನದಿಂದ ತಡೆಯಲು ತಕ್ಕ ತಡೆ ಮತ್ತು ಸಮತೋಲನಗಳನ್ನು ಮತ್ತು ಸದಸ್ಯರಿಗೆ ಅವಶ್ಯ ಅರ್ಹತೆ ಹೊಂದಲು ತರಭೇತಿ ಅವಕಾಶಗಳನ್ನು ಒದಗಿಸತಕ್ಕದ್ದು.

ಚಾರಿತ್ರಾತ್ಮಕವಾಗಿ ಖರೀದಿ ಅಥವ ವ್ಯಾಪಾರ ಮಾಡುವ ಸಹಕಾರ ಸಂಘಗಳಲ್ಲಿ ಖರೀದಿ ಮತ್ತು ವ್ಯವಹಾರ ಅರ್ಹತೆಗಳನ್ನು ಇತರೆ ಸಂಘಗಳಲ್ಲಿ ಬಂಡವಾಳ ಹೂಡಿಕೆ ಅವಶ್ಯಕತೆಗಳನ್ನು ನಿಗದಿಪಡಿಸಿವೆ. ಆದರೆ ಇದು ಅಲ್ಪ ಬಂಡವಾಳ ಹೊಂದಿದವರಿಂದ ಭೇದ ಮಾಡುವಂತೆ ಅಪಾಯ ತಂದೊಡ್ಡುತ್ತದೆ. ಕೆಲವು ಸಂಘಗಳಲ್ಲಿ ಸದಸ್ಯತ್ವದ ಅವಧಿಯನ್ನು ನಿಗಧಿಪಡಿಸುತ್ತದೆ. ಉದಾಹರಣೆಗೆ ಕನಿಷ್ಠ ಎರಡು ವರ್ಷ. ಇದು ಪಟ್ಟಭದ್ರ ರಿಂದ ರಕ್ಷಿಸುವುದಾದರೂ ನಿಯಮಗಳು ಕಾರಣ ಬದ್ಧವಾಗಿರಬೇಕು. ಈ ನಿಯಮಗಳು ಸರ್ವ ಸದಸ್ಯರಿಂದ ಅನುಮೋದಿತವಾಗಿರಬೇಕು.

**ಚುನಾವಣಾ ಸಮಿತಿಗಳು:**

ಸಹಕಾರ ಸಂಘಗಳ ಚುನಾವಣೆಯ ಮೇಲ್ವಿಚಾರಣೆಗಾಗಿ ಯಾವ ಸಹಕಾರ ಸಂಘಗಳಲ್ಲಿ ಮಿಶ್ರ ಸದಸ್ಯತ್ವವಿದೆ ಅಥವ ಬೃಹತ್ ಸಹಕಾರ ಸಂಘಗಳು ವಿವಿಧ ಶ್ರೇಣಿಕೃತ ಸಹಕಾರ ಸಂಘಗಳು ಅಥವ ಎಲ್ಲಿ ಸಂಕೀರ್ಣ ಚುನಾವಣಾ ವ್ಯವಸ್ಥೆಯಿದೆಯೋ ಅಲ್ಲಿ ಸ್ವತಂತ್ರ ಚುನಾವಣಾ ಸಮಿತಿಗಳನ್ನು ರಚಿಸಬಹುದು. ರಾಷ್ಟ್ರೀಯ ಚುನಾವಣೆಗಳಲ್ಲಿ ಚುನಾವಣಾ ಆಯೋಗಗಳು ಮಾಡುವ ಕೆಲಸವನ್ನು ಇವು ಮಾಡಬಹುದಾಗಿದೆ. ಚುನಾವಣೆಗೆ ಸ್ಪರ್ಧಿಸುವುದಕ್ಕೆ ಅರ್ಹತೆಗಳನ್ನು ಇವು ನಿಗದಿ ಪಡಿಸಬಹುದಾಗಿದೆ. ಇದರಿಂದ ಹಾಲಿ ಅಧಿಕಾರಿಗಳಲ್ಲಿರುವ ಆಡಳಿತ ಮಂಡಳಿ ಸದಸ್ಯರು ತಮಗೆ ಅನುಕೂಲವಾಗುವಂತೆ ಅರ್ಹತೆ ನಿಗದಿಪಡಿಸಿಕೊಳ್ಳುವುದನ್ನು ತಪ್ಪಿಸಬಹುದಾಗಿದೆ. ಪರಸ್ಪರ ಸಹಾಯ ತಪ್ಪಿಸಿ ಸಹಕಾರ ಸಂಘದ ಈ ಕ್ರಮದಿಂದ ಆಸ್ತಿಯನ್ನು ಖಾಸಗೀಕರಣಗೊಳಿಸುವ ತಂತ್ರಗಳನ್ನು ತಪ್ಪಿಸಬಹುದಾಗಿದೆ.

ಚಾಲ್ತಿಯಲ್ಲಿರುವ ಆಡಳಿತ ಮಂಡಳಿಯು ಇದನ್ನು ನೇಮಿಸಬಾರದು ಮತ್ತು ಅದಕ್ಕೆ ಹೊಣೆಗಾರರಾಗಿರಬಾರದು. ಅದು ಸರ್ವಸದಸ್ಯರಿಂದ ನೇಮಕವಾಗಬೇಕು. ಅದಕ್ಕೆ ಹೊಣೆಗಾರಿಕೆ ಇರಬೇಕು ಮತ್ತು ಮುಕ್ತವಾಗಿ ಪಾರದರ್ಶಕವಾಗಿ ಚುನಾವಣೆ ನಡೆಯುವಂತಿರಬೇಕು. ಸರ್ವ ಸದಸ್ಯರ ಸಾರ್ವಬೌಮತ್ವದ ಗುರಿಯನ್ನು ಪ್ರತಿ ನಿಧಿಸುವಂತಾಗಬೇಕು.

**ಪ್ರಜಾಸತ್ತಾತ್ಮಕ ಆಡಳಿತವನ್ನು ಒಳಗೊಂಡಂತಿರುವ ಲೆಕ್ಕಪರಿಶೋಧನೆ:**

ಪ್ರಜಾಸತ್ತಾತ್ಮಕ ಆಡಳಿತವನ್ನು ಒಳಗೊಂಡಂತ ಆಂತರಿಕ ಮತ್ತು ಬಾಹ್ಯ ಲೆಕ್ಕಪರಿಶೋಧನೆ ನಡೆಯಬೇಕು. ಇದರಿಂದ ಸದಸ್ಯರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಬಹುದು. ಉತ್ತಮ ರೂಡಿಗಳನ್ನು ಅಳವಡಿಸಿಕೊಂಡಿರುವುದನ್ನು ಖಾತ್ರಿ ಪಡಿಸಿಕೊಳ್ಳಬಹುದು ಮತ್ತು ಸದಸ್ಯರ ಮತ್ತು ಬಾಹ್ಯ ಪರಿಶೀಲನೆಗೆ ಒಳಪಟ್ಟಂತಾಗುತ್ತದೆ.

ಲೆಕ್ಕಪರಿಶೋಧನೆಯು ಯಾವರೀತಿ ಅಥವ ಯಾರಿಂದ ಎಂಬುದಕ್ಕೆ ನಿಗದಿಪಡಿಸಿದ ಮಾರ್ಗದರ್ಶಿ ಇರುವುದಿಲ್ಲ. ಕೆಲವು ದೇಶಗಳಲ್ಲಿ (ಉದಾ: ಜರ್ಮನಿ, ಫ್ರಾನ್ಸ್, ಆಸ್ತ್ರೀಯ) ಸಹಕಾರ ಸಂಘಗಳ ವಿಶೇಷ ಲೆಕ್ಕಪರಿಶೋಧನೆಗೆ ಯಶಸ್ವಿಯಾದ ಪರಂಪರೆಯಾಗಿ ಪಾರಂಪರಿಕ ಕಾಯ್ದೆಗಳು ಅಸ್ತಿತ್ವದಲ್ಲಿವೆ, ಏನೇ ಆದರೂ ಲೆಕ್ಕಪರಿಶೋಧನೆಯು ವ್ಯವಹಾರದ ವಿಧಿ ಮತ್ತು ಗಾತ್ರವನ್ನು ಸಾಮಾನ್ಯವಾಗಿ ಅವಲಂಭಿಸಿರುತ್ತದೆ.

ಲೆಕ್ಕಪರಿಶೋಧನೆ ಸದಸ್ಯರಿಂದಾಗಲಿ ಅಥವ ಲೆಕ್ಕಪರಿಶೋಧಕರಿಂದಾಗಲಿ, ವರದಿಯು ಅತ್ಯುತ್ತಮ ಆಡಳಿತ ಸಂಹಿತೆ ಮತ್ತು ಮಾನದಂಡಗಳ ಪಾಲನೆ ಬಗ್ಗೆ ತಿಳಿಸಬೇಕು. ವರದಿಯಲ್ಲಿ ಶಿಫಾರಸ್ಸುಗಳು ಸದಸ್ಯರಿಗೆ ದೊರಯುವಂತಿರಬೇಕು ಮತ್ತು ಸರ್ವಸದಸ್ಯರ ಸಭೆಯಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.

ಕೆಲವು ರಾಷ್ಟ್ರೀಯ ಮಹಾಮಂಡಳಗಳು ಉತ್ತುಂಗ ಸಂಸ್ಥೆಗಳು ತಮಗೆ ಸಂಬಂಧಿಸಿದ ಸದಸ್ಯ ಸಹಕಾರ ಸಂಘಗಳಿಗೆ ಸಂಬಂದಿಸಿದಂತೆ ಲೆಕ್ಕಪರಿಶೋಧನಾ ವಿಧಿ ವಿಧಾನಗಳು ಉತ್ತಮ ಮಾರ್ಗದರ್ಶಿ ಸೂತ್ರಗಳನ್ನು ಅಭಿವೃದ್ದಿ ಪಡಿಸಿವೆ. ಇದರಿಂದ ಪ್ರಜಾಸತ್ತಾತ್ಮಕ ಆಡಳಿತದ ಆರೋಗ್ಯ ಪರಿಶೀಲನೆ ಸಾಧ್ಯವಾಗಿದೆ. ಒಂದೇ ರೀತಿಯ ಮಾನದಂಡಗಳನ್ನು ಪಾಲಿಸುವುದರಿಂದ ಸಹಕಾರ ಸಂಘಗಳು ತಮ್ಮಂತಿರುವ ಇತರೆ ಸಹಕಾರ ಸಂಘಗಳೊಡನೆ ತುಲನೆ ಮಾಡಿನೋಡಿಕೊಳ್ಳಬಹುದಾಗಿದೆ. ಆಡಳಿತ ಲೆಕ್ಕಪರಿಶೋಧನೆಗೆ ನಿಗದಿತ ಮಾನದಂಡ ಚೌಕಟ್ಟುಗಳಿರುವುದಿಲ್ಲ. ಕೆಲವು ಸಹಕಾರ ಸಂಘಗಳಲ್ಲಿ ಎರಡು ವರ್ಷಕೊಮ್ಮೆ ಈ ಅಂಶಗಳನ್ನು ಪರಿಶೀಲಿಸಲಾಗುತ್ತಿದೆ. ಏನೇ ಆದರೂ ಹಿಂದಿನ ಐದು ವರ್ಷಗಳಲ್ಲಿ ಈ ಪರಿಶೀಲನೆ ಆಗದಿದ್ದಲ್ಲಿ ಪರಿಶೀಲಿಸುವುದು ಒಳ್ಳೆಯ ಕ್ರಮವಾಗುತ್ತದೆ.

**ನೌಕರರಿಗೆ ಧ್ವನಿ:**

ಪ್ರಜಾಸತ್ತಾತ್ಮಕ ಆಡಳಿತ ನೀತಿಯಲ್ಲಿ ನೌಕರರಿಗೆ ಧ್ವನಿ ಪ್ರಾಮುಖ್ಯತೆ ಕೊಡಲು ವ್ಯವಹಾರಿಕ ಕಾರಣಗಳಿಗೆ ಅದರಲ್ಲಿಯೂ ಯಾವ ಸಹಕಾರ ಸಂಘದಲ್ಲಿ ನೌಕರರು ಸದಸ್ಯರಾಗಲು ಸಾಧ್ಯವಿಲ್ಲವೋ ಅಂತಹ ಸಹಕಾರ ಸಂಘಗಳಲ್ಲಿ ವಿಶೇಷ ಅವಶ್ಯಕತೆ ಇದೆ. ಹೀಗೆ ಮಾಡುವುದರಿಂದ ಸಹಕಾರ ಸಂಘವನ್ನು ಅವರು ಅರ್ಥಮಾಡಿಕೊಳ್ಳಲು ಅವಕಾಶ ವಾಗುತ್ತದೆ. ಇದರಿಂದ ಅವರ ಕರ್ತವ್ಯ ನಿಷ್ಠೆ ಮತ್ತು ಬದ್ಧತೆ ಅಧಿಕಗೊಳ್ಳುತ್ತದೆ. ಇದರಿಂದ ಯಶಸ್ವಿ ಸಹಕಾರ ಔದ್ಯೋಗಿಕ ಸಂಸ್ಥೆಯಾಗಿ ಬೆಳೆಯಲು ಸಾಧ್ಯವಾಗುತ್ತದೆ. ಸಹಕಾರ ಸಂಘದಲ್ಲಿ ಅದನ್ನು ಯಶಸ್ವಿಯಾಗಲು ಅವರು ಪ್ರಮುಖ ಭಾಗೀದಾರರು. ಆದುದರಿಂದ ಅವರ ಧ್ವನಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು. ಆದರೆ ಸದಸ್ಯರ ಪ್ರಜಾಸತ್ತಾತ್ಮಕ ಹಕ್ಕನ್ನು ಮೀರುವಂತಾಗಬಾರದು.

ಬಹುಬಾಗೀದಾರರಿರುವ ಸಹಕಾರ ಸಂಘಗಳಲ್ಲಿ ನೌಕರರು ಸದಸ್ಯರಾಗಿರುವುದರಿಂದ ಚುನಾವಣೆಯಲ್ಲಿ ಭಾಗವಹಿಸುವ ಮೂಲಕ ಭಾಗವಹಿಸುತ್ತಾರೆ. ಆದರೆ ಇತರೆ ಸಂಘಗಳಲ್ಲಿ ನೌಕರರ ಒಕ್ಕೂಟ ಅಥವ ನೌಕರರಿಂದ ಚುನಾಯಿತ ಪ್ರತಿನಿಧಿಗಳಿಗೆ ಆಡಳಿತ ಮಂಡಳಿಯಲ್ಲಿ ಭಾಗವಹಿಸಲು ಅವಕಾಶ ಒದಗಿಸಬೇಕು. ನೌಕರರ ಪ್ರತಿನಿಧಿಗಳನ್ನು ಸದಸ್ಯರೇ ಚುನಾಯಿಸುವ ಬಗ್ಗೆ ಆಲೋಚಿಸಬಹುದು.

ನೌಕರ ಧ್ವನಿಯನ್ನು ಕೇಳಲು ನಿಗದಿತ ಮಾದರಿ ಒದಗಿಸಲಾಗುವುದಿಲ್ಲ. ಆದರೆ ಅದನ್ನು ಒಳಗೊಂಡರೆ ಸಹಕಾರ ವ್ಯವಹಾರವು ಪುಟಿದೇಳಬಲ್ಲ ಮತ್ತು ಶಕ್ತಿಯುತವಾಗಿ ನಡೆಯಬಲ್ಲದು.

ಎಲ್ಲರ ಧ್ವನಿಯನ್ನೂ ಕೇಳಿಸಿಕೊಳ್ಳುವುದನ್ನು ಖಾತ್ರಿ ಪಡಿಸಿಕೊಳ್ಳುವುದು

ಕೆಲವು ಸದಸ್ಯರ ಧ್ವನಿಯನ್ನು ಆಲಿಸದಿದ್ದಲ್ಲಿ ಅಥವ ಅವರನ್ನು ಆಡಳಿತ ಮಂಡಳಿಯಲ್ಲಿ ಪ್ರತಿನಿಧಿಸಿಲ್ಲವೆಂದರೆ ಸಂಘದ ವ್ಯವಹಾರದಲ್ಲಿ ಒಡಕುವುಂಟಾಗುತ್ತದೆ ಮತ್ತು ಆಸದಸ್ಯರನ್ನೂ ಕಳೆದುಕೊಳ್ಳಲೂ ಬಹುದು.

ಒಡಕುಳ್ಳ ಚುನಾವಣೆಗಳಾಗಿ ಕೆಲವರದೇ ಪ್ರಾತಿನಿಧ್ಯವಾದಲ್ಲಿ ಅಲ್ಪ ಸಂಖ್ಯಾತ ಸದಸ್ಯರ ಆಸೆ ಆಕಾಂಕ್ಷೆ ಅವಶ್ಯಕತೆಗಳನ್ನು ಪೂರೈಸಿದಂತಾಗುವುದಿಲ್ಲ. ಇದರಿಂದ ರಕ್ಷಿಸಿಕೊಳ್ಳಲು ವಿವಿಧ ಗುಂಪುಗಳಿಗೆ ಪ್ರಾತಿನಿಧ್ಯ ಕಲ್ಪಿಸುವುದು ಒಳ್ಳೆಯದು.

ಮುಕ್ತ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮೇಲಿನ ಅಂಶವನ್ನು ಖಾತ್ರಿ ಪಡಿಸಿಕೊಳ್ಳುವುದು ಸುಲಭವಾಗಿರುವುದಿಲ್ಲ. ಅಲ್ಪಸಂಖ್ಯಾತರನ್ನು ಹುಡುಕಿಸುವ ಅಪಾಯವಿರುತ್ತದೆ. ಅಲ್ಪ ಸಂಖ್ಯಾತರಿಗೆ ಧ್ವನಿ ನೀಡಲು ಸಹಮತ ಮೂಲಕ ನೇಮಕಾತಿಯನ್ನು ಆಡಳಿತ ಮಂಡಳಿ ಪರಿಶೀಲಿಸಬಹುದು. ಚುನಾಯಿತ ಸದಸ್ಯರು ಎಲ್ಲ ಸದಸ್ಯರ ಹಿತಾಸಕ್ತಿಯನ್ನು ಕಾಪಾಡುವುದೇ ಆಗಿರುತ್ತದೆ ವಿನಃ ಕೇವಲ ಅವರನ್ನು ಆಯ್ಕೆಮಾಡಿದ ಬಹಮತ ಸದಸ್ಯರದಲ್ಲ.

**ಹಿರಿಯ ಅಧಿಕಾರಿಗಳು**

ದೈನಂದಿನ ವ್ಯವಹಾರಗಳನ್ನು ನಡೆಸುವ ಹಿರಿಯ ಅಧಿಕಾರಿಗಳು ಚುನಾಯಿತ ಆಡಳಿತ ಮಂಡಳಿಯ ಪ್ರಜಾಸತ್ತಾತ್ಮಕ ಹಕ್ಕನ್ನು ಗೌರವಿಸುವುದರೊಡನೆ ಧೀರ್ಘಾವಧಿ ವ್ಯವಹಾರಿಕ ತಂತ್ರಗಾರಿಕೆ, ವೃತ್ತಿಪರ ವ್ಯವಸ್ಥಾಪನೆಯ ಅವಶ್ಯಕತೆ ಬಗ್ಗೆ ಆಡಳಿತ ಮಂಡಳಿಗೆ ತಿಳಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಸಹಕಾರ ವ್ಯವಹಾರ ನಿರ್ದಾರ ತೆಗೆದುಕೊಳ್ಳುವಲ್ಲಿ

ವ್ಯಾವಹಾರಿಕ ಬದ್ಧತೆಯನ್ನು ಅವರು ಪ್ರದರ್ಶಿಸಬೇಕಾಗುತ್ತದೆ. ನೀತಿ ನಿರೂಪಣಾ ನಿರ್ಧಾರಗಳಲ್ಲಿ ಸದಸ್ಯರಿಗೆ ಸ್ಪಷ್ಟವಾಗಿ ವಿವರಿಸಬೇಕಾಗುತ್ತದೆ. ಅವರಿಗೆ ಅರ್ಥವಾಗುವ ರೀತಿಯಲ್ಲಿ ವಿವರಿಸುವುದಲ್ಲದೇ ಪರ್ಯಾಯ ಮಾರ್ಗಗಳಿದ್ದಲ್ಲಿ ಅವನ್ನು ಸೂಚಿಸಬೇಕಾಗುತ್ತದೆ. ಆಡಳಿತ ಮಂಡಳಿ ಮತ್ತು ಸದಸ್ಯರಿಗೆ ಆರ್ಥಿಕ ಮತ್ತು ವ್ಯವಹಾರಿಕ ಮಾಹಿತಿಯನ್ನು ಒದಗಿಸುವಾಗ ಶಾಸನಬದ್ಧ ಅವಶ್ಯಕತೆಯನ್ನು ಪೂರೈಸುವುದಲ್ಲದೇ ಅವರಿಗೆ ಅರ್ಥವಾಗುವ ರೀತಿಯಲ್ಲಿ ಒದಗಿಸಬೇಕು ಅಲ್ಲದೆ ಪರ್ಯಾಯ ಅವಕಾಶಗಳಿದ್ದಲ್ಲಿ ಅವುಗಳನ್ನು ವಿವರಣಾ ರೂಪದಲ್ಲಿ ಒದಗಿಸಬೇಕಾಗುತ್ತದೆ.

ವ್ಯವಹಾರದಲ್ಲಿನ ತೊಡಕುಗಳು, ತೊಡಕುಗಳನ್ನು ನಿರ್ವಹಣೆ ಮಾಡುವುದರ ಬಗ್ಗೆ ಹಿರಿಯ ಅಧಿಕಾರಿಗಳು ಆಡಳಿತ ಮಂಡಳಿಯಲ್ಲಿ ಇರಲಿ ಅಥವ ಇಲ್ಲದಿರಲಿ ತಿಳಿ ಹೇಳುವುದು ಅವರ ಕರ್ತವ್ಯವಾಗಿರುತ್ತದೆ. ಆದರೆ ಕೇವಲ ಅವರು ಶಿಫಾರಸ್ಸು ಮಾಡಿದಂತಹ ವಿಷಯಗಳಿಗೆ ಕೇವಲ ಮುದ್ರೆಗಳಾಗಿ ವರ್ತಿಸುತ್ತಾರೆ ಎಂದು ನಿರೀಕ್ಷಿಸಲಾಗದು. ಹಿರಿಯ ಅಧಿಕಾರಿಗಳು ಮತ್ತು ಆಡಳಿತ ಮಂಡಳಿ ಪರಸ್ಪರ ಗೌರವಯುತವಾಗಿ ಆಡಳಿತದ ಜವಾಬ್ದಾರಿಯಲ್ಲಿ ತಮ್ಮ ಪಾತ್ರವನ್ನು ಅರಿಯಬೇಕು.

**ಹಿರಿಯ ಅಧಿಕಾರಿಗಳು ಮತ್ತು ಚುನಾಯಿತ ಆಡಳಿತ ಮಂಡಳಿ ಸದಸ್ಯರಿಗೆ ಸಂಭಾವನೆ**

ಹಿರಿಯ ಅಧಿಕಾರಿಗಳು ಮತ್ತು ಚಿನಾಯಿತ ಆಡಳಿತ ಮಂಡಳಿ ಸದಸ್ಯರಿಗೆ ಪಾವತಿಸಬೇಕಾದ ಸಂಭಾವನೆ ಅಂತಿಮವಾಗಿ ಪ್ರಜಾಸತ್ತಾತ್ಮಕ ಆಡಳಿತದ ಹಿಡಿತದಲ್ಲಿರಿಬೇಕು ಈ ಪಾವತಿಗಳು ಹೆಚ್ಚಿಗೆ ಆದರೆ ಸಹಕಾರ ಔದ್ಯೋಮಿಕತೆಯ ಸದಸ್ಯರ ಪಾವತಿ ಅವರಿಗೆ ದೊರೆಯುವ ಲಾಭವು ಕಡಿಮೆಯಾಗುತ್ತದೆ. ಅದುದರಿಂದ ಆಡಳಿತ ಮಂಡಳಿ ಮತ್ತು ಉಪಸಭೆಯ ಸಂಭಾವನೆಗಳು ಯಾವಾಗಲೂ ಸರ್ವಸದಸ್ಯರ ಸಭೆಯ ಸಮ್ಮತಿಯನ್ನು ಹೊಂದಿರಬೇಕು. ಹಿರಿಯ ಅಧಿಕಾರಿಗಳ ವೇತನಗಳು ಆಡಳಿತ ಮಂಡಳಿ ಶಿಫಾರಸ್ಸಿನಂತೆ ಸರ್ವಸದಸ್ಯರ ಸಭೆಯ ಅನುಮೋದನೆ ಅಗತ್ಯವಾಗುತ್ತದೆ.

**ಪ್ರಜಾಪ್ರಭುತ್ವ ಆಡಳಿತ ನವೀಕರಣ ಮತ್ತು ಷರತ್ತು ಮಿತಿಗಳು**

ನೂತನ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಿ ಚುನಾಯಿತರಾಗುವುದನ್ನು ಆರೋಗ್ಯಕರ ಬೆಳವಣಿಗೆ ಎಂದು ಸ್ವಾಗತಿಸಬೇಕು. ಒಂದೇ ಆಡಳಿತ ಮಂಡಳಿಯು ಸುದೀರ್ಘವಾಗಿ ಮುಂದುವರೆದಲ್ಲಿ, ಬದಲಾವಣೆಗೆ ಅವರು ಸ್ಪಂದಿಸುವುದಿಲ್ಲ. ವ್ಯಾಪಾರಿ ಪರಿಸರದಲ್ಲಿ ಆಗುವ ಬದಲಾವಣೆಗೆ ಅವರು ಸ್ಪಂದಿಸಲು ತಮ್ಮ ಸಾಮರ್ಥ್ಯ ಕಳೆದುಕೊಂಡಿರುತ್ತಾರೆ. ಸುದೀರ್ಘವಾಗಿ ಸೇವೆಸಲ್ಲಿಸುತ್ತಿರುವ ಆಡಳಿತ ಮಂಡಲಿ ಸದಸ್ಯರು ಅವರನ್ನು ವೃತಾ ಆಕ್ಷೇಪಿಸಲಾಗುತ್ತಿದೆ ಎಂದು ತಿಳಿಯಬಾರದು. ಸಹಕಾರ ಕ್ಷೇತ್ರದ ಯಶಸ್ಸಿಗೆ ಇತರೆ ಸಹಕಾರ ಸದಸ್ಯರು ಭಾಗವಹಿಸಲು ಅವಕಾಶ ನೀಡುವುದು ಸಕಾರಾತ್ಮಕ ಬೆಳವಣಿಗೆಯ ದ್ಯೋತಕ ಎಂದು ಭಾವಿಸಬೇಕು.

ಮುಕ್ತ ಅವಕಾಶವಿರುವಂತೆ ನೋಡಿಕೊಂಡು ಅತ್ಯಂತ ಪ್ರತಿಭಾವಂತರು ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರೋತ್ಸಾಹಿಸಬೇಕು. ಚುನಾವಣಾ ಅಭ್ಯರ್ಥಿಗಳು ಪ್ರಕಟಿಸುವ ಪ್ರಣಾಳಿಕೆಯು ಅವರನ್ನು ಆರಿಸುವ ಬಗ್ಗೆ ನಿರ್ಣಯ ಕೈಗೊಳ್ಳಲು ಸಹಾಯವಾಗುತ್ತದೆ.

ಆಡಳಿತ ಮಂಡಳಿಯ ನಿಗದಿತ ಅವಧಿ ಮೂರು ಅಥವ ನಾಲ್ಕು ವರ್ಷಗಳಿದ್ದು ಪ್ರತಿ ವರ್ಷ ಮೂರನೇ ಒಂದು ಅಥವ ನಾಲ್ಕನೇ ಒಂದು ಭಾಗ ಪ್ರತಿ ವರ್ಷ ನಿವೃತ್ತಿಹೊಂದಿ ಪ್ರತಿ ವರ್ಷ ಚುನಾವಣೆ ನಡೆಯುವುದು ಒಳ್ಳೆಯ ಪದ್ಧತಿಯಾಗುತ್ತದೆ. ಏಕೆಂದರೆ ಅನುಭವವನ್ನು ಉಳಿಸಿಕೊಳ್ಳವುದು ಮತ್ತು ಪ್ರಜಾಸತ್ತಾತ್ಮಕ ನವೀಕರಣದ ನಡುವೆ ಸಮತೋಲನ ಕಾಪಾಡಿ ಕೊಂಡಂತಾಗುತ್ತದೆ. ಚುನಾಯಿತ ಸದಸ್ಯರ ಗರಿಷ್ಠ ಅವಧಿಯನ್ನು ನಿಗಧಿ ಪಡಿಸುವುದು ಒಳಿತು. ಸಾರ್ವಜನಿಕ ಮಿತಿ ಕಂಪನಿಗಳಲ್ಲಿ ಈ ರೀತಿ ಷರತ್ತುಗಳನ್ನು ಅಧಿಕಾರೇತರ ನಿರ್ದೇಶಕರಿಗೆ ಸಾಮಾನ್ಯವಾಗಿ ವಿಧಿಸಲಾಗುತ್ತದೆ. ಸಹಕಾರ ಸಂಘಗಳಲ್ಲಿ ಉತ್ತಮ ಪ್ರಜಾಸತ್ತಾತ್ಮಕ ರೂಢಿಯಾಗಿ ಈ ಅಂಶಗಳನ್ನು ಅಳವಡಿಸಿಕೊಳ್ಳಬೇಕು.

**ರಾಷ್ಟ್ರೀಯ ಸಹಕಾರ ಮಹಾಮಂಡಳಗಳ ಮತ್ತು ವಲಯವಾರು ಸಂಸ್ಥೆಗಳ ಪಾತ್ರ**

ಆಯಾ ರಾಷ್ಟ್ರಗಳಲ್ಲಿ ಅತ್ಯುತ್ತಮ ಆಡಳೀತ ರೂಢಿ ನಿಯಮಗಳು ಮತ್ತು ಪ್ರಜಾಸತ್ತಾತ್ಮಕ ರೂಡಿಗಳನ್ನು ಜಾರಿ ಮಾಡುವ

ವಿಶೇಷ ಜವಾಬ್ದಾರಿ ಮತ್ತು ಪಾತ್ರ ರಾಷ್ಟ್ರೀಯ ಸಹಕಾರ ಮಹಾಮಂಡಳಗಳು ಮತ್ತು ಉತ್ತುಂಗ ಸಂಸ್ಥೆಗಳದ್ದಾಗಿದೆ. ಮೈತ್ರಿಕೂಟದ ವಿವಿಧ ಸಂಸ್ಥೆಗಳು, ಪ್ರಾದೇಶಿಕ ಮತ್ತು ವಲಯಾವಾರು ಸಾಮಾನ್ಯ ಅತ್ಯುತ್ತಮ ಆಡಳಿತ ಮಾನ ದಂಡಗಳನ್ನು ರೂಪಿಸುವ ಜವಾಬ್ದಾರಿ ಹೊಂದಿರುತ್ತದೆ. ಅದರಲ್ಲಿಯಾ ನೂತನ ಸಹಕಾರ ಸಂಘಗಳಿಗೆ ಸಲಹೆ ಬೆಂಬಲ ತರಬೇತಿ ನೀಡುವ ಅವಶ್ಯಕತೆ ಇದೆ. ರಾಷ್ಟ್ರೀಯ ಕಾಯ್ದೆಗಳಿಗನುಗುಣವಾಗಿ ಅತ್ಯುತ್ತಮ ಪ್ರಜಾಸತ್ತಾತ್ಮಕ ರೂಡಿ ಮತ್ತು ಮಾರ್ಗದರ್ಶನಗಳನ್ನು ಮತ್ತು ಮಾದರಿ ಸಂಹಿತೆಯನ್ನು ರಚಿಸಿ, ಆ ಮಾನದಂಡಗಳನ್ನು ತನ್ನ ಸದಸ್ಯ ಸಹಕಾರ ಸಂಘಗಳು ಪಾಲಿಸುವಂತೆ ನೋಡಿ ಅದರ ಕಾರ್ಯಾಚರಣೆಯನ್ನು ಪರಿಶೀಲಿಸಬಹುದಾಗಿದೆ. ಸದಸ್ಯ ಸಂಘಗಳು ಇದರ ಪಾಲನೆ ಬಗ್ಗೆ ಇತರೆ ಸಂಘಗಳೊಡನೆ ತುಲನೆ ಮಾಡಿ ನೋಡಿಕೊಳ್ಳಬಹುದು ಅಲ್ಲದೆ ನೀತಿಗಳ ಪಾಲನೆ ರೂಡಿಸಿ ಅತ್ಯುತ್ತಮ ಪ್ರಜಾಸತ್ತಾತ್ಮಕ ಆಡಳಿತ ನೀಡುವಂತಾಗಬೇಕು

## 4. ಭವಿಷ್ಯದಲ್ಲಿ ಪರಿಗಣಿಸಬೇಕಾದ ವಿಷಯಗಳು:

ಬೃಹತ್ ಸಹಕಾರ ಸಂಘಗಳು ಮತ್ತು ಬಹುಭಾಗಿತ್ವವುಳ್ಳ ಸಹಕಾರ ಸಂಘಗಳಲ್ಲಿ ಪ್ರಜಾಸತ್ತಾತ್ಮಕ ಆಡಳಿತ:

ಈ ಸಹಕಾರ ಸಂಘಗಳಲ್ಲಿ ಗಾತ್ರ ಮತ್ತು ರಚನೆಯಲ್ಲಿ ಅಧಿಕ ವೈವಿಧ್ಯತೆ ಇದೆ. 21ನೇ ಶತಮಾನದಲ್ಲಿ ಪ್ರಾಥಮಿಕ ಮಟ್ಟದಲ್ಲಿ ವಿವಿಧ ತರಹೆ ಸದಸ್ಯರ ಸಹಕಾರ ಸಂಘಗಳು ಸ್ಥಾಪಿತವಾಗಿದ್ದು ಬಳಕೆದಾರರು, ನೌಕರರು, ಸ್ವತಂತ್ರ ಉದ್ದಿಮೆದಾರರು, ಸಂಸ್ಥೆಗಳು ಸದಸ್ಯರಾಗಿದ್ದು ಪ್ರಜಾಸತ್ತಾತ್ಮಕ ಆಡಳಿತ ನೂತನ ಸವಾಲುಗಳನ್ನು ಎದುರಿಸಬೇಕಾಗಿದೆ. 2ನೇ ತತ್ವವಾದ ಸದಸ್ಯ ಪ್ರಜಾಸತ್ತಾತ್ಮಕ ನಿಯಂತ್ರಣವನ್ನು ಪಾಲಿಸಲು ರಾಷ್ಟ್ರೀಯ ಕಾಯ್ದೆಗಳು ನಿಯಮಗಳು ಮತ್ತು ಉಪನಿಯಮಗಳಲ್ಲಿ ಅದರ ಕರ್ತವ್ಯ ಮತ್ತು ರಚನೆಗನುಗುಣವಾಗಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು. ವಿವಿಧ ವರ್ಗದ ಸದಸ್ಯರಿಗೆ ಸಂಖ್ಯೆ ವ್ಯವಹಾರಕ್ಕೆ ಅನುಗುಣವಾಗಿ ಅನುಪಾತದ ರೀತಿ ತೂಕ ಸಹಿತ ಮತದಾನದ ಹಕ್ಕು ನೀಡಬೇಕಾಗುತ್ತದೆ.

ಬೃಹತ್ ಮತ್ತು ವೈವಿಧ್ಯಮಯ ಸಹಕಾರ ಸಂಘಗಳು ನೂತನ ರೀತಿಯ ಪ್ರಜಾಸತ್ತಾತ್ಮಕ ಹತೋಟಿ ರಚನೆಗಳನ್ನು ಹೊಂದುವುದು ಅನಿವಾರ್ಯವಾಗುತ್ತದೆ. ಯಾವುದೇ ರೀತಿಯ ರಚನೆ ಹೊಂದಿದರು ಎರಡನೇ ತತ್ವವನ್ನು ಅವರು ಗೌರವಿಸಲೇಬೇಕು. ದಿಟವಾದ ಮತ್ತು ಪರಿಣಾಮಕಾರಿಯಾದ ಪ್ರಜಾಸತ್ತಾತ್ಮಕ ಹತೋಟಿ ಇಲ್ಲದಿದ್ದಲ್ಲಿ ಅದು ಸಹಕಾರದ ಗುಣ ಲಕ್ಷಣವನ್ನು ಕಳೆದುಕೊಳ್ಳುತ್ತದೆ.

ಅದೇ ರೀತಿಯ ಪ್ರಜಾತತ್ತಾತ್ಮಕ ಸವಾಲುಗಳು ಬಹು ಶ್ರೇಣಿ ಸಹಕಾರ ಸಂಘಗಳಲ್ಲಿಯೂ ಇವೆ. ಪ್ರಮುಖ ಪ್ರಶ್ನೆ ಎಂದರೆ ಬೃಹತ್ ಮತ್ತು ಸಂಕೀರ್ಣ ಸಹಕಾರ ಸಂಘಗಳಲ್ಲಿ ಸದಸ್ಯರ ಪ್ರಜಾಸತ್ತಾತ್ಮಕ ಹಕ್ಕನ್ನು ಹೇಗೆ ಕಾಯ್ದುಕೊಳ್ಳಲಾಗುತ್ತದೆ. ಪ್ರಮುಖ ವ್ಯಾಪಾರಿ ನಿರ್ದಾರಗಳಲ್ಲಿ ಅವರನ್ನು ಹೇಗೆ ತೊಡಗಿಸಿಕೊಳ್ಳಲಾಗುತ್ತದೆ.

ಆರ್ಥಿಕ ಸಭಲತೆವುಳ್ಳ ದೊಡ್ಡ ಸಹಕಾರ ಸಂಘಗಳು ಬಂಡವಾಳದಾರ ಕಂಪನಿಗಳನ್ನು ವಹಿಸಿಕೊಂಡಿವೆ. ಕೆಲವು ದೇಶಗಳಲ್ಲಿ ಸಹಕಾರ ಸಂಘ ವ್ಯವಹಾರ ನಡಸದೇ ಇರುವ ದೇಶಗಳಲ್ಲಿಯೂ ವಹಿಸಿಕೊಂಡಿವೆ. ಇದೂ ಕೂಡ ಸವಾಲುಗಳು ಮತ್ತು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ ಹೇಗೆ ಸಾಧ್ಯ? ಕಂಪನಿಗಳ ನೌಕರರು ಗ್ರಾಹಕರನ್ನೂ ಸದಸ್ಯರನ್ನಾಗಿ ಪರಿಗಣಿಸಲು ಸಾಧ್ಯವೇ?

**ಅವಧಿ ಮಿತಿಯ ಗರಿಷ್ಠ ಮಟ್ಟ:**

ಉತ್ತಮ ಆಡಳಿತ ರೂಡಿಯಲ್ಲಿ ಚುನಾಯಿತ ಆಡಳಿತ ಮಂಡಳಿ ಸದಸ್ಯ ಅಥವ ಪಧಾಧಿಕಾರಿ ಎಷ್ಟು ವರ್ಷಗಳವರೆಗೆ ಆ ಹುದ್ದೆ ನಿರ್ವಹಿಸಬಹುದು ಎಂಬುದಕ್ಕೆ ಯಾವುದೇ ಸಿದ್ಧ ರೂಡಿ ಮಾದರಿ ಇರುವುದಿಲ್ಲ. ಕೆಲವೆಡೆ ಮೂರರಿಂದ ಒಂಬತ್ತು ವರ್ಷಗಳವರೆಗೆ ಇದೆ. ಮೈತ್ರಿಕೂಟದಲ್ಲಿ 18 ವರ್ಷಗಳನ್ನು ನಿಗದಿಪಡಿಸಿದೆ. ರಾಷ್ಟ್ರೀಯ ಸಹಕಾರ ಉತ್ತುಂಗ ಸಂಸ್ಥೆಗಳು ತಮ್ಮದೇ ಆದ ಸಂಹಿತೆ ರಚಿಸಿಕೊಂಡಿವೆ. ಮೈತ್ರಿಕೂಟವು ಸದಸ್ಯರೊಡನೆ ಸಮಾಲೋಚಿಸಿ ಅವಶ್ಯ ಮಾರ್ಗದರ್ಶನ ನೀಡಬಹುದಾಗಿದೆ.

# 3ನೇ (ಮೂರನೇ) ತತ್ವ

# ಸದಸ್ಯ ಆರ್ಥಿಕ ಭಾಗವಹಿಸುವಿಕೆ

ಸಹಕಾರ ಸಂಘದ ಬಂಡವಾಳವನ್ನು ಸದಸ್ಯರು ತೊಡಗಿಸುತ್ತಾರೆ ಮತ್ತು ನಿಯಂತ್ರಿಸುತ್ತಾರೆ. ಅಲ್ಪಭಾಗವಾದರೂ ಸದಸ್ಯರ ಸಾಮಾನ್ಯ ಆಸ್ತಿಯಾಗಿರುತ್ತದೆ. ಸಾಮಾನ್ಯವಾಗಿ ಸದಸ್ಯರು ಪರಿಮಿತ ಆಧಾಯ ಪಡೆಯುತ್ತಾರೆ. ಸದಸ್ಯತ್ವದ ಅಂಗವಾಗಿ ಬಂಡವಾಳವನ್ನು ತೊಡಗಿಸಿರುತ್ತಾರೆ. ಸಂಘವು ಗಳಿಸಿದ ಹೆಚ್ಚುವರಿ ಮೊತ್ತ (ಲಾಭ) ವನ್ನು ಈ ಮುಂದೆ ಕಾಣಿಸಿದ ಉದ್ಧೇಶಕ್ಕಾಗಿ ಸದಸ್ಯರು ವಿಂಗಡಿಸುತ್ತಾರೆ. ಆಪದ್ಧನ ಸೃಷ್ಟಿಗೆ ಅದನ್ನು ವಿಭಜಿಸಲಾಗದು, ಸದಸ್ಯರ ವ್ಯವಹಾರಗಳಿಗೆ ತಕ್ಕಂತೆ ಹಂಚಿಕೆಗಾಗಿ (ಬೋನಸ್) ಸದಸ್ಯರು ಉದ್ದೇಶಿಸುವ ಇತರೆ ಉದ್ದೇಶಗಳಿಗಾಗಿ.

**1. ಪರಿಚಯ:**

ಸಹಕಾರ ಸಂಘಗಳು ಅಸ್ತಿತ್ವದಲ್ಲಿರುವುದು ಪ್ರಾಥಮಿಕವಾಗಿ ಬಂಡವಾಳದ ಮೇಲಿನ ಲಾಭಕ್ಕಾಗಿ ಆಗಿರುವುದಿಲ್ಲ. ಬದಲಿಗೆ ಜನರ ಅಗತ್ಯತೆಗಳ ಪೂರೈಕೆಗಾಗಿ, ಜನರು ಸಹಕಾರ ಸಂಘಗಳನ್ನು ಆರಂಭಿಸುವುದು ಸ್ವಾವಲಂಬನೆಗಾಗಿ. ಈ ಮೂರನೇ ತತ್ವವು ಸದಸ್ಯರು ಹೇಗೆ ಬಂಡವಾಳವನ್ನು ತೊಡಗಿಸುತ್ತಾರೆ ಮತ್ತು ಬಂಡವಾಳ ಉತ್ಪತ್ತಿ ಮತ್ತು ಹೆಚ್ಚುವರಿ ಮೊತ್ತವನ್ನು ವಿಂಗಡಿಸುತ್ತಾರೆ ಎಂಬ ಅಂಶದ ವಿವರಣೆ ಯಾಗಿರುತ್ತದೆ. ಈಗಿರುವ ನಮೂನೆಯ ಮೂರನೇ ತತ್ವವು 1996ರ ಮ್ಯಾಂಚೆಸ್ಟರ್, ಇಂಗ್ಲೇಂಡ್‌ನಲ್ಲಿ ನಡೆದ ಮೈತ್ರಿ ಕೂಟ ಸಮ್ಮೇಳನದಲ್ಲಿ ಪುನರ್ ನಿರ್ಮಾಣ ಮಾಡಲಾಗಿದೆ. 1995ರ ಮುಂಚೆ ಇದ್ದ ಎರಡು ತತ್ವಗಳನ್ನು ಮಿಲನಗೊಳಿಸಲಾಗಿದೆ. ಆ ತತ್ವಗಳು ಈ ಕೆಳಗಿನಂತಿವೆ.

(1) ಷೇರು ಬಂಡವಾಳದ ಮೇಲೆ ಪರಿಮಿತ ಬಡ್ಡಿಯನ್ನು ಮಾತ್ರ ಸ್ವೀಕರಿಸತಕ್ಕದ್ದು.

(2) ಹೆಚ್ಚುವರಿ ಮೊತ್ತವನ್ನು ಸಮಂಜಸವಾಗಿ ಹಂಚುವುದು

– ಆಪದ್ಧನ ನಿಧಿಗೆ

– ಸಾಮಾನ್ಯ ಸೇವೆಗಳಿಗೆ

– ಸದಸ್ಯರು ಸಂಘದ ಸೇವೆಗಳನ್ನು ಉಪಯೋಗಿಸಿದುದಕ್ಕನುಗುಣವಾಗಿ ಹಂಚಿಕೆ.

1966ರ ಪುನರ್ ವಿಮರ್ಶೆಯಲ್ಲಿ ನಗದು ವ್ಯವಹಾರವನ್ನು ಪ್ರಮುಖ ಸಹಕಾರ ತತ್ವವಲ್ಲವೆಂದು ತೆಗೆದುಹಾಕಲಾಗಿದ್ದು ಮತ್ತು ಅದಕ್ಕೆ ಮೊದಲೆ 1937ರಲ್ಲಿಯೇ ಅದು ಪ್ರಮುಖ ತತ್ವವೆಂದು ಪರಿಗಣಿಸಲಾಗಿತ್ತು. 1995ರ ಪುನರ್ ವಿಮರ್ಶೆಯು ಸುದೀರ್ಘ ಚರ್ಚೆಯ ನಂತರದ ಫಲಶೃತಿಯಾಗಿದೆ.

1995ರ ಸದಸ್ಯರ ಬಂಡವಾಳದ ಮೇಲಿನ ಪರಿಮಿತ ಲಾಭವನ್ನು ತೆಗೆಯಲು ಒಪ್ಪಿತಾದರೂ, ಬಂಡವಾಳದ ಮೇಲೆ ಸಾಮೂಹಿಕ ಒಡೆತನವನ್ನು ಎತ್ತಿಹಿಡಿಯ ಲಾಯಿತು. ಫ್ರಾನ್ಸ್‌ನ ಕೆಲಸಗಾರರ ಸಹಕಾರ ಸಂಘಗಳು ಇದನ್ನು ಒತ್ತಾಯಿಸಿದ್ದವು. ರಾಬರ್ಟ್ ಓವನ್ ರವರ ಅಧ್ಯಕ್ಷತೆಯಲ್ಲಿ 1832ರಲ್ಲಿ ನಡೆದ ಸಭೆ ಲಂಡನ್ ನಲ್ಲಿ ನಡೆದ 3ನೇ ಶೃಂಗ ಸಭೆಯ ನಿರ್ಣಯದವರೆಗೂ ಇದರ ಚರಿತ್ರೆ ಇದೆ.

“ಆಶಿಸಲ್ಪಟ್ಟ ಉದ್ದೇಶ ಸಾಧನೆಗಳು ವಿಫಲವಾಗದಂತೆ ಖಾತ್ರಿ ಪಡಿಸಿಕೊಳ್ಳಲು ಸಭೆಯು ಸರ್ವಾನುಮತದಿಂದ “ಈ ರೀತಿಯ ಸಂಘಗಳಲ್ಲಿ ಕ್ರೌಢೀಕೃತ ಬಂಡವಾಳವನ್ನು ವಿಭಜಿಸಬಾರದು” ಎಂದು ನಿರ್ಣಯಿಸಿದೆ. ಯಾವುದೇ ವ್ಯವಹಾರಿಕ

ಸಂಘಗಳು ಲಾಭಗಳನ್ನು ಕ್ರೋಢೀಕರಿಸಲು ಆಗಿದ್ದಲ್ಲಿ ಈ ಸಮ್ಮೇಳನವು ಅಂತಹ ಸಂಘಗಳನ್ನು ಸ್ವಾಯತ್ತ ಮತ್ತು ಸಮಾನತೆಯ ಸಮೂಹದೊಡನೆ ಸಾಗುತ್ತಿರುವ ಬೃಹತ್ ಸಾಮಾಜಿಕ ಕುಟುಂಬದಿಂದ ಹೊರಗಿಡಲಾಗುತ್ತದೆ".

ವಿಕ್ಟೋರಿಯಾದಲ್ಲಿ ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದ ವ್ಯಂಕೊವರ್ ದ್ವೀಪ, ಕೆನಡಾದ ಸಹಕಾರ ಮತ್ತು ಸಮೂಹ ಅಧ್ಯಯನ ಪೀಠದ ಮುಖ್ಯಸ್ಥರಾದ ಪ್ರೊಫೆಸರ್ ಐಯಾನ್ ಮ್ಯಾಕ್ಫರ್ಸನ್‌ರವರು 1995ರ ಈ ತತ್ವವನ್ನು ಪುನರ್ ವಿಮರ್ಶೆ ಮಾಡಿದ ವೇಳೆಯಲ್ಲಿ (ಈಗ ಅವರು ನಮ್ಮೊಂದಿಗಿಲ್ಲ) ಅವರು ಈ ರೀತಿ ವಿವರಿಸಿರುತ್ತಾರೆ.

"ಸದಸ್ಯರ ಹಿತದೃಷ್ಟಿಯನ್ನು ಸದಸ್ಯರ ಆರ್ಥಿಕ ಭಾಗವಹಿಸುವಿಕೆಯ ಮೂರನೇ ತತ್ವವು ಒಳಗೊಂಡಿರುತ್ತದೆ. ಹಿಂದಿನ ಆರ್ಥಿಕ ಆಚರಣೆಗಿಂತ ಈ ತತ್ವವು "ಸದಸ್ಯರ ಆರ್ಥಿಕ ಭಾಗವಹಿಸುವಿಕೆ"ಯಾಗಿ ಅನೇಕ ತರಹೆಯಲ್ಲಿ ವಿಭಿನ್ನವಾಗಿರುತ್ತದೆ. ಅವರ ಸಂಸ್ಥೆಯ ಬಂಡವಾಳವನ್ನು ಅವರೇ ನಿಯಂತ್ರಿಸುವ ಬಗ್ಗೆ ಮತ್ತು ಬಂಡವಾಳದ ಮೇಲೆ ಪರಿಮಿತ ಆದಾಯ ಪಡೆಯುವ ಬಗ್ಗೆ ಆಗಿರುತ್ತದೆ. ಸದಸ್ಯರ ಹೂಡಿಕೆ ಮೇಲೆ ಮಾರುಕಟ್ಟೆ ಅವಲಂಭಿತ ಹಿಂಪಡೆತ ಮಾತ್ರ ಪಡೆಯಬೇಕಾಗಿರುತ್ತದೆ. ಸ್ವಾಯತ್ತತೆಯ ತತ್ವದ ಆಧಾರದ ಮೇರೆಗೆ ಇತರೆ ಮೂಲಗಳಿಂದ ಬಂಡವಾಳ ಪಡೆಯುವುದರ ಬಗ್ಗೆ ಮತ್ತು ಅದರ ಪರಿಣಾಮಗಳ ಬಗ್ಗೆ ಆಲೋಚಿಸಬೇಕಾಗುತ್ತದೆ. ಅತ್ಯಂತ ಪ್ರಮುಖ ಅಂಶವೆಂದರೆ ಸಂಘದ ಭವಿಷ್ಯದ ಬಗ್ಗೆ ಸದಸ್ಯರು ನಿರ್ಣಯಿಸುವ ತಮ್ಮ ಶಕ್ತಿಗೆ ಕುಂದುಬರಬಾರದಂತೆ ಎಚ್ಚರವಹಿಸಬೇಕಿದೆ.

ವಿಭಾಗಿಸಲಾರದ ಆಪದ್ಧನವನ್ನು ಸೇರಿಸುವ ಬಗ್ಗೆ ಸುದೀರ್ಘ ಚರ್ಚೆಯಾಗಿರುತ್ತದೆ. 1966ನೇ ಪುನರ್ ವಿಮರ್ಶೆಯಲ್ಲಿ ಸಾಮಾನ್ಯ ಆರ್ಥಿಕ ರಚನೆ ಬಗ್ಗೆ ಸೇರಿಸಲಾಗಿಲ್ಲ ದಿರುವುದಕ್ಕೆ ಕಾರಣ ಈ ವಿಷಯವು ಸಂಕೀರ್ಣಗೊಂಡು ರೂಢಿಯಲ್ಲಿ ವಿವಿಧ ಆಕರಗಳು ಹುಟ್ಟಿಕೊಂಡಿದ್ದರಿಂದಾಗಿ ಎನ್ನಬಹುದು. ಅನೇಕ ಸಹಕಾರಿಗಳು ಸಹಕಾರ ಸಂಘದ ವಿಶಿಷ್ಟವಾದ ಸಾಮಾನ್ಯವಾಗಿ ಹೊಂದಿದ ಬಂಡವಾಳ ಆರ್ಥಿಕ ಪ್ರಗತಿಯ ರಕ್ಷಣೆ ತುರ್ತು ಪರಿಸ್ಥಿತಿಯಲ್ಲಿ ರಕ್ಷಿಸುತ್ತದೆ ಎಂಬುದನ್ನು ಗ್ರಹಿಸಲಿಲ್ಲ.

ವಿಭಾಗಿಸಲಾಗದ ಆಪದ್ಧನ ವನ್ನು ಸೇರಿಸಬೇಕಾದ ತೊಂದರೆಯನ್ನು ಅತ್ಯಂತ ಕಡಿಮೆ ಅವಕಾಶದಲ್ಲಿ ಯೂರೋಪ್ ಪ್ರಾಂತೀಯ ಎರಡು ಸಭೆಗಳ ನಂತರ ಎರಡು ಸೇರ್ಪಡೆಗಳನ್ನು ಮಾಡಲಾಯಿತು. ಮೊದಲನೆಯದು ಒಂದು ವಾಕ್ಯ "ಬಂಡವಾಳದ ಸ್ವಲ್ಪ ಭಾಗವು ಸಾಮಾನ್ಯವಾದ ಸಂಘದ ಆಸ್ತಿ" ಎರಡನೆಯದು ಎಲ್ಲಿ ಸಂಘಗಳು ತಮ್ಮ ಲಾಭದಲ್ಲಿ ಕೆಲವಷ್ಟ ಅಂಶವನ್ನು ಆಪದ್ಧನ ನಿಧಿಯಾಗಿ ವಿಭಾಗಿಸಲಾರದ ಕನಿಷ್ಟ ಭಾಗ"ವಾಗಿ ತೆಗೆದಿರಿಸಬೇಕು.

ಈ ಮೇಲಿನ ಚರ್ಚೆಯು "ಸಹಕಾರ ಸಂಘದಲ್ಲಿ ಬಂಡವಾಳವು ಸೇವಕನೇ ವಿನಃ ಔದ್ಯೋಗಿಕ ಸಂಸ್ಥೆಯ ಯಜಮಾನನಲ್ಲ" ಎಂಬುದನ್ನು ಶೃತಪಡಿಸುತ್ತದೆ. ಸಹಕಾರ ಸಂಘದ ರಚನೆಯೇ "ಬಂಡವಾಳವು ಜನರ ಮತ್ತು ಶ್ರಮದ ಸೇವಕನೇ ಹೊರತು ಶ್ರಮ ಮತ್ತು ಜನ ಬಂಡವಾಳದ ಅಡಿಯಾಳುಗಳಲ್ಲ' ಎಂಬುದನ್ನು ಅವಲಂಭಿಸಿರುತ್ತದೆ. ಸಹಕಾರ ತತ್ವಗಳಲ್ಲಿ ಈ ತತ್ವವು ಸೂಕ್ಷ್ಮ ಮತ್ತು ಸವಾಲು ಒಡ್ಡುವ ತತ್ವವಾಗಿರುತ್ತದೆ. ಈ ತತ್ವ ಆಚರಣೆಗೆ ತರುವುದು ಹೇಗೆ? ಹಣವಿಲ್ಲದೇ ಏನು ಮಾಡಲು ಆಗುವುದಿಲ್ಲ. ಎರಡನೇ ತತ್ವವಾದ ಸದಸ್ಯ ಪ್ರಜಾಸತ್ತಾತ್ಮಕ ಹತೋಟಿಯ ಆರ್ಥಿಕಪರಿಣಾಮಗಳು ಮತ್ತು ಸಂಘದ ಅಸ್ಮಿತೆಯನ್ನು ಉಳಿಸಿಕೊಳ್ಳುವ ಬಗ್ಗೆ ಮೂರನೇ ತತ್ವವು ಅತಿ ಪ್ರಮುಖ ತತ್ವವಾಗಿ ಕಾಣಬರುತ್ತದೆ.

ಸಹಕಾರ ಸಂಘಗಳಲ್ಲಿನ ವ್ಯವಹಾರದ ಪ್ರಮಾಣ ಮತ್ತು ವೈವಿಧ್ಯಮಯತೆಯನ್ನು ಗಮನಿಸಿದಾಗ ಈ ತತ್ವವನ್ನು ಪಾಲಿಸುವಲ್ಲಿ ಅನೇಕ ಅಡೆತಡೆಗಳು ಬರುತ್ತವೆ. ಆದುದರಿಂದ ಈ ತತ್ವ ಆಚರಣೆ ವಿಷಯದಲ್ಲಿ "ಕನಿಷ್ಟ ಪಕ್ಷ" ಮತ್ತು "ಸಾಮಾನ್ಯವಾಗಿ" ಎಂಬ ಪದಗಳ ಪ್ರಯೋಗ ಅನಿವಾರ್ಯವಾಗಿದೆ. ಸಹಕಾರ ಸಂಘಗಳಲ್ಲಿನ ವಿವಿಧ ರೂಡಿಗಳನ್ನು ಸರಿ ಎಂದು ಮುಚ್ಚಿಕೊಳ್ಳಲು ಮೂರನೇ ತತ್ವದಲ್ಲಿ ಅಡೆತಡೆಗಳನ್ನು ಒಳಗೊಳ್ಳಬೇಕಾಗಿದೆ. ಈ ಅಡೆತಡೆಗಳ ಬಂಡವಾಳವನ್ನು ಯಜಮಾನ ಅಲ್ಲ, ಸೇವಕ ಎಂಬುದನ್ನು ಎತ್ತಿಹಿಡಿಯಲು ಸವಾಲಾಗಿವೆ. ಇವು ಸಹಕಾರ ಸಂಘಗಳು ಬಂಡವಾಳ

ಕ್ರೋಢೀಕರಿಸಲು ನೂತನ ದಾರಿಗಳು ಮತ್ತು ಸೃಜನ ಶೀಲತೆಯನ್ನು ಸೃಷ್ಟಿಸಿವೆ. ಸಹಕಾರ ಬಂಡವಾಳ ಸೃಷ್ಟಿಯ ಬಗ್ಗೆ ಮೈತ್ರಿಕೂಟದ ಬ್ಲೂರಿಬ್ಬನ್ ಆಯೋಗವು ಇದನ್ನು ಆಳವಾಗಿ ಅಧ್ಯಯನ ನಡೆಸುತ್ತಿದೆ. ಕೈಗಾರಿಕೆ, ಕೃಷಿ, ಅಥವ ಆರ್ಥಿಕ ಸಹಕಾರ ಸಂಘಗಳಿಗೆ ಅತಿ ಹೆಚ್ಚಿನ ಬಂಡವಾಳದ ಅಗತ್ಯತೆ ಇದ್ದು ಅನೇಕ ಶಾಸನ ಬದ್ಧ ವಿಧಿಗಳನ್ನು ಪೂರೈಸಬೇಕಾಗಿದೆ. ಸದಸ್ಯರ ಬಂಡವಾಳ ಮತ್ತು ಸಹಕಾರ ಸಂಘಗಳ ಒಳಗಿನ ಸಾಂಭವ್ಯ ತೊಡುಕುಗಳನ್ನು ಪರಿಗಣಿಸ ಬೇಕಾಗಿರುತ್ತದೆ. ಈ ತತ್ವದ ಸಾರಾಂಶವೆಂದರೆ ಸಹಕಾರ ಅಸ್ಮಿತೆ ಮತ್ತು ಪ್ರಜಾಸತ್ತಾತ್ಮಕ ಅಂಶಗಳಿಗೆ ಧಕ್ಕೆ ಭಾರದಂತೆ ಬಂಡವಾಳ ಕ್ರೋಢೀಕರಣಗೊಳಿಸುವುದೇ ಆಗಿದೆ.

## 2. ಪದಗಳು ಮತ್ತು ಪದಪುಂಜಗಳ ಅರ್ಥೈಸುವಿಕೆ (ವ್ಯಾಖ್ಯಾನ)

"ಸದಸ್ಯರು ಸಂಘದ ಬಂಡವಾಳವನ್ನು ನ್ಯಾಯೋಚಿತವಾಗಿ ತೊಡಗಿಸುತ್ತಾರೆ ಮತ್ತು ಪ್ರಜಾಸತ್ತಾತ್ಮಕ ನಿಯಂತ್ರಣದಿಂದ ನಿಯಂತ್ರಿಸುತ್ತಾರೆ" ಈ ವಾಕ್ಯದಲ್ಲಿ "ಬಂಡವಾಳ" ಎಂದರೆ ಆರ್ಥಿಕತೆಯಿಂದ ಅರ್ಥ ಮಾಡಿಕೊಳ್ಳಬೇಕೆ ವಿನಃ ಲೆಕ್ಕಶಾಸ್ತ್ರದಲ್ಲಿ ಷೇರು ಬಂಡವಾಳಕ್ಕೆ ಹೇಳಿದಂತಲ್ಲ. ಸಹಕಾರ ಸಂಘಗಳಲ್ಲಿನ ಷೇರುಗಳು ಖಾಸಗಿ ಜಂಟಿಸ್ಟಾಕ್ ಕಂಪನಿಗಳಲ್ಲಿ ಹೂಡಿದ ಷೇರುಗಳಾಗಿರುವುದಿಲ್ಲ. ಸದಸ್ಯರು ಹೂಡಿದ ಬಂಡವಾಳವು ಹೂಡಿಕೆ ಬಂಡವಾಳದಂತೆ ಅದಾಯ ತಂದುಕೊಡುವುದಿಲ್ಲ ಆದರೆ ಅದು "ಒಟ್ಟುಗೂಡಿಸಿದ ಬಂಡವಾಳ" ಅದರಿಂದ ಸರಕು ಸೇವೆ ಒದಗಿಸುವುದು ಅಥವ ಸದಸ್ಯರಿಗೆ ಉದ್ಯೋಗ ಸೃಷ್ಟಿ, ನ್ಯಾಯಯುತ ಬೆಲೆಗೆ ನೀಡುವುದಾಗಿದೆ.

"ನ್ಯಾಯಯುತ ತೊಡಗಿಸುವಿಕೆ"/ "ನ್ಯಾಯಯುತ ಕೊಡುಗೆ" ಎಂದರೆ ಸದಸ್ಯರ ಶಕ್ತಿಗನುಸಾರ ಸಹಕಾರ ಸಂಘದ ಅಗತ್ಯತೆಗನುಸಾರ ಯಾವುದೇ ಒಬ್ಬ ನಿಷ್ಪಕ್ಷಪಾತ ನ್ಯಾಯಾದೀಶ ಕಾರಣಯುತ ಮತ್ತು ನ್ಯಾಯಬದ್ಧ ಎಂದು ಹೇಳಬಹುದಾದ ಕೊಡುಗೆ/ತೊಡಗಿಸುವಿಕೆಯಾಗಿರುತ್ತದೆ. ಇದರ ಅರ್ಥ, ಎಲ್ಲ ಸದಸ್ಯರು ಸಮಾನವಾಗಿ ನೀಡುವುದು ಎಂಬುದಲ್ಲ ಮತ್ತು ನೂತನವಾಗಿ ಸದಸ್ಯರಾಗುವವರೂ ಅಷ್ಟೇ ಷೇರು ತೊಡಗಿಸಬೇಕೆಂಬುದಲ್ಲ. ಸಹಕಾರ ಸಂಘಗಳ ವಯಸ್ಸು ಮತ್ತು ಅದರಲ್ಲಿರುವ ಆಸ್ತಿಯನ್ನು ಅವಲಂಭಿಸಿರುತ್ತದೆ. ಷೇರು ಬಂಡವಾಳ ಹೂಡಿಕೆ ಮತ್ತು ಪ್ರಜಾಸತ್ತಾತ್ಮಕ ಹತೋಟಿ (ಎರಡನೇ ತತ್ವ)ಗೂ ಸಂಬಂಧವಿದೆ. ಆದುದರಿಂದ ಸದಸ್ಯರು ಈ ಕೆಳಕಂಡಂತೆ ನಾಲ್ಕು ವಿಧಗಳಲ್ಲಿ ಪಾವತಿಸಬಹುದು.

- ಮೊದಲನೆಯದು ಸದಸ್ಯತ್ವದ ಷೇರು ಮತ್ತು ಅಧಿಕವಾಗಿ ಹೆಚ್ಚುವರಿ ಷೇರುಗಳು (ಮತದಾನದ ಹಕ್ಕುಳ್ಳ ಮತ್ತು ಹಕ್ಕು ಇರದ) ಷೇರಿನ ಮೇಲೆ ಬಡ್ಡಿ ನೀಡಲಾಗುವುದಿಲ್ಲ. ಲಾಭದಲ್ಲಿ ಪರಿಮಿತ ಬಡ್ಡಿ (ಡಿವಿಡೆಂಡ್) ಪಾವತಿಸಲಾಗುವುದು.

- ಎರಡನೆಯದಾಗಿ ಸಹಕಾರ ಸಂಘವು ಅಭಿವೃದ್ಧಿಯಾಗಲು ಸಹಕಾರ ಚಟುವಟಿಕೆಗಳಿಂದ ಗಳಿಸಿದ ಹೆಚ್ಚುವರಿ ಮೊತ್ತದಲ್ಲಿ ಆಪದ್ಧನ ಸೃಷ್ಟಿ ಮಾಡಬೇಕು.

- ಮೂರನೆಯದಾಗಿ, ಸದಸ್ಯರುಗಳಿಸಿದ ಡಿವಿಡೆಂಡ್‌ನ್ನು ಹಿಂತಿರುಗಿ ಸಂಘಕ್ಕೆ ಪಾವತಿಸಿ ಆಪದ್ಧನಕ್ಕೂ ಸೇರಿಸಲಾಗುತ್ತದೆ. ಕೆಲವು ಬಳಕೆದಾರರ, ಸಹಕಾರ ಸಂಘಗಳಲ್ಲಿ ಸದಸ್ಯರಿಗೆ ನೀಡುವ ಧರ ಕಡಿತಗಳನ್ನು ಷೇರು ರೂಪದಲ್ಲಿ ನೀಡಲಾಗುತ್ತಿದೆ.

- ನಾಲ್ಕನೇದಾಗಿ ಹೆಚ್ಚುವರಿ ಷೇರುಗಳನ್ನು ಪಾವತಿಸುವುದು. ಇದರಿಂದ ಮತದಾನ ಹಕ್ಕಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

"ಬಂಡವಾಳದ ಕೆಲವೊಂದು ಭಾಗವಾದರೂ ಸಹಕಾರ ಸಂಘದ ಸಾಮಾನ್ಯ ಬಂಡವಾಳ" ಎಂಬ ವಿವರಣೆ ಸದಸ್ಯರು ಬಂಡವಾಳವನ್ನು ತೊಡಗಿಸಬೇಕಾದ ಅವಶ್ಯಕತೆಯನ್ನು ಗಟ್ಟಿಗೊಳಿಸುತ್ತದೆ. ಸಮಾನವಾಗಿ ಬಂಡವಾಳ ಹೂಡಿಕೆ ಮಾಡುತ್ತಾರೆ. ಸದಸ್ಯರೇ ಬಂಡವಾಳವನ್ನು ನಿಯಂತ್ರಣ ಮಾಡುತ್ತಾರೆ. ಅದನ್ನು ಎರಡು ಪ್ರಮುಖ ವಿಧಾನದಲ್ಲಿ ಮಾಡುತ್ತಾರೆ.

- ಮೊದಲನೆಯದಾಗಿ ಸಂಘವು ಕಾರ್ಯಾಚರಣೆಗೆ ಯಾವ ವಿಧದಲ್ಲಾದರೂ ಬಂಡವಾಳವನ್ನು ಸಂಗ್ರಹಿಸಿದರೂ ಅಂತಿಮ ನಿರ್ದಾರ ಸರ್ವಸದಸ್ಯರ ಸಭೆಯದ್ದಾಗಿರುತ್ತದೆ.

- ಎರಡನೆಯದಾಗಿ, ಸದಸ್ಯರು ಬಂಡವಾಳದ ಅಲ್ಪಭಾಗವನ್ನಾದರೂ ಸಾಮೂಹಿಕ ಒಡೆತನದಲ್ಲಿರಿಸಿಕೊಳ್ಳುವ ಹಕ್ಕು ಉಳ್ಳವರಾಗಿರುತ್ತಾರೆ. ಇದು ಸಹಕಾರ ಸಂಘವಾಗಿ ಅವರು ಒಟ್ಟಾಗಿ ಗಳಿಸಿರುವ ಗಳಿಕೆಯ ದ್ಯೋತಕವಾಗಿರುತ್ತದೆ.

"ಸಹಕಾರ ಸಂಘದ ಸಾಮಾನ್ಯ ಬಂಡವಾಳ (ಆಸ್ತಿ)" ಆರ್ಥಿಕ ಬಂಡವಾಳವನ್ನು ತೋರಿಸುತ್ತದೆ. ಅಂದರೆ ಬಂಡವಾಳದ ಸಾಮಾನ್ಯ ಭಾಗವು, ಹೆಚ್ಚುವರಿ (ಲಾಭದಲ್ಲಿ) ಉಳಿಸಿಕೊಂಡ ಭಾಗವನ್ನು ಹೊಂದಿರುತ್ತದೆ ಅಥವ ಹಿಂದೆ ಸದಸ್ಯರು ಸದಸ್ಯತ್ವಕ್ಕಾಗಿ ಹೂಡಿಕೆ ಮಾಡಿದ ಷೇರು ಮೊತ್ತವಾಗಿರುತ್ತದೆ. ಇದು ಸಂಘದ ಸಾಮಾನ್ಯ ಬಂಡವಾಳ (ಆಸ್ತಿ). ಇದನ್ನು ಸದಸ್ಯರು ಹಿಂಪಡೆಯಲಾಗುವುದಿಲ್ಲ. ಅಂದರೆ ಇದು ಭಾಗಮಾಡತಕ್ಕದ್ದಲ್ಲ.

"ಸದಸ್ಯತ್ವದ ಷರತ್ತಾಗಿ ಹೂಡಿಕೆ ಮಾಡಿದ ಷೇರಿನ ಮೇಲೆ ಪರಿಮಿತ ಪರಿಹಾರ (ಬಡ್ಡಿ (ಡಿವಿಡೆಂಡ್)ವನ್ನು ಸಾಮಾನ್ಯವಾಗಿ ಪಡೆಯುತ್ತಾರೆ". ಸದಸ್ಯರು ಷೇರು ಬಂಡವಾಳವಾಗಿ ಹೂಡಿಕೆ ಮಾಡಿದ ಮೊತ್ತದ ಮೇಲೆ ಸಾಮಾನ್ಯವಾಗಿ ಪರಿಹಾರ (ಬಡ್ಡಿ/ಡಿವಿಡೆಂಡ್) ಏನಾದರೂ ಇದ್ದಲ್ಲಿ (ಘೋಷಣೆಯಾದಲ್ಲಿ) ಪರಿಮಿತ ಬಡ್ಡಿ (ಡಿವಿಡೆಂಡ್) ಪಡೆಯಲಾಗುತ್ತದೆ. "ಸದಸ್ಯತ್ವದ ಷರತ್ತಾಗಿ" ಅಲ್ಲದೆ ಸ್ವಯಂ ಇಚ್ಛೆ ಮೇರೆಗೆ ಮಾಡಿದ ಹೂಡಿಕೆ ಮೇಲೆ "ನ್ಯಾಯಯುತ ಧರ"ದಲ್ಲಿ ಬಡ್ಡಿ ನೀಡಲಾಗುತ್ತದೆ. "ನ್ಯಾಯಯುತ ಧರ"ವು "ಪರಿಹಾರಾತ್ಮಕ"ವಾಗಿ ಮಾತ್ರ ಇರತಕ್ಕದ್ದು. 1934/37ರಲ್ಲಿ ಇದನ್ನು ಪುನರ್ ವಿಮರ್ಷೆಮಾಡುವಾಗ "ಅವಶ್ಯ ನಿಧಿ ಸಂಗ್ರಹಣೆಗಾಗಿ ನೀಡಬಹುದಾದ ಕನಿಷ್ಟ ಧರ" ಎಂದು ವಿವರಿಸಲಾಗಿದೆ. ಹೆಚ್ಚಿನ ಬಡ್ಡಿ ಧರ ನೀಡಿದಾಗ ಸದಸ್ಯರು ಸಂಘವು ಔದ್ಯೋಗಿಕ ಸಂಸ್ಥೆಯಾಗಿ ಬೆಳೆಯುವ ಉದ್ದೇಶ ಹೊರತು ಪಡಿಸಿ ತಮ್ಮ ಬಂಡವಾಳದ ದುಡಿಮೆಗಾಗಿ ಹೂಡಿಕೆ ಮಾಡುವ ಅಪಾಯವಿರುತ್ತದೆ.

"ಸದಸ್ಯರ ಹೆಚ್ಚುವರಿ ಮೊತ್ತವನ್ನು (ನಿವ್ವಳಲಾಭ) ಈ ಮುಂದಿನ ಉದ್ದೇಶಕ್ಕಾಗಿ (ಬಳಸುತ್ತಾರೆ) ವಿನಿಯೋಗಿಸುತ್ತಾರೆ. ಸಹಕಾರ ಸಂಘದ ಅಭಿವೃದ್ಧಿಗಾಗಿ ಆಪದ್ಧನವಾಗಿ ಇರಿಸುವುದು ಇದರ ಒಂದು ಭಾಗವಾದರೂ ಭಾಗಮಾಡತಕ್ಕದ್ದಲ್ಲ ಸದಸ್ಯರು ಸಹಕಾರ ಸಂಘದೊಡನೆ ವ್ಯವಹಾರ ಮಾಡಿದ ಅನುಗುಣವಾಗಿ ಪ್ರತಿಫಲ (ಬೋನಸ್) ಪಡೆಯುತ್ತಾರೆ. ಸದಸ್ಯರು ಒಪ್ಪಿದ ರೀತಿಯಲ್ಲಿ ಇತರೆ ಚಟುವಟಿಕೆಗಳಿಗಾಗಿ ಸಹಾಯ (ಬೆಂಬಲ) ನೀಡುವುದು". ಇದು ಸಹಕಾರ ಸಂಘವು ಹೆಚ್ಚುವರಿಯನ್ನು ಸೃಷ್ಟಿಸಿದಾಗ (ನಿವ್ವಳಲಾಭಗಳಿಸಿದಲ್ಲಿ) ಆ ಮೊತ್ತವನ್ನು ಮೂರು ವಿಧದಲ್ಲಿ ಸಂಘದ ಚಟುವಟಿಕೆಗಾಗಿ ಬಳಸುವುದನ್ನು ತಿಳಿಸುತ್ತದೆ. ಸಂಘವು ಸುದೀರ್ಘವಾಗಿ ಸಶಕ್ತವಾಗಿ ಉಳಿಯಲು ಆಪದ್ಧನ ಸೃಷ್ಟಿ ಮತ್ತು ಉಳಿಕೆ ಮೊತ್ತವನ್ನು ಹೇಗೆ ವಿನಿಯೋಗಿಸಬೇಕೆಂಬುದರ ಬಗ್ಗೆ ಸದಸ್ಯರು ಹಕ್ಕು ಮತ್ತು ಕರ್ತವ್ಯಗಳನ್ನು ಹೊಂದಿರುತ್ತಾರೆ ಎಂಬುದನ್ನು ತಿಳಿಸುತ್ತದೆ.

"ಸಹಕಾರ ಸಂಘದ ಅಭಿವೃದ್ಧಿಗಾಗಿ ಆಪದ್ಧನವಾಗಿ ಇರಿಸುವುದು, ಇದರ ಒಂದು ಭಾಗವನ್ನಾದರೂ ಭಾಗ ಮಾಡತಕ್ಕದ್ದಲ್ಲ". ಅನೇಕ ಸಂಘಗಳು ಅತ್ಯಧಿಕ "ಭಾಗವಾಗಿ ತಮ್ಮ ಗಳಿಕೆಯಲ್ಲಿ ಭಾಗಮಾಡಲಾಗದ ಆಪದ್ಧನ"ವಾಗಿ ಸಾಮೂಹಿಕ ಒಡೆತನದ ಭಾಗವಾಗಿ ಉಳಿಸಿಕೊಂಡು ಬರುತ್ತಿವೆ. ಅನೇಕ ವರ್ಷಗಳ ಹಿಂದೆ ಸ್ಥಾಪಿತವಾದ ಸಂಘಗಳು ಅನೇಕ ಪೀಳಿಗೆಯ ಸದಸ್ಯರುಗಳ ಶ್ರಮದ ಫಲವಾಗಿರುತ್ತದೆ. ಅವರುಗಳ ಗಳಿಕೆಯಾಗಿರುತ್ತದೆ. ಅನೇಕ ಭಾರಿ ಸಹಕಾರ ಸಂಘಗಳಲ್ಲಿ ಇದನ್ನೇ ಒಡೆಯುವ ಪ್ರಯತ್ನಗಳಾಗುತ್ತವೆ. ಆದುದರಿಂದ ಇದರ ರಕ್ಷಣೆಗಾಗಿ, ಇದು "ಒಟ್ಟಾರೆ ಶ್ರಮದ ಫಲದ ಬಂಡವಾಳ"ವಾಗಿರುವುದರಿಂದ ಸಮಾಪನೆಗೆ ಬಂದಾಗಲೂ ಇದರ ರಕ್ಷಣೆಗೆ ಕಾಯ್ದೆಯಾತ್ಮಕವಾಗಿ "ಆಸ್ತಿಗೆ–ಬೀಗ" ಹಾಕುವಂತಹ ಕ್ರಮ ತೆಗೆದುಕೊಳ್ಳಬೇಕು. ಸಹಕಾರ ಸಂಘವು ಸಮಾಪನೆಯಾದಾಗಲೂ ಇದು ಸಾಮಾನ್ಯ ಆಸ್ತಿಯಾದ್ದರಿಂದ ಸದಸ್ಯರಲ್ಲಿ ಹಂಚಿಕೆಯಾಗಬಾರದು. ಈ ಮೊತ್ತವನ್ನು ಇತರೆ ಸಹಕಾರ ಸಂಘಗಳ ಸಹಕಾರ ಚಳುವಳಿ

ಅಭಿವೃದ್ಧಿಗೆ ಉಪಯೋಗಿಸಬೇಕು. "ಭಾಗ ಮಾಡಲಾಗದ ಆಪದ್ಧನ"ದ ವ್ಯಾಖ್ಯೆ ಮತ್ತು ಅರ್ಥ ಇದಾಗಿರುತ್ತದೆ.

## 3. ಮಾರ್ಗದರ್ಶಿ ಟಿಪ್ಪಣಿ

ಸಹಕಾರ ಸಂಘಗಳು ಕೇವಲ ಆರ್ಥಿಕ ಘಟಕಗಳಲ್ಲ ಅದಕ್ಕಿಂತ ಮೀಗಿಲಾದ್ದು. ಅವು ಸಾಮಾಜಿಕ ಮತ್ತು ಸಾಂಸ್ಕೃತಿಕ ಆಕಾಂಕ್ಷೆಗಳನ್ನು ಈಡೇರಿಸುತ್ತವೆ.

ಮೂರನೇ ತತ್ವವು ಸದಸ್ಯರ ಆರ್ಥಿಕ ಪಾಲ್ಗೊಳ್ಳುವಿಕೆಗೆ ಮೀಸಲಿರಿಸಲಾಗಿದೆ/ ಅರ್ಪಿಸಿ ಕೊಳ್ಳಲಾಗಿದೆ. ಏನೇ ಆದರೂ ಈ ತತ್ವವನ್ನು ಪ್ರತ್ಯೇಕವಾಗಿರಿಸಿ, ಸಹಕಾರ ಸಂಘಗಳನ್ನು ಕೇವಲ ಆರ್ಥಿಕ ಆಯಾಮದಲ್ಲಿ ಕಾಣಲಾಗುವುದಿಲ್ಲ. ಈ ಮೂರನೇ ತತ್ವವು ಸಹಕಾರ ಅಸ್ಮಿತೆಯ ಒಂದು ಮುಖ ಅಷ್ಟೆ. ಆದುದರಿಂದ ಈ ತತ್ವವನ್ನು ಸಹಕಾರ ಅಸ್ಮಿತೆ ವ್ಯಾಖ್ಯೆಯ ಇತರೆ ಭಾಗಗಳಾದ ಸಹಕಾರ ಮೌಲ್ಯ ಮತ್ತು ತತ್ವಗಳೊಡನೆ ಒಟ್ಟುಗೂಡಿಸಿ ಪರಿಶೀಲಿಸತಕ್ಕದ್ದು.

ಸಹಕಾರ ಸಂಘದ ಅಸ್ಮಿತೆಯ ಭಾಗವಾಗಿ ಸಹಕಾರ ಸಂಘದ ವ್ಯಾಖ್ಯೆಯಲ್ಲಿ ಮೊದಲಿಗೆ "ಆರ್ಥಿಕ" ಉದ್ದೇಶ ಉಲ್ಲೇಖಿಸಿದ್ದರೂ "ಸಾಮಾಜಿಕ" ಮತ್ತು "ಸಾಂಸ್ಕೃತಿಕ" ಉದ್ದೇಶಗಳನ್ನು ಸರಿಸಮನಾಗಿದೆ ಎಂದೇ ಭಾವಿಸತಕ್ಕದ್ದು. ಆಧುನಿಕ ಸಹಕಾರ ಚಿಂತಕರು ಚಳುವಳಿ ನೇತಾರರು ಸಮಾಜದ ಪರಿವರ್ತನೆಯ ದೃಷ್ಟಿಯಿಂದ ಸಹಕಾರ ಸಂಘಗಳು ಕೇವಲ ಆರ್ಥಿಕ ಆಯಾಮ ಹೊಂದಿರುವುದಿಲ್ಲ ಎಂದು ದೃಷ್ಟಿಕೋನತಳೆದಿದ್ದಾರೆ. ಸಾಮಾಜಿಕ ಮತ್ತು ಸಾಂಸ್ಕೃತಿಯ ಆಯಾಮ ಆರ್ಥಿಕ ಆಯಾಮದೊಡನೆಯೇ ಇರುತ್ತದೆ. ಸಹಕಾರ ಸಂಘದಲ್ಲಿ ಸದಸ್ಯರಾಗಿದ್ದು ಸಹಕಾರ ಸಂಘವನ್ನು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಾಸ್ತವವನ್ನಾಗಿ ಮಾಡಿ ಅದು ಜನರಿಂದ ಜನರಿಗಾಗಿ ಎಂಬ ಬದ್ಧತೆಯನ್ನು ತೋರ್ಪಡಿಸಲಾಗುತ್ತದೆ. ಆದರೆ ಮತ್ತೊಂದು ಆಯಾಮವೆಂದರೆ ಪ್ರಮುಖವಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಉದ್ದೇಶ/ ಚಟುವಟಿಕೆಗಳುಳ್ಳ ಸಹಕಾರ ಸಂಘಗಳು ಇವು ವ್ಯಾಪಾರ ವ್ಯವಹಾರಗಳನ್ನು ನಡೆಸುವುದಿಲ್ಲ. ಈ ಸಹಕಾರ ಸಂಘಗಳಲ್ಲಿ ತನ್ನ ಗುರಿಸಾಧನೆಗಾಗಿ ಆರ್ಥಿಕ ಆಯಾಮವು ಮಾರ್ಗವಷ್ಟೇ ಆಗಿರುತ್ತದೆ.

**ಜಂಟಿ ಮಾಲಿಕತ್ವದ (ಯಜಮಾನಿಕೆಯ) ಮತ್ತು ಪ್ರಜಾಸತ್ತಾತ್ಮಕ ನಿಯಂತ್ರಣ (ಹತೋಟಿ)ವುಳ್ಳ ಔದ್ಯೋಗಿಕ ಸಂಸ್ಥೆ.**

ಸಹಕಾರ ಅಸ್ಮಿತೆಯ ಭಾಗವಾಗಿ ಮೈತ್ರಿ ಸಂಸ್ಥೆಯು ಸಹಕಾರ ಸಂಘವನ್ನು "ಜಂಟಿ ಮಾಲಿಕತ್ವದ ಪ್ರಜಾಸತ್ತಾತ್ಮಕ ನಿಯಂತ್ರಣವುಳ್ಳ ವ್ಯಕ್ತಿಗಳು ಸ್ವಯಂ ಆಗಿ ಒಟ್ಟುಗೂಡಿ ತಮ್ಮ ಆರ್ಥಿಕ ಸಾಮಾಜಿಕ ಮತ್ತುಸಾಂಸ್ಕೃತಿಕ ಅವಶ್ಯಕತೆಗಾಗಿ ರಚಿಸಿಕೊಂಡ ಸಾಯತ್ತ ಸಂಘವಾದ ಔದ್ಯೋಗಿಕ ಸಂಸ್ಥೆ" ಎಂದು ವ್ಯಾಖ್ಯಾನಿಸಿದೆ. ಈ ವ್ಯಾಖ್ಯೆಯೇ ಸಹಕಾರ ಸಂಘದಲ್ಲಿ ಮಾಡಿದ ಹೂಡಿಕೆಗೂ ತನ್ನ ಸ್ವಂತ ಅಥವ ಖಾಸಗಿ ಕಂಪನಿಯಲ್ಲಿ ಹೂಡಿದ ಷೇರು ಬಂಡವಾಳಕ್ಕೂ ಇರುವ ವ್ಯತ್ಯಾಸ/ ಅಂತರ/ ಮೌಲ್ಯವನ್ನು ತೋರಿಸುತ್ತದೆ. ಸದಸ್ಯತ್ವದ ಷೇರು ಸಹಕಾರ ಸಂಘದಲ್ಲಿ ಸದಸ್ಯರ ಅವಶ್ಯಕತೆ ಆಕಾಂಕ್ಷೆಗಳ ಈಡೇರಿಕೆಗಾಗಿ ವ್ಯವಹಾರದಲ್ಲಿ ತೊಡಗಿಸಿರುವ ಸಾಮಾನ್ಯ ಬಂಡವಾಳವಾಗಿದೆ. ಇದು ಮಾರಾಟಮಾಡಬಹುದಾದ ಆಸ್ತಿಯಲ್ಲ. ಹೂಡಿಕೆಯ ಖಾಸಗಿ ಕಂಪನಿಯ ಷೇರು (ಈಕ್ವಿಟಿ) ಗಿಂತ ಸಹಕಾರ ಸಂಘದ ಷೇರು ವಿಭಿನ್ನವಾಗಿದೆ. ಖಾಸಗಿ ಕಂಪನಿಯಲ್ಲಿ ಹೂಡಿಕೆದಾರನಿಗೆ ಆದಾಯ ತರುವುದಾಗಿದೆ ಮತ್ತು ಖರೀದಿ ಮಾರಾಟ ಮಾಡಬಹುದಾಗಿದೆ. ಆದರೆ ಸಹಕಾರದ ಷೇರು ಈ ರೀತಿಯದಲ್ಲ.

**ಸದಸ್ಯರ ಪಾವತಿಸಿದ ಷೇರು ಬಂಡವಾಳದ ಮೌಲ್ಯ ಸತ್ಯವಾದ "ಸ್ವ–ಸಹಾಯ"**

ರಾಕ್‌ಡೇಲ್ ಈಕ್ವಿಟಬಲ್ ಅಗ್ರಗಾಮಿಗಳ 1844ರ ನಿಯಮಗಳಲ್ಲಿ ರಾಕ್‌ಡೇಲ್ ಅಗ್ರಗಾಮಿಗಳು " ಮೊದಲು ಕಾಯ್ದೆ"ಯಲ್ಲಿ ಹೀಗೆ ಹೇಳಿದ್ದರು. "ಈ ಮುಂದಿನ ಯೋಜನೆಗಳು ಮತ್ತು ವ್ಯವಸ್ಥೆಗಳನ್ನು ಆಚರಣೆಗೆ ತರಲು, ಉದ್ದೇಶಗಳು ಮತ್ತು ಯೋಜನೆಗಳನ್ನು ತರಲು ಸದಸ್ಯರ ಹಣಕಾಸಿನ ಲಾಭಕ್ಕಾಗಿ ಮತ್ತು ಅವರ ಸಾಮಾಜಿಕ ಮತ್ತು ಗೃಹಕೃತ್ಯದ

ಮಟ್ಟವನ್ನು ಉನ್ನತೀಕರಿಸಲು ಪೌಂಡ್ ಒಂದು ರಂತೆ ಸಾಕಷ್ಟು ಮೊತ್ತವನ್ನು ಷೇರು ಬಂಡವಾಳವಾಗಿ ಸಂಗ್ರಹಿಸುವುದು".

1860ಕ್ಕೆ ರಾಕ್‌ಡೇಲ್ ಅಗ್ರಗಾಮಿಗಳು ಅವರು ಅವರ ಸಹಕಾರ ಸಂಘದ "ನೀತಿ ನಿಯಮಗಳು"ಲ್ಲಿ "ಬಂಡವಾಳವು ಅವರ ಸ್ವಂತ ಹೂಡಿಕೆಯಾಗಿರಬೇಕು_____" ಎಂಬ ಬದ್ಧತೆಯನ್ನು ತೋರಿದ್ದರು.

ಕೈಗಾರಿಕಾ ಕ್ರಾಂತಿಯ ಆರಂಭ 1844ರಲ್ಲಿ ಪ್ರತಿ ಸದಸ್ಯ ಪೌಂಡ್ ಒಂದು ಹೂಡಿಕೆ ಮಾಡಲು ಒಂದು ವರ್ಷದ ಉಳಿತಾಯ ಅಥವ ಒಂದೂವರೆ ವಾರದ ನೈಪುಣ್ಯತೆ ಉಳ್ಳ ಕೆಲಸಗಾರನ ಆಧಾಯ ಅದಾಗಿತ್ತು. ಕೆಲವು ಸಂಘಗಳಲ್ಲಿ ನಾಮ ಮಾತ್ರ ಮೊತ್ತವನ್ನು ಮತದಾನದ ಹಕ್ಕುಳ್ಳ ಸದಸ್ಯರನ್ನಾಗಿಸುತ್ತದೆ. ಇದು ಪ್ರಮುಖ ಸಹಕಾರ ಮೌಲ್ಯಗಳಾದ ಸ್ವ–ಸಹಾಯ ಮತ್ತು ಸ್ವಯಂ ಜವಾಬ್ದಾರಿಯನ್ನು ಅನುಸರಣೆ ಮಾಡಿದಂತಾಗುವುದಿಲ್ಲ ಮತ್ತು ಸದಸ್ಯತ್ವವನ್ನು ಅಪಮೌಲ್ಯಗೊಳಿಸಿದಂತಾಗುತ್ತದೆ.

ಯಾವ ಸಹಕಾರ ಸಂಘವು ಅತಿಯಾಗಿ ಬಾಹ್ಯ ಮೂಲಗಳನ್ನು ಬಂಡವಾಳಕ್ಕಾಗಿ ಅವಲಂಭಿಸುತ್ತವೆಯೋ ಅವು 4ನೇ ತತ್ವವಾದ "ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ" ವನ್ನು ಉಲ್ಲಂಘನೆ ಮಾಡಿದಂತಾಗುತ್ತದೆ. ಮತ್ತು ಹೂಡಿಕೆದಾರರು ಅಥವ ವಾಣಿಜ್ಯ ಸಾಲಗಾರರು ವಿಧಿಸುವ ಷರತ್ತುಗಳನ್ನು ಪಾಲಿಸಿ ಸ್ವಾಯತ್ತತೆ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ನಿಯಂತ್ರಣವನ್ನು ಕಳೆದುಕೊಂಡಂತಾಗುತ್ತದೆ.

ಸದಸ್ಯರು ತಮ್ಮ ಹೂಡಿಕೆ ಮತ್ತು ಬಾಹ್ಯ ಹೂಡಿಕೆಯನ್ನು ಎಚ್ಚಕೆಯಿಂದ ಗಮನಿಸಬೇಕು. ಇತರರ ಮೇಲಿನ ಅವಲಂಭನೆಯಿಂದ ಸ್ವಾತಂತ್ರ್ಯ, ಸ್ವಾಯತ್ತತೆ, ಪ್ರಜಾಸತ್ತಾತ್ಮಕ ನಿಯಂತ್ರಣ ಕಳೆದುಕೊಳ್ಳುವುದಲ್ಲದೇ ಅವರ ವ್ಯಾಪಾರ ನಿರ್ಧಾರಗಳು ಹೂಡಿಕೆಯ ಷರತ್ತುಗಳನ್ನು ಪಾಲಿಸಬೇಕಾಗುತ್ತದೆ.

**ಸದಸ್ಯರ ಬಂಡವಾಳ**

ಸದಸ್ಯರ ಬಂಡವಾಳವು ಎರಡು ರೀತಿಯ (ದ್ವಿಮುಖ) ಕರ್ತವ್ಯ ನಿರ್ವಹಿಸುತ್ತದೆ; ಸದಸ್ಯರಿಗೆ ಮತದಾನದ ಹಕ್ಕು ಒದಗಿಸುತ್ತದೆ ಮತ್ತು ವ್ಯವಹಾರಕ್ಕೆ ಅಗತ್ಯ ದುಡಿಯುವ ಬಂಡವಾಳವನ್ನು ಒದಗಿಸುತ್ತದೆ. ಇದರಿಂದಾಗಿ ಸಂಘದ ಸೇವೆ ಬಯಸುವ ಸದಸ್ಯರ ಕನಿಷ್ಟ ಷೇರು ಬಂಡವಾಳವು ಸದಸ್ಯರ ಶಕ್ತಿಗನುಸಾರ ವಾಗಿರಬೇಕು. ಅದು ಸದಸ್ಯತ್ವಕ್ಕೆ ಅಡ್ಡಿಯಾಗಬಾರದು. ಅತ್ಯಂತ ಹೆಚ್ಚಿಗೆ/ಅಧಿಕವಾಗಿ ನಿಗದಿಪಡಿಸಿದರೆ ಮೊದಲ ತತ್ವವಾದ ಮುಕ್ತ ಸದಸ್ಯತ್ವವನ್ನು ಉಲ್ಲಂಘಿಸಿದಂತಾಗುತ್ತದೆ. ತುಂಬಾ ಕಡಿಮೆ ನಿಗದಿ ಪಡಿಸಿದಲ್ಲಿ ಸದಸ್ಯತ್ವಕ್ಕಾಗಿ ಹೂಡಿಕೆಯನ್ನು ಅಪಮೌಲ್ಯಗೊಳಿಸಿದಂತಾಗುತ್ತದೆ. ಬಂಡವಾಳ ಮೂಲವಾಗಿ ಸದಸ್ಯರ ಶಕ್ತತೆಯನ್ನು ಕಡೆಗಣಿಸಿದಂತಾಗುತ್ತದೆ. ಕೆಲವು ಸಂಘಗಳಲ್ಲಿ ಸೇವೆ ಉದ್ದೇಶವಾಗಿದ್ದು ಷೇರು ಬಂಡವಾಳ ಸಂಗ್ರಹಿಸದೆ ಸದಸ್ಯತ್ವದ ಹಕ್ಕನ್ನು ನೀಡುತ್ತವೆ.

ಕನಿಷ್ಟ ಒಂದು ಷೇರು ಅಥವ ಸರ್ವಸದಸ್ಯರ ಸಭೆಯಲ್ಲಿ ತೀರ್ಮಾನಿಸಿದಂತೆ ಕನಿಷ್ಟ ಷೇರುಗಳನ್ನು ನಿಗದಿ ಪಡಿಸುವ ಉದ್ದೇಶ ಎಲ್ಲ ಸದಸ್ಯರೂ ಮತದಾನ ಹಕ್ಕು ಪಡೆಯಲಿ ಎಂಬುದಾಗಿರುತ್ತದೆ.

ಸಹಕಾರ ಸಂಘಗಳು ಇತರೆ ವ್ಯಾಪಾರಿ ಸಂಸ್ಥೆಗಳಂತೆ ವ್ಯವಹಾರ ನಡೆಸಲು ಅಭಿವೃದ್ಧಿಗೊಳಿಸಲು ಬಂಡವಾಳದ ಅಗತ್ಯತೆ ಇದೆ. ಇದನ್ನು ಸದಸ್ಯರಿಂದಲೇ ಪಡೆಯುವುದನ್ನು ಉತ್ತೇಜಿಸಬೇಕು. ಆದರೆ ಅದರಿಂದ ಗಳಿಕೆಯು ಆದಷ್ಟು ಕನಿಷ್ಟ ವಾಗಿರಬೇಕು ಎಂದು ಬಯಸತಕ್ಕದ್ದು, ಮತದಾನದ ಹಕ್ಕಿಗೆ ಸೀಮಿತಗೊಳಿಸುವುದು ಉತ್ತಮ. ಹಣದುಬ್ಬರದಿಂದ ಅದರ ಮೌಲ್ಯ ಕಳೆದುಕೊಳ್ಳುತ್ತದೆ, ಅಷ್ಟಾದರೂ ಆಧಾಯಗಳಿಸುವಿಕೆ ಇದ್ದಲ್ಲಿ ಅದು ನ್ಯಾಯಯುತವಾಗುತ್ತದೆ. ಇದಕ್ಕೆ ಮೀರಿ ಆಶಿಸಿದಾಗ ಸಂಘದ ಬೆಳವಣಿಗೆ ಅಭಿವೃದ್ಧಿ ಕುಂಟಿತಗೊಳ್ಳುತ್ತದೆ.

ಏನೇ ಆದರೂ ಸದಸ್ಯ ಷೇರು ಬಂಡವಾಳ ಒಂದೇ ಸಂಘದ ಬಂಡವಾಳವಾಗುವುದಿಲ್ಲ. ಬೇರೆಡೆಯಿಂದ ಬಂಡವಾಳ

ಮೂಲವನ್ನು ಅರಸಬೇಕಾಗುತ್ತದೆ. ಹೆಚ್ಚಿನ ಮತದಾನದ ಹಕ್ಕಿಲ್ಲದೇ ಶಕ್ತರಿಂದ ಹೆಚ್ಚುವರಿ ಷೇರು ಬಂಡವಾಳವನ್ನು ಸಂಗ್ರಹಿಸಬಹುದು. ಯಾವುದೇ ಹೆಚ್ಚುವರಿ ನಿಯಂತ್ರಣಕ್ಕೆ ಅವಕಾಶವಿಲ್ಲದಂತೆ ನ್ಯಾಯಯುತ ಪರಿಹಾರ ಬಡ್ಡಿ (ಡಿವಿಡೆಂಡ್)ನೊಡನೆ "ಮತದಾನದ ಹಕ್ಕಿಲ್ಲದ ಷೇರು" ಗಳಾಗಿ ಸದಸ್ಯರಿಂದ ಪಡಯಬಹುದು. ಇದು ಸದಸ್ಯರಿಗೆ ನೀಡಿದ ಆಕರ್ಷಣೀಯ ಹೂಡಿಕೆ ಅವಕಾಶ ವಾಗುತ್ತದೆ.

ಯಾವುದು ನ್ಯಾಯಯುತ ಧರ ಎಂದರೆ ಸಾಮಾನ್ಯ ಸಭೆಯಲ್ಲಿ ನಿರ್ಧರಿಸುವ ಧರ ಅದು "ಮಾರುಕಟ್ಟೆ ಧರ ಅಥವ ಪರಿಹಾರ ಧರ" ವಾಗಿರುತ್ತದೆ. ಆರ್ಥಿಕ ಮಾರುಕಟ್ಟೆಗನುಸಾರ ನಿರ್ಧಾರ ಕೈಗೊಳ್ಳುವುದು. ಕೆಲವು ರಾಷ್ಟ್ರಗಳಲ್ಲಿ ಶಾಸನ ಬದ್ಧವಾಗಿ ನಿಯಂತ್ರಕರು ನಿರ್ಧರಿಸುತ್ತಾರೆ. ಮೂಲವಾಗಿ "ಅವಶ್ಯ ನಿಧಿ ಸಂಗ್ರಹಣೆಗೆ ನೀಡಬಹುದಾದ ಕನಿಷ್ಟ ಧರವೇ" ಆಗಿರುತ್ತದೆ.

ಸದಸ್ಯರು ತನ್ನ ಹೆಚ್ಚುವರಿ ಷೇರು ಬಂಡವಾಳವನ್ನು ಅದರ ಮೇಲಿನ ಪರಿಮಿತ ಪರಿಹಾರವನ್ನು ಸಾಮಾನ್ಯ ಸಭೆಯ ಅನುಮೋದನೆ ಇಲ್ಲದೆ ಹಿಂದಕ್ಕೆ ಪಡೆಯಬಹುದಾಗಿದೆ. ಆದರೆ ಮೂಲಭೂತ ವ್ಯವಹಾರಕ್ಕೆ ಯಾವುದೇ ಧಕ್ಕೆಯಾಗಬಾರದು. ಹೆಚ್ಚುವರಿ ಷೇರು ಹಿಂಪಡೆಯುವ ಮುನ್ನ ಸದಸ್ಯರು ಸಂಘಕ್ಕೆ ಕಾಲಾವಕಾಶ ನೀಡತಕ್ಕದ್ದು. ಕಾಲಾವಕಾಶದ ಅವಧಿಯನ್ನು ಸಾಮಾನ್ಯ ಸಭೆಯೇ ನಿರ್ಧರಿಸುವುದು.

**ಸಾಂಸ್ಥಿಕ ಸದಸ್ಯರು**

ಉತ್ತಮ ವ್ಯವಹಾರಿಕ ಕಾರಣಗಳಿಗಾಗಿ ಪ್ರಾಥಮಿಕ ಸಂಘಗಳಲ್ಲಿ ವಿವಿಧ ದರ್ಜೆಗೆ ಅವಕಾಶ ನೀಡಿ ಸಹಕಾರ ಸಂಘಗಳಿಗೆ, ಪರಸ್ಪರ ಸಂಘಗಳಿಗೆ, ಬಂಡವಾಳ ಹೂಡಲು ಅವಕಾಶ ನೀಡಲಾಗುತ್ತಿದೆ. ರಾಷ್ಟ್ರೀಯ, ಪ್ರಾಂತೀಯ ಅಥವ ಸ್ಥಳೀಯ ಪ್ರಾಧಿಕಾರಗಳಿಗೂ ಕೆಲವು ಸಹಕಾರ ಸಂಘಗಳಲ್ಲಿ ಅವಕಾಶ ನೀಡಲಾಗುತ್ತಿದೆ ಮತ್ತು ಸದಸ್ಯರನ್ನಾಗಿ ಮಾಡಿಕೊಳ್ಳಲಾಗುತ್ತಿದೆ. ಅದಕ್ಕೆ ಅವರದೇ ಆದ ದೃಡಕಾರಣಗಳಿವೆ.

**ಸದಸ್ಯರ ಬಂಡವಾಳ ಮತ್ತು ವ್ಯಕ್ತಿಗತ ಜವಾಬ್ದಾರಿ**

ಕೆಲವು ರಾಷ್ಟ್ರಗಳಲ್ಲಿ ಸಹಕಾರ ಸಂಘಗಳ ನಷ್ಟಗಳಿಗೆ ಸದಸ್ಯರನ್ನು ಹೊಣೆಗಾರರಾಗಿ ಪರಿಗಣಿಸಲಾಗುತ್ತದೆ. ವೈಯುಕ್ತಿಕ ಜವಾಬ್ದಾರಿಯನ್ನು ಹೊರ ಬೇಕಾಗುತ್ತದೆ. ಈ ದೇಶಗಳಲ್ಲಿ ಸಹಕಾರ ಸಂಘಗಳಿಗೆ ಸಾಲ ಪಡೆಯುವುದಕ್ಕೂ ಯಾವುದೇ ಮಿತಿ ಇರುವುದಿಲ್ಲ. ಸದಸ್ಯರ ಜವಾಬ್ದಾರಿ ಅನಿಯಮಿತವಾದಲ್ಲಿ ಮೂಲ ಷೇರು ಬಂಡವಾಳವನ್ನು ಹೆಚ್ಚಳಗೊಳಿಸಬೇಕಾಗುತ್ತದೆ. ಹೆಚ್ಚುವರಿ ಷೇರುಬಂಡವಾಳ ವನ್ನು ಸಂಗ್ರಹಿಸಬೇಕಾಗುತ್ತದೆ. ಸದಸ್ಯರ ಸಂಖ್ಯೆಯನ್ನು ಅಧಿಕಗೊಳಿಸಬೇಕಾಗುತ್ತದೆ.

ಇತರೆ ರಾಷ್ಟ್ರಗಳಲ್ಲಿ ಕಾಯ್ದೆ ಪ್ರಕಾರ ಅಥವ ಒಪ್ಪಂದದ ಪ್ರಕಾರ ಸದಸ್ಯರು ಹೂಡಿದ ಷೇರು ಬಂಡವಾಳಕ್ಕೆ ಮಾತ್ರ ಅವರ ಜವಾಬ್ದಾರಿ ಸೀಮಿತವಾಗಿರುತ್ತದೆ. ಅಥವ ಇತರೆ ಬಂಡವಾಳ ಹೂಡಿದ್ದರೂ ಹೊಣೆಗಾರಿಕೆ ಅಷ್ಟಕ್ಕೆ ಸೀಮಿತವಾಗಿರುತ್ತದೆ. ಆಯಾ ರಾಷ್ಟ್ರಗಳ ಕಾಯ್ದೆ ಅಥವ ನಿಯಂತ್ರಿತರ ನಿಯಮಗಳಿಗೆ ಸಹಕಾರ ಸಂಘಗಳು ಪಾಲಿಸಬೇಕಾಗಿರುತ್ತದೆ. ಖಾಸಗಿ ಕಂಪನಿಗಳಿಗೆ ಹೇಗೆ ಲಾಭಯುಕ್ತವಾಗಿ ಕಾಯ್ದೆ ಇದೆಯೋ ಅದೇ ರೀತಿ ಸಹಕಾರ ಸಂಘಗಳಿಗೂ ಕಾಯ್ದೆ ಇರುವಂತೆ ನೋಡಿ ಕೊಳ್ಳುವುದು ಸಹಕಾರ ಸಂಘಗಳ ಜವಾಬ್ದಾರಿಯಾಗುತ್ತದೆ.

ವೈಯಕ್ತಿಕ ಜವಾಬ್ದಾರಿ ನಿಯಮವು ಬಹುಮುಖ್ಯವಾಗುತ್ತದೆ ಏಕೆಂದರೆ ಸಾಲ ನೀಡುವ ಸಂಸ್ಥೆಗಳು ಸದಸ್ಯರ ಜವಾಬ್ದಾರಿ ಅನುಸರಿಸಿ ಸಹಕಾರ ಸಂಘದ ವ್ಯವಹಾರವನ್ನು ಕಡೆಗಣಿಸಬಾರದು.

**ಬಂಡವಾಳವು ಸಹಕಾರ ಸಂಘದ ಸಾಮಾನ್ಯ ಆಸ್ತಿ**

ಸಹಕಾರ ಸಂಘದ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸಬೇಕೆಂದರೆ ಸಹಕಾರ ಸಂಘವು ಯಾವುದೇ ದೂರು ಅನುಮಾನಗಳಿಗೆ ಆಸ್ಪದ ನೀಡದೆ ಪೀಳಿಗೆಯಿಂದ ಪೀಳಿಗೆಗೆ ದೂರದೃಷ್ಟಿಯಿಂದ ನಿಧಿಗಳನ್ನು, ಸಂಪನ್ಮೂಲಗಳನ್ನು ಸೃಷ್ಟಿಮಾಡುವ ಅಗತ್ಯತೆ ಇದೆ. ಅಯಾ ವರ್ಷಗಳಲ್ಲಿನ ಸದಸ್ಯರು ಅವರ ಗಳಿಕೆ ಮೇಲೆ ಹೆಚ್ಚು ಫಲ ಪಡೆಯಬಹುದಾಗಿದ್ದರೂ "ಹೂಡಿಕೆ ಮೇಲೆ ಪರಿಮಿತ ಆಧಾಯ" ಎಂಬ ತತ್ವದ ಆಧಾರದ ಮೇರೆಗೆ ಕ್ರೋಢೀಕರಿಸಿ ಉಳಿಸಿರುತ್ತಾರೆ. ಅಲ್ಲದೇ ಯಾವುದೇ ಮುನ್ಸೂಚನೆ ನೀಡದೆ ಬಂಡವಾಳ ಹಿಂಪಡೆಯುವುದಿಲ್ಲ ಎಂಬುದನ್ನು ಒಪ್ಪಿರುತ್ತಾರೆ. ಹೀಗೆ ಬಂಡವಾಳದ ಅಲ್ಪ ಅಂಶ ಎಲ್ಲ ಸದಸ್ಯರಿಗೆ ಸೇರಿದ ಸಾಮಾನ್ಯ ಬಂಡವಾಳ ಮತ್ತು ಭವಿಷ್ಯದಲ್ಲಿ ಸದಸ್ಯರಾಗುವವರದೂ ಆಗಿದೆ ಎಂಬುದನ್ನು ಒಪ್ಪಲಾಗಿದೆ. ಸಹಕಾರ ಸಂಘದ ಹಿತಾಸಕ್ತಿ ಕಾಪಾಡಲು ಅಲ್ಪ ಮೊತ್ತವನ್ನು ಅವಿಭಾಜ್ಯ ನಿಧಿ ಎಂದು ಪರಿಗಣಿಸಲಾಗಿದೆ.

ಸಂಘದ ಆರ್ಥಿಕ ಸದೃಡತೆ ದೃಷ್ಟಿಯಿಂದ ಸದಸ್ಯರು ಬಂಡವಾಳವನ್ನು ಹಿಂತೆಗೆಯಲಾಗುವುದಿಲ್ಲ. ಕೇವಲ ಅದರ ಮೇಲಿನ ಗಳಿಕೆಯನ್ನು ಮಾತ್ರ ಪಡೆಯುತ್ತಾರೆ. ಅದರಲ್ಲಿಯೂ ಅದು ಸಾಮಾನ್ಯ ಸಭೆಯ ನಿರ್ಧಾರಕ್ಕೆ ಒಳಪಟ್ಟಿರುತ್ತದೆ.

ಅನೇಕ ಪೀಳಿಗೆಗಳಿಂದ ಕ್ರೋಢೀಕರಣಗೊಂಡಿರುವುದರಿಂದ ಈ ನಿಧಿ (ಅಪದ್ಧನ ನಿಧಿ) ಯನ್ನು ಯಾವುದೇ ಕಾರಣಕ್ಕೆ ಒಂದು ಪೀಳಿಗೆಯವರು ಅದನ್ನು ಬಳಸುವುದು ನ್ಯಾಯ ಸಮ್ಮತವಲ್ಲ.

ಸಹಕಾರ ಸಂಘದಲ್ಲಿ ಹಿಂಪಡೆಯಲಾಗದ ಷೇರು ಬಂಡವಾಳ ಮತ್ತು ವಿಭಾಗ ಮಾಡಲಾಗದ ಆಪದ್ಧನ ನಿಧಿ ಸದಸ್ಯರ ಸಾಮಾನ್ಯ ಸಂಪತ್ತು. ಸಹಕಾರ ಸಂಘವು ಒಟ್ಟಾರೆಯಾಗಿ ಅದನ್ನು ಹೊಂದಿರುತ್ತದೆ. ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಹರಿಯುವುದರಿಂದ ಹಾಲಿ ಪೀಳಿಗೆಯವರು ರೋಮ್ ದೇಶದ ಕಾಯ್ದೆ (ಠಣಜಿಡಿಣಛಿಣ) ಯಂತೆ ಹಾಲಿ ಪೀಳಿಗೆಗೆ ಆದರಿಂದ ಫಲವನ್ನು ಮಾತ್ರ ಪಡಯುವ ಹಕ್ಕನ್ನು ಹೊಂದಿರುತ್ತಾರೆ ವಿನಃ ಅದನ್ನು ಬಳಸುವ ಹಕ್ಕು ಹೊಂದಿರುವುದಿಲ್ಲ. ಆದುದರಿಂದ ಅವರು ಅದನ್ನು ಸ್ವಹಿತಾಸಕ್ತಿಗಾಗಲಿ ಅಥವ ಸ್ವಂತಕ್ಕಾಗಿ ಬಳಸುವಂತಿಲ್ಲ.

**ಸಹಕಾರ ಸಂಘವು ಸಮಾಪನೆಯಾದಾಗಲೂ ಆಪದ್ಧನ ನಿಧಿಯನ್ನು ಹಂಚುವಂತಿಲ್ಲ.**

ಸಹಕಾರ ಸಂಘದ ಚಾಲ್ತಿ ಸದಸ್ಯರು ಚಾಲ್ತಿ ಪಾಲುದಾರರು ಮತ್ತು ಅವರು ಅದರ ಸೇವೆಯನ್ನು ಪಡೆಯುತ್ತಿರುತ್ತಾರೆ. ಹಿಂದಿನ ಹಾಲಿ ಮತ್ತು ಮುಂದಿನ ಪೀಳಿಗೆಗೆ ಸೇರಿದ ಆಪದ್ಧನ ನಿಧಿಯ ಪಾಲಕ, ಪೋಷಕರಾಗಿರುತ್ತಾರೆ. ವಿನಃ ಅವರು ಅದನ್ನು ಬಳಸುವಂತಿಲ್ಲ. ಮುಂದಿನ ಪೀಳಿಗೆಗೂ ಸಮುದಾಯಕ್ಕೂ ಸಂಘದ ಸೇವೆ ದೊರೆಯುವಂತೆ ನೋಡಿಕೊಳ್ಳುವುದು ಇವರ ಜವಾಬ್ದಾರಿಯಾಗಿರುತ್ತದೆ. ಇದರಿಂದ ಆರ್ಥಿಕ ಸಂಕಷ್ಟ ಕಾಲಗಳಲ್ಲಿಯೂ ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯಾಚರಣೆ ಮಾಡಿರುವುದಕ್ಕೆ ಅನೇಕ ಸಾಕ್ಷಿ ಪುರಾವೆಗಳಿವೆ. ಏನೇ ಆದರೂ ಅನೇಕ ಸಂದರ್ಭಗಳಲ್ಲಿ ಸಹಕಾರ ಸಂಘಗಳು ಬದಲಾದ ಪರಿಸರದಲ್ಲಿ ಅವಸಾನಗೊಂಡು ಸಮಾಪನೆ ಹಂತ ತಲುಪಿರುತ್ತದೆ ಅಥವ ಸದಸ್ಯರಿಗೆ ತಮ್ಮ ಸಂಘವನ್ನು ಸಮಾಪನೆಗೊಳಿಸಲು ನಿರ್ಣಯಿಸಲು ಹಕ್ಕು ಹೊಂದಿರುತ್ತಾರೆ. ವ್ಯವಹಾರಗಳು ಅವಸಾನಗೊಂಡ ನಂತರ ಆಸ್ತಿಗಳನ್ನು ಮಾರಾಟ ಮಾಡಿ ಜವಾಬ್ದಾರಿಗಳನ್ನು ತೀರಿಸಲಾಗುತ್ತದೆ. ಆದರೆ ಆಪದ್ಧನವನ್ನು ಸದಸ್ಯರಲ್ಲಿ ಹಂಚುವಂತಿಲ್ಲ. ಹಂಚಿಕೊಳ್ಳುವ ಪದ್ಧತಿ ರೂಢಿತಂದಲ್ಲಿ ಹೆಚ್ಚು ಹೆಚ್ಚು ಸಹಕಾರ ಸಂಘಗಳು ಸಮಾಪನೆಗೆ ಒಳಪಡುವ ಆತಂಕ ಎದುರಾಗುತ್ತದೆ. ಹಿಂದಿನ ಪೀಳಿಗೆಯವರ ಶ್ರಮದ ಫಲವನ್ನು ಈಗಿನವರು ಅನುಭವಿಸಲಾಗದು ಅನೇಕ ರಾಷ್ಟ್ರಗಳಲ್ಲಿ ಇದಕ್ಕೆ "ಬೀಗ ಹಾಕಿದ ಆಸ್ತಿ"ಯಾಗಿ ಶಾಸನ ಬದ್ಧವಾಗಿ ಪರಿಗಣಿಸಲಾಗಿದೆ. ಇದರಿಂದಾಗಿ ಇದನ್ನು ಹಂಚಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಇದನ್ನು ಇತರೆ ಸಹಕಾರ ಸಂಘಕ್ಕೆ ಅಥವ ಧರ್ಮಾರ್ತ ಸಂಸ್ಥೆಗೆ ವರ್ಗಾಯಿಸಬೇಕು. ಈ ರೀತಿಯ ಕಾಯ್ದೆ ಇಲ್ಲದ ರಾಷ್ಟ್ರಗಳಲ್ಲಿ ತಮ್ಮ ನಿಯಮ ಮತ್ತು ಉಪವಿಧಿ/ನಿಯಮ (ಬೈಲಾ)ಗಳಲ್ಲಿ ಈ ರೀತಿಯ ಅವಕಾಶವನ್ನು ಮಾಡಲಾಗಿದೆ. ಇದನ್ನು ಎಲ್ಲರೂ ಉತ್ತೇಜಿಸಬೇಕು. ಸಮಾಪನೆ ನಂತರ ಹೆಚ್ಚುವರಿ ಉಳಿಕೆ ಮೊತ್ತವನ್ನು ಇತರೆ ಸಹಕಾರ

ಔದ್ಯೋಮಿಕ ಸಂಸ್ಥೆಗಾಗಲಿ ಸಮುದಾಯದ ಒಳಿತಿಗಾಗಿ ಶ್ರಮಿಸುತ್ತಿರುವ ಧರ್ಮಾರ್ಥ ಸಂಸ್ಥೆಗೆ ವರ್ಗಾಯಿಸುವುದು: ತತ್ವ, ಹಿಂದಿನ ಪೀಳಿಗೆ ಸದಸ್ಯರ ಶ್ರಮದ ಫಲದ ಮೊತ್ತವನ್ನು ಹಾಲಿ ಸದಸ್ಯರು ಬಳಸುವಂತಿಲ್ಲ ಎಂಬುದೇ ಇದರ ಹಿಂದಿನ ನೈತಿಕ ತತ್ವವಾಗಿರುತ್ತದೆ. ಹಾಲಿ ಸದಸ್ಯರು ತಮ್ಮ ಸ್ವಂತಕ್ಕೆ ಬಳಸುವ ಹಕ್ಕು ಹೊಂದಿರುವುದಿಲ್ಲ.

ಷೇರು ಬಂಡವಾಳ ಮತ್ತು ನಿಧಿಗಳು ಸದಸ್ಯರ ಸಾಮಾನ್ಯ ಆಸ್ತಿ (ಸಂಪತ್ತು) ಆಗಿರುವುದರಿಂದ ಸಹಕಾರ ಸಂಘಗಳಲ್ಲಿ ಅದನ್ನು ಲೆಕ್ಕಗಳಲ್ಲಿ ತೋರ್ಪಡಿಸುವ ವಿಧಾನ:

ಷೇರು ಬಂಡವಾಳವು ಬಂಡವಾಳ (ಈಕ್ವಿಟಿ) ಹೊರತರುವ ಸಾಲದಲ್ಲಿ ಆದುದರಿಂದ ಅದನ್ನು ಹಿಂತಿರುಗಿಸಲಾಗುವುದಿಲ್ಲ. ಸಹಕಾರ ಸಂಘದ ನಿರಂತರ ವ್ಯವಹಾರದಲ್ಲಿ ಅದನ್ನು ತೊಡಗಿಸಿರುವುದರಿಂದ ಅದು ಸ್ವಂತ ಬಂಡವಾಳವಾಗಿದ್ದು ವ್ಯವಹಾರಕ್ಕೆ ಖಾತ್ರಿಯಾಗಿರುತ್ತದೆ. ಅದು ಯಾವುದೇ ಕಾರಣಕ್ಕೆ ಪತ್ತು ಆಗಿರುವುದಿಲ್ಲ. ಜವಾಬ್ದಾರಿ ಅಲ್ಲ (ಜವಾಬ್ದಾರಿ ಎಡೆ ತೋರಿಸಲಾಗಿರುತ್ತದೆ.) ಇದರೊಡನೆ ಅವಿಭಾಜ್ಯ ನಿಧಿಗಳು ಮತ್ತು ಆಪದ್ಧನ ನಿಧಿ ಸ್ವಂತ ಬಂಡವಾಳವಾಗಿರುತ್ತದೆ. ಯಾವುದೇ ಕಾರಣಕ್ಕೆ ಯಾವುದೇ ಸಂದರ್ಭದಲ್ಲಿ ಇದನ್ನು ಹಿತೆಗೆಯಲಾಗುವುದಿಲ್ಲ ಸದಸ್ಯರಲ್ಲಿ ಹಂಚಿಕೆ ಮಾಡಲಾಗುವುದಿಲ್ಲ. ಸಹಕಾರ ಬ್ಯಾಂಕ್‌ಗಳಲ್ಲಿ ಅದರಿಂದ ಇದನ್ನು (tier 1 equity capital) ಮೊದಲ ಹಂತದ ಸ್ವಂತ ಬಂಡವಾಳವೆಂದು ಪರಿಗಣಿಸಲಾಗುವುದು. ಕೇಂದ್ರ ಬ್ಯಾಂಕ್‌ಗಳಲ್ಲಿ "ತೂಕಸಹಿತ ಆಸ್ತಿಗೆ ಅಗತ್ಯತೆಗನುಗುಣವಾದ ಬಂಡವಾಳ ಅನುಪಾತ" ವಾಗಿ ಪರಿಗಣಿತವಾಗುತ್ತದೆ. (capital adequacy Ratio and risk weighted asset capital to risk weighted asset ratio CRAR).

ರಾಕ್‌ಡೇಲ್ ಅಗ್ರಗಾಮಿಗಳು ತಮ್ಮ ಪ್ರಥಮ ಪುಸ್ತಕಗಳಲ್ಲಿಯೇ ಇದನ್ನು ಹಿಂತಿರುಗಿಸಲಾಗದ ಬಂಡವಾಳವಾಗಿ ಸಾಲವಲ್ಲವೆಂದು ತೋರಿಸಿರುತ್ತಾರೆ. ಇದರಿಂದ ನಿರಂತರ ವ್ಯವಹಾರಕ್ಕೆ ಅನುವು ಮಾಡಿಕೊಡಲಾಗಿದೆ. ಅವರು ಡಿವಿಡೆಂಡ್ (ಲಾಭಾಂಶ) ವನ್ನು ತೆಗೆದುಕೊಳ್ಳದೆ ಬಂಡವಾಳದಲ್ಲಿ ತೊಡಗಿಸಿದರು ಎಂಬುದು ಅವರ ಲೆಕ್ಕಪತ್ರ ಗಳಿಂದ ತಿಳಿದುಬರುತ್ತದೆ. ರಾಕ್‌ಡೇಲ್ ಅಗ್ರಗಾಮಿಗಳ ಸಹಕಾರ ಸಂಘದ ಯಶಸ್ಸಿಗೆ ಕಾರಣ ಅವರು ಬಂಡವಾಳಕ್ಕಾಗಿ ಇತರರನ್ನು ಅವಲಂಬಿಸದೇ ಇದ್ದುದೇ ಕಾರಣವಾಗಿರುತ್ತದೆ.

**ಇತರೆ ಬಂಡವಾಳದ ಮೂಲಗಳು**

ಸಹಕಾರ ಸಂಘಗಳು ಅಧಿಕ ವ್ಯವಹಾರ ನಡೆಸಲು ಇತರರ ಬಂಡವಾಳ ಅವಲಂಬಿಸದೇ ಇರಲಾಗದು. ಆದರೆ ಇತರರಿಂದ ಬಂಡವಾಳ ಪಡೆಯಲಾಗಿ ಅವರುಗಳ ಹಿಡಿತಕ್ಕೆ ಸಂಘ ಸಿಲುಕಬಾರದು. ವ್ಯವಹಾರ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಪ್ರಜಾಸತ್ತಾತ್ಮಕ ಆಡಳಿತ ನಿಯಂತ್ರಣ ವ್ಯವಸ್ಥೆಗೆ ಧಕ್ಕೆಬಾರದಂತೆ ನೋಡಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಇತರೆ ಬಂಡವಾಳದ ಅವಲಂಭನೆಯ ಆಧ್ಯತೆ ಕೆಳಕಂಡಂತಿರಬೇಕು.

ಮೊದಲು – ಸಹಕಾರ ಸಂಘದ ಸದಸ್ಯರ ಬಂಡವಾಳ.

ಎರಡನೆ – ಇತರೆ ಸಹಕಾರ ಸಂಘಗಳು ಮತ್ತು ಸಹಕಾರ ಆರ್ಥಿಕ ಸಂಸ್ಥೆಗಳು.

ಮೂರನೆ – ಸಾಮಾಜಿಕ ಬಾಂಡ್‌ಗಳು ಮತ್ತು ಸಾಮಾಜಿಕ ಹೂಡಿಕೆದಾರರು.

ನಾಲ್ಕನೆ – ವಾಣಿಜ್ಯ ಲೇವಾದೇವಿಗಾರರು– ಆರ್ಥಿಕ ಮಾರುಕಟ್ಟೆಯಿಂದ.

**ಸಹಕಾರ ಸಂಘದ ಆರ್ಥಿಕ ಚಟುವಟಿಕೆಯಲ್ಲಿ ಬಂಡವಾಳ (ಮೌಲ್ಯವರ್ಧಿತ – ಈಕ್ವಿಟಿ) ನ್ಯಾಯಪರತೆ**

ಸಹಕಾರ ಮೌಲ್ಯಗಳು ಸಹಕಾರ ಸಂಘದ ಎಲ್ಲ ಚಟುವಟಿಕೆಗಳಿಗೂ ಅನ್ವಯವಾಗುತ್ತದೆ. ಮೂರನೇ ತತ್ವದಲ್ಲಿ

ಅಡಕವಾದ ಬಂಡವಾಳ (ಮೌಲ್ಯವರ್ಧಿತ – ಈಕ್ವಿಟಿ) ಎಲ್ಲ ಆರ್ಥಿಕ ಚಟುವಟಿಕೆ ಮತ್ತು ವ್ಯಾಪಾರ ವ್ಯವಹಾರಗಳಿಗೂ ಇದು ಅನ್ವಯವಾಗುತ್ತದೆ. ಎಲ್ಲ ಸದ್ಯರನ್ನೂ ಸಮಾನರಾಗಿ ಕಾಣಬೇಕು. ಸದಸ್ಯರಲ್ಲದವ ರೊಡನೆ, ಸಾರ್ವಜನಿಕರೊಡನೆ ವ್ಯವಹಾರವು ನೈತಿಕವಾಗಿರಬೇಕು. ಶೋಷಣೆಮಾಡ ಬಾರದು. ಸದಸ್ಯರು ಸದಸ್ಯರಾಗಿರುವುದರಿಂದ ಕೆಲವು ಸವಲತ್ತುಗಳನ್ನು ಪಡೆಯುತ್ತಾರೆ.

**ಹೆಚ್ಚುವರಿ ಮೊತ್ತ (ಲಾಭ)ವನ್ನು ಉಪಯೋಗಿಸುವುದು**

ಸಹಕಾರ ಸಂಘದ ವ್ಯವಹಾರದಲ್ಲಿ "ಹೆಚ್ಚುವರಿ ಉಳಿಕೆ" ಎಂದು ಪರಿಗಣಿಸ ಬೇಕೇ ಹೊರತು "ಲಾಭ"ವಾಗಿ ಅಲ್ಲ. ಸದಸ್ಯರು ಸದಸ್ಯರ ನಡುವೆ ಈ ಮೊತ್ತವನ್ನು ಹಂಚಿಕೊಳ್ಳುವ ಬದಲಿಗೆ ಆಪದ್ಧನವನ್ನು ಸೃಷ್ಟಿಸಬೇಕು. ಇದರಿಂದ ಸದಸ್ಯರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅವಶ್ಯಕತೆ ಆಕಾಂಕ್ಷೆಗಳನ್ನು ಹೇಗೆ ಈಡೇರಿಸಿಕೊಳ್ಳಬೇಕು ಎಂಬುದನ್ನು ಸದಸ್ಯರೇ ನಿರ್ಧರಿಸಬೇಕು. ಮೂರನೇ ತತ್ವವು ಈ ಕೆಳಕಂಡಂತೆ ಆಯ್ಕೆಗಳನ್ನು ಸದಸ್ಯರ ಮುಂದಿರಿಸುತ್ತದೆ.

- ಸಹಕಾರ ಸಂಘವನ್ನು ಅಭಿವೃದ್ಧಿಗೊಳಿಸಲು ಆರ್ಥಿಕವಾಗಿ ಸದೃಢಗೊಳಿಸಲು
- ಮಾನವ ಸಂಪನ್ಮೂಲ ಮತ್ತು ಬೌಧಿಕ ಮೂಲ ಸೌಕರ್ಯಗಳನ್ನು ಆಧುನಿಕಗೊಳಿಸಲು, ಅಭಿವೃದ್ಧಿಗೊಳಿಸಲು
- ವಿನೂತನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ವೈವಿದ್ಯಮಯಗೊಳಿಸಲು
- ಸದಸ್ಯರಿಗೆ ಲಾಭಾಂಶ (ಡಿವಿಡೆಂಡ್) ಹಂಚಲು
- ಸದಸ್ಯರ, ಸಮುದಾಯದ ಒಳಿತಿಗಾಗಿ ಸದಸ್ಯರ ನಿರ್ಧಾರದಂತೆ ಅಗತ್ಯ ಚಟುವಟಿಕೆಗಳಿಗೆ.

ಒಟ್ಟಾರೆ ಸಹಕಾರ ಚಳುವಳಿಯ ಬೆಳವಣಿಗೆಗೆ ಪ್ರೋತ್ಸಾಹದಾಯಕವಾಗಿ, ಪೂರಕವಾಗಿರಬೇಕು. ಮೂರನೇ ತತ್ವವು ಏಳನೇ ತತ್ವವಾದ ಸಾಮಾಜಿಕ ಕಳಕಳಿಗೆ ಪೂರಕವಾಗಿ ಕಾರ್ಯನಿರ್ವಹಿಸಬೇಕು

ಸಂಘದ ಆಸ್ತಿಗಳನ್ನು ಮಾರಾಟ ಮಾಡುವಾಗ ಅತಿ ಎಚ್ಚರಿಕೆಯಿಂದ ವರ್ತಿಸಬೇಕು ಇದರ ಮಾರಾಟದಿಂದ ಬಂದ ಹೆಚ್ಚಳವನ್ನು ಲಾಭ ಎಂದು ಪರಿಗಣಿಸಿ (ಆಪದ್ಧನ ನಿಧಿಗೆ ಸೇರಿಸುವುದು) ಹಂಚಿಕೆ ಮಾಡಬಾರದು.

ಆಪದ್ಧನ ನಿಧಿಗೆ ಪಾವತಿ, ಅಲ್ಪವನ್ನಾದರು ಭಾಗಮಾಡುವಂತಿಲ್ಲ

ಗಳಿಸಿದ ಲಾಭವನ್ನು ದುಡಿಯುವ ಬಂಡವಾಳ ಸಾಮರ್ಥ್ಯವಾಗಿ ಎಲ್ಲ ರಾಷ್ಟ್ರಗಳಲ್ಲಿಯೂ ಪರಿಗಣಿಸಲಾಗಿದೆ. ಅದು ಸಾಲ ಅಲ್ಲ. ಆಪದ್ಧನ ಹೆಚ್ಚಳ ನೀತಿಯನ್ನು ಪ್ರತಿ ಸಹಕಾರ ಸಂಘವು ರಚಿಸಿ ಅಳವಡಿಸಿಕೊಳ್ಳುವುದು ಒಳ್ಳೆಯದು. ನೀತಿಯಲ್ಲಿ ಬದಲಾವಣೆ ಅವಶ್ಯಕತೆ ಕಂಡುಬಂದಲ್ಲಿ ಸಾಮಾನ್ಯ ಸಭೆಯಲ್ಲಿ ನಿರ್ಧರಿಸುವುದು.

ಡಿವಿಡೆಂಡ್ ಪಾವತಿ

ಡಿವಿಡೆಂಡ್ (ಲಾಭಾಂಶ) ನಿರ್ಧಾರವನ್ನು ಸಾಮಾನ್ಯ ಸಭೆಯಲ್ಲಿ ಕೈಗೊಳ್ಳಬೇಕು. ಇದು ವಾರ್ಷಿಕ ಅಂತಿಮ ಲೆಕ್ಕಗಳನ್ನು ಅವಲಂಭಿಸಿರಬೇಕು.

**ಲಾಭಾಂಶ (ಡಿವಿಡೆಂಡ್) ನ್ನು**

- ನಗದು ರೂಪದಲ್ಲಿ
- ಸೇವೆ ಅಥವ ಸಾಮಗ್ರಿ ಖರೀದಿಯಲ್ಲಿ ರಿಯಾಯಿತಿ ರೂಪದಲ್ಲಿ

- ಹೆಚ್ಚುವರಿ ಷೇರು ಬಂಡವಾಳ (ಮತದಾನದ ಹಕ್ಕಿಲ್ಲದ ಬಂಡವಾಳ)ವಾಗಿ ಸದಸ್ಯರಿಗೆ ಪಾವತಿಸಬಹುದಾಗಿದೆ.

## 4. ಭವಿಷ್ಯದಲ್ಲಿ ಪರಿಗಣಿಸಬೇಕಾದ ವಿಷಯಗಳು

ಸಾರ್ವಜನಿಕ ಪ್ರಾಧಿಕಾರಗಳಿಗೆ ಸದಸ್ಯತ್ವ ನೀಡುವುದು.

ಸಾರ್ವಜನಿಕ ಸೇವೆ ಒದಗಿಸುತ್ತಿರುವ ಸಹಕಾರ ಸಂಘಗಳು ಸೇವೆ ದೃಷ್ಟಿಯಿಂದ ಮತ್ತು ಬಂಡವಾಳ ಪಡೆಯುವ ದೃಷ್ಟಿಯಿಂದ ಅವರಿಗೆ ಸದಸ್ಯತ್ವ ನೀಡಬಹುದು. ಅದಕ್ಕೆ ಪ್ರತ್ಯೇಕ ಷೇರು ಮೊತ್ತ ನಿಗದಿ ಮಾಡಿ ಪ್ರತ್ಯೇಕವಾಗಿರಿಸುವುದು ಉತ್ತಮ. ಸಹಕಾರ ಸಂಘದ ಸ್ವಾಯತ್ತತೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕು.

**ಸ್ಥಳೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ತೆರಿಗೆ ವಿಷಯದಲ್ಲಿ ತನ್ನ ಸ್ಥಾನ ನಿಗದಿಗೊಳಿಸುವುದು.**

ಸಹಕಾರ ಸಂಘಗಳು ಸಮುದಾಯದ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತವೆ. ಸಾಮಾಜಿಕ ಮತ್ತು ಆರ್ಥಿಕವಾಗಿ ತನ್ನ ಸದಸ್ಯರಿಗೆ ಒದಗಿಸುತ್ತದೆ. ಸರ್ಕಾರಗಳು ಸಹಕಾರ ಸಂಘಗಳನ್ನು ಪ್ರತ್ಯೇಕವಾಗಿ ಗಣನೆಗೆ ತೆಗೆದುಕೊಳ್ಳಬೇಕು. ಅವುಗಳನ್ನು ಬೇರೆಯದೇ ಆದ ರೀತಿಯಲ್ಲಿ ಪರಿಗಣಿಸಬೇಕು.

**ಸಹಕಾರ ಸಂಘಗಳಲ್ಲಿ ಖಾಸಗಿ ಬಂಡವಾಳ ಹೂಡಿಕೆ.**

ಅತ್ಯಂತ ಪ್ರತಿಷ್ಠಿತ ಮತ್ತು ಬೃಹತ್ ಸಹಕಾರ ಸಂಘಗಳಲ್ಲಿ ಖಾಸಗಿ ಹೂಡಿಕೆದಾರರಿಂದ ಬಂಡವಾಳ ಆಕರ್ಷಿಸುತ್ತಿವೆ. ಒಂದು ರೀತಿಯ ಮಿಶ್ರತಳಿ ಸಹಕಾರ ಸಂಘಗಳಾಗಿ ರೂಪುಗೊಳ್ಳುತ್ತಿವೆ. ತನ್ನ ಪ್ರಜಾಸತ್ತಾತ್ಮಕ ಸ್ವರೂಪವನ್ನು ಉಳಿಸಿಕೊಂಡು ಖಾಸಗಿ ಬಂಡವಾಳವನ್ನು ಆಕರ್ಷಿಸುವುದು ಒಂದು ಸವಾಲೇ ಸರಿ ಆದರೆ ಅಸಾಧ್ಯವಾದುದಲ್ಲ.

**ಸಹಕಾರ ಸಂಘಗಳು ವಾಣಿಜ್ಯ ವ್ಯವಹಾರಗಳ ಯಜಮಾನರಾಗಿರುವುದು.**

ಯಶಸ್ವಿ ಸಹಕಾರ ಸಂಘಗಳು ವಾಣಿಜ್ಯ ವ್ಯವಹಾರ ನಡೆಸುತ್ತಿದ್ದ ಖಾಸಗಿ ಕಂಪನಿಗಳನ್ನು ವಹಿಸಿಕೊಂಡು ವ್ಯವಹಾರ ನಡೆಸುತ್ತಿವೆ. ಇದರಿಂದ ಲಾಭಗಳಿಸಿ ಸದಸ್ಯರಿಗೆ ಲಾಭ ಪಡೆಯಲು ಸಾದ್ಯವಾಗುತ್ತಿದೆ.

**ಸದಸ್ಯರ ಷೇರು ಬಂಡವಾಳ ಮತ್ತು ಆಪದ್ಧನ ಲೆಕ್ಕದಲ್ಲಿ ಅಳವಡಿಸುವ ರೀತಿ**

ಅಂತರ ರಾಷ್ಟ್ರೀಯ ಮಟ್ಟದಲ್ಲಿ ಇವೆರಡನ್ನು ಹಿಂತಿರುಗಿಸಲಾಗದ ಮತ್ತು ಭಾಗಮಾಡಲಾಗದ ಆಪದ್ಧನನಿಧಿ ಎಂದು ಪರಿಗಣಿಸಲಾಗುತ್ತಿದೆ. ಲೆಕ್ಕ ನಿರ್ವಹಣೆಯಲ್ಲಿ/ಪದ್ಧತಿಯಲ್ಲೂ ವಿಶ್ವಾದ್ಯಂತ ಒಂದೇ ರೀತಿಯನ್ನು ಅನುಸರಿಸುವುದು ಉತ್ತಮ.

**ನಿಯಂತ್ರಕರ ಅವಶ್ಯಕತೆಗಳನ್ನು ಪೂರೈಕೆ ಮಾಡಬೇಕಾದ ಸವಾಲು**

ಖಾಸಗಿ ಕಂಪನಿಗಳಿಗೂ ಸಹಕಾರ ಸಂಘಗಳಿಗೂ ಇರುವ ವ್ಯತ್ಯಾಸಗಳನ್ನರಿಯದೇ ನಿಯಂತ್ರಣ ಸಂಸ್ಥೆಗಳು ಮತ್ತು ಸರ್ಕಾರಗಳು ಅರಿಯದೇ ಇರುವುದು ವಿಪರ್ಯಾಸ. ಅವುಗಳು ಸಹಕರಿಸಿದಲ್ಲಿ ಆರ್ಥಿಕ, ಸಾಮಾಜಿಕ ಪರಿವರ್ತನೆ ಸಹಕಾರದಿಂದ ಸಾಧ್ಯ.

# 4ನೇ (ನಾಲ್ಕನೇ) ತತ್ವ

# ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ

ಸಹಕಾರ ಸಂಘಗಳು ಸದಸ್ಯರ ನಿಯಂತ್ರಿತ ಸ್ವಾಯುತ್ತ ಸ್ವ–ಸಹಾಯ ಸಂಸ್ಥೆಗಳು. ಅವರು ಇತರೆ ಸಂಸ್ಥೆಗಳೊಡನೆ (ಸರ್ಕಾರವೂ ಒಳಗೊಂಡಂತೆ) ಒಪ್ಪಂದ ಮಾಡಿಕೊಂಡರೆ ಅಥವ ಭಾಹ್ಯಮೂಲ ಗಳಿಂದ ಬಂಡವಾಳ ತಂದರೆ ಸದಸ್ಯರ ಪ್ರಜಾಸತ್ತಾತ್ಮಕ ನಿಯಂತ್ರಣ (ಹತೋಟಿ)ಗೆ ಧಕ್ಕೆ ಬಾರದ ಷರತ್ತಿನ ಮೇರೆಗೆ ಮತ್ತು ಸಹಕಾರ ಸಂಘದ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳಲಾಗುತ್ತದೆ.

## 1. ಪರಿಚಯ:

1995ರಲ್ಲಿ ಸಹಕಾರ ತತ್ವಗಳನ್ನು ಪುನರ್ ರೂಪಿಸಿದಾಗ ಈ ನಾಲ್ಕನೇ ತತ್ವ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಸೇರಿಸಲಾಯಿತು. ಸಹಕಾರ ಸಂಘಗಳು ಮತ್ತು ಸಾಲ ನೀಡುವ ವಾಣಿಜ್ಯ ಸಂಸ್ಥೆ ಸರಬರಾಜುದಾರರು ಮತ್ತು ಮೌಲ್ಯ ಸರಪಳಿಯಲ್ಲಿನ ಪ್ರಬಲರು ಹಾಗೂ ಪ್ರಥಮವಾಗಿ ಸಹಕಾರ ಸಂಘಗಳು ಮತ್ತು ರಾಷ್ಟ್ರೀಯ ಸರ್ಕಾರಗಳು ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳು ಹೊಂದಬೇಕಾದ ಸಂಬಂಧಗಳ ಬಗ್ಗೆ ಕೇಂದ್ರೀಕರಿಸಲಾಗಿದೆ.

1995ರ ಮೊದಲಿಗೆ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಿರಲಿಲ್ಲ. ಏಕೆಂದರೆ ಅದು ಸಹಕಾರ ಅಸ್ಮಿತೆಯ ಅವಿಭಾಜ್ಯ ಅಂಗವಾಗಿತ್ತು. ಈ ನಾಲ್ಕನೇ ತತ್ವ ಮತ್ತು ಸಹಕಾರ ಸಂಘದ ವ್ಯಾಖ್ಯೆ ಸಹಕಾರ ಸಂಘದ ಪ್ರಮುಖ ಗುಣವಾಗಿ ಎತ್ತಿ ತೋರಿಸುತ್ತದೆ.

19ನೇ ಶತಮಾನದಲ್ಲಿ ಸಹಕಾರ ಸಂಘಗಳು ಸಮಗ್ರ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವುಳ್ಳ ಸಹಕಾರ ಮೌಲ್ಯಗಳಾದ ಸ್ವ–ಸಹಾಯ. ಸ್ವಯಂ–ಜವಾಬ್ದಾರಿ ಮತ್ತು ಪ್ರಜಾಪ್ರಭುತ್ವಗಳನ್ನು ಪಾಲಿಸಿದುದರಿಂದಲೇ ಸ್ಥಿರ ಔದ್ಯೋಗಿಕ ಸಂಸ್ಥೆಗಳಾಗಿ ರೂಪಗೊಳ್ಳಲು ಕಾರಣವಾಯಿತು.

ಹಲವು ರಾಷ್ಟ್ರಗಳಲ್ಲಿ ಆರಂಭಿಕ ಸಹಕಾರಿಗಳು ಆವೇಶಭರಿತ ಚರ್ಚೆಗಳ ಮೂಲಕ ನ್ಯಾಯಯುತ ಸಮಾಜ ನಿರ್ಮಾಣಕ್ಕಾಗಿ ನೂತನ ಚಿಂತನೆಗಳ ಮೂಲಕ ಅವಿಷ್ಕಾರಗಳಲ್ಲಿ ತೊಡಗಿಸಿಕೊಂಡರು. ಆ ಸಮಯದಲ್ಲಿದ್ದ ಕಡುಬಡತನದಿಂದ ಜನರನ್ನು ಮೇಲೆತ್ತುವ ಉದ್ದೇಶ ಹೊಂದಿದ್ದರು. ಈ ಉದ್ದೇಶಕ್ಕಾಗಿ ಸರ್ಕಾರ ವನ್ನಾಗಲಿ, ಸಂಪತ್ತು ಹೊಂದಿದ್ದ ಸಶಕ್ತರಾದ ಸಿರಿವಂತರನ್ನಾಗಲಿ ಅವಲಂಬಿ ಸುವುದರಲ್ಲಿ ಅರ್ಥವಿಲ್ಲ. ನ್ಯಾಯಯುತ ಆರ್ಥಿಕ ವಿಶ್ವ ನಿರ್ಮಾಣಕ್ಕಾಗಿ ಬಡವರಾದ ತಾವು ತಮ್ಮಲ್ಲೇ ಮೂಲಭೂತವಾಗಿ ಬದಲಾವಣೆಯಾಗಬೇಕು. ಇದು ತಾವು ಒಟ್ಟಿಗೆ ಕಾರ್ಯನಿರ್ವಹಿಸಿದರೆ ಮತ್ತು ಸ್ವ–ಸಹಾಯ ಮತ್ತು ಸ್ವಯಂ–ಜವಾಬ್ದಾರಿಯಿಂದ ಇತರರೊಡನೆ ಸಹಕರಿಸಿ ನಡೆದರೆ ಮಾತ್ರ ಸಾದ್ಯ ಎಂಬದನ್ನು ಆರಂಭಿಕ ಸಹಕಾರಿಗಳು ನಿರ್ಣಯಿಸಿದರು.

ಆರಂಭಿಕ ಸಹಕಾರಿಗಳು ಸರ್ಕಾರದ ಆರ್ಥಿಕ ಸಹಾಯವಾಗಲಿ ಅಥವ ಶಾಸನದ ಬೆಂಬಲವಿಲ್ಲದೆ ಯಶಸ್ಸುಕಂಡರು. ಏನೇ ಆದರೂ ವಿಶ್ವದ ಎಲ್ಲ ಭಾಗಗಳಲ್ಲಿ ಈ ಅಗ್ರಗಾಮಿಗಳಂತೆ ಸರ್ಕಾರಗಳೊಡನೆ ಸಂಬಂಧಗಳಿಂದ ತೊಂದರೆಗೀಡಾಗಿದ್ದಾರೆ. ಸರ್ಕಾರಗಳು ತಾವು ರಚಿಸಿರುವ ಕಾಯ್ದೆ ಕಾನೂನು ಕಟ್ಟುಪಾಡುಗಳೊಳಗೆ ಸಹಕಾರ ಸಂಘಗಳು ಕಾರ್ಯನಿರ್ವಹಿಸಬೇಕಾಗಿದೆ. ತೆರಿಗೆ, ಆರ್ಥಿಕ ಮತ್ತು ಸಾಮಾಜಿಕೆ ನೀತಿಗಳಲ್ಲಿ ಸರ್ಕಾರಗಳ ಸಹಾಯಕವಾಗಿರಬಹುದು ಅಥವ ಮಾರಕವಾಗಿರಬಹುದು. ಈ ಕಾರಣಕ್ಕಾಗಿ ಸಹಕಾರ ಸಂಘಗಳು ಮುಕ್ತ ಸ್ಪಷ್ಟವಾದ ಮತ್ತು ರಚನಾತ್ಮಕ ಸಂಬಂಧಗಳನ್ನು ಸರ್ಕಾರದೊಡನೆ ಹೊಂದಿರ ಬೇಕಾಗುತ್ತದೆ.

1980ರ ವಿಶ್ವ ಮುಕ್ತ ಮಾರುಕಟ್ಟೆ ಪರಿಣಾಮವಾಗಿ ಬಹತೇಕ ರಾಷ್ಟ್ರಗಳಲ್ಲಿ ಸಂಪತ್ತು ಮತ್ತು ಆಧಾಯದಲ್ಲಿ ಅತೀವ ಅಸಮಾನತೆ ಉಂಟಾಗಿದೆ. ಇದರಿಂದಾಗಿ ಸಾಮಾಜಿಕ ಬೆದರಿಕೆ ಮತ್ತು ಪ್ರಜಾಪ್ರಭುತ್ವದ ಅಡಿಪಾಯಕ್ಕೆ ತೊಂದರೆಯಾಗಿದೆ. ಸಂಪತ್ತು ಸಮನಾಗಿ ಹಂಚಿಕೆ ಹಾಗೂ ಹೆಚ್ಚಿನ ಮಾನವೀಯ ಸಮಾಜದ ಹುಡುಕಾಟ ಮತ್ತು ಅದನ್ನು ಗಳಿಸುವ ಬಗೆ ವಿಶ್ವದ ಅತಿ ದೊಡ್ಡ ಇಂದಿನ ಸವಾಲಾಗಿದೆ.

ಪ್ರಸಕ್ತ ಆರ್ಥಿಕ ಪರಿಸ್ಥಿತಿಯಲ್ಲಿ ಖಾಸಗಿ ಬಂಡವಾಳ ಶಾಹಿಗೆ ಹೆಚ್ಚಿನ ಮಹತ್ವ ದೊರೆಯುತ್ತದೆ. ಕಾಯ್ದೆಯಾತ್ಮಕ ಆರ್ಥಿಕ, ತೆರಿಗೆ ನೀತಿಗಳು ನಿಯಂತ್ರಣಾತ್ಮಕ ಕಟ್ಟುಪಾಡುಗಳು ಈ ವ್ಯವಸ್ಥೆಗೆ ಬೆಂಬಲವಾಗಿ ನಿಂತಿವೆ. ಇವುಗಳನ್ನು ಎದುರಿಸುವುದೇ ನೂತನ ಮತ್ತು ಹಾಲಿ ಇರುವ ಸಹಕಾರ ಸಂಘಗಳದ್ದಾಗಿದೆ.

1980ರ ಈಚಿನ ಅತಿ ವೇಗದ ಜಾಗತೀಕರಣ ಕೆಲವೇ ಕೈಗಳ, ಸಂಪತ್ತುಳ್ಳ ಸಣ್ಣ ಪ್ರತಿಷ್ಟಿತ ವ್ಯಕ್ತಿಗಳು, ಸಂಪತ್ತು ನಿಧಿಗಳು ಖಾಸಗಿ ಬ್ಯಾಂಕ್‌ಗಳ ಹಿಡಿತದಲ್ಲಿ ಆರ್ಥಿಕ ಶಕ್ತಿ ಕೇಂದ್ರೀಕೃತವಾಗುತ್ತಿದೆ. ಈ ಶಕ್ತಿ ಮತ್ತು ಇದರೊಡನೆ ಜಾಗತಿಕ ಔದ್ಯೋಗಿಕ ಸಂಸ್ಥೆಗಳು ಸಹಕಾರ ಸಂಘಗಳ ಸರಬರಾಜುದಾರರು ಅಥವ ಬಳಕೆದಾರರಾಗಿದ್ದು ಸಹಕಾರ ಸಂಘಗಳಿಗೆ ನೂತನ ರೀತಿಯ ಸವಾಲನ್ನು ಒಡ್ಡುತ್ತಿವೆ. ಒಂದೇ ಖಾಸಗಿ ಕಂಪನಿಯೊಡನೆ ವ್ಯವಹಾರ ಮಾಡುತ್ತಿರುವ ಸಹಕಾರ ಸಂಘವು ಸ್ವಾತಂತ್ರ ಮತ್ತು ಸಮಾನತೆಗೆ ಹೆಚ್ಚಿನ ತೊಡಕನ್ನು ಎದುರಿಸುತ್ತಿದೆ.

ಬಿಸನೆಸ್ ಶಾಲೆಗಳಲ್ಲಿ, ವಿಶ್ವವಿದ್ಯಾಲಯದ ಆರ್ಥಿಕ ಶಾಲೆಗಳಲ್ಲಿ ಆರ್ಥಿಕ ವಿಷಯದ ಪಠ್ಯಪುಸ್ತಕಗಳಲ್ಲಿ ಸಹಕಾರ ಸಂಘಗಳ ಬಗ್ಗೆ ಅತಿ ಕಡಿಮೆಯಾಗಿ (ನಾಮಕಾವಸ್ಥೆ) ಕೇವಲ ನಮೂದಿಸಿರುತ್ತಾರೆ ವಿನಃ ಖಾಸಗಿ ಬಂಡವಾಳ ಹೂಡಿಕೆ ಮಾದರಿಯನ್ನೇ ಪ್ರಬಲವಾಗಿ ಭೋದಿಸಲಾಗುತ್ತದೆ. ಏನೆ ಇದ್ದರೂ ಸರ್ಕಾರಗಳಿಗೆ ಅಂತರ ಸರ್ಕಾರ ಸಂಸ್ಥೆಗಳು ಉದಾ: ವಿಶ್ವ ಸಂಸ್ಥೆ (UN) ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ(ILO), ಆಹಾರ ಮತ್ತು ಕೃಷಿ ಸಂಸ್ಥೆ(FAO)ಗಳು ಬಡವರ ಜೀವನ ಮಟ್ಟವನ್ನು ಮೇಲೆತ್ತುವ ಅಸಮಾನತೆಯನ್ನು ಹೋಗಲಾಡಿಸುವ ಶಕ್ತಿಯನ್ನು ಸಹಕಾರ ಸಂಘಗಳು ಹೊಂದಿವೆ ಎಂಬುದನ್ನು ಪ್ರತಿಪಾದಿಸುತ್ತವೆ. ಮಿಗಿಲಾಗಿ ಅನೇಕ ರಾಷ್ಟ್ರಗಳಲ್ಲಿ ಗ್ರಾಹಕರಿಗೆ ಮಾರುಕಟ್ಟೆಯಲ್ಲಿ ಉತ್ತಮ ಸ್ಪರ್ದೆ ನೀಡುವ ಪಾತ್ರ ನಿರ್ವಹಿಸುತ್ತಿವೆ ಎಂಬ ಅಭಿಪ್ರಾಯವಿದೆ.

2001ರ ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಠರಾವು 56/114 ಸಾಮಾಜಿಕ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ ಗುರುತಿಸಿ ಸಹಕಾರ ಸಂಘಗಳ ಅಭಿವೃದ್ಧಿಗೆ ಅವಶ್ಯ ಪರಿಸರ ನಿರ್ಮಾಣದ ಬಗ್ಗೆ ವಿಶ್ವಸಂಸ್ಥೆ ಮಾರ್ಗದರ್ಶಿ ಸೂತ್ರಗಳನ್ನು ನೀಡಿದೆ. ಅಲ್ಲದೆ ಐ.ಎಲ್.ಓ 2002ರ ಶಿಫಾರಸ್ಸಿನಲ್ಲಿ ಬಡತನ ನಿರ್ಮೂಲನೆ. ಅಸಮಾನತೆ ಹೋಗಲಾಡಿಸುವಲ್ಲಿ ಸಹಕಾರ ಸಂಘದ ಪ್ರಾಮುಖ್ಯತೆಯನ್ನು ತಿಳಿಸಿದೆ. 'ಸುಸ್ಥಿರ ಅಭಿವೃದ್ಧಿ ಗುರಿಗಳು' ನ್ನು ಸಾಧಿಸುವಲ್ಲಿ ಸಹಕಾರ ಸಂಘಗಳು ಪ್ರಮುಖವಾಹಿನಿಯಾಗಿ ಕರ್ತವ್ಯ ನಿರ್ವಹಿಸುವುದಾಗಿ ಗುರುತಿಸಿದೆ.

ವಿಶ್ವ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಸಹಕಾರ ಸಂಘಗಳಲ್ಲಿನ – ಸಾಯತ್ತತೆ ಮತ್ತು ಸ್ವಾತಂತ್ರ್ಯ, ಪ್ರಜಾಸತ್ತಾತ್ಮಕ ಸದಸ್ಯನಿಯಂತ್ರಣಕ್ಕೆ ಮಾನ್ಯತೆ ನೀಡಿರುತ್ತವೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾಯ್ದೆ ಕಾನೂನುಗಳಲ್ಲಿ, ಆರ್ಥಿಕ, ತೆರಿಗೆ ಮತ್ತು ನಿಯಂತ್ರಣ ವ್ಯವಸ್ಥೆಗಳಲ್ಲಿ ಸಹಕಾರ ಸಂಘಗಳನ್ನು ಗೌರವಯುತ, ನ್ಯಾಯಯುತವಾಗಿ ನಡೆಸಿಕೊಳ್ಳಬೇಕೆಂದು ಮತ್ತು ಅವುಗಳನ್ನು ಅಭಿವೃದ್ಧಿಗಾಗಿ ಅಳವಡಿಸಿಕೊಳ್ಳುವಂತೆ ತಿಳಿಸಿದೆ. ಸರ್ಕಾರಗಳು ಅವುಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದಂತೆ ರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸುಸ್ಥಿರ ಪರಿಸರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಲು ಸೂಕ್ತ ಕಾಯ್ದೆ ಮತ್ತು ನೀತಿಗಳನ್ನು ರೂಪಿಸಬಹುದಾಗಿದೆ.

## 2. ಪದ ಮತ್ತು ಪದ ಪುಂಜಗಳ ವ್ಯಾಖ್ಯಾನ

"ಸಹಕಾರ ಸಂಘಗಳು ಸ್ವಾಯತ್ತ, ಸ್ವ–ಸಹಾಯ ಸಂಸ್ಥೆಗಳು" ಈ ಪದ ಪುಂಜಗಳಲ್ಲಿ ನಾಮಪದವಾದ "ಸಂಸ್ಥೆಗಳು"

ಗುಣವಾಚಕವಾಗಿ "ಸ್ವಾಯತ್ತ" ಎಂಬುದನ್ನು ತಿಳಿಸುತ್ತದೆ. ಸಹಕಾರ ಸಂಘಗಳು ತಮ್ಮನ್ನು ತಾವು ಆಡಳಿತ ಮಾಡಿ ಕೊಳ್ಳುವುದಕ್ಕೆ ಸ್ವಾತಂತ್ರ್ಯ ಹೊಂದಿದೆ ಎಂಬುದನ್ನು ವಿವರಿಸುತ್ತದೆ. ಅವು ತಮ್ಮದೇ ಆದ ಕಾರ್ಯಾಚರಣೆ ನಿಯಮಗಳು ಮತ್ತು ನಿಯಂತ್ರಣ ವ್ಯವಸ್ಥೆ ಹೊಂದಿವೆ ಎಂಬುದನ್ನು ಅಭಿವ್ಯಕ್ತ ಪಡಿಸುತ್ತದೆ. "ಸದಸ್ಯರಿಂದ ನಿಯಂತ್ರಿಸಲ್ಪಟ್ಟಿದೆ (ಹತೋಟಿಯಲ್ಲಿದೆ)". ಎಂಬುದು ಸಹಕಾರ ಸಂಘಗಳ ಮತ್ತೊಂದು ಅಂತರ್ಗತ ಪ್ರಮುಖ ಅಂಶ. ಇದು ಸಹಕಾರ ಸಂಘದ ವ್ಯಾಖ್ಯೆಯಲ್ಲಿಯೂ ಅಡಗಿದೆ. ಇದು ಎರಡನೇ ತತ್ವವಾಗಿಯೂ ಕೂಡ ಇದೆ. ಸಹಕಾರ ಸಂಘವು ಸದೃಡ, ಮುಕ್ತ, ಪಾರದರ್ಶಕ ಮತ್ತು ಹೊಣೆಗಾರಿಕೆಯುಳ್ಳ ಪ್ರಜಾಸತ್ತಾತ್ಮಕ ರೂಢಿಯನ್ನು ಅನುಸರಿಸದೇ ಇದ್ದಲ್ಲಿ ಅದು ಸದಸ್ಯ ನಿಯಂತ್ರಿತ ಸ್ವಾಯತ್ತ ಸ್ವತಂತ್ರ್ಯ ಸಂಸ್ಥೆ ಎಂದೆನಿಸಿಕೊಳ್ಳುವುದಿಲ್ಲ.

## 3. ಮಾರ್ಗದರ್ಶಿ ಟಿಪ್ಪಣಿ

### ವಿಶ್ವ ಸಂಸ್ಥೆ ಠರಾವು ಮತ್ತು ಸಹಕಾರ ಸಂಘಗಳಿಗೆ ಮಾರ್ಗದರ್ಶಿ ಸೂತ್ರಗಳು

ವಿಶ್ವ ಸಂಸ್ಥೆಯು 2001 ಡಿಸೆಂಬರ್ 19ರಂದು ತನ್ನ ಸಾಮಾನ್ಯ ಸಭೆಯಲ್ಲಿ 56/14ರ ಠರಾವಿನಲ್ಲಿ ತನ್ನ ಸದಸ್ಯ ರಾಷ್ಟ್ರಗಳು ಸಹಕಾರ ಸಂಘಗಳ ಬಗ್ಗೆ ನೀತಿ ಅಭಿವೃದ್ಧಿ ಪಡಿಸುವಲ್ಲಿ ಅಥವ ಪುನರ್ ರೂಪಿಸುವಲ್ಲಿ ಸಹಕಾರ ಸಂಘಗಳು ಕಾರ್ಯಾಚರಣೆಗೆ ಪೂರಕ ವಾತಾವರಣ ಸೃಷ್ಟಿಸುವಂತೆ ತಿಳಿಸಿದೆ. ವಿಶ್ವ ಸಂಸ್ಥೆಯು "ಪುನರ್ ಪರಿಶೀಲನೆಗೆ ಅವಶ್ಯಕತೆಯಂತೆ ಸಹಕಾರ ಸಂಘಗಳಲ್ಲಿ ಕಾಯ್ದೆಯಾತ್ಮಕ ಮತ್ತು ಆಡಳಿತಾತ್ಮಕ ಅಂಶಗಳು ಅವುಗಳ ಅನ್ವಯಿಸುವ ಕಾರ್ಯಾಚರಣೆಗೆ ಅನುವಾಗುವಂತೆ, ಅದಕ್ಕೆ ಪೂರಕವಾದ ವಾತಾವರಣ ಸೃಷ್ಟಿ ಮತ್ತು ಸಹಕಾರ ಸಂಘಗಳು ತಮ್ಮ ಗುರಿ ಸಾಧಿಸಲು ಮತ್ತು ಅದರ ಅಂತಸ್ಸತ್ವವನ್ನು ಪೂರ್ಣ ಉಪಯೋಗಿಸಿಕೊಳ್ಳಲು ಪೂರಕವಾಗಿರಬೇಕು" ಎಂದು ತಿಳಿಸಿದೆ.

ವಿಶ್ವ ಸಂಸ್ಥೆಯ ಮಾರ್ಗದರ್ಶಿ ಸೂತ್ರಗಳಲ್ಲಿ ಸಹಕಾರ ಸಂಘಗಳ ಕಾರ್ಯಾಚರಣೆಗೆ ಪೂರಕ ಮಾತಾವರಣ ಸೃಷ್ಟಿಯಲ್ಲಿ "ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆಯು ಸಹಕಾರ ಅಸ್ಮಿತೆ ವಾಖ್ಯೆಯನ್ನು ಮೂಲವಾಗಿ ಮತ್ತು ಕಾರ್ಯಾಚರಣೆ ಷರತ್ತುಗಳಾಗಿ ಪರಿಗಣಿಸಬೇಕು ಮಾರುಕಟ್ಟೆಯಲ್ಲಿ ಈ ಸಂಸ್ಥೆಗಳು ತಮ್ಮ ವ್ಯವಹಾರಗಳಲ್ಲಿ ಇತರೆ ಸಂಸ್ಥೆಗಳಿಗಿಂತ ವಿಭಿನ್ನವಾಗಿ ವರ್ತಿಸುತ್ತದೆ". ಎಂದು ತಿಳಿಸಲಾಗಿದೆ. ಅಂದರೆ ಸಹಕಾರ ಸಂಘಗಳು ಸಮೂಹ ಒಡೆತನದ ಸ್ವಾಯುತ್ತ ಪ್ರಜಾಸತ್ತಾತ್ಮಕ ನಿಯಂತ್ರಿತ ಔದ್ಯೋಗಿಕ ಸಂಸ್ಥೆಗಳಾಗಿವೆ ಎಂಬುದನ್ನು ವಿಶ್ವಸಂಸ್ಥೆ ಗುರುತಿಸಿದಂತಾಗಿರುತ್ತದೆ.

ವಿಶ್ವಸಂಸ್ಥೆಯು ಸಹಕಾರ ಸಂಘಗಳಿಗೆ ಪೂರಕ ವಾತಾವರಣ ಕಲ್ಪಿಸವ ವಿಷಯದಲ್ಲಿ ಈ ಕೆಳಕಂಡಂತೆ ಒತ್ತಾಯಿಸುತ್ತದೆ". ಸರ್ಕಾರ ಮತ್ತು ಸಹಕಾರ ಸಂಘಗಳು ಯಶಸ್ವಿ ಭಾಗಿತ್ವವನ್ನು ಹೊಂದಬೇಕಾಗುತ್ತದೆ. ಸರ್ಕಾರದ ಅತಿಯಾದ ನಿಯಂತ್ರಣ ಒಳ್ಳೆಯದಲ್ಲ ಜೊತೆಗೆ ಸರ್ಕಾರ ತೊಡಗಿಸಿಕೊಳ್ಳುವುದು ಅಸಹಾಯಕರವೂ ಆಗಿರುತ್ತದೆ ಮತ್ತು ಸಮೀಪ ದೃಷ್ಟಿಯದ್ದಾಗಿರುತ್ತದೆ. ಸಾಮಾನ್ಯವಾಗಿ

- ಸರ್ಕಾರಗಳು ಅವು ಕೇವಲ ಸಹಕಾರ ಸಂಘಗಳು ಎಂದ ಮಾತ್ರಕ್ಕೆ ಬೆಂಬಲ ನೀಡಬೇಕು ಎಂಬುದಲ್ಲ, ಆದರೆ ಅವು ಹೇಗೆ ಏನು ಕೆಲಸಗಳನ್ನು ಅವರು ಔದ್ಯೋಗಿಕ ಸಂಸ್ಥೆಯಾಗಿ ಅವರ ಸ್ಪರ್ದಾತ್ಮಕವಾಗಿ ಅವರ ವ್ಯವಹಾರಗಳೊಡನೆ ನಡೆಸುತ್ತಿದ್ದಾರೆ ಎಂಬುದನ್ನು ಪರಿಗಣಿಸಬೇಕು

- ಸಹಕಾರ ಸಂಘಗಳನ್ನು ಸರ್ಕಾರದ ಕಾರ್ಯಕ್ರಮಗಳ ವಾಹಕಗಳಾಗಿ ಮಾತ್ರ ನೋಡುವುದಲ್ಲಿ ಸ್ವಾಯತ್ತತೆಯಿಂದ ಕಾರ್ಯಕ್ರಮ ನಿರ್ವಹಣೆ ಬಹು ಮುಖ್ಯವಾಗುತ್ತದೆ.

- ಸಹಕಾರ ಸಂಘಗಳು ಸರ್ಕಾರವನ್ನು ಅವಲಂಭಿಸುವಂತಾಗಬಾರದು. ಕೇವಲ ರಾಜಕೀಯ ಉದ್ದೇಶ ಸಾಧನೆಗಾಗಿ ಸಹಕಾರ ಸಂಘಗಳನ್ನು ಸಾಮಾಜಿಕ ಕಾರ್ಯಗಳಿಗಾಗಿ ತೊಡಗಿಸಿ ಬಳಸಿಕೊಳ್ಳಬಾರದು. ಸರ್ಕಾರದ ನೀತಿ ಪಸರಿಸಲು, ತಾಂತ್ರಿಕ ಸಹಾಯಗಳಿಗೆ, ಪಡಿತರ ಸಾಮಗ್ರಿಗಳ ವಿತರಣೆ ಕಡಿಮೆ ಬಡ್ಡಿಧರ ಸಾಲ ವಿತರಣೆಯಲ್ಲಿ ಬಳಸುವಂತಾಗಬಾರದು.

ಕೇವಲ ರಾಜಕೀಯ ಪ್ರಜ್ಞಾವಂತರಾಗಿಸಲು ಬಡವರಿಗೆ ಸಹಾಯ ಮಾಡುವ ವಾಹಕಗಳಾಗಬಾರದು. ಸಹಕಾರ ಸಂಘಗಳು ತನ್ನ ಮೌಲ್ಯ ಮತ್ತು ತತ್ವಗಳನ್ನು ಪಾಲಿಸಿದಾಗ ತನ್ನ ಗರಿಷ್ಠಕೊಡುಗೆಯನ್ನು ನೀಡಬಲ್ಲವು ಎಂಬುದು ಅನುಭವ ವೇದ್ಯ.

**193ರ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ (ILO) ಶಿಫಾರಸ್ಸು**

ಮೊದಲ ಮಹಾಯುದ್ಧದ ಘೋರ ಕೃತ್ಯಗಳ ಪರಿಣಾಮವಾಗಿ ಪ್ಯಾರಿಸ್‌ನ ಶಾಂತಿ ಸಮ್ಮೇಳನದಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯನ್ನು ಸ್ಥಾಪಿಸಲು ನಿರ್ಧಾರಿಸಲಾಯಿತು. 1919ರ ವರ್ಸಿಲೀಸ್ ಒಪ್ಪಂದದಂತೆ ಅಂತರರಾಷ್ಟ್ರೀಯ ಸಂಸ್ಥೆಯಾಗಿ ರೂಪು ಪಡೆಯಿತು. ವಿಶ್ವದ ಎಲ್ಲ ರಾಷ್ಟ್ರಗಳು "ವಿಶ್ವ ಮತ್ತು ನಿರಂತರ ಶಾಂತಿನೆಲಸಬೇಕೆಂದರೆ ಅದು ಸಾಮಾಜಿಕ ನ್ಯಾಯದ ಮೇಲೆ ನೆಲೆಗೊಳ್ಳಬೇಕು" ಎಂಬುದನ್ನು ಮನಗಂಡವು.

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಆರಂಭದಿಂದಲೂ ಸಹಕಾರ ಸಂಘಗಳ ಬಗ್ಗೆ ಕಾಳಜಿವಹಿಸಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ(ILO)ದ ಪ್ರಥಮ ಡೈರೆಕ್ಟರ್ ಜನರಲ್ (ಅಧ್ಯಕ್ಷ)ರ ಅಲ್ಬರ್ಟ್‌ಥಾಮಸ್‌ರವರೇ ಒಬ್ಬ ಸಹಕಾರಿಯಾಗಿದ್ದರು. 1920ರಲ್ಲಿ ಸಹಕಾರ ಸೇವೆ ವಿಭಾಗವನ್ನು ತೆರೆಯ ಲಾಯಿತು. ಈ ಮುಂದಿನ ಅ.ಕಾ.ಸಂ. 1920 ಸಾಮಾನ್ಯ ಸಭೆಯ ಠರಾವಿನ ಉದ್ಧೃತ ಭಾಗ "ಈ ಶಾಂತಿ ಒಪ್ಪಂದವು ಕೇವಲ ಕೆಲಸದ ಬಗ್ಗೆ ಗಮನಹರಿಸದೆ ಕೆಲಸಗಾರರ (ಕಾರ್ಮಿಕರ) ಸ್ಥಿತಿಗತಿಗಳ ಬಗ್ಗೆ ಕೂಡ ಗಮನಹರಿಸುತ್ತದೆ. ಅತಿ ಹೆಚ್ಚಿನ ಜನಸಂಖ್ಯೆಯ ಕಷ್ಟ ಕಾರ್ಪಣ್ಯಗಳನ್ನು ನೀಗಿಸಲು ಸಾಂಸ್ಥಿಕ ಸ್ವರೂಪದ ಸಹಕಾರ ಸಂಘಗಳಿಂದ ಮಾತ್ರ ಸಾಧ್ಯ. ಸಹಕಾರ ವಿಭಾಗವು ಕೇವಲ ವಿತರಣೆ (ಆಹಾರ ಸಾಮಗ್ರಿ, ಜೀವನಾವಶ್ಯ ವಸ್ತುಗಳು) ಮಾತ್ರವಲ್ಲ ವಸತಿ, ಕಾರ್ಮಿಕರ ವಿಶ್ರಾಂತಿ ಸಮಯ ಮತ್ತು ಸಾಗಾಣಿಕೆ ವಿಷಯಗಳನ್ನೂ ಸಂಶೋಧಿಸುತ್ತದೆ.

1944 ಎರಡನೆ ಮಹಾಯುದ್ಧದ ಅಂತ್ಯದ ಸಮಯದಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಸಂವಿಧಾನ ಕೇವಲ ಕಾರ್ಮಿಕರ ಸ್ಥಿತಿಗತಿ ಅಲ್ಲದೇ ಆರ್ಥಿಕ ಪ್ರಗತಿಗೆ ಪೂರಕವಾಗಿ ನ್ಯಾಯೋಚಿತ ಆರ್ಥಿಕ ಸ್ಥಿತಿಗತಿ ವ್ಯಾಪಾರ ಬೆಳವಣಿಗೆಗೆ ಕೂಡ ಪ್ರಾಮುಖ್ಯತೆ ನೀಡಲಾಯಿತು. ಎಲ್ಲ ವರ್ಗದ ಜೀವನ ಮಟ್ಟದ ಬೆಳವಣಿಗೆ ಮತ್ತು ಆಧ್ಯಾತ್ಮಿಕ ಅಭಿವೃದ್ಧಿ ಕೂಡ ಮುಖ್ಯ ಎಂದು ಪರಿಗಣಿಸಲಾಯಿತು. "ಆರ್ಥಿಕ ರಕ್ಷಣೆ ಮತ್ತು ಸಮಾನ ಅವಕಾಶಗಳು ಸ್ವಾತಂತ್ರ್ಯ ಮತ್ತು ಘನತೆಯೊಡನೆ ದೊರೆಯಬೇಕು" ಎಂಬುದು ಪ್ರಮುಖ ವಿಷಯವಾಯ್ತು.

ವಿಶ್ವ ಸಂಸ್ಥೆಯ ಅನುಚ್ಛೇದ 57ರಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಅಂಗ ಸಂಸ್ಥೆಯಾಗಿ ಗುರುತಿಸಿಕೊಂಡು ಶಾಸನಬದ್ಧ ಅಂತರ ಸಂಬಂಧಗಳ ಬಗ್ಗೆ ನಿರ್ಣಯಿಸಲಾಯಿತು. ಅದರಂತೆ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ನಿರ್ಣಯಗಳು ಶಿಫಾರಸ್ಸುಗಳು ವಿಶ್ವಸಂಸ್ಥೆಯ ನಿರ್ಣಯಗಳು ಶಿಫಾರಸ್ಸುಗಳಂತೆ ಪರಿಗಣಿಸಲಾಗುವುದು. ಸದಸ್ಯ ರಾಷ್ಟ್ರಗಳು (185) ಅದರ ಅನುಷ್ಠಾನದ ಬಗ್ಗೆ ರಾಷ್ಟ್ರೀಯ ಶಾಸನ ಸಭೆಗಳಿಗೆ ಅನುಸರಣೆಯನ್ನು ಸಲ್ಲಿಸಬೇಕಾಗುತ್ತದೆ. 2002ರಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಸಹಕಾರ ಸಂಘಗಳನ್ನು ಉತ್ತೇಜಿಸುವ ಬಗ್ಗೆ ಶಿಫಾರಸ್ಸು (ನಂ. 193) ಮಾಡಲಾಗಿದೆ. ಅದು ಸಹಕಾರ ಸಂಘಗಳನ್ನು ಸ್ವಾಯತ್ತ ಮತ್ತು ಸ್ವತಂತ್ರ ಸಂಸ್ಥೆಗಳಾಗಿ ಪರಿಗಣಿಸಲು ತಿಳಿಸಿರುತ್ತದೆ. ಈ ಶಿಫಾರಸ್ಸು ಅಂತರ ರಾಷ್ಟ್ರೀಯ ಮೈತ್ರಿ ಸಂಸ್ಥೆಯು ಸಹಕಾರ ಸಂಘದ ವ್ಯಾಖ್ಯೆ ಮತ್ತು ಅಸ್ಮಿತೆಯನ್ನು ಒಳಗೊಂಡಿರುತ್ತದೆ. ಇದು ಸರ್ಕಾರಗಳಿಗೆ "ಸಹಕಾರ ಸಂಘಗಳು ಸ್ವಾಯತ್ತ ಸ್ವ–ಸಹಾಯ ಔದ್ಯೋಗಿಕ ಸಂಸ್ಥೆಗಳನ್ನು ಪ್ರೋತ್ಸಾಹಿಸಬೇಕು ಮತ್ತು ಅದರಲ್ಲಿಯೂ ಸೇವೆಯನ್ನು ಎಲ್ಲಿ ಒದಗಿಸಲು ಸಾಧ್ಯವಾಗಿಲ್ಲವೋ ಅಲ್ಲಿ ಸಹಕಾರ ಸಂಘಗಳು ಪ್ರಮುಖ ಪಾತ್ರ ನಿರ್ವಹಿಸಬೇಕು" ಎಂದು ತಿಳಿಸಿದೆ.

ಸದಸ್ಯ ರಾಷ್ಟ್ರಗಳು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಗೆ 193ರ ಶಿಫಾರಸ್ಸಿನ ಅನುಷ್ಠಾನ, ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಸರಣೆ ಒದಗಿಸುವ ಜವಾಬ್ದಾರಿಗಳನ್ನು ಹೊಂದಿವೆ. ಸರ್ಕಾರಗಳು ಸಹಕಾರ ಸಂಘಗಳ ಅಸ್ಮಿತೆಯನ್ನು ಗೌರವಿಸುವ ಜವಾಬ್ದಾರಿಯನ್ನು ಹೊಂದಿವೆ.

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ 193ರ ಶಿಫಾರಸ್ಸುಗಳ ಬಗ್ಗೆ ಯು.ಕೆ. (ಬ್ರಿಟನ್) ಸಹಕಾರ ಕಾಲೇಜಿನ ಸ್ಟರ್ಲಿಂಗ್ ಸ್ಮಿತ್‌ರವರು ಬರೆದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಪ್ರಕಟಿಸಿರುವ ಪುಸ್ತಕವು ಉಲ್ಲೇಖನೀಯವಾಗಿದೆ.

**ಸರ್ಕಾರದೊಡನೆ ಸಂಬಂಧಗಳು**

ಆರಂಭದಿಂದಲೂ ಸಹಕಾರ ಸಂಘಗಳೂ ಅವುಗಳ ವಿಶಿಷ್ಟ ಸ್ವರೂಪವನ್ನು ಉಳಿಸಿಕೊಳ್ಳಲು ಕಾಯ್ದೆಯಾತ್ಮಕ ಕಟ್ಟುಪಾಡುಗಳನ್ನು ಹೊಂದಲು ಕಾಯ್ದೆ ರೂಪಿಸಲು ಸರ್ಕಾರಗಳೊಡನೆ ಸೆಣೆಸುತ್ತಿವೆ.

ಸಹಕಾರದ ಅಗ್ರಗಾಮಿಗಳಿಗೆ ಸಮಾಜದಲ್ಲಿನ ಅಸಮಾನತೆ ಹೋಗಲಾಡಿಸಲು ಈ ಸ್ವ–ಸಹಾಯ ಸಂಸ್ಥೆಗಳಲ್ಲಿನ ಸಾಮರ್ಥ್ಯದ ಅರಿವಿದ್ದ ಪ್ರಜ್ಞಾವಂತ ಸುಧಾರಕರ ಬೆಂಬಲ ದೊರೆಯಿತು.

ಹಿಂದಿನ ಸಹಕಾರ ಅಗ್ರಗಾಮಿಗಳು ಸಹಕಾರ ಸಂಘಗಳ ಅಂತಸತ್ವ ಉಪಯೋಗಿಸಿಕೊಳ್ಳಲು ಮತ್ತು ಅದಕ್ಕೆ ಕಾಯ್ದೆಯಾತ್ಮಕ ರಕ್ಷಣೆ ಒದಗಿಸಲು ಕಾಯ್ದೆಯಾತ್ಮಕ ಮತ್ತು ನೈತಿಕ ಕಟ್ಟುಪಾಡುಗಳನ್ನು ರಚಿಸಲು ಸಹಾಯ ಒದಗಿಸಿದರು. "ಸಹಕಾರ ಸಂಘ" (Co-operative) ಪದದ ಉಪಯೋಗ ರಕ್ಷಣೆ ಮತ್ತು ಇತರೆ ಸಂಸ್ಥೆಗಳಿಗಿಂತ ಇದು ಹೇಗೆ ವಿಭಿನ್ನ ಎಂಬುದನ್ನು ತೋರಿಸುವುದನ್ನು ಒಳಗೊಂಡಿರುತ್ತದೆ. ವಿಶ್ವ ಸಂಸ್ಥೆಯ ಶಿಫಾರಸ್ಸು ಸಹಕಾರ ಸಂಘದ ವ್ಯಾಖ್ಯೆ ಬಗ್ಗೆ ತಿಳಿಸುವುದಲ್ಲದೇ ಇದರ ಹೆಸರಿನ ದುರುಪಯೋಗ "ನಕಲಿ" ಸಂಸ್ಥೆಗಳ ಸ್ಥಾಪನೆ ಮತ್ತು ನ್ಯಾಯಯುತ ಲಾಭ ಪಡೆಯುವ ಬಗ್ಗೆ ಮತ್ತು ಇದರಿಂದ ಸಹಕಾರ ಸಮಘಗಳ ಹೆಸರನ್ನು (ಪ್ರತಿಮೆ Image) ಹಾಳುಗೆಡಹುವ ಬಗ್ಗೆ ಎಚ್ಚರಿಸಿದೆ.

ಹೊಸ ಅವಕಾಶಗಳು ಮಾಧ್ಯಮಿಕ ಸಂಘಗಳ ಸ್ಥಾಪನೆಗಳಿಗೆ ವಿನೂತನ ಕಾಯ್ದೆಗಳ ಅವಶ್ಯಕತೆ ಕಂಡುಬಂದಿದೆ. ಇದು ಎಲ್ಲ ಸಹಕಾರ ಸಂಘಗಳು ಒಂದೇ ಧ್ವನಿಯಾಗಿ ಕಾರ್ಯ ನಿರ್ವಹಿಸುವ ಅವಶ್ಯಕತೆ ಬಗ್ಗೆ ತಿಳಿಸುತ್ತದೆ. 6ನೇ ತತ್ವವಾತ "ಸಹಕಾರ ಸಂಘಗಳ ನಡುವೆ ಸಹಕಾರ"ವು ಸಹಕಾರ ಸಂಘಗಳ ಯಶಸ್ವಿ ರಕ್ಷಣೆ ಮತ್ತು ಬೆಳವಣಿಗೆಯನ್ನು ಎತ್ತಿ ಹಿಡಿಯುತ್ತದೆ.

ಸರ್ಕಾರದೊಡನೆ ವ್ಯವಹರಿಸುವುದು (ಸಂಬಂಧ ಬೆಳೆಸುವುದು) ಎಂದಾಕ್ಷಣ ತನ್ನ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಬಲಿಕೊಟ್ಟು ರಾಜಿ ಮಾಡಿಕೊಳ್ಳಬೇಕೆಂತೇನಿಲ್ಲ. ಸದಸ್ಯರು ತಮ್ಮ ಸಂಸ್ಥೆಯನ್ನು ಪ್ರಜಾಸತ್ತಾತ್ಮಕ ವಾಗಿ ಸರ್ಕಾರದ ಹಸ್ತಕ್ಷೇಪವಿಲ್ಲದೇ ನಿರ್ವಹಣೆ ಮಾಡಬಲ್ಲುದಾಗಿದೆ ಎಂಬುದು ಪ್ರಮುಖ ಅಂಶವಾಗುತ್ತದೆ. 4ನೇ ತತ್ವವಾದ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವು ಸದಸ್ಯರು ಸ್ವತಃ ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲರು, ಯಾವುದೇ ಸರ್ಕಾರದ ಅಥವ ಬಾಹ್ಯ ಸ್ವರೂಪದ ಪ್ರಭಾವಕ್ಕೆ ಒಳಗಾಗದೇ ವಿಶಾಲವಾದ ಇತರೆ ಸ್ವರೂಪದ ಸಂಸ್ಥೆಗಳ ಕೀಳು ಮೇಲೂ ಪ್ರಭಾವ ಬೀರುವ ವಿಶಾಲ ನೀತಿಗಳ ಮೀರಿ ಕಾರ್ಯನಿರ್ವಹಿಸಬಲ್ಲರು ಎಂಬುದು ಪ್ರಮುಖ ವಾಗುತ್ತದೆ.

**ನಿಯಂತ್ರಣಗಳು**

ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಸರ್ಕಾರಗಳು ಮಾರುಕಟ್ಟೆಯ ಮೇಲೆ ನಿಯಂತ್ರಣಗಳನ್ನು ಹೊಂದಬೇಕು. ಸರಿಯಾದ ನಿಯಂತ್ರಣ ವ್ಯವಸ್ಥೆ ಇಲ್ಲದ್ದರಿಂದ 2007–08ರ ಆರ್ಥಿಕ ತಲ್ಲಣಗಳು ವಿಶ್ವ ಮಟ್ಟದ ಆರ್ಥಿಕ ಹಿಂಜರಿತಕ್ಕೆ ಕಾರಣವಾದವು. ಈಗ ಅನೇಕ ಸರ್ಕಾರಗಳು ನಿಯಂತ್ರಣಗಳ ವ್ಯವಸ್ಥೆ ಗಳನ್ನು ಮಾಡುತ್ತಿವೆ.

ಸಹಕಾರ ಸಂಘಗಳು ನಿಯಂತ್ರಣಗಳಿಗೆ ಒಳಪಡುವ ಬದಲಾಗಿ ತಾವೇ ಸ್ವಯಂ ನಿಯಂತ್ರಣಗಳನ್ನು ಉತ್ತಮ ಆಡಳಿತ ನೀತಿಗಳನ್ನು ಪಾಲಿಸುವುದರ ಮೂಲಕ ಹೇರಿಕೊಳ್ಳುವುದು ಉತ್ತಮವಾಗುತ್ತದೆ. ಸ್ವಯಂ ಆಗಿ ಸಕಾಲಿಕ ಸಲ್ಲಿಕೆಗಳನ್ನು ಸಲ್ಲಿಸುವುದು ಉತ್ತಮ ನಡವಳಿಕೆಯಾಗುತ್ತದೆ. ಸ್ವಯಂ ಆಗಲಿ ಅಥವ ಶಾಸನಬದ್ಧವಾಗಿ ನಿಯಂತ್ರಣ ವ್ಯವಸ್ಥೆಯಲ್ಲಿ ಪರಿಣಾಮಕಾರಿ ನಿಯಂತ್ರಕರ ಮೇಲ್ವಿಚಾರಣೆ ಮತ್ತು ಶಾಸನಬದ್ಧ ಲೆಕ್ಕ ಸಂಶೋಧನೆಗೆ ಒಳಪಡುವುದು ನಿಯಮಬಾಹಿರ. ಸಹಕಾರ ಸಂಘಗಳ ಸ್ಥಾಪನೆ 'ನಕಲಿ' ಸಹಕಾರ ಸಂಘಗಳ ಸ್ಥಾಪನೆಯನ್ನು ತಡೆಯಬಹುದಾಗಿದೆ. ಪರಿಣಾಮಕಾರಿ

ಎಂದರೆ ಸಹಕಾರ ಮೌಲ್ಯಗಳಾದ ಪ್ರಾಮಾಣಿಕತೆ ಮುಕ್ತ (ತೆರೆದ ಪುಟ), ಸಾಮಾಜಿಕ ಜವಾಬ್ದಾರಿ, ಇತರರ ಬಗ್ಗೆ ಕಾಳಜಿ ಅನುಕಂಪ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಸಹಕಾರ ಸಂಘಗಳೇ ಸ್ವಯಂ ನಿಯಂತ್ರಣಕ್ಕೆ ಒಳಪಟ್ಟು ತನ್ನ ಕಾರ್ಯಾಚರಣೆಯಲ್ಲಿ ಮುಕ್ತ ವಾತಾವರಣ, ಹೊಣೆಗಾರಿಕೆ ತೋರ್ಪಡಿಸಿದಲ್ಲಿ ಸರ್ಕಾರದ ನಿಯಂತ್ರಣದ ಅವಶ್ಯಕತೆಯೇ ಮೂಡಿಬರುವುದಿಲ್ಲ. ಈ ಅತ್ಯಂತ ಉನ್ನತ ನೈತಿಕ ಮಾನದಂಡಗಳನ್ನು ಸಹಕಾರ ಸಂಘಗಳು ಗುರಿಯಾಗಿಸಿ ಕೊಳ್ಳಬೇಕಿದೆ. ರಾಷ್ಟ್ರ ಮಟ್ಟದ ಉನ್ನತ ಶೃಂಗ ಸಂಸ್ಥೆಗಳು ಇವುಗಳನ್ನು ರಚಿಸಿವುದರಲ್ಲಿ ಅನುಷ್ಠಾನಗೊಳಿಸುವಲ್ಲಿ ಮತ್ತು ಮೇಲ್ವಿಚಾರಣೆ ಮಾಡಿ ಪರಿಣಾಮಕಾರಿ ಸ್ವಯಂ ನಿಯಂತ್ರಣ ವ್ಯವಸ್ಥೆರೂಪಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಬೇಕಿದೆ.

**ಸರ್ಕಾರ ನೀತಿಯಲ್ಲಿ ಸಹಕಾರ ಸಂಘಗಳು ಪ್ರಮುಖ ನೀತಿ ಉಪಕರಣವಾಗಿ ಕಾರ್ಯನಿರ್ವಹಿಸುವುದು.**

ಸಹಕಾರ ಸಂಘ ಮತ್ತು ಸರ್ಕಾರದ ನಡುವಿನ ಸಂಬಂಧಗಳಲ್ಲಿನ ಪ್ರಮುಖ ಸವಾಲು ಸರ್ಕಾರದ ನೀತಿ ಪಾಲನೆಗಾಗಿ ಸಹಕಾರ ಸಂಘಗಳನ್ನು (ಉಪಕರಣ) ವಾಗಿ ಬಳಸುವುದು. ಉದಾಹರಣೆಗೆ ಆರ್ಥಿಕ ಸೇವೆ ಒದಗಿಸಲು ಉದ್ಯೋಗ ಸೃಷ್ಟಿಗಾಗಿ ಅಥವ ಬಡತನ ನಿರ್ಮೂಲನ ಕಾರ್ಯ ಕ್ರಮಗಳಿಗಾಗಿ ಬಳಸುವುದು. ಅವುಗಳ ಶಕ್ತಿ ಅರಿತು ಆರ್ಥಿಕ ಹಿಂದುಳಿದವರ ರಾಷ್ಟ್ರೀಯ ಬಡತನ ನಿರ್ಮೂಲನ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅನೇಕ ರಾಷ್ಟ್ರಗಳಲ್ಲಿ ಬಳಸಿಕೊಳ್ಳಲಾಗುತ್ತದೆ. ಇದರಿಂದಾಗಿ ಅಂತರರಾಷ್ಟ್ರೀಯ ನಿಧಿಯೋಜನೆಗಳನ್ನು ಸಹಕಾರ ಅಭಿವೃದ್ಧಿಗಾಗಿ (ಪ್ರಮುಖಯೋಜನೆ) ಅನುಷ್ಠಾನಗೊಳಿಸಲಾಗುತ್ತಿದೆ.

ಉತ್ತರ ಗೋಳಾರ್ಧದ ಕೈಗಾರಿಕೋತ್ತರ ಆರ್ಥಿಕತೆಗಳಲ್ಲಿ ಸಾರ್ವಜನಿಕ ವಲಯದ ಬದಲಿಗೆ ಸಹಕಾರ ಸಂಘಗಳು ಮತ್ತು ಪರಸ್ಪರ (mutual) ರನ್ನು ಸಾಮಾಜಿಕ ಸೇವೆ ಒದಗಿಸುವ ಮಾರ್ಗವಾಗಿ ಕಾಣುತ್ತಿವೆ. ರಾಷ್ಟ್ರೀಯ ಮತ್ತು ಸ್ಥಳೀಯ ಸರ್ಕಾರಗಳು ಸೇವೆ ಸಲ್ಲಿಸಲು ಸಾಧ್ಯವಾಗಲು ವಿಫಲವಾದಾಗ ಸಹಕಾರ ಸಂಘಗಳು 'ಮಂತ್ರದಂಡ' ಗಳಾಗಲು ಸಾಧ್ಯವಿರುವುದಿಲ್ಲ. ಏನೇ ಆದರೂ ಕೇವಲ ಸದಸ್ಯರ ಆರ್ಥಿಕ ಲಾಭಕ್ಕಲ್ಲದೇ ಸಾಮಾಜಿಕ ಉದ್ದೇಶಕ್ಕಾಗಿ ಹೊರಹೊಮ್ಮುತ್ತಿರುವ ಹೂಡಿಕೆಯ ಮೇಲೆ ಸಾಮಾಜಿಕ ಗಳಿಕೆ ಸಾಧ್ಯವಾಗಬಲ್ಲ ಹೆಚ್ಚುವರಿ ಮಾನವ ಮತ್ತು ಆರ್ಥಿಕ ಬಂಡವಾಳ ಸಂಗ್ರಹಿಸಬಲ್ಲ ಸಹಕಾರ ಸಂಘಗಳು ರೂಪುಗೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಇಟಲಿ ಮತು ಇತರೆ ರಾಷ್ಟ್ರಗಳಲ್ಲಿ ಸಹಕಾರ ಔದ್ಯೋಗಿಕ ಸಂಸ್ಥೆಗಳು ಸಾಮಾಜಿಕ ಸಹಕಾರ ಸಂಘಗಳಾಗಿ ರೂಪುಗೊಳ್ಳುತ್ತಿವೆ.

ಸದಸ್ಯ ಒಡೆತನದ, ನಿಯಂತ್ರಿತ ಸಂಸ್ಥೆಗಳ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಹ ನಿಯಂತ್ರಣ ಕಟ್ಟುಪಾಡುಗಳು ಜಾರಿಗೊಳ್ಳುವ ಸಾಧ್ಯತೆ ಗಳಿವೆ. ಕೆಲವೆಡೆ ಇದು ನ್ಯಾಯಯೋಚಿತವೂ, ಅವಶ್ಯಕತೆಯೂ ಆಗಿರಬಹುದು. ಉದಾಹರಣೆ: ಸಾರ್ವಜನಿಕ ಆಸ್ತಿಗಳನ್ನು ಸರ್ಕಾರಕ್ಕೆ ವರ್ಗಾಯಿಸಿದಾಗ ರಕ್ಷಣೆ ಅವಶ್ಯಕತೆ ಇರಬಹುದು. ಸರ್ಕಾರದ ಅಧಿಕಾರಿಗಳನ್ನು ಆಡಳಿತ ಮಂಡಳಿಗೆ ನೇಮಿಸಬಹುದು, ಆದರೆ ಸದಸ್ಯ ಹಕ್ಕು ಜವಾಬ್ದಾರಿಗಳಿಗೆ ಧಕ್ಕೆ ಬಾರದಂತೆ ಎಚ್ಚರ ವಹಿಸಬೇಕಿದೆ.

ಈ ವಿಷಯದಲ್ಲಿ ವಿಶ್ವ ಸಂಸ್ಥೆ ಶಿಫಾರಸ್ಸು 193, ಸಹಾಯಕ್ಕೆ ಬರುತ್ತದೆ. ಅದು "ಅವಶ್ಯಕತೆಗೆ ತಕ್ಕಂತೆ ಅನಾನುಕೂಲನೆಗಳಿಗೆ ಒಳಪಟ್ಟ ಗುಂಪು ಅಥವ ಪ್ರದೇಶಗಳ ಅಭಿವೃದ್ಧಿಗಾಗಿ ಅಥವ ಉದ್ಯೋಗ ಸೃಷ್ಟಿಗಾಗಿ ನಿರ್ಧಿಷ್ಟ ಸಾಮಾಜಿಕ ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿ ಸಹಕಾರ ಸಂಘಗಳು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ಸರ್ಕಾರಗಳು ಬೆಂಬಲಿಸಬೇಕು. ಈ ಕ್ರಮಗಳು ಸಾಧ್ಯವಾದ ಮಟ್ಟಿಗೆ ತೆರಿಗೆ ಲಾಭಗಳು, ಸಾಲಗಳು, ಕೊಡುಗೆಗಳು, ಸಾರ್ವಜನಿಕ ಕೆಲಸಗಳಿಗೆ ಆದ್ಯತೆ ಮತ್ತು ವಿಶೇಷ ಸಂಗ್ರಹಣಾ ಸೌಲಭ್ಯಗಳನ್ನು ಒಳಗೊಳ್ಳುವುದು". ಆದರೆ ಅದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಒಪ್ಪಿಕೊಂಡು ಶಿಫಾರಸ್ಸು ಮಾಡಿರುವ ವ್ಯಾಖ್ಯಾನವನ್ನು ಒಳಗೊಂಡ ಅಸ್ಮಿತೆಯನ್ನು ಮೀರಬಾರದು.

ಸರ್ಕಾರವು ಸಹಕಾರ ಸಂಘಗಳಿಗೆ ಬೆಂಬಲ ನೀಡುವುದು ಮತ್ತು ಬೆಂಬಲವಾಗಿ ನಿಲ್ಲುವುದು ಪ್ರಮುಖ ಸರ್ಕಾರ ನೀತಿಯಾಗಬೇಕೇ ವಿನಃ ಅದನ್ನು ನಿಯಂತ್ರಣ ಮಾಡುವುದಲ್ಲ. ಸರ್ಕಾರವು ಸಹಕಾರ ಸಂಘಗಳ ಸ್ವಾಯತ್ತತೆ ಮತ್ತು

ಸ್ವಾತಂತ್ರ್ಯ ಮತ್ತು ಸದಸ್ಯರ ಪ್ರಜಾಸತ್ತಾತ್ಮಕ ಹತೋಟಿ (ನಿಯಂತ್ರಣ)ವನ್ನು ಗೌರವಿಸಬೇಕು.

**ಬಂಡವಾಳ ಕ್ರೋಢೀಕರಿಸಲು ಒಪ್ಪಂದಗಳು**

ರಾಕ್‌ಡೇಲ್ ಅಗ್ರಗಾಮಿಗಳ ಮೊದಲ ಸಹಕಾರ ತತ್ವಗಳಲ್ಲಿ ಷೇರು ಬಂಡವಾಳದ ಮೇಲೆ ಪರಿಮಿತ ಬಡ್ಡಿ ಎಂಬುದು ಬಹು ಮುಖ್ಯವಾಗಿತ್ತು ಏಕೆಂದರೆ ಗಳಿಕೆಗಾಗಿ ಹೂಡಿಕೆ ಮಾಡುವುದನ್ನು ತಡೆಯುವುದಕ್ಕಾಗಿ. ಆದರೆ ಮೂರನೇ ತತ್ವದ ವಿವರಣೆಯಲ್ಲಿ ತಿಳಿಸಿದಂತೆ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಕಾರ್ಯನಿರ್ವಹಿಸುವಾಗ್ಯೆ ಬಾಹ್ಯದಿಂದ ಬಂಡವಾಳ ಪಡೆಯುವುದು ಅನಿವಾರ್ಯವಾಗಿದೆ.

ಸಹಕಾರ ಸಂಘದ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ ಇದರಿಂದ ಧಕ್ಕೆಯಾಗುವುದರ ಬಗ್ಗೆ ಎಚ್ಚರದಿಂದಿರಬೇಕು. ಕಾಲಾಂತರದಲ್ಲಿ ನಿಯಂತ್ರಣ ಕಳೆದುಕೊಳ್ಳುವ ಸಂದರ್ಭ ಒದಗಿಬರುತ್ತದೆ. ಅನುಸರಣೆಯ ಹಂಗಿಗೆ ಒಳಗಾಗುವ, ಬಂಡವಾಳ ಹೂಡಿಕೆದಾರರ ಷರತ್ತುಗಳನ್ನು ಪಾಲಿಸಬೇಕಾದ, ನಿರ್ಧಾರಗಳಲ್ಲಿ ಅವರನ್ನು ಒಳಗೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಈ ನಾಲ್ಕನೇ ತತ್ವವು ಬಂಡವಾಳ ಒದಗಿಸುವ ಆರ್ಥಿಕ ಮಾರುಕಟ್ಟೆ ಮತ್ತು ಆರ್ಥಿಕ ಸಂಸ್ಥೆಗಳೊಡನೆ ರಾಜಿ ಮಾಡಿಕೊಳ್ಳುವಂತಹುದಲ್ಲ. ವಿಶ್ವ ಆರ್ಥಿಕ ಹಿಂಜರಿಕೆಯ ನಂತರ ಆರ್ಥಿಕ ಸಂಸ್ಥೆಗಳು ಬ್ಯಾಂಕ್‌ಗಳು ಸಾಲ ಮರುಪಾವತಿ ಷರತ್ತುಗಳು ಷೂರಿಟಿಗಳು, ಖಾತ್ರಿಗಳ ಬಗ್ಗೆ ಹೆಚ್ಚು ವಿವೇಚನೆಯುಕ್ತವಾಗಿ ವರ್ತಿಸುತ್ತಿರುತ್ತಾರೆ. ಈ ತೊಡಕು ಸಹಕಾರ ಸಂಘಗಳ ಇತರೆ ಸಂಸ್ಥೆಗಳ ವ್ಯಾಪಾರಗಳನ್ನು ವಹಿಸಿಕೊಳ್ಳುವಾಗ ಉಂಟಾಗುತ್ತದೆ. ಒಪ್ಪಂದಗಳನ್ನು ಮಾಡಿಕೊಳ್ಳುವಾಗ್ಯೆ ಹೆಚ್ಚು ಎಚ್ಚರವಹಿಸಬೇಕು. ಆರ್ಥಿಕ ಸಹಾಯ ಒದಗಿಸುವವರಿಗೆ ಆಡಳಿತ ವರ್ಗಾಯಿಸುವಂತಾಗಬಾರದು. ಇಂತಹ ವಿಷಯಗಳಲ್ಲಿ ಸಾಮಾನ್ಯ ಸಭೆಯ ಅನುಮೋದನೆ ಒಳ್ಳೆಯದು.

ಸಹಕಾರ ಸಂಘಗಳು "ಬಾಹ್ಯಮೂಲದಿಂದ ಬಂಡವಾಳವನ್ನು ಪಡೆದಾಗ ಸದಸ್ಯ ನಿಯಂತ್ರಣ ಸಹಕಾರ ಅಸ್ಮಿತೆ"ಯನ್ನು ಕಳೆದುಕೊಳ್ಳುವಂತಾಗಬಾರದು.

ಸರಬರಾಜುದಾರರು ಮತ್ತು ಬಳಕೆದಾರರೊಡನೆ ಸಂಬಂಧಗಳು; ಅದರಲ್ಲಿಯೂ ನೂತನ ಸಹಕಾರ ಸಂಘಗಳು ಎದುರಿಸುವ ತೊಡಕುಗಳು

1995ರ ಸಭೆಯಲ್ಲಿ ಸಹಕಾರ ಮೈತ್ರಿಕೂಟ ಸಹಕಾರ ತತ್ವಗಳನ್ನು ಪುನರ್‌ರಚಿಸಿ ಸಹಕಾರ ಅಸ್ಮಿತೆಗೆ ನಾಂದಿಹಾಡಲಾಯಿತು. ಆ ದಿನಗಳಿಂದಲೂ ಬೃಹತ್ ಕಂಪನಿಗಳು (ನಿಗಮಗಳು) ಮತ್ತು ಸಂಸ್ಥೆಗಳು ವಿಶ್ವ ಸರಬರಾಜು ಸರಪಳಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ಈ ಸರಪಳಿಯಲ್ಲಿ ಅವು ತಮ್ಮ ಪ್ರಭಾವವನ್ನು ಬೀರುತ್ತಿವೆ. ಉತ್ಪಾದಕರಿಗೆ 'ಪಾವತಿಮಾಡಿ ಮತ್ತು ಉಳಿಯಿರಿ' ಏರ್ಪಾಡುಗಳನ್ನು ಮಾಡಿರುತ್ತಾರೆ. ತಾವು ಸರಬರಾಜುದಾರರಾಗಿ ಉಳಿಯಲು ಅವರಿಗೆ ಅಲ್ಪ ಭಾಗವನ್ನು ಮರುಪಾವತಿಸಬೇಕಾಗಿದೆ. ಈ ಏರ್ಪಾಡುಗಳು ಸಹಕಾರ ಸಂಘಗಳಿಗೆ ಮತ್ತು ಸಣ್ಣ ಉತ್ಪಾದಕರಿಗೆ ದೊಡ್ಡ, ಮಾರುಕಟ್ಟೆಯಲ್ಲಿ ಪ್ರಭಾವವುಳ್ಳ ಕಂಪನಿ ಗಳು ಸವಾಲು ಒಡ್ಡುತ್ತಿವೆ.

ಸಹಕಾರ ಸಂಘಗಳ ಉತ್ಪನ್ನ ಮತ್ತು ಸೇವೆಗಳನ್ನು ಖರೀದಿಸುತ್ತಿರುವ ಏಕ ಕಂಪನಿ ಅವಲಂಭಿತವಾಗುತ್ತಿರುವುದರಿಂದ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆತಂದುಕೊಳ್ಳಬಾರದಾಗಿದೆ.

ಬೃಹತ್ ಕಂಪನಿಗಳು ಸಹಕಾರ ಸಂಘಗಳಿಂದ ಸರಬರಾಜು ಪಡೆದು ತದನಂತರದಲ್ಲಿ ಅದನ್ನೇ ಅವಲಂಭಿತವಾಗಿ ಮಾಡಿ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಅಪಾಯವನ್ನು ಅಲ್ಲಗಳೆಯಲಾಗುವುದಿಲ್ಲ.

ನೂತನ ಸಮೂಹ/ಸಮಾಜ ಸೇವಾ ಸಹಕಾರ ಸಂಘಗಳು ಸಾರ್ವಜನಿಕ ಪ್ರಾಧಿಕಾರ ಅಥವ ಸರ್ಕಾರಗಳನ್ನು

ಅವಲಂಭಿಸಿ ಅಪಾಯಕ್ಕೆ ಸಿಲುಕಿಕೊಳ್ಳುವ ಸಾಧ್ಯತೆಗಳಿವೆ. ತಮ್ಮ ಒಪ್ಪಂದ ಅವಧಿ ಮುಗಿದ ನಂತರ ದೊಡ್ಡ ಕಂಪನಿಗಳು ಸ್ಪರ್ಧಾತ್ಮಕ ಧರ ನೀಡಿ ಸಹಕಾರ ಸಂಘಗಳನ್ನು ಸಂಕಷ್ಟದಲ್ಲಿ ಸಿಲುಕಿಸುತ್ತವೆ.

ಈ ತೊಡಕುಗಳ ನಿವಾರಣೆಗೆ ಅತ್ಯುತ್ತಮ ವ್ಯವಹಾರ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ತೊಡಕು ನಕ್ಷೆ ತಯಾರಿ ಮತ್ತು ತೊಡಕು ವಿಶ್ಲೇಷಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕಾಗುತ್ತದೆ. ವಾಣಿಜ್ಯ ಮತ್ತು ಇತರೆ ಸಂಭವನೀಯ ತೊಡಕುಗಳನ್ನು ಮೊದಲೇ ಗುರುತಿಸಿ ಪರಿಹಾರೋಪಾಯಗಳು ಮತ್ತು ತಂತ್ರಗಾರಿಕೆಯನ್ನು ರೂಪಿಸಬೇಕಾಗುತ್ತದೆ. ಸಹಕಾರ ಸಂಘದೊಳಗೆ ಈ ಕಾರ್ಯಕ್ಕಾಗಿ ಸೂಕ್ತ ವ್ಯಕ್ತಿಗಳನ್ನು ಗುರುತಿಸಿ ಕಾರ್ಯನಿರ್ವಹಿಸಬೇಕಾಗುತ್ತದೆ. ಪರಿಣಾಮಕಾರಿ ತೊಡಕುನಿವಾರಣೆ ಕ್ರಮ ಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

**ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ – ಆಡಳಿತ ಮಂಡಳಿ ಪಾತ್ರ**

ಇದರ ದೂರಗಾಮಿ ಉಳಿವಿಕೆಗಾಗಿ ಸಹಕಾರ ಸಂಘಗಳ ನಿರ್ದೇಶಕರು ವಿಶೇಷ ಜವಾಬ್ದಾರಿ ಹೊಂದಿರುತ್ತಾರೆ.

ಒಂದು ವ್ಯಾಪಾರಿ ಸಂಸ್ಥೆಯ ಕಳಪೆ ಆಡಳಿತ ಮತ್ತು ಕೆಟ್ಟ ವ್ಯವಸ್ಥಾಪನೆ ಅದರ ಸ್ಥಿರತೆಯನ್ನು ಹಾಳುಗೆಡಹುತ್ತದೆ. ಕಳಪೆ ಆಡಳಿತ ಮತ್ತು ಕೆಟ್ಟ ವ್ಯವಸ್ಥಾಪನೆಯಿಂದ ಆದ ದಿವಾಳಿತ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯತೆಗೆ ಅತಿ ಹೆಚ್ಚಿನ ತೊಡಕು ಉಂಟು ಮಾಡುತ್ತದೆ.

ಸಹಕಾರ ಸಂಘಗಳಲ್ಲಿನ ಕಳಪೆ ಆಡಳಿತ ಮತ್ತು ಕೆಟ್ಟ ವ್ಯವಸ್ಥಾಪನೆ ಕೆಲವು ವ್ಯಾಪಾರ ನಾಯಕರಲ್ಲಿ ವಿಮರ್ಶಕರಲ್ಲಿ ಮತ್ತು ಸಹಕಾರ ಚಳುವಳಿಯ ಒಳಗೆ ಅತಿ ದೊಡ್ಡ ವಹಿವಾಟುಗಳನ್ನು ಚುನಾಯಿತ ನಿರ್ದೇಶಕರು ಅಧುನಿಕ ಆರ್ಥಿಕತೆಯಲ್ಲಿ ಅವಶ್ಯ ನೈಪುಣ್ಯತೆ ಮತ್ತು ಪರಿಣತಿ ಹೊಂದಿರುವುದಿಲ್ಲ ಮತ್ತು ಹೊಂದಲಾಗುವುದಿಲ್ಲ ಎಂಬ ಅಭಿಪ್ರಾಯವಿದೆ. ಇದಕ್ಕೆ ಎಲ್ಲರೂ ಒದಗಿಸುವ ಸಾಮಾನ್ಯ ಪರಿಹಾರವೆಂದರೆ ಚುನಾಯಿತ ನಿರ್ದೇಶಕರಿಗಿಲ್ಲದ ನೈಪುಣ್ಯತೆ ಉಳ್ಳ ಸ್ವತಂತ್ರ ಅಧಿಕಾರೇತರ ನಿರ್ದೇಶಕರನ್ನು ನೇಮಕಾತಿ ಮಾಡಿಕೊಳ್ಳುವುದು. ಇದು ಸ್ವಾಯತ್ತತೆ ಸ್ವಾತಂತ್ರ್ಯ ಮತ್ತು ಪ್ರಜಾಸತ್ತತ್ಮಕ ನಿಯಂತ್ರಣಕ್ಕೆ ಧಕ್ಕೆ ತರುತ್ತದೆ. ಇದಕ್ಕೆ ಪರ್ಯಾಯವೆಂದರೆ ಚುನಾಯಿತ ಆಡಳಿತ ಮಂಡಳಿ ಸದಸ್ಯರು (ನಿರ್ದೇಶಕರು) ಸಂಭವನೀಯ ನಿರ್ದೇಶಕರು ಗಳಿಗೆ ಶಿಕ್ಷಣ, ತರಬೇತಿ ಮತ್ತು ಅಭಿವೃದ್ಧಿಗೆ ಅವಕಾಶಗಳನ್ನು ಕಲ್ಪಿಸುವ ಮೂಲಕ ಈ ಕೊರತೆಯನ್ನು ನೀಗಿಸುವುದು.

ಇದರಿಂದ ಸಾಮೂಹಿಕವಾಗಿ ಜ್ಞಾನ, ನೈಪುಣ್ಯತೆಯನ್ನು ಭರಿಸಿ ಉತ್ತಮ ಆಡಳಿತದ ಸಾಮರ್ಥ್ಯವನ್ನು ಹೆಚ್ಚಳಗೊಳಿಸಬಹುದಾಗಿದೆ. ಆಡಳಿತ ಮಂಡಳಿಯಲ್ಲಿ ವಿಷಯಗಳಲ್ಲಿ ಕೊರತೆಕಂಡು ಬಂದಲ್ಲಿ ಅದನ್ನು ಭರ್ತಿ ಮಾಡಲು ಸಹಮತ (ಕೋ ಆಪ್ಷನ್) ಮೂಲಕ ಕ್ರಮ ತೆಗೆದುಕೊಳ್ಳ ಬಹುದಾಗಿದೆ.

ಪ್ರತಿದಿನದ ಆಡಳಿತದಲ್ಲಿ ಈ ನಾಲ್ಕನೇ ತತ್ವದ ಅನ್ವಯತೆ ಬಗ್ಗೆ ಹುಟ್ಟು ಹಾಕುವ ಪ್ರಶ್ನೆಯೆಂದರೆ ಹೇಗೆ ಚುನಾಯಿತ ನಿರ್ದೇಶಕರು ಜ್ಞಾನ,ನೈಪುಣ್ಯತೆ ಮತ್ತು ಪರಿಣತೆ ಪಡೆಯುತ್ತಾರೆ, ಸದಸ್ಯ ನಿಯಂತ್ರಿತ ಪ್ರಜಾಸತ್ತಾತ್ಮಕ ಆಡಳಿತದಲ್ಲಿ ಪರಿಣತಿಯ ಆಡಳಿತ ನೀಡುತ್ತಾರೆ ಮತ್ತು ಹೇಗೆ ಅವರನ್ನು ಜವಾಬ್ದಾರಿ (ಹೊಣೆಗಾರರು)ಯನ್ನಾಗಿ ಮಾಡುವುದು.

ಉತ್ತರ ಬಹುಶಃ 5ನೇ ತತ್ವವಾದ ಶಿಕ್ಷಣ, ತರಬೇತಿ ಮತ್ತು ಮಾಹಿತಿಯಲ್ಲಿದೆ. ಯಶಸ್ವಿ ಸಹಕಾರ ಸಂಘಗಳಲ್ಲಿ ಚುನಾಯಿತ ನಿರ್ದೇಶಕರು ಮತ್ತು ನಿರ್ದೇಶಕರಾಗಬಯಸುವವರು ಉತ್ತಮ ಆಡಳಿತ ನೀಡಬಲ್ಲ ವಿಷಯಗಳಲ್ಲಿ ತರಬೇತಿ ಮತ್ತು ಶಿಕ್ಷಣವನ್ನು ಪಡೆದಿರುತ್ತಾರೆ ಮತ್ತು ಸಂಸ್ಥೆಯ ಹಿರಿಯ ಅಧಿಕಾರಿಗಳಿಂದ ಅವಶ್ಯ ಮಾಹಿತಿಗಳನ್ನು ಪಡೆಯುತ್ತಾರೆ. ಇದರಿಂದಾಗಿ ಅವರು ಉತ್ತಮ ಆಡಳಿತವನ್ನು ನೀಡುವುದಲ್ಲದೆ ಹೊಣೆಗಾರರು ಆಗಿರುತ್ತಾರೆ. ಅವರ ಪರಿಣತಿಯಿಂದಾಗಿ ಹಿರಿಯ ವ್ಯವಸ್ಥಾಪಕನ ಆಡಳಿತದ ವ್ಯವಹಾರ ಶಿಫಾರಸ್ಸುಗಳನ್ನು ಪರಿಗಣಿಸುವುದು ಮತ್ತು ಅವುಗಳನ್ನು ಪ್ರಶ್ನಿಸುವ ಚಾಕುಚಕ್ಯತೆ (ಪರಿಣತಿ)ಯನ್ನು ಹೊಂದಿರುತ್ತಾರೆ.

ಸ್ಥಿರತೆಯನ್ನು ಸಾಧಿಸಲು ಆಡಳಿತ ಮಂಡಳಿ ಸದಸ್ಯರು ಹಿರಿಯ ಅಧಿಕಾರ ವರ್ಗವು ಸಹಕಾರ ಮೌಲ್ಯಗಳು ಮತ್ತು ಸಹಕಾರ ತತ್ವಗಳನ್ನು ಅರಿತವರಾಗಿರುಬೇಕು ಮತ್ತು ಸ್ಪಷ್ಟ ದೃಷ್ಟಿಕೋನ ಹೊಂದಿರುವವರಾಗಿರಬೇಕು. ಮಿಗಿಲಾಗಿ ಸ್ವಾಯತ್ತತೆ ಮತ್ತು ಸ್ವತಂತ್ರ್ಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ನಿರ್ಣಯಗಳನ್ನು ಕೈಗೊಳ್ಳಬೇಕು.

ಸ್ವಾಯತ್ತತೆ ಮತ್ತು ಸ್ವಾತಂತ್ರ್ಯತೆಗೆ ಇಂಬುಕೊಡುವಂತೆ ಕಾಯ್ದೆ ಕಾನೂನುಗಳು ಇದ್ದಲ್ಲಿ ಸಹಕಾರಿಯಾಗುತ್ತವೆ. ಆಡಳಿತ ಮಂಡಳಿಯು ಸರ್ವಸದಸ್ಯರ ಸಭೆಗೆ ಉತ್ತರಧಾಯಿಗಳು ಎಂಬುದನ್ನು ಅರಿತಿರಬೇಕು. ಸದಸ್ಯರಿಗೆ ಮುಕ್ತವಾಗಿ ಲೆಕ್ಕಪರಿಶೋಧನ ವರದಿಗಳು ಲಭ್ಯವಾಗುವಂತಿರ ಬೇಕು. ಇದು ಆಡಳಿತದಲ್ಲಿನ ಪರಿಶೀಲನೆ ಮತ್ತು ಸಮತೋಲನಗಳು (checks and balances) ಆಡಳಿತಾತ್ಮಕ ಅಂಶಗಳು ಅಲ್ಲದೇ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ತೊಡಕುಗಳು ಉಂಟಾಗಿದ್ದಲ್ಲಿ ಅಂಶಗಳ ಬಗ್ಗೆಯು ಬೆಳಕು ಚೆಲ್ಲುವಂತಿರಬೇಕು.

**ರಾಷ್ಟ್ರೀಯ ಸಹಕಾರ ಮಹಾಮಂಡಳಗಳ ಮತ್ತು ಉತ್ತುಂಗ ಸಂಸ್ಥೆಗಳು ಮತ್ತು ಮೈತ್ರಿಕೂಟದ ಪಾತ್ರ**

ಸಹಕಾರ ಸಂಘಗಳ ಯಶಸ್ವಿ ಕಾರ್ಯಾಚರಣೆಯಲ್ಲಿ ಉತ್ತುಂಗ ರಾಷ್ಟ್ರೀಯ ಸಹಕಾರ ಸಂಸ್ಥೆಗಳು ಮೈತ್ರಿ ಸಂಸ್ಥೆ ಒಡಗೂಡಿ ಸರ್ಕಾರಗಳು ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದ ಹಾಗೆ ಕಾಯ್ದೆ ಕಾನೂನುಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಬೇಕು. ಉತ್ತುಂಗ ಸಂಸ್ಥೆಗಳು ಸಹಕಾರ ಸಂಘಗಳಲ್ಲಿ ಉತ್ತಮ ಆಡಳಿತ/ ವ್ಯವಸ್ಥಾಪನ ರೂಢಿಗಳನ್ನು ಅಳವಡಿಸುವಲ್ಲಿ ಉತ್ತಮ ಮಾರ್ಗದರ್ಶನ ನೀಡಬೇಕು. ಇದರಿಂದ ಸದಸ್ಯರಿಗೆ ಅಗತ್ಯ ಸೇವೆ ಒದಗಿಸುವುದಲ್ಲದೆ ಸಮಾಜಕ್ಕೆ ಉತ್ತಮ ಕೊಡುಗೆ ನೀಡಿದಂತಾಗುತ್ತದೆ. ಸದಸ್ಯರ ಹಿತದೃಷ್ಟಿಯಿಂದ ಸದಸ್ಯರ ನಿಯಂತ್ರಿತ ಸಂಸ್ಥೆಯಾಗಿ ಅವರ ಹಿತಕಾಪಾಡುವ ನಿರ್ದಾರಗಳನ್ನು ಸ್ವಾಯತ್ತತೆ ಮತ್ತು ಸ್ವತಂತ್ರ್ಯತೆಗೆ ಚ್ಯುತಿಬಾರದಂತೆ ತೆಗೆದುಕೊಳ್ಳಬೇಕು. ಖರೀದಿದಾರರು–ಸರಬರಾಜುದಾರರ ಒತ್ತಡಗಳಿಗೆ ಮಣಿಯದಂತೆ ಸದಸ್ಯರ ಹಿತದೃಷ್ಟಿಯಿಂದ ನಿರ್ಧಾರ ತೆಗೆದುಕೊಳ್ಳಬೇಕಾದ ಜವಾಬ್ದಾರಿ ಆಡಳಿತ ಮಂಡಳಿಯದ್ದಾಗಿದೆ. ಸರ್ಕಾರಗಳ ಶಾಸನಯುತ, ತೆರಿಗೆ, ನಿಯಂತ್ರಣಗಳು, ಆರ್ಥಿಕ ಸವಲತ್ತುಗಳನ್ನು ಪಡೆಯುವಲ್ಲಿ ಉತ್ತುಂಗ ಸಂಸ್ಥೆಗಳ ಪಾತ್ರ ಬಹುಮುಖ್ಯವಾಗುತ್ತದೆ. ರಾಜಕೀಯ ಹಿತಾಸಕ್ತಿಗಳು ಸಂಘಗಳನ್ನು ದುರ್ಬಲಗೊಳಿಸುತ್ತವೆ. ದುರ್ಬಲ ಗೊಳಿಸುವುದರಿಂದ ತಪ್ಪಬಹುದಾದ ಲಾಭ, ಆಗುವ ನಷ್ಟಗಳ ಬಗ್ಗೆ ಅವರಲ್ಲಿ ಅರಿವು ಉಂಟುಮಾಡಬೇಕಾದ ಅವಶ್ಯಕತೆ ಇದೆ.

5ನೇ ತತ್ವವಾದ ಶಿಕ್ಷಣ, ತರಬೇತಿ ಮಾಹಿತಿ ಈ ಸವಾಲುಗಳಿಗೆ ಉತ್ತರವಾಗುತ್ತದೆ. ಹೆಚ್ಚು ಹೆಚ್ಚು ಸದಸ್ಯರು ನೌಕರರು, ರಾಜಕೀಯ ವ್ಯಕ್ತಿಗಳು ಮತ್ತು ಸಾರ್ವಜನಿಕರಲ್ಲಿ ಸಹಕಾರ ಸಂಘಗಳ ಸಾಮಾಜಿಕ ಸಾಂಸ್ಕೃತಿಕ ಆರ್ಥಿಕ ಫಲಗಳನ್ನು ಮಾನವೀಯ ಪ್ರಪಂಚಕ್ಕೆ ನೀಡಬಲ್ಲವು ಎಂಬುದರ ಬಗ್ಗೆ ಅರಿವು ಉಂಟು ಮಾಡುವುದಲ್ಲದೇ ಇದರಿಂದ ಸಹಕಾರ ಸಂಘಗಳ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಿದಂತಾಗುತ್ತದೆ.

## 4. ಭವಿಷ್ಯದಲ್ಲಿ ಪರಿಗಣಿಸಬೇಕಾದ ಅಂಶಗಳು ಉಪಯೋಗ ಪಡೆಯದ ಸದಸ್ಯರು ಮತ್ತು ಹೂಡಿಕೆ ಸದಸ್ಯರು:

ಯಾವ ಸಹಕಾರ ಸಂಘಗಳಲ್ಲಿ ಸಂಘದ ಉಪಯೋಗ ಪಡೆಯದ ಸದಸ್ಯರು ಮತ್ತು ಹೂಡಿಕೆ ಮಾಡುವ ಸದಸ್ಯರಿರುತ್ತಾರೋ ಅಲ್ಲಿ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯತೆಗೆ ಧಕ್ಕೆ ಬರುತ್ತದೆ. ಉಪಯೋಗ ಪಡಯುತ್ತಿರುವ ಸದಸ್ಯರ ಬದ್ಧತೆಯನ್ನು ಈ ಸದಸ್ಯರು ಹೊಂದಿರುವುದಿಲ್ಲ. ಅದರಲ್ಲಿಯೂ ಅವರಿಗೆ ಮತದಾನದ ಹಕ್ಕು ಅಥವ ನಾಮ ನಿರ್ದೇಶನಕ್ಕೆ ಅವಕಾಶ ವಿದ್ದಾಗ ಮತ್ತೂ ಆತಂಕಕಾರಿಯಾಗುತ್ತದೆ. ಆದುದರಿಂದ ಈ ರೀತಿಯ ಏರ್ಪಾಡುಗಳನ್ನು ಮಾಡಿಕೊಳ್ಳುವ ಮುನ್ನ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ಕುಂದುಬಾರದಂತೆ ಎಚ್ಚರವಹಿಸಬೇಕು.

# 5ನೇ (ಐದನೇ) ತತ್ವ

# ಶಿಕ್ಷಣ, ತರಬೇತಿ ಮತ್ತು ಮಾಹಿತಿ

ಸಹಕಾರ ಸಂಘಗಳು ತನ್ನ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ವ್ಯವಸ್ಥಾಪಕರುಗಳಿಗೆ ಮತ್ತು ನೌಕರರಿಗೆ ತರಭೇತಿ ನೀಡುತ್ತವೆ. ಇದರಿಂದ ಅವರು ತಮ್ಮ ಸಹಕಾರ ಸಂಘದ ಅಭಿವೃದ್ಧಿಗೆ ಪರಿಣಾಮಕಾರಿಯಾದ ಕೊಡುಗೆ ನೀಡುತ್ತಾರೆ. ಸಹಕಾರದ ರಚನೆ ಮತ್ತು ಅದರಿಂದಾಗುವ ಪ್ರಯೋಜನಗಳ ಬಗ್ಗೆ ಸಾರ್ವಜನಿಕರಿಗೆ ಅದರಲ್ಲಿಯೂ ಯುವಕರಿಗೂ ಮತ್ತು ಅಭಿಪ್ರಾಯ ಮೂಡಿಸಬಲ್ಲ ನಾಯಕರಿಗೂ ಅವರು ಮಾಹಿತಿ ಒದಗಿಸುತ್ತಾರೆ.

## 1. ಪರಿಚಯ

ಚಾರಿತ್ರಿಕವಾಗಿ ಮತ್ತು ವಿಶಿಷ್ಟ ಬದ್ಧತೆಯನ್ನು ಸಹಕಾರ ಚಳುವಳಿಯು ಶಿಕ್ಷಣಕ್ಕೆ ತೋರುತ್ತಾ ಬಂದಿರುತ್ತದೆ. ಸಂಸ್ಥಾಪಕ ತತ್ವಗಳಲ್ಲಿ ಶಿಕ್ಷಣವೂ ಒಂದು. ರಾಕ್‌ಡೇಲ್ ಅಗ್ರಗಾಮಿಗಳು ಮೊದಲಿಗೆ ತಯಾರಿಸಿದ ನಿಯಮಗಳನ್ನು ತಮ್ಮ ವಾರ್ಷಿಕ ವರದಿಯಲ್ಲಿ "ಲಾಭದಲ್ಲಿ ನಿರ್ಧಿಷ್ಟ ಶೇಕಡ ಮೊತ್ತವನ್ನು ಶಿಕ್ಷಣಕ್ಕಾಗಿ ಕಾದಿರಿಸಬೇಕು" ಎಂಬುದನ್ನು ತಿಳಿಸಿರುತ್ತಾರೆ. ಸಹಕಾರ ತತ್ವಗಳನ್ನು ರಚಿಸಿದಿಂದಾಗಿನಿಂದ ಸಹಕಾರ ಚಳುವಳಿಯ ಪ್ರಮುಖ ತತ್ವವಾಗಿ ಶಿಕ್ಷಣಕ್ಕೆ ಬದ್ಧತೆ ತೋರಲಾಗಿದೆ.

ಶಿಕ್ಷಣ ಎಂಬುದು ಕೆಲವೇ ಮಂದಿಗೆ ಸೀಮಿತವಾಗಿದ್ದ ದಿನಗಳಲ್ಲಿ ಆರಂಭಿಕ ಸಹಕಾರಿಗಳಿದ್ದರು. ಜೀವನದ ಸುಧಾರಣೆಗಾಗಿ ಮೂಲಭೂತವಾಗಿ ಶಿಕ್ಷಣ ಅಗತ್ಯ ಎಂಬುದನ್ನು ಮನಗಾಣಲಾಯಿತು. ಸಾಮಾಜಿಕ ಪ್ರಗತಿ ಮತ್ತು ಜ್ಞಾನೋದಯಕ್ಕೆ ಶಿಕ್ಷಣ ಪ್ರಮುಖ ಅಂಶ. ಸಹಕಾರ ವ್ಯಾಪಾರದಿಂದ ಗಳಿಸಿದ ಲಾಭದಲ್ಲಿ ಕೆಲವಂಶವನ್ನು ತಮ್ಮ ಸದಸ್ಯರ ಮತ್ತು ಅವರ ಕುಟುಂಬಗಳ ಶಿಕ್ಷಣಕ್ಕಾಗಿ ಮೀಸಲಿರಿಸಿದರು.

ರಾಕ್ಡೇಲ್ ಮಾದರಿ ಸಹಕಾರ ಬೆಳೆಯಲು ಮತ್ತು ಆಚರಣೆ ರೂಢಿಗಳು ತದನಂತರದಲ್ಲಿ ಇವುಗಳೇ ಸಹಕಾರ ತತ್ವಗಳಾಗಿ ರೂಪಗೊಳ್ಳಲು ನೇರ ಕಾರಣವಾದದ್ದು. ಅವರು ಶಿಕ್ಷಣ ಮತ್ತು ಕಲಿಕೆಗೆ ನೀಡಿದ ಪ್ರಾಮುಖ್ಯತೆ. ರಾಬರ್ಟ್ ಓವನ್ ಕಾಲದಿಂದಲೂ, ಪ್ರಮುಖ ಮಾರ್ಗದರ್ಶಿಗಳಾದ ಜಾರ್ಜ್ ಜಾಕೋಬ್ ಹೊಲಯೋಕೆ ರಾಕ್‌ಡೇಲ್ ಅಗ್ರಗಾಮಿಗಳ ಅನುಭವಗಳ ಆಧಾರದ ಮೇರೆಗೆ ಸಹಕಾರ ಮಾದರಿ ರೂಪುಗೊಂಡಿತು. ರಾಕ್‌ಡೇಲ್ ಅಗ್ರಗಾಮಿಗಳು ತಯಾರಿಸಿದ ನಿಯಮಗಳು ಮತ್ತು 1832ರಲ್ಲಿ ರಾಬರ್ಟ್ ಓವನ್‌ರ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶದಲ್ಲಿ ಅಭಿವೃದ್ಧಿ ಪಡಿಸಿದ ತತ್ವಗಳಿಗೂ ಸ್ಪಷ್ಟ ಸಂಬಧವಿದೆ. ಇದರಿಂದ ಅಗ್ರಗಾಮಿಗಳು ಸ್ಪಷ್ಟ ಆಲೋಚನೆಗಳನ್ನು ಉಳ್ಳವರಾಗಿದ್ದರು ಎಂಬುದು ತಿಳಿದು ಬರುತ್ತದೆ.

ಡಾ॥ ವಿಲಿಯಂಕಿಂಗ್ ಎಂಬ ವೈದ್ಯರು ಮೇ 1828 ರಿಂದ ಆಗಸ್ಟ್ 1830 ರವರೆಗೆ 28 ತಿಂಗಳು ಕಾಲ "ದಿ ಕೋ ಆಪರೇಟರ್" ಎಂಬ ಕಿರುಹೊತ್ತಿಗೆ ಯನ್ನು ಪ್ರಕಟಿಸಿದ್ದರು. ಇದನ್ನು ರಾಕ್‌ಡೇಲ್ ಅಗ್ರಗಾಮಿಗಳು ಅಧ್ಯಯನ ಮಾಡಿರುತ್ತಾರೆ. ಈ ವೈದ್ಯರು ಕಾರ್ಮಿಕ ವರ್ಗದ ಬಗ್ಗೆ ಅತೀವ ಕಾಳಜಿಯನ್ನು ಹೊಂದಿದ್ದರು. ಇಂಗ್ಲೇಂಡ್‌ನ ಬ್ರೈಟನ್‌ನಲ್ಲಿ ಬಡವರ ಏಳಿಗೆಗಾಗಿ ಶ್ರಮಿಸುತ್ತಿದ್ದರು. ತಾವೇ 1825ರಲ್ಲಿ ಮ್ಯಾಕಿನಕ್‌ಗಳಿಗಾಗಿ ಒಂದು ಸಂಸ್ಥೆ (ಇನ್‌ಸ್ಟಿಟ್ಯೂಟ್) ಸ್ಥಾಪಿಸಿದ್ದರು. 'ಬ್ರೈಟಿನ್ ಇನ್‌ಸ್ಟಿಟ್ಯೂಟ್' ಎಂದು ಕರೆಯಲಾಗುತ್ತಿತ್ತು. ಇಲ್ಲಿ ಇವರು ಉಪನ್ಯಾಸಕರಾಗಿ ಮತ್ತು ಸಹಕಾರದ ಅಭಿವೃದ್ಧಿಗಾಗಿ ಪ್ರತಿಪಾದಿಸುತ್ತಿದ್ದರು. 1830ರಲ್ಲಿ ಮ್ಯಾಂಚೆಸ್ಟರ್ ಹತ್ತಿರದ ಸಾಲ್‌ಪೋರ್ಡ್‌ನಲ್ಲಿ ಓವನ್‌ರ ಸಹಕಾರ ಶಾಲೆಯಲ್ಲಿ ಉಪನ್ಯಾಸಗಳಿಗೆ ಅಗ್ರಗಾಮಿಗಳು ಹಾಜರಾಗುತ್ತಿದ್ದರು ಎಂಬುದಕ್ಕೆ ಸಾಕ್ಷಿಗಳು ದೊರಕಿವೆ.

ಐವತ್ತು ವರ್ಷಗಳ ಸಹಕಾರ ಪ್ರಯೋಗ ವಿಶ್ವದೆಲ್ಲೆಡೆ ಪಸರಿಸಿದೆ ಎಂಬುದಕ್ಕೆ ಕಾರಣ ಅನುಭವಗಳ ಹಂಚಿಕೆ, ಯಶಸ್ಸು, ವಿಫಲತೆ ಮತ್ತು ಹಿಂಜರಿಕೆಗಳಿಂದ ಕಲಿತ ಪಾಠಗಳೇ ಆಗಿರುತ್ತದೆ. ಈ ಅನುಭವ ಮತ್ತು ಕಲ್ಪನೆಯನ್ನು ಹಂಚಿಕೊಂಡಿದ್ದರಿಂದ ಇಷ್ಟೊಂದು ವೈವಿಧ್ಯಮಯ ಸಹಕಾರ ಸಂಘಗಳು ಕಾರ್ಯಾಚರಣೆಗೆ ಬರಲು ಸಾಧ್ಯವಾಯಿತು. ರಾಫಿಸನ್ ಮಾದರಿ, ಆಂಟಿಗೋನಿಷ್ ಮತ್ತು ಮಂಡ್ರಗಾನ್ ಚಳುವಳಿ ಬೆಳೆಯಲು ಸಹಕಾರ ಶಿಕ್ಷಣವೇ ಪ್ರಮುಖ ಪಾತ್ರ ನಿರ್ವಹಿಸಿದೆ. ಸಹಕಾರ ಅಭಿವೃದ್ಧಿಯ ಚಾಲಕ ಅದರ ಜೈವಿಕ ಶಕ್ತಿ (ರಕ್ತ) ಸಹಕಾರ ಶಿಕ್ಷಣವಾಗಿತ್ತು ಮತ್ತು ಇದೆ ಮತ್ತು ಮುಂದೆಯೂ ಇರುತ್ತದೆ.

ರಾಕ್‌ಡೆಲ್‌ನ ಬೋಡ್‌ಲೇನ್ (ಗಲ್ಲಿ)ಯಲ್ಲಿ ಅಗ್ರಗಾಮಿಗಳು ತೆರೆದ ಮೊದಲ ಅಂಗಡಿಯ ಕಟ್ಟಡವನ್ನು ಪೂರ್ಣವಾಗಿ ಅವರೇ ತಮ್ಮ ವಶಕ್ಕೆ ತೆಗೆದು ಕೊಂಡಮೇಲೆ ಮೊದಲ ಮಹಡಿಯನ್ನು ಸದಸ್ಯರ ಅಧ್ಯಯನ ಕೊಠಡಿಯನ್ನಾಗಿ ಪರಿವರ್ತಿಸಿದರು. ಅಂದಿನ ಸಹಕಾರಿಗಳು ಆಗ ಉದ್ಭವವಾಗುತ್ತಿದ್ದ ತಾಂತ್ರಿಕತೆಯ ಅಭಿವೃದ್ಧಿಯ ಲಾಭವನ್ನು ಪಡೆದರು. ಮಾಜಿಕ್ ಲಾಟಿನ್‌ನ ಸೈಡ್ ನಿಂದ ಸಿನೇಮಾವರೆಗೂ ಶಿಕ್ಷಣ ಮತ್ತು ಮಾಹಿತಿ ನೀಡಲು ಉಪಯೋಗಿಸಿಕೊಂಡರು. ರಾಕ್‌ಡೇಲ್ ಅಗ್ರಗಾಮಿಗಳ ಮಾದರಿಯಂತೆ ಅನೇಕ ಸಹಕಾರ ಸಂಘಗಳು ಅಧ್ಯಯನ ಕೊಠಡಿ ಮತ್ತು ಗ್ರಂಥಾಲಯಗಳನ್ನು ಸ್ಥಾಪಿಸಿದವು. ಅವರ ಕಾರ್ಯಕ್ರಮಗಳ ವಿಸ್ತರಣೆಗಾಗಿ ವಿಶ್ವವಿದ್ಯಾಲಯಗಳು ಮತ್ತು ಇತರರೊಡನೆ ಪಾಲುಗಾರಿಕೆ ಒಪ್ಪಂದಗಳನ್ನು ಮಾಡಿಕೊಂಡರು.

ಸಾರ್ವಜನಿಕರ ತಿಳುವಳಿಕೆಗೆ ತರಲು ನೀತಿ ರೂಪಕರಿಗೆ ಸದಸ್ಯರಿಗೆ ಮಾಹಿತಿ ಒದಗಿಸಲು ಈ ದಿನಗಳಲ್ಲಿ ಸಹಕಾರ ಶಿಕ್ಷಣವು ಹೆಚ್ಚು ಪರಿಣಾಮಕಾರಿಯಾಗಿ ವಿನೂತನವಾಗಿ ಹೊಸ ಕಲ್ಪನೆಗಳೊಡನೆ ನೂತನ ತಾಂತ್ರಿಕತೆಯ ಅವಿಷ್ಕಾರಳನ್ನು ಅವಕಾಶಗಳನ್ನು ಬಳಸಿಕೊಂಡು ವಿಶ್ವವಿದ್ಯಾಲಯಗಳೊಡನೆ ಸಂಪರ್ಕಏರ್ಪಡಿಸಿ ಸಂಶೋಧನೆಗೆ ಉತ್ತೇಜಿಸಿ ಅದರ ಫಲಿತಾಂಶಗಳನ್ನು ಸಂಬಂಧಿಸಿದವರಿಗೆ ತಿಳಿಸಿ ಸಹಕಾರ ಅಭಿವೃದ್ಧಿ ಪಡಿಸಲು ಸಾಧ್ಯವಿದೆ. ಯಶಸ್ವಿ ಸಹಕಾರ ಶಿಕ್ಷಣವು ತನ್ನ ಪ್ರಮುಖ ಉದ್ದೇಶವನ್ನು ಮರೆಯದೆ ಈ ದಿನ ಮತ್ತು ನಾಳೆಯ ಸಹಕಾರ ರಚನೆ ಮತ್ತು ಲಾಭಗಳನ್ನು ಅರ್ಥೈಸಿ ಅಳವಡಿಸಿಕೊಳ್ಳಲು ಸಾಧ್ಯವಾಗಿಸುತ್ತದೆ.

ಈಗಿನ ವಿಶ್ವದ ಸಹಕಾರ ಚಳುವಳಿಯ ಯಶಸ್ವಿಗೆ ಕಾರಣವೆಂದರೆ ಅಗ್ರಗಾಮಿಗಳ ದೂರದೃಷ್ಟಿ ಮತ್ತು ಆಶಯಗಳನ್ನೊಳಗೊಂಡ ಸಹಕಾರ ಶಿಕ್ಷಣ ಸಹಕಾರ ಚಳುವಳಿ ಕಾನೂನುಗಳನ್ನು ಅವಲಂಭಿಸಿದ ಚಳುವಳಿಯಲ್ಲ, ಆದರೆ ಅದು ಮೌಲ್ಯ ಮತ್ತು ತತ್ವ ಆಧಾರಿತ ಚಳುವಳಿ. ಸಹಕಾರ ಸಂಘಗಳ ಕ್ರಿಯಾತ್ಮಕ ಬುನಾದಿ ಅದರ ತತ್ವಗಳೇ ಎಂಬುದನ್ನು ಸಹಕಾರಿಗಳು ಅರ್ಥ ಮಾಡಿಕೊಂಡು ಈಗಿನ ಅತಿವೇಗದಲ್ಲಿ ಬದಲಾಗುತ್ತಿರುವ ಪ್ರಪಂಚದಲ್ಲಿ ಅವುಗಳನ್ನು ಹೇಗೆ ಆಚರಣೆಗೆ ತರಬೇಕು ಎಂಬುದನ್ನು ಆಲೋಚಿಸಬೇಕಾಗಿದೆ. ಈಗಿನ ಸಹಕಾರ ವ್ಯಾಪಾರದ ಯಶಸ್ಸಿಗೆ ಪುಸ್ತಕದ ಕಲಿಕೆಯೊಡನೆ ಅನುಭವ ಕಲಿಕೆಯನ್ನು ಒಗ್ಗೂಡಿಸಿ ಯಶಸ್ವಿ ಸಹಕಾರ ಸಂಘ ನಡೆಸುವುದು ಹೇಗೆ ಎಂಬುದು ಪ್ರಮುಖ ವಿಷಯವಾಗಿದೆ. ನೂತನ ಪೀಳಿಗೆಯ ದೂರದೃಷ್ಟಿ ಶಕ್ತಿಗಳ ಸಹಾಯ ಪಡೆದು ಸಹಕಾರ ಚಳುವಳಿಯನ್ನು ಭದ್ರ ಪಡಿಸಲು ಪರಿಣಾಮಕಾರಿ ಸಹಕಾರ ಶಿಕ್ಷಣದಿಂದ ಮಾತ್ರ ಸಾಧ್ಯ. ಮುಂದಿನ ಉತ್ತಮ ವಿಶ್ವ ನಿರ್ಮಾಣಕ್ಕೆ ಸಹಕಾರ ಮಾದರಿ ಹೇಗೆ ಸಾಧ್ಯವಾಗಿಸುತ್ತದೆ ಎಂಬುದರ ಬಗ್ಗೆ ಚಿಂತನೆ ಅಗತ್ಯ.

## 2. ಪದಗಳು ಮತ್ತು ಪದಪುಂಜಗಳ (ಗುಚ್ಚ) ಅರ್ಥೈಸುವಿಕೆ (ವ್ಯಾಖ್ಯಾನ)

ಮೊದಲ ಪದ ಪುಂಜ (ಗುಚ್ಚ) "ಸಹಕಾರ ಸಂಘಗಳೂ ತನ್ನ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ವ್ಯವಸ್ಥಾಪಕರುಗಳಿಗೆ ಮತ್ತು ನೌಕರರಿಗೆ ಶಿಕ್ಷಣ ಮತ್ತು ತರಭೇತಿಯನ್ನು ನೀಡುತ್ತದೆ.(ಒದಗಿಸುತ್ತದೆ). ಎಲ್ಲ ಸಹಕಾರ ಸಂಘಗಳು ಮಾಡಲೇಬೇಕಾದದನ್ನು ಸರಳವಾಗಿ ಹೇಳಲಾಗಿದೆ. ಆದರೆ ಸಹಕಾರ ಸಂಘಗಳು ಇದರ ಬಗ್ಗೆ ಉದಾಸೀನ ತೋರುತ್ತವೆ. ಈ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳತ್ತವೆ. ಆದರೆ ಸಹಕಾರ ಸಂಘದ ಸುಸ್ಥಿರತೆಗೆ ಮತ್ತು ಯಶಸ್ಸಿಗೆ ಇದು

ಮೂಲಭೂತ ಅವಶ್ಯಕತೆ.

ಮೊದಲನೆ ವಾಕ್ಯವು "ಇದರಿಂದ ಅವರು ಸಹಕಾರ ಸಂಘದ ಅಭಿವೃದ್ಧಿಗೆ ಪರಿಣಾಮಕಾರಿ ಕೊಡುಗೆ ನೀಡಬಲ್ಲರು" ಎಂಬುದನ್ನು ಉದ್ದೇಶ ಪೂರ್ವಕವಾಗಿ ಗುಣಾತ್ಮಕವಾಗಿ ಒಳಗೊಂಡಿರುತ್ತದೆ. ಹೌದು ಸಹಕಾರ ಶಿಕ್ಷಣದ ಗುರಿಯೇ ಇದಾಗಿರುತ್ತದೆ. ಆದರೆ ಇದನ್ನು ಕೇವಲವಾಗಿ ಎಂದು ಅರ್ಥೈಸುವಂತಿಲ್ಲ ಮಾರ್ಗದರ್ಶಿಯು ಶಿಕ್ಷಣ ಮೌಲ್ಯವನ್ನು ವಿಶಾಲ ದೃಷ್ಟಿಯಿಂದ ಪರಿಗಣಿಸುತ್ತದೆ. ಕೆಲವು ರಾಷ್ಟ್ರಗಳಲ್ಲಿ ಸದಸ್ಯರು ಅನಕ್ಷರಸ್ತರು ಶಿಕ್ಷಣ ಇಲ್ಲದವರೂ ಆಗಿದ್ದು, ಅವರನ್ನು ಸಾಕ್ಷರರನ್ನಾಗಿ ಮಾಡುವುದು ಮತ್ತು ಅಂಕಿ ಸಂಖ್ಯೆಗಳ ಬಗ್ಗೆ ತಿಳುವಳಿಕೆಯನ್ನು ಮೂಡಿಸಬೇಕು.

"ಅವರು ಸಹಕಾರದ ಪ್ರಕೃತಿ ಮತ್ತು ಅದರ ಪ್ರಯೋಜನಗಳನ್ನು (ಲಾಭಗಳನ್ನು) ಸಾರ್ವಜನಿಕರಿಗೆ, ಅದರಲ್ಲಿಯೂ ಯುವಕರಿಗೆ, ಅಭಿಪ್ರಾಯ ಮೂಡಿಸುವ ನಾಯಕರಿಗೆ ಮಾಹಿತಿ ನೀಡುತ್ತಾರೆ". ಈ ವಾಕ್ಯವು ಇದು ಕೇವಲ ತನ್ನ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ ನೌಕರರಿಗೆ ಮಾತ್ರವೆಂದು ಅಂತರ್ಮುಖಿಯಾಗಿಲ್ಲ, ಬಹಿರ್ಮುಖಿಯಾಗಿದೆ ಎಂಬುದನ್ನು ತಿಳಿಸುತ್ತದೆ.

"ಅದರಲ್ಲಿಯೂ ಯುವಕರಿಗೆ ಮತ್ತು ಅಭಿಪ್ರಾಯ ಮೂಡಿಸುವ ನಾಯಕರಿಗೆ" ಎಂಬಲ್ಲಿ ಮುಂದಿನ ಪೀಳಿಗೆ ಮತ್ತು ಸಾರ್ವಜನಿಕ ಅಭಿಪ್ರಾಯ ಮೂಡಿಸುವ ರಾಜಕೀಯ ವ್ಯಕ್ತಿಗಳು, ಸಾರ್ವಜನಿಕ ಸೇವಕರು, ಮಾಧ್ಯಮ ಪ್ರತಿನಿಧಿಗಳು, ಶಿಕ್ಷಕರನ್ನು ಒಳಗೊಳ್ಳುತ್ತದೆ.

ಐದನೇ ತತ್ವದಲ್ಲಿ "ಶಿಕ್ಷಣ', "ತರಭೇತಿ" ಮತ್ತು "ಮಾಹಿತಿ" ಪ್ರತಿಯೊಂದೂ ಶಿಕ್ಷಣದಲ್ಲಿ ಪ್ರತ್ಯೇಕ ಪಾತ್ರ ನಿರ್ವಹಿಸುತ್ತವೆ.

"ಶಿಕ್ಷಣ" ಎಂದರೆ ಸಹಕಾರ ಮೌಲ್ಯಗಳು ಮತ್ತು ತತ್ವಗಳನ್ನು ಅರ್ಥ ಮಾಡಿಕೊಂಡು ದೈನಂದಿನ ವ್ಯವಹಾರಗಳಲ್ಲಿ ಅದನ್ನು ತೊಡಗಿಸಿಕೊಳ್ಳುವುದು. ಸದಸ್ಯರ ಸಾಮಾಜಿಕ ಅಭಿವೃದ್ಧಿ ಮತ್ತು ವಿಶಾಲ ಅರ್ಥದಲ್ಲಿ ಶಿಕ್ಷಣಕ್ಕೂ ಸಂಬಂಧಿಸಿದೆ. ಸಹಕಾರ ಶಿಕ್ಷಣ ಸದಸ್ಯರ ಚುನಾಯಿತ ನಾಯಕರುಗಳ ವ್ಯವಸ್ಥಾಪಕರುಗಳ, ನೌಕರರ ಮನಸ್ಸುಗಳನ್ನು ತೊಡಗಿಸಿಕೊಳ್ಳುವಂತೆ ಮಾಡುತ್ತದೆ. ಇದರಿಂದಾಗಿ ಸಹಕಾರದ ಸಂಕೀರ್ಣತೆ, ಸಿರಿತನದ ಸಹಕಾರ ಆಲೋಚನೆ ಮತ್ತು ಕ್ರಿಯೆ ಮತ್ತು ಅದರ ಸಾಮಾಜಿಕ ಪ್ರಭಾವವನ್ನು ಅರಿಯುತ್ತಾರೆ.

"ತರಭೇತಿ" ಎಂದರೆ ಸಹಕಾರ ಸಂಘ ನಡೆಸಲು ಸದಸ್ಯರಿಗೆ ಮತ್ತು ನೌಕರರಿಗೆ ಅಗತ್ಯ ನೈಪುಣ್ಯತೆಯನ್ನು ಒದಗಿಸುವುದು. ಸಹಕಾರ ವ್ಯಾಪಾರ/ವ್ಯವಹಾರದಲ್ಲಿ ಪರಿಣಾಮಕಾರಿಯಾಗಿ ನೈತಿಕವಾಗಿ ವ್ಯವಹಾರ ರೂಢಿಗಳನ್ನು ಆಚರಿಸುತ್ತಾರೆ. ಅಲ್ಲದೆ ಪ್ರಜಾಸತ್ತಾತ್ಮಕ ನಿಯಂತ್ರಣದೊಂದಿಗೆ ಜವಾಬ್ದಾರಿಯುತವಾಗಿ ಮತ್ತು ಪಾರದರ್ಶಿಕತೆಯಿಂದ ನಡೆದುಕೊಳ್ಳುತ್ತಾರೆ. ಸ್ಪರ್ದಾತ್ಮಕ ಆರ್ಥಿಕತೆಯ ಈ ದಿನಗಳಲ್ಲಿ ತರಭೇತಿ ಅತಿಹೆಚ್ಚಿನ ಮಹತ್ವವನ್ನು ಪಡೆದಿದೆ.

"ಮಾಹಿತಿ" ಎಂದರೆ ಸಾರ್ವಜನಿಕರಿಗೂ "ಅದರಲ್ಲಿಯೂ ಯುವಕರು ಮತ್ತು ಅಭಿಪ್ರಾಯ ಮೂಡಿಸುವ ನಾಯಕರು"ಗಳಿಗೆ ಸಹಕಾರ ಔದ್ಯೋಗಿಕ ಸಂಸ್ಥೆಯ ಬಗ್ಗೆ ಅರಿವು ಮೂಡಿಸುವುದು ಕರ್ತವ್ಯವೆಂದೇ ಅರಿತು "ಮಾಹಿತಿ' ಒದಗಿಸುವುದು. ಮಾಹಿತಿ ಮೂಲಕ ನೀಡುವ ಜ್ಞಾನವು ಕೇವಲ ಮಾರುಕಟ್ಟೆ ಮಾಡಲಾಗಲಿ ಅಥವ ಪ್ರಚಾರಕ್ಕಾಗಲಿ ಅಲ್ಲ. ಸಹಕಾರ ಔದ್ಯೋಗಿಕ ಸಂಸ್ಥೆಗಳಲ್ಲಿನ ಮೌಲ್ಯಗಳು ತತ್ವಗಳು ಮತ್ತು ಅದರಿಂದ ಮಾನವ ಒಳಿತಿನಿಂದಾಗುವ ಸಾಮಾಜಿಕ ಪ್ರಕ್ರಿಯೆಗಳ ಬಗ್ಗೆ ತಿಳಿಸುವುದು ಕರ್ತವ್ಯವೇ ಅಗಿದೆ. ಅನೇಕ ರಾಷ್ಟ್ರಗಳಲ್ಲಿ ಅನೇಕ ಸಹಕಾರ ಸಂಘಗಳು ಈ ಜವಾಬ್ದಾರಿಯನ್ನು ಕಡೆಗಣಿಸಿವೆ. ಶಿಕ್ಷಣ, ತರಭೇತಿ, ಮಾಹಿತಿ ಇಲ್ಲದೇ ಅವರಿಗೆ ಅರ್ಥವಾಗದೇ ಸಹಕಾರವನ್ನು ಅಪೇಕ್ಷಿಸುವುದಿಲ್ಲ ಮತ್ತು ಬೆಂಬಲಿಸುವುದಿಲ್ಲ.

"ಯುವಕರೇ" ಏಕೆ? ಎಂದರೆ ಸಹಕಾರ ಸಂಘವು (ಎರಡನೇ ತತ್ವ) ಪ್ರಜಾಸತ್ತಾತ್ಮಕ ನಿಯಂತ್ರಣ ಸಂಸ್ಥೆಯಾಗಿದ್ದು

ಮುಂದಿನ ಪೀಳಿಗೆಯ ಸದಸ್ಯರು ಇದನ್ನು ಅರಿತವರಾಗಬೇಕಾಗುತ್ತದೆ. ವಿಶ್ವದ ಮುಂದಿನ ನಾಗರೀಕ ಸಮಾಜದ ನವ ನಿರ್ಮಾಣದ ಕಾರಣರಾದ ಯುವಜನತೆ ಸುಸ್ಥಿರ ಸಹಕಾರ ಔದ್ಯೋಗಿಕ ಸಂಸ್ಥೆಯು ಒದಗಿಸುವ, ಸಾಮಾಜಿಕ, ಆರ್ಥಿಕ ಮತ್ತು ಪರಿಸರಾತ್ಮಕ (ವಾತಾವರಣ) ಲಾಭಗಳನ್ನು ಅರಿಯಬೇಕಾಗಿರುತ್ತದೆ. "ಅಬಿಪ್ರಾಯ ಮೂಡಿಸುವ ನಾಯಕರು" ಇತರೆ ವ್ಯವಸ್ಥೆಗಳಿಗಿಂತ ಸಹಕಾರ ಹೇಗೆ ವಿಭಿನ್ನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಒಪ್ಪಿಕೊಂಡ ಮೌಲ್ಯಗಳು ಮತ್ತು ತತ್ವಗಳು ಹೇಗೆ ಪ್ರಭಾವ ಬೀರುತ್ತವೆ ಎಂದು ಅರಿಯುವುದರಿಂದ ಈ ನಾಯಕರು ಸಾರ್ವಜನಿಕವಾಗಿ, ರಾಜಕೀಯವಾಗಿ, ಸಮಾಜದಲ್ಲಿ, ಸರ್ಕಾರದಲ್ಲಿ ಸಹಕಾರದ ಬಗ್ಗೆ ಸದಾಭಿಪ್ರಾಯ ಮೂಡಿಸಬಲ್ಲವರಾಗುತ್ತಾರೆ.

## 3. ಮಾರ್ಗದರ್ಶಿ ಟಿಪ್ಪಣಿಗಳು

### ಶಿಕ್ಷಣ ಮತ್ತು ಸ್ವ ಸಹಾಯ

ಈ ಐದನೇ ತತ್ವ ಮತ್ತು ಸಹಕಾರ ಮೌಲ್ಯವಾದ ಸ್ವಸಹಾಯ ಮತ್ತು ಸ್ವಯಂ ಜವಾಬ್ದಾರಿಗೆ ನೇರವಾದ ಸಂಬಂಧವಿದೆ.

ವ್ಯಕ್ತಿಗಳು ಇತರರೊಡನೆ ಒಡಗೂಡಿ ಸಹಕಾರ ಕ್ರಿಯೆಯಿಂದ ಬೆಳೆಯುತ್ತಾರೆ. ಸಹ ಸದಸ್ಯರ ಒಡನಾಟದಿಂದ ಸಂಘದ ಒಳನೋಟದ ಅರಿವು ಪಡೆಯುತ್ತಾರೆ. ಅಲ್ಲದೆ ಒಟ್ಟಾರೆ ಸಮಾಜದ ಅಂಗವಾಗಿಯೂ ಕೂಡ ಅರಿವು ಪಡೆಯುತ್ತಾರೆ. ಹೀಗೆ ಸಹಕಾರ ಸಂಘಗಳು ಅದರಲ್ಲಿ ತೊಡಗಿಸಿಕೊಂಡವರನ್ನು ಶಿಕ್ಷಣ ಮತ್ತು ಅಭಿವೃದ್ಧಿ ಪಡಿಸಿ ಪೋಷಿಸುತ್ತವೆ.

ಸದಸ್ಯ ಶಿಕ್ಷಣವನ್ನು ಪೋಷಿಸುವುದು ಕೇವಲ ಸಹಕಾರ ಸಂಘದ ಅಭಿವೃದ್ಧಿಗಾಗಿ ಮಾತ್ರವಲ್ಲ, ಅವರು ಬದುಕಿನ ಇತರೆ ಸ್ಥರಗಳಲ್ಲು ಪಡೆದ ಜ್ಞಾನ ಮತ್ತು ನೈಪುಣ್ಯತೆಯನ್ನು ಬಳಸುತ್ತಾರೆ. ಅವರು ಸ್ವಾವಲಂಭಿ ಗಳಾಗುತ್ತಾರೆ. ಶಿಕ್ಷಣದಿಂದಾಗಿ ಜೀವನ ಪರ್ಯಂತ ಕಲಿಕೆಯ ಅವಕಾಶ ದೊರೆತು ಜೀವನೋತ್ಸಾಹ ವಿಶ್ವಾಸ ಮೂಡುತ್ತದೆ.

### ಸದಸ್ಯ ಶಿಕ್ಷಣ

ಸಹಕಾರಿಗಳು ಸಹಕಾರ ಸಂಘಗಳನ್ನು ಆರಂಭಿಸಿದಿಂದಾಗಿನಿಂದ ಸಹಕಾರ ಸಂಘದ ದೃಷ್ಟಿಕೋನ ಮೌಲ್ಯಗಳು ಮತ್ತು ಆಕಾಂಕ್ಷೆಗಳನ್ನು ಸದಸ್ಯರು ಅರ್ಥಮಾಡಿಕೊಳ್ಳುವ ಅವಶ್ಯಕತೆ ಮತ್ತು ಪ್ರಾಮುಖ್ಯತೆ ಬಗ್ಗೆ ಅರಿತಿದ್ದರು. ಅಗ್ರಗಾಮಿಗಳು ತಮ್ಮ ದೃಷ್ಟಿಕೋನವನ್ನು "ಮೊದಲು ಕಾಯ್ದೆ" ಯಲ್ಲಿ ತಿಳಿಸಿರುತ್ತಾರೆ. ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಏಳ್ಗೆಯೇ ಅವರ ಗುರಿಯಾಗಿತ್ತು. ಅವರು "ಆದಷ್ಟು ಬೇಗನೆ ಈ ಸಂಘವು ಉತ್ಪಾದನೆ, ಹಂಚಿಕೆ ಮತ್ತು ಸರ್ಕಾರವನ್ನು ರಚಿಸಿರುತ್ತದೆ. ಅಥವ ಇತರೆ ಪದಗಳಲ್ಲಿ ಒಟ್ಟಾರೆ ಹಿತಾಸಕ್ತಿಯ ಸ್ವಯಂ ಬೆಂಬಲವುಳ್ಳ ಗೃಹ ಸಮೂಹ (ಕಾಲೋನಿ)ಯನ್ನು ರಚಿಸುತ್ತೇವೆ ಅಥವ ಈ ರೀತಿ ಸಮೂಹ ರಚನೆಗಾಗಿ ಇತರೆ ಸಂಘಗಳಿಗೆ ಸಹಾಯ ನೀಡುತ್ತದೆ". ಎಂಬ ಆಶಯವನ್ನು ವ್ಯಕ್ತ ಪಡಿಸಿರುತ್ತಾರೆ.

ಸಹಕಾರ ಸಂಘಗಳ ಕೇಂದ್ರ ಬಿಂದು ಸದಸ್ಯ ಶಿಕ್ಷಣವಾಗಬೇಕು. ಸದಸ್ಯರಿಗೆ ಸಂಘದ ವ್ಯವಹಾರಗಳಲ್ಲಿ ಭಾಗಿಯಾಗುವ ಬಗ್ಗೆ ತಿಳಿಹೇಳುವುದಲ್ಲದೆ ಮಿಗಿಲಾಗಿ ನಿಷ್ಠೆಯಾಗಿರುವ ಬಗ್ಗೆ ಅರಿವು ಮೂಡಿಸಬೇಕು. ಅಲ್ಲದೆ, ಅವರಿಗೆ ಸಹಕಾರ ಅಸ್ಮಿತೆ ಮತ್ತು ಮೌಲ್ಯಗಳು ವಿಶ್ವ ಸಹಕಾರ ಕುಟುಂಬ ಮತ್ತು ಅವರು ಅದರ ಭಾಗವಾಗಿರುವ ಬಗ್ಗೆ ತಿಳಿಸಬೇಕಾಗಿದೆ.

ಸಹಕಾರ ಸಂಘದ ಎಲ್ಲ ಸದಸ್ಯರಿಗೂ ಶಿಕ್ಷಣ ದೊರೆಯುವಂತಿರಬೇಕು. ಅದರಲ್ಲಿಯೂ ಪ್ರಜಾಸತ್ತಾತ್ಮಕ ರಚನೆಯಲ್ಲಿ ಯಾವ ಮಾರ್ಗವು ಕಡಿಮೆ ಪ್ರಾತಿನಿಧ್ಯ ಪಡೆದಿದೆಯೋ ಅವರಿಗೆ ಪ್ರಮುಖವಾಗಿ ಶಿಕ್ಷಣ ಲಭ್ಯವಾಗಬೇಕು. ಇವರಿಗಾಗಿ ವಿಶೇಷ ಏರ್ಪಾಡುಗಳನ್ನು ಮಾಡಬೇಕು ಸದಸ್ಯ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವವರ ವಿಶ್ಲೇಷಣೆಯಿಂದ ಸದಸ್ಯ ವೈವಿಧ್ಯಮತೆಯನ್ನು ಅರಿತು ಎಲ್ಲರನ್ನು ಒಳಗೊಳ್ಳುವ ಪ್ರಕ್ರಿಯೆಯಾಗಬೇಕು.

ಸದಸ್ಯ ಶಿಕ್ಷಣವು ಸದಸ್ಯರ ಹಕ್ಕು ಬಾಧ್ಯತೆಗಳ ಬಗ್ಗೆ ತಿಳಿಸಬೇಕು. ಪ್ರಜಾಸತ್ತಾತ್ಮಕ ಹಕ್ಕು ಚಲಾಯಿಸುವಂತಾಗಬೇಕು.

ಪ್ರಜ್ಞಾವಂತ ಸದಸ್ಯರು ತಮ್ಮ ಚುನಾಯಿತ ಪ್ರತಿನಿಧಿಗಳು, ನಾಯಕರು ಸಹಕಾರ ಸಂಘದ ದೃಷ್ಟಿಕೋನ ಮತ್ತು ಆಶಯಗಳನ್ನು ಈಡೇರಿಸುವಂತವರನ್ನು ಆಯ್ಕೆ ಮಾಡುತ್ತಾರೆ ಅವರ ಜವಾಬ್ದಾರಿಯನ್ನು ನಿರ್ವಹಣೆಯ ನೈಪುಣ್ಯತೆಯನ್ನು ಹೊಂದಿರುತ್ತಾರೆ.

ಈ ಕಾರ್ಯಕ್ರಮಗಳಿಂದ ಬದ್ಧತೆಯುಳ್ಳ ಸಹಕಾರಿಗಳು ಹೊರ ಹೊಮ್ಮುತ್ತಾರೆ. ಅಷ್ಟೇ ಅಲ್ಲದೆ ಉತ್ತಮ ನಾಗರೀಕರು ನಿರ್ಮಾಣವಾಗುತ್ತಾರೆ. ಚಟುವಟಿಕೆಗಳಲ್ಲಿ ತೊಡಗಿಕೊಂಡ ಸಹಕಾರಿಗಳು ಕೇವಲ ಆರ್ಥಿಕ ಘಟಕಗಳಲ್ಲಿ ಅಲ್ಲದೇ ಇತರೆ ನಾಗರೀಕ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳುವುದನ್ನು ಕಾಣುತ್ತೇವೆ. ಸಹಕಾರ ಸದಸ್ಯರು ಇತರೆ ನಾಗರೀಕ ಸಂಘಟನೆಗಳಲ್ಲಿ ತೊಡಗಿ ಇಡೀ ಮಾನವ ಸಮಾಜದ, ಒಳಿತಿಗೆ ತಮ್ಮದೇ ಆದ ಕೊಡುಗೆ ನೀಡುತ್ತಾರೆ. ಇದರಿಂದಾಗಿ ಓವನ್‌ರು ಆರಂಭಿಸಿದೆ ಪ್ರಥಮ ಶಾಲೆಗೆ "ಇನ್‌ಸ್ಟಿಟ್ಯೂಟ್ ಫಾರ್ ದಿ ಫಾರ್‌ಮೇಶನ್ ಆಫ್ ಕ್ಯಾರೆಕ್ಟರ್" (ಉತ್ತಮ ನಡವಳಿಕೆ ರೂಪಿಸಿಕೊಡುವ ಸಂಸ್ಥೆ) ಎಂದು ಹೆಸರಿಸಿದ್ದರು.

ಬೆಳೆಯುತ್ತಿರುವ ತಂತ್ರಜ್ಞಾನ ಸದಸ್ಯ ಶಿಕ್ಷಣಕ್ಕೆ ವಿನೂತನ ದಾರಿಗಳನ್ನು ತೆರೆಯುತ್ತಿದೆ. ಅತಿ ಕಡಿಮೆ ವೆಚ್ಚದಲ್ಲಿ ಅತಿ ಹೆಚ್ಚು ಸದಸ್ಯರನ್ನು ನೂತನ ಕಾರ್ಯಕ್ರಮಗಳನ್ನು ರೂಪಿಸಿ ತಲುಪಿಸಲು ಸಾಧ್ಯವಿದೆ. ದೊಡ್ಡ ಸಹಕಾರ ಸಂಸ್ಥೆಗಳು ಭೌಗೋಳಿಕ ವಿಸ್ತಾರ ಹೆಚ್ಚಿರುವ ಕಡೆ ತಾಂತ್ರಿಕತೆಯ ಉಪಯೋಗ ಪಡೆದು ಪರಿಣಾಮಕಾರಿ ಸದಸ್ಯ ಶಿಕ್ಷಣ ಕಾರ್ಯಕ್ರಮಗಳನ್ನು ರೂಪಿಸಿ ಸದಸ್ಯರಿಗೆ ತಲುಪಿಸಬಹುದು ಏನೇ ಆದರೂ ಗುಂಪು, ತರಗತಿ ಆಧಾರಿತ, ಸಂವಾದಯುಕ್ತ ಕಾರ್ಯಕ್ರಮಗಳ ಪ್ರಾಮುಖ್ಯತೆಯನ್ನು ಅಲ್ಲಗಳಿಯುವಂತಿಲ್ಲ. ಶಿಕ್ಷಣ ಮೂಲಕ ಸಂವಾದ ಸದಸ್ಯರಲ್ಲಿ ನಂಬುಗೆ ಹುಟ್ಟಿಸುತ್ತದೆ ಮತ್ತು ಮಾನವೀಯ ಸಂಬಂಧಗಳಲ್ಲಿ ಸಹಕಾರದ ಬಗ್ಗೆ ವಿಶ್ವಾಸ ಮೂಡಿಸುತ್ತದೆ.

**ಚುನಾಯಿತ ಪ್ರತಿನಿಧಿಗಳು**

ಉತ್ತಮ ಆಡಳಿತ ನಿರ್ಮಾಣದಲ್ಲಿ ಸಹಕಾರ ಶಿಕ್ಷಣದ ಪಾತ್ರ ಅವಿಚ್ಛಿನ್ನವಾಗಿ ಒಳಗೊಂಡಿದೆ. ಸಹಕಾರದ ಪ್ರಜಾಸತ್ತಾತ್ಮಕ ರಚನೆಯಲ್ಲಿ ಚುನಾಯಿತ ವಿವಿದ ಸಮಿತಿ ಸದಸ್ಯರು ಮತ್ತು ಸದಸ್ಯರು ಪ್ರಜ್ಞಾವಂತರಾಗಿದ್ದು ಉತ್ತಮ ಆಡಳಿತ ರೂಪಿಸುವಲ್ಲಿ ಕಾರಣರಾಗಿರುತ್ತಾರೆ. ಉತ್ತಮ ಆಡಳಿತ ನೀತಿ ರೂಢಿಗಳು ಅಂತರ ವ್ಯಕ್ತಿ ಸಂಬಂಧಗಳು ಉತ್ತಮ ಆಡಳಿತ ಒದಗಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ.

ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಸಹಕಾರ ಸಂಘಗಳು ಬೃಹತ್ತಾಗಿ ಬೆಳೆದಿವೆ. ಚುನಾಯಿತ ಹುದ್ದೆಗಳು ಕಡಿಮೆಯಾಗಿವೆ, ಸಂಕೀರ್ಣ ವ್ಯವಸ್ಥೆಗಳು ನಿರ್ಮಾಣಗೊಂಡಿವೆ. ಸಣ್ಣ ಸಹಕಾರ ಸಂಘದಿಂದ ಬೃಹತ್ ಸಹಕಾರ ಸಂಘದವರೆಗೂ ಸಹಕಾರ ಸಂಘದ ಯಶಸ್ಸು ಅಥವ ವೈಫಲ್ಯ ಚುನಾಯಿತ ಪ್ರತಿನಿಧಿಗಳು ತೆಗೆದುಕೊಳ್ಳುವ ನಿರ್ಧಾರಗಳನ್ನು ಅವಲಂಭಿಸಿರುತ್ತದೆ. ಸಹಕಾರ ಸಂಘದ ಮತ್ತು ಸದಸ್ಯರ ಹಿತಾಸಕ್ತಿ ಕಾಪಾಡುವಂತಹ ನಿರ್ಧಾರಗಳನ್ನು ಚುನಾಯಿತ ಪ್ರತಿ ನಿಧಿಗಳು ತೆಗೆದುಕೊಳ್ಳಬೇಕು ಅದಕ್ಕೆ ತಕ್ಕಂತಹ ಜ್ಞಾನ ನೈಪುಣ್ಯವನ್ನು ಅವರು ಹೊಂದಿರಬೇಕಾಗುತ್ತದೆ.

2ನೇ ತತ್ವದ ವಿವರಣೆಯಲ್ಲಿ ತಿಳಿಸಿದಂತೆ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಅರ್ಹತೆಯ ಮಾನದಂಡವನ್ನು ಖಾತ್ರಿ ಪಡಿಸುವುದಿಲ್ಲ; ಆದುದರಿಂದ ಆಡಳಿತವು ಪರಮಾರ್ಶೆ ಮತ್ತು ಲೆಕ್ಕಪರಿಶೋಧನೆಗೆ ಒಳಪಡತಕ್ಕದ್ದು. ಚುನಾಯಿತ ಪ್ರತಿನಿಧಿಗಳು ವೈಯಕ್ತಿಕ ಮತ್ತು ಸಾಮರ್ಥ್ಯಾಭಿವೃದ್ಧಿಗಾಗಿ ಶಿಕ್ಷಣ ಮತ್ತು ತರಭೇತಿ ಪಡೆಯಲು ಸನ್ನದ್ಧರಾಗಿರಬೇಕು. ಆಡಳಿತದಲ್ಲಿ ನಿರೀಕ್ಷೆಗಳು ಬಹಳಷ್ಟಿದ್ದು, ದುರುಪಯೋಗಗಳು ಹಗರಣಗಳು ಎಲ್ಲ ವಲಯಗಳಲ್ಲಿ ಹೇರಳವಾಗುತ್ತಿದ್ದು. ಅತ್ಯುತ್ತಮ ಆಡಳಿತ ವ್ಯವಸ್ಥೆಯಿಂದ ಅತ್ಯುತ್ತಮ ನಿರ್ವಹಣೆ ಸಹಕಾರ ವಲಯದಲ್ಲಿದೆ ಎಂಬುದನ್ನು ಶೃತಪಡಿಸಲು ಸಹಕಾರ ಶಿಕ್ಷಣ ಅತ್ಯಗತ್ಯ.

ಚುನಾಯಿತ ಸದಸ್ಯರಲ್ಲಿ ಮೌಲ್ಯಗಳಲ್ಲಿ ಹುದುಗಿದ ತರಭೇತಿಅಭಿವೃದ್ಧಿ ಕಾರ್ಯಕ್ರಮಗಳಿಂದ ನೌಕರಶಾಹಿಯ ಕೆಲಸ

ಕಾರ್ಯಗಳಿಗೆ ಸವಾಲೊಡ್ಡುವ ನೈಪುಣ್ಯತೆ ಪಡೆಯುವುದು ಸಹಕಾರ ಶಿಕ್ಷಣದ ಕೇಂದ್ರ ಬಿಂದುವಾಗಿರಬೇಕು. ಚುನಾವಣೆಗೆ ನಿಲ್ಲುವವರ ಕ್ಷಮತೆ ಸಾಮರ್ಥ್ಯಗಳನ್ನು ನಿಗಧಿಪಡಿಸುವಂತಿರ ಬೇಕು. ಸದಸ್ಯರ ಪ್ರಜಾಸತ್ತಾತ್ಮಕ ಹತೋಟಿಗೆ ಧಕ್ಕೆ ಬಾರದಂತೆ ಚುನಾವಣೆಗೆ ನಿಲ್ಲುವವರ ಅರ್ಹತೆ ಮತ್ತು ತೆರದ ಶಿಕ್ಷಣ ತರಭೇತಿ ಅವಕಾಶಗಳನ್ನೊಡಗೂಡಿ ಮಾನದಂಡ ರೂಪಿಸುವ ಬಗ್ಗೆ ಆಲೋಚಿಸಬಹುದಾಗಿದೆ.

ಬೃಹತ್ ಮತ್ತು ಅತಿ ದೊಡ್ಡ ಸಂಕೀರ್ಣ ಸಹಕಾರ ಸಂಘಗಳು ಬಹು ಶ್ರೇಣಿಕೃತ ಪ್ರಜಾಸತ್ತಾತ್ಮಕ ರಚನೆಗಳನ್ನು ಹೊಂದಿರುತ್ತವೆ. ಅಂತಹ ಸಂದರ್ಭಗಳಲ್ಲಿ ಪ್ರತಿ ಹಂತಕ್ಕೆ ಅರ್ಹತಾ ಮಾನದಂಡ ನಿಗದಿಪಡಿಸುವ ಬಗ್ಗೆ ಸಹಕಾರ ಶಿಕ್ಷಣ ತರಭೇತಿ ಅರ್ಹತಾ ಮಾನದಂಡ ನಿಗದಿಪಡಿಸುವುದು ಪ್ರಗತಿ ಪರ ಧೋರಣೆಗೆ ಕಾರಣವಾಗುತ್ತದೆ. ಈ ರೀತಿಯ ಕಾರ್ಯಕ್ರಮಗಳು ಪ್ರಜಾಸತ್ತಾತ್ಮಕ ಪ್ರಕ್ರಿಯೆಯೊಡನೆ ಅವರಿಗೆ ಅಗತ್ಯ ನೈಪುಣ್ಯ ಮತ್ತು ಅರ್ಹತೆಗಳನ್ನು ಮೇಳೈಸಿದಂತಾಗುತ್ತದೆ. ಇದರೊಡನೆ ಇತರ ಸಹಕಾರ ಶಿಕ್ಷಣ ಉದಾಹರಣೆ ಆಡಳಿತ ಮಂಡಳಿ ಅಭಿವೃದ್ಧಿ ಕೇಂದ್ರಗಳ ರಚನೆ ಉತ್ತಮ ಆಡಳಿತ ವ್ಯವಸ್ಥೆ ರೂಪಿಸುವಲ್ಲಿ ಸಹಕಾರಿಯಾಗುತ್ತದೆ.

**ವ್ಯವಸ್ಥಾಪಕರು ಮತ್ತು ನೌಕರರು**

ಸಹಕಾರ ಶಿಕ್ಷಣ ವ್ಯವಸ್ಥಾಪಕರು ಮತ್ತು ನೌಕರರಿಗೆ ಸಹಕಾರ ಸಂಘದ ವಿಶಿಷ್ಠತೆ ಮತ್ತು ಸದಸ್ಯರ ಅವಶ್ಯಕತೆ ಬಗ್ಗೆ ತಿಳಿಸಬೇಕಾಗುತ್ತದೆ. ಅದರಲ್ಲಿಯೂ ಹೂಡಿಕೆ ಪ್ರಾಧಾನ್ಯತೆಯುಳ್ಳ ಕಂಪನಿಗಳಲ್ಲಿ ಅನುಭವವಿರುವವರಿಗೆ ಸದಸ್ಯರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅವಶ್ಯಕತೆ ಪೂರೈಸುವ ಬಗ್ಗೆ ತಿಳಿಸಬೇಕು. ಆಡಳಿತ ಮಂಡಳಿಗಳು ವಿವಿಧ ವರ್ಗದ ನೌಕರರಿಗೆ ಅವರದೇ ಆದ ಅವಶ್ಯ ಪೂರೈಕೆಗಾಗಿ ನಿರ್ಧಿಷ್ಟ ಮತ್ತು ಸಹಕಾರ ಮೌಲ್ಯ ಮತ್ತು ತತ್ವಗಳ ಬಗ್ಗೆ ತರಭೇತಿ ನೀಡಬೇಕಾದ ಅವಶ್ಯಕತೆ ಇದೆ.

ಖಾಸಗಿ ಕಂಪನಿ ಮತ್ತು ಸಾರ್ವಜನಿಕ ವಲಯದಿಂದ ನೌಕರರು ಸಹಕಾರ ಸಂಘಗಳೆಡೆಗೆ ಆಕರ್ಷಿತರಾಗುತ್ತಿರುವುದನ್ನು ಕಾಣುತ್ತಲಿದ್ದೇವೆ. ವಿಶಾಲ ಅನುಭವವುಳ್ಳ ನೂತನ ರಕ್ತವುಳ್ಳ ನೌಕರರು ಸಹಕಾರ ಸೇವೆಗೆ ಸೇರುವುದು ಒಳ್ಳೆಯದೇ ಆಗಿದೆ. ಆದರೆ ಸಹಕಾರ ಸಂಸ್ಥೆಗಳ ವಿಶಿಷ್ಠತೆ ಮತ್ತು ಸಹಕಾರ ಮೌಲ್ಯ, ತತ್ವಗಳ ಬಗ್ಗೆ ತಿಳಿಸಿ ಆರಂಭದಲ್ಲಿಯೇ ಅವರನ್ನು ಸಜ್ಜುಗೊಳಿಸುವುದು ಅತ್ಯವಶ್ಯ.

ಹಿರಿಯ ವ್ಯವಸ್ಥಾಪಕರಿಗೆ ನಿರಂತರ ವ್ಯಾಪಾರ ಅಭಿವೃದ್ಧಿ ಮತ್ತು ಸದಸ್ಯರ ಅವಶ್ಯಕತೆ ಪೂರೈಕೆ ಬಗ್ಗೆ ಶಿಕ್ಷಣ ತರಭೇತಿ ಒದಗಿಸುವುದು ಅವಶ್ಯ. ಈ ದಿಸೆಯಲ್ಲಿ ಸದಸ್ಯರು ನೌಕರರು ಚುನಾಯಿತ ನಾಯಕರುಗಳು ಕನಿಷ್ಟ ಎರಡು ದಿನಗಳ ಸಂವಾದ ಕಾರ್ಯಕ್ರಮಗಳನ್ನು ಏರ್ಪಾಡು ಮಾಡುವುದು ಉಚಿತವೆನಿಸುತ್ತದೆ. ಮತ್ತು ಸಹಕಾರಿಯಾಗಬಲ್ಲದು.

ವಿಶ್ವಾದ್ಯಂತ ಸಹಕಾರ ಕಾಲೇಜುಗಳು ಸಹಕಾರಕ್ಕೆ ಅಗತ್ಯ ನೈಪುಣ್ಯ ಅಭಿವೃದ್ಧಿಗೊಳಿಸುವಲ್ಲಿ ಮಹತ್ತರ ಪಾತ್ರ ನಿರ್ವಹಿಸಿರುತ್ತವೆ. ಅನೇಕ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ ತರಗತಿಗಳನ್ನು ನಡೆಸುತ್ತಿವೆ. ಇದರಿಂದ ಅನೇಕ ಸಹಕಾರ ಧುರೀಣರು ಹೊರಹೊಮ್ಮಲು ಅವಕಾಶವಾಗಿದೆ. ವಿದ್ಯುನ್ಮಾನ ಕಲಿಕೆಯಿಂದಾಗಿ ಅನೇಕ ಸಹಕಾರ ಸಂಘಗಳು ತಮ್ಮ ಕಲ್ಪನೆಗಳನ್ನು ಅನುಭವಗಳನ್ನು ಹಂಚಿಕೊಳ್ಳಲು ಸಾಧ್ಯವಾಗಿದೆ.

ಬಹಳ ಹಿಂದಿನಿಂದಲೂ ಸಹಕಾರ ಸಂಘಗಳಲ್ಲಿ ಮೊದಲಹಂತದ ನೌಕರರಿಗೆ ತಮ್ಮ ಪಾತ್ರದ ಪರಿಣಾಮಕಾರಿ ಕಾರ್ಯ ನಿರ್ವಹಣೆಗೆ ಅಗತ್ಯ ವೃತ್ತಿ ನೈಪುಣ್ಯತೆಗಾಗಿ ತರಭೇತಿನೀಡಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಆಯಾ ಸಹಕಾರ ಸಂಘದ ವ್ಯವಹಾರಕ್ಕನುಗುಣವಾಗಿ ಹೆಚ್ಚು ಒತ್ತು ನೀಡಲಾಗುತ್ತಿದೆ. ಸದಸ್ಯರು ಮತ್ತು ಸಾರ್ವಜನಿಕರೊಡನೆ ಹೆಚ್ಚು ಸಂಪರ್ಕಕ್ಕೆ ಬರುವವರು ಮೊದಲಹಂತದ ನೌಕರರು. ಶತಮಾನದಿಂದಲೂ ನೌಕರರು ಅವರೇ ಸದಸ್ಯರಾಗುವಂತಿದ್ದು, ಅವರ ಸ್ಥಾನ

ಕಲ್ಪಿಸಿಕೊಂಡು ಸಾರ್ವಜನಿಕರಿಗೆ ಮನವಲಿಸುತ್ತಿರುತ್ತಾರೆ.

**ಸಾರ್ವಜನಿಕರಿಗೆ ಶಿಕ್ಷಣ ಮತ್ತು ಮಾಹಿತಿ**

ತತ್ವದ ಎರಡನೇ ಭಾಗ ಸಾರ್ವಜನಿಕರಿಗೆ ಮಾಹಿತಿ ಒದಗಿಸುವ ಬಗ್ಗೆ ತಿಳಿಸುತ್ತದೆ. ಸಹಕಾರದಿಂದ ಆಗುವ ಲಾಭ, ಅನುಕೂಲತೆಗಳನ್ನು ಸಾರ್ವಜನಿಕರಿಗೆ ಅದರಲ್ಲಿಯೂ ಯುವ ಜನತೆಯಲ್ಲಿ ಅಭಿಪ್ರಾಯಮೂಡಿಸುವ ನಾಯಕರಲ್ಲಿ ಅರಿವು ಮೂಡಿಸುವುದು ಬಹು ಮುಖ್ಯ. 2000 ದ ನಂತರದಲ್ಲಿ ಅಂದಿನ ಮೈತ್ರಿ ಸಂಸ್ಥೆಯ ಅಧ್ಯಕ್ಷರಾಗಿದ್ದ ಐವಾನೋ ಬಾರ್‌ಬರನಿ ರವರು ಜಾಗತೀಕರಣ ಹೇಗೆ ಸಹಕಾರ ಸಂಘಗಳನ್ನು 'ಆಸದೃಶ'ಗೊಳಿಸುತ್ತಿದೆ ಎಂಬುದರ ಬಗ್ಗೆ ಎಚ್ಚರಿಕೆ ನೀಡಿದ್ದರು. ಇದನ್ನು ವಿದ್ಯಾವಲಯದಲ್ಲಿ ಹೇಗೆ ಗುರುತಿಸಲಾಗಿದೆಯೆಂದರೆ ಕಳೆದ ಐವತ್ತು ವರ್ಷಗಳ ಅರ್ಥಶಾಸ್ತ್ರ ಪುಸ್ತಕಗಳಲ್ಲಿ ಸಹಕಾರದ ವಿಷಯ 'ಅಸದೃಶ'(ಕಾಣೆ)ವಾಗಿದೆ.

1995ರಿಂದ ಸಹಕಾರ ಅಸ್ಮಿತೆ ಬಗ್ಗೆ ವಿಶ್ವ ಸಂಸ್ಥೆ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಆಸಕ್ತಿ ವಹಿಸಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯಲ್ಲಿ ಎಲ್ಲ ಹಂತಗಳಲ್ಲಿ ಸಹಕಾರದ ಶಿಕ್ಷಣವನ್ನು ಪ್ರೋತ್ಸಾಹಿಸಲು ಶಿಫಾರಸ್ಸು ಮಾಡಿರುತ್ತದೆ.

ದಿಟವಾದ ಸಹಕಾರ ಸಂಘಗಳು ಸಹಕಾರ ಮೌಲ್ಯ ತತ್ವಗಳನ್ನು ಪಾಲಿಸುವವರು ಮಾತ್ರ "ಸಹಕಾರ" ಪದವನ್ನು ಬಳಸಬೇಕು ನ್ಯಾಯಯುತ ವಲ್ಲದ ಸಂಸ್ಥೆಗಳು "ಸಹಕಾರ" ಪದವನ್ನು ಉಪಯೋಗಿಸಿ ಅದರ ಸತ್ವವನ್ನು ಹಾಳುಗೆಡಹಬಾರದು. ಇದು ಸಹಕಾರ ಸಂಘಗಳನ್ನು ಅಪಮೌಲ್ಯಗೊಳಿಸುತ್ತದೆ. ಈ ದೃಷ್ಟಿಯಲ್ಲಿ ಸಾರ್ವಜನಿಕರಿಗೆ ನಿಖರವಾದ ಮಾಹಿತಿ ಒದಗಿಸಿ ಸಹಕಾರದ ಬೆಳವಣಿಗೆಗೆ ಕಾರಣವಾಗಬೇಕಾಗಿದೆ.

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯು ಸಹಕಾರ ಅಸ್ಮಿತೆಯ ಗುರುತಾಗಿ (co-op logo) ಚಿಹ್ನೆ ತಯಾರಿಸುವುದನ್ನು ಬಳಸುವುದರಿಂದ 2020ಕ್ಕೆ ಸಹಕಾರದ ಬಗ್ಗೆ ಮೈತ್ರಿ ಸಂಸ್ಥೆ ತಯಾರಿಸುವ ನೀಲಿ ನಕ್ಷೆಯೂಕೂಡ ಈ ದಿಸೆಯಲ್ಲಿ ಸಹಾಯವಾಗುತ್ತದೆ. ಅಲ್ಲದೆ ಸುಸ್ಥಿರ ಆರ್ಥಿಕ ಸಾಮಾಜಿಕ ಪರಿಸರ ನಿರ್ಮಾಣಮಾಡಲು ಸಾಧ್ಯ.

ಮುಖ್ಯವಾಹಿನಿ, ಮಾಧ್ಯಮಗಳ ಸಹಕಾರದ ಬಗ್ಗೆ ಅದರ ಆರ್ಥಿಕ ಮತ್ತು ಸಾಮಾಜಿಕ ವಲಯದಲ್ಲಿನ ಪಾತ್ರದ ಬಗ್ಗೆ ಕಾರ್ಯಕ್ರಮಗಳನ್ನು ಭಿತ್ತರಿಸಬೇಕಿದೆ. ಅವುಗಳು ಈ ವಲಯವನ್ನು ಪೂರ್ಣವಾಗಿ ನಿರ್ಲಕ್ಷಿಸಿದೆ. ಖಾಸಗಿ ಕಂಪನಿಗಳಿಗೆ ನೀಡುವ ಪ್ರಾಮುಖ್ಯತೆಯನ್ನು ನೀಡುತ್ತಿಲ್ಲ. ನೂತನವಾಗಿ ಸಾಮಾಜಿಕ ಮಾಧ್ಯಮಗಳು ಹೊಸ ಅವಕಾಶಗಳನ್ನು ಒದಗಿಸುತ್ತಿವೆ. ಇವುಗಳ ಮೂಲಕ ಸಹಕಾರದ ಬಗ್ಗೆ ಮಾಹಿತಿಗಳನ್ನು ಒದಗಿಸಲು ಔಚಿತ್ಯ ಪೂರ್ಣ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ನೂತನ ಮಾಹಿತಿ ತಂತ್ರಜ್ಞಾನದ ಪೂರ್ಣ ಪ್ರಯೋಜನ ಪಡೆಯಬೇಕಾಗಿದೆ.

5ನೇ ತತ್ವವು ಕೇವಲ ಸಂವಹನದ ಬಗ್ಗೆಯಲ್ಲದೇ ಪರಿಣಾಮಕಾರಿ ಶಿಕ್ಷಣ ತರಬೇತಿ ಮತ್ತು ಮಾಹಿತಿಯನ್ನು ಸದಸ್ಯರು, ನೌಕರರು ಮತ್ತು ಸಾರ್ವಜನಿಕರಿಗೆ ಒದಗಿಸುವ ಬಗ್ಗೆ ಒತ್ತು ನೀಡುತ್ತದೆ.

**ಯುವಜನತೆಗೆ ಶಿಕ್ಷಣ**

2007/08ರ ಆರ್ಥಿಕ ಹಿಂಜರಿತದಿಂದಾಗಿ ತೊಂದರೆಗೆ ಒಳಗಾಗಿರುವ, ಆರ್ಥಿಕ ಮತ್ತು ಸಾಮಾಜಿಕವಾಗಿ ಅನಾನುಕೂಲತೆಗೆ ಒಳಗಾಗಿರುವ ಯುವಜನಾಂಗಕ್ಕೆ ನೂತನ ಪೀಳಿಗೆಗೆ ಸಹಕಾರ ಸಂಘಗಳು ಸ್ಫೂರ್ತಿದಾಯಕ. ಅಸಮಾನತೆಯ ಸಮಾಜದಲ್ಲಿ ಯುವಜನ ಒಗ್ಗಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದು ಕಟುವಾಸ್ತವ. ಇವರಿಗೆ ಸಹಕಾರ ಚಿಂತನೆಯೇ ಆಶಾಕಿರಣ. ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಸಹಕಾರದ ಬಗ್ಗೆ ಪಠ್ಯಗಳಿದ್ದು ಕಲಿಕೆಗೆ ಅವಕಾಶವಿದೆ. ಸಹಕಾರಿವಲಯ ಶಿಕ್ಷಣ ಸಂಸ್ಥೆಗಳು, ಸಹಕಾರಿ ಶಿಕ್ಷಣ ಸಂಸ್ಥೆಗಳು ಯುವಜನತೆ

ಸಹಕಾರ ಶಿಕ್ಷಣ ನೀಡಬಲ್ಲವು. ಪಠ್ಯಗಳಲ್ಲಿ ಖಾಸಗಿ ಹೂಡಿಕೆ ಸಂಸ್ಥೆಗಳ ಜೊತೆಗೆ ಸಹಕಾರ ಸಂಸ್ಥೆಗಳ ಬಗ್ಗೆಯೂ ಪರಿಚಯಿಸುವ ಅವಶ್ಯಕತೆ ಇದೆ. ಇವೂ ಕೂಡ ಸ್ಪಂದನ ಶೀಲ ಯಶಸ್ವಿ ವ್ಯವಹಾರಿಕ ಔದ್ಯೋಗಿಕ ಸಂಸ್ಥೆ ಎಂಬುದನ್ನು ತಿಳಿಸಬೇಕಾಗಿದೆ.

ಸಹಕಾರ ಶಿಕ್ಷಣ ಮತ್ತು ಸಹಕಾರ ಅಭಿವೃದ್ಧಿಗೆ ಒಂದು ರೀತಿಯ ಸಾವಯವ ಸಂಬಂಧವಿದೆ. ಅರಿವು ಸಹಕಾರ ಸಂಘದಲ್ಲಿ ಹೊಸತನ ಮತ್ತು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುತ್ತದೆ. ಯುವ ಜನರ ಮತ್ತು ವಿದ್ಯಾರ್ಥಿ ಸಹಕಾರ ಸಂಘಗಳು ಈ ದಿಸೆಯಲ್ಲಿ ಅತ್ಯುತ್ತಮ ಪಾತ್ರ ನಿರ್ವಹಿಸುತ್ತವೆ. ಆಫ್ರೀಕಾ ಖಂಡ, ಉಗಾಂಡ, ಲ್ಯಾಟೀನ್ ಅಮೇರಿಕಾ ದೇಶಗಳಲ್ಲಿ ಈ ಸಹಕಾರ ಸಂಘಗಳು ಉತ್ತಮ ಕಲಿಕೆಯ ಅವಕಾಶವನ್ನು ಒದಗಿಸುತ್ತವೆ. ಸಹಕಾರದ ಮೂಲಕ ಉದ್ಯೋಗ ನಿರ್ಮಾಣ, ಆಧಾಯಗಳಿಕೆಗೆ ಅವಶ್ಯ ನೈಪುಣ್ಯತೆಯನ್ನು ಗಳಿಸುತ್ತಿದ್ದಾರೆ. ನೂತನ ರೀತಿಯ ಸಹಕಾರ ಸಂಘಗಳ ಸ್ಥಾಪನೆಗೆ ಕಾರಣವಾಗುತ್ತಿದೆ. ಜಪಾನ್ ಮತ್ತು ಇತರೆ ಏಷ್ಯ ಖಂಡದ ದೇಶಗಳಲ್ಲಿ ನೂತನ ವ್ಯವಹಾರದ ಸಹಕಾರ ನಾಯಕರ ನಿರ್ಮಾಣ ಈ ಸಹಕಾರ ಸಂಘಗಳಿಂದ ಸಾಧ್ಯವಾಗಿದೆ.

ವ್ಯಕ್ತಿಗತ ಔದ್ಯೋಗಿಕ ಸಂಸ್ಥೆಯ ಪರ್ಯಾಯವಾಗಿ ಹಲವಾರು ಒಟ್ಟುಗೂಡಿ ಔದ್ಯೋಗಿಕ ಸಂಸ್ಥೆ ನಿರ್ಮಾಣ ಮಾಡುವ ಬಗ್ಗೆ ಸಹಕಾರ ಶಿಕ್ಷಣ ಸಾಧ್ಯವಾಗಿಸುತ್ತದೆ. ಇದನ್ನು ಪೋಲ್ಯಾಂಡ್ ಮತ್ತು ಮಲೇಷಿಯ ರಾಷ್ಟ್ರಗಳಲ್ಲಿ ಕಾಣಬಹುದಾಗಿದೆ. ಯುವಜನತೆಯ ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಇದು ಕಾರಣವಾಗುತ್ತದೆ. ವಿಶ್ವ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಹಕಾರ ಸಂಘಗಳು, ಭವಿಷ್ಯ ನಿರ್ಮಾಣ (ಭವಿಷ್ಯದ ಭರವಸೆ) ಇವು ಯುವಜನತೆಯ ಮೂಲಕ ಸಮಾನತೆಯ ಸಮಾಜ ನಿರ್ಮಾಣಕ್ಕೆ ಕಾಣವಾಗುತ್ತದೆ ಎಂದು ತಿಳಿದಿದೆ.

ಸಹಕಾರ ಸಂಘಗಳ ಆಡಳಿತ ಮಂಡಳಿಯು ಯುವಜನರಾಗಿದ್ದಲ್ಲಿ ಯುವ ಜನತೆಯನ್ನು ಚಳುವಳಿಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಅಭಿವೃದ್ಧಿಗೆ ಹಾದಿಯಾಗುತ್ತದೆ. ಮೈತ್ರಿ ಸಂಸ್ಥೆಯು ಯುವಸಂಸ್ಥೆಗಳಿಗೆ ಸಹಕಾರ ಚಳುವಳಿಯಲ್ಲಿ ಪಾಲ್ಗೊಳ್ಳಲು ತಿಳುವಳಿಕೆ ನೀಡುತ್ತದೆ. ಯುವ ಮತ್ತು ವಿದ್ಯಾರ್ಥಿ ಸಹಕಾರ ಸಂಘಗಳು ಮುಂದಿನ ಅವರ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಗೆ ಪರಿಹಾರ ಸೂಚಿಸಬಲ್ಲವು.

ವಿಸ್ತಾರವಾಗುತ್ತಿರುವ ಸಹಕಾರ ಶಿಕ್ಷಣ ಅವಕಾಶಗಳು 6ನೇ ತತ್ವವಾಗಿ ಸಹಕಾರ ಸಂಘಗಳ ನಡುವೆ ಸಹಕಾರ ತತ್ವಕ್ಕೆ ಅನ್ವಯಿಸುವುದಕ್ಕೆ ಅವಕಾಶ ನೀಡುತ್ತದೆ. ವಿವಿಧ ಸಹಕಾರ ಔದ್ಯೋಗಿಕ ಸಂಸ್ಥೆಗಳ ಕೊಂಡಿಯನ್ನು ಬಲಪಡಿಸಬಹುದು.

**ಅಭಿಪ್ರಾಯ ಮೂಡಿಸಬಲ್ಲ ನಾಯಕರುಗಳ ಶಿಕ್ಷಣ**

ಸಹಕಾರ ಶಿಕ್ಷಣ ಮಾಹಿತಿ, ಮಾಧ್ಯಮ ಮತ್ತು ಸಾರ್ವಜನಿಕ ಸಂಬಂಧಗಳಲ್ಲಿ ಅತಿ ಮುಖ್ಯವಾದದ್ದು ಅಭಿಪ್ರಾಯ ಮೂಡಿಸಬಲ್ಲ ನಾಯಕರ ಸಹಕಾರದ ಬಗ್ಗೆ ಸದಭಿಪ್ರಾಯ ಮೂಡಿಸುವುದು ಏಕೆಂದರೆ ಇವರು ಇತರರ ಮೇಲೆ ಪ್ರಭಾವ ಬೀರಬಲ್ಲರು. ಆದುದರಿಂದ ಇವರು ಮೊದಲಿಗೆ ಸಹಕಾರ ಸಂಘಗಳಿಗೆ ಆಗುವ ಲಾಭಗಳು, ಆರ್ಥಿಕ, ಸಾಮಾಜಿಕ ಪರಿಣಾಮಗಳ ಬಗ್ಗೆ ತಿಳಿದಿರಬೇಕು. 2012ನ್ನು ವಿಶ್ವ ಸಂಸ್ಥೆ ಅಂತರರಾಷ್ಟ್ರೀಯ ಸಹಕಾರ ವರ್ಷವಾಗಿ ಘೋಷಿಸಿತ್ತು. "ಅಭಿಪ್ರಾಯ ಮೂಡಿಸಬಲ್ಲ ನಾಯಕರು" ಗಳಿಗೆ "ಸಹಕಾರದ ರಚನೆ ಮತ್ತು ಲಾಭಗಳು/ಪ್ರಯೋಜನಗಳು" ಬಗ್ಗೆ ಹೆಚ್ಚು ಒತ್ತುನೀಡಲಾಗಿತ್ತು. ಅದರಲ್ಲಿ "ಭವಿಷ್ಯದಲ್ಲಿ ಸಹಕಾರ ಸಂಘಗಳು ವಹಿಸಬೇಕಾದ ಪಾತ್ರದಲ್ಲಿ ಅವು ಶಕ್ತವಾಗಿದ್ದು, ಅದರ ನಿರ್ವಹಣೆ ಅದರ ಜವಾಬ್ದಾರಿ ಅದನ್ನು ಕಾರ್ಯಗತಗೊಳಿಸುವುದು ಒಳಿತು" ಎಂದು ಹೇಳಲಾಗಿತ್ತು.

## 4. ಮುಂದೆ ಪರಿಗಣೆಸಬೇಕಾದ ಅಂಶಗಳು

**ಸಹಕಾರ ಪರಂಪರೆಯ ಪರಿಣಾಮಕಾರಿ ಬಳಕೆ**

ಸಹಕಾರ ಶಿಕ್ಷಣ ಕಾರ್ಯಕ್ರಮಗಳಲ್ಲಿ ಹಿಂದಿನ ಸಹಕಾರಿಗಳ ಅನುಭವ ಕಥನಗಳು ಅವರು ಮಾಡಿದ ತ್ಯಾಗ, ಬದ್ಧತೆ ಇವುಗಳನ್ನು ಕತೆಕಟ್ಟಿ ಈಗಿನ ಅವಶ್ಯಕತೆಗಳೊಡನೆ ಜೋಡಿಸಿ ತಿಳಿಸಿದಾಗ ಸಹಕಾರ ಶಿಕ್ಷಣ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಇದರೊಡನೆ ಸಹಕಾರ ಸಂಘಗಳ ಕಟ್ಟಡಗಳನ್ನು, ಸಾಮಗ್ರಿಗಳು, ಉಪಕರಣಗಳನ್ನು ವಸ್ತು ಸಂಗ್ರಹಾಲಯದಲ್ಲಿ ಕಾಪಾಡುವುದು ಇದೂ ಮುಂದಿನ ಪೀಳಿಗೆಗೆ ದಾರಿದೀಪವಾಗಿ ತೋರುತ್ತದೆ. ಯು.ಕೆ. (ಬ್ರಿಟನ್‌ನ) ಸಹಕಾರ ಪರಾಂಪರಿಕ ಟ್ರಸ್ಟ್‌ನ ಕೆಲಸಗಳು ಶ್ಲಾಘನೀಯ ಮತ್ತು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಈ ಕಾರ್ಯಗಳು ಸಹಕಾರ ಶಿಕ್ಷಣದಲ್ಲಿ ಮೂಲೆಗಲ್ಲಾಗುತ್ತದೆ.

**ರಾಷ್ಟ್ರೀಯ ಶಿಕ್ಷಣದಲ್ಲಿ ಸಹಕಾರ**

ಪ್ರಾಥಮಿಕ ಪ್ರೌಢಶಾಲೆಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಹಕಾರದ ಬಗ್ಗೆ ಪಠ್ಯ ಕ್ರಮಗಳಲ್ಲಿ ಬೋಧನೆಗಾಗಿ ಅಳವಡಿಸುವ ಬಗ್ಗೆ ಸರ್ಕಾರಗಳು ನೀತಿ ಅಯೋಜಕರುಗಳಿಗೆ ಮನದಟ್ಟು ಮಾಡುವುದು ಹೇಗೆ ಎಂಬುದು ಸವಾಲಾಗಿದೆ. ಪ್ರಮುಖವಾಹಿನಿಯ ವ್ಯಾಪಾರ ಶಾಲೆ (business school)ಗಳು ಕಾಯ್ದೆ ಶಾಲೆಗಳು, ಅರ್ಥಶಾಸ್ತ್ರ ಶಾಲೆಗಳು, ಸಮಾಜಶಾಸ್ತ್ರ ಶಾಲೆಗಳಲ್ಲಿ ಸಹಕಾರದ ವಿಷಯ ಬೋಧನೆಯನ್ನೇ ಕೈಬಿಡಲಾಗುತ್ತಿದೆ. ಅಲ್ಲದೇ 'ಲಾಭದಾಯಕವಲ್ಲದ' ಸಂಸ್ಥೆಗಳ ಬಗ್ಗೆ ಹೆಚ್ಚು ಬೋಧಿಸಲಾಗುತ್ತಿದೆ.

**ಉದ್ಭವವಾಗುತ್ತಿರುವ ಆರ್ಥಿಕತೆಯಲ್ಲಿ ಸಹಕಾರ ಶಿಕ್ಷಣಕ್ಕೆ ಬೆಂಬಲ**

ಆಫ್ರಿಕ ಖಂಡದ ಬಡತನ ಹಸಿವು ನಿರ್ಮೂಲನ ಕಾರ್ಯಗಳಲ್ಲಿ ವಿಶ್ವ ಸಂಸ್ಥೆಯು ಸಹಕಾರ ಸಂಘಗಳನ್ನು ಪ್ರೋತ್ಸಾಹಿಸುತ್ತಿದೆ. ಸುಸ್ಥಿರ ಬೆಳವಣಿಗೆಗೆ ಸಹಕಾರ ಸಂಘಗಳಿಂದ ಸಾಧ್ಯ ಎಂದು ಕಂಡುಕೊಂಡಿದೆ. ಇತರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲೂ ಪ್ರೋತ್ಸಾಹಿಸಲಾಗುತ್ತದೆ.

**ತಜ್ಞ ಸಹಕಾರ ಉನ್ನತ ಶಿಕ್ಷಣ ಸಂಸ್ಥೆಗಳು**

ತಜ್ಞ ಸಹಕಾರ ಶಿಕ್ಷಣ ಸಂಸ್ಥೆಗಳು ತರಭೇತುದಾರರು, ಸಹಕಾರ ಕಾಲೇಜುಗಳು, ಉನ್ನತ ಶಿಕ್ಷಣ ಸಂಸ್ಥೆಯ ಸಹಕಾರ ವಿಭಾಗ ಇವುಗಳಿಗೆ ಪ್ರಾಮುಖ್ಯತೆಯ ಮುಂದುವರಿಕೆಗಾಗಿ ಅವುಗಳನ್ನು ಪರಿಗಣಿಸಿ ಮಾನ್ಯತೆ ನೀಡಬೇಕಾಗಿದೆ. ಸಹಕಾರ ಸಂಸ್ಥೆಗಳು ಮತ್ತು ಈ ಸಹಕಾರ ಶಿಕ್ಷಣ ಸಂಸ್ಥೆಗಳು ಬಾಂಧವ್ಯ ಬೆಸುಗೆಯನ್ನು ಹೊಂದಿರಬೇಕು. ಸದಸ್ಯರು ಮತ್ತು ವ್ಯವಸ್ಥಾಪಕರು ಗಳಿಗೆ ಅವಶ್ಯ ವಿಶೇಷ ಕಾರ್ಯಕ್ರಮಗಳನ್ನು ನಡೆಸುವಂತಿರಬೇಕು. ಸಹಕಾರ ವ್ಯವಹಾರ ನಿರ್ವಹಣೆಯಂತಹ ಸ್ನಾತಕೋತ್ತರ ತರಗತಿಗಳಿಗೆ ಪ್ರೋತ್ಸಾಹ ನೀಡಬೇಕು.

**ಸಹಕಾರ ಶೈಕ್ಷಣಿಕ ಸಂಶೋಧನೆಯ ಪ್ರಾಮುಖ್ಯತೆ**

ತರಭೇತಿ, ಶಿಕ್ಷಣ ಮಾಹಿತಿಯೊಂದಿಗೆ ಶೈಕ್ಷಣಿಕ ಸಂಶೋಧನೆಗೆ ಮೈತ್ರಿ ಸಂಸ್ಥೆ ಮತ್ತು ಅದರ ಸದಸ್ಯರು ಬೆಂಬಲ ನೀಡುತ್ತಿದ್ದಾರೆ. ಮೈತ್ರಿ ಸಂಸ್ಥೆಯ ಸಂಶೋಧನ ಸಮಿತಿ ಇತರೆ ಹಲವಾರು ಶಿಕ್ಷಣ ಸಂಸ್ಥೆಗಳೊಡನೆ ಸಂಶೋಧನೆಗಾಗಿ ಕೈಜೋಡಿಸಿದೆ. ಸಂಶೋಧನೆಯಿಂದ ಅನೇಕ ಗೋಚರಿಸದ ಅಂಶಗಳು ಬೆಳಕಿಗೆ ಬರುತ್ತದೆ. ವಿಶ್ವ ಸಹಕಾರ ಚಳುವಳಿಯು ಸಂಶೋಧನೆಗೆ ಮಹತ್ವ ಕೊಟ್ಟು ಅದನ್ನು ಪ್ರೋತ್ಸಾಹಿಸಬೇಕಿದೆ.

**ಜ್ಞಾನದ ಮುಕ್ತ ಹಂಚಿಕೆ ಮತ್ತು ಜೀವನ ಪರ್ಯಂತ ಕಲಿಕೆ**

ಸಹಕಾರ ಶಿಕ್ಷಣ ಭವಿಷ್ಯದೆಡೆಗೆ ನೋಡಬೇಕು. ಇದು ಜ್ಞಾನ ಆಧಾರಿತ ಸಮಾಜವನ್ನು ಅಪ್ಪಿಕೊಳ್ಳಬೇಕು. ಏಕೆಂದರೆ ಅದು ಜ್ಞಾನವನ್ನು ಉತ್ಪಾದಿಸುತ್ತದೆ, ರೂಪಾಂತರಿಸುತ್ತದೆ ಮತ್ತು ಲಭ್ಯ ಜ್ಞಾನವನ್ನು ಹಂಚಿಕೊಳ್ಳುತ್ತದೆ. ಮಾನವನ ಒಳಿತಿಗಾಗಿ

ಇದು ಜೀವನ ಪರ್ಯಂತ ಕಲಿಕೆಗೆ ಸಹಾಯವಾಗುತ್ತದೆ. ಸಹಕಾರ ಶಿಕ್ಷಣವು ನಾಗರೀಕ ಭಾಗವಹಿಸುವ ಸಂಸ್ಕೃತಿವುಳ್ಳವನ ಸಮಾಜ ನಿರ್ಮಾಣ ಕಾರ್ಯ ಮತ್ತು ಒಗ್ಗಟ್ಟಿಗೆ ಕೊಡುಗೆ ನೀಡುತ್ತದೆ. ಸಮಾಜ ಪರಿವರ್ತನೆಗಾಗಿ ಸಹಕಾರ ಶಿಕ್ಷಣವನ್ನು ಪರಿಗಣಿಸಿ ಅಭಿವೃದ್ಧಿ ಪಡಿಸಬೇಕು.

**ಮಾಹಿತಿ ತಂತ್ರಜ್ಞಾನ ಮತ್ತು ಬೃಹತ್ ದತ್ತಾಂಶ**

ಪ್ರಸಕ್ತ ಜ್ಞಾನ ಆಧಾರಿತ ಸಮಾಜ ಬೃಹತ್ ದತ್ತಾಂಸ ಸೃಷ್ಟಿ ಮತ್ತು ಮಾಹಿತಿ ಹಂಚಿಕೆಯ ತಳಹದಿಯ ಮೇಲೆ ನಿಂತಿದೆ. ಜ್ಞಾನ ಆಧಾರಿತ ಸಮಾಜದಲ್ಲಿ ಶಿಕ್ಷಣ ಎಂಬುದು ಕೇವಲ ಶಾಲೆ ಮತ್ತು ಸಂಸ್ಥೆಗಳಿಗೆ ಸೀಮಿತಗೊಂಡಿಲ್ಲ. ಜ್ಞಾನವನ್ನು ಯಾವುದೇ ಸ್ಥಳದಲ್ಲಾಗಲಿ ಯಾವುದೇ ಸಮಯದಲ್ಲಾಗಲಿ ಗಳಿಸುವ ಸದಾವಕಾಶವನ್ನು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಒದಗಿಸಿದೆ. ಈ ಸಂದರ್ಭದಲ್ಲಿ "ಕಲಿಯಲು ಕಲಿಕೆ"ಯ ನೈಪುಣ್ಯತೆ ಮುಖ್ಯ ಆಗಿದ್ದಲ್ಲಿ (ಕಂಪ್ಯೂಟರ್, ಮೊಬೈಲ್, ಇಂಟರ್‌ನೆಟ್) ಶಿಕ್ಷಣವನ್ನು ಔಪಚಾರಿಕವಾಗಲಿ, ಅನೌಪಚಾರಿಕವಾಗಲಿ ಪಡೆಯಬಹುದು. ಲಭ್ಯಮಾಹಿತಿ ಯನ್ನು ಗುರುತಿಸುವುದು, ವಿಂಗಡಿಸುವುದು ಮಾಡುವ ನೈಪುಣ್ಯತೆ ಇದ್ದಲ್ಲಿ ಮಾಹಿತಿ ಸಂವಹನ ತಂತ್ರ ಜ್ಞಾನವು ಜೀವನ ಪರ್ಯಂತ ಕಲಿಕೆ ಮತ್ತು ಸಾಕ್ಷರತೆಗೆ ಕಾರಣವಾಗುತ್ತದೆ.

ವಿದ್ಯುನ್ಮಾನ ತಂತ್ರಜ್ಞಾನದಿಂದ "ಬೃಹತ್ ದತ್ತಾಂಶ"ದಿಂದ ಇತರರು ಸಂಗ್ರಹಿಸಿ ಮಾಹಿತಿ ಪಡೆದು ಅವರ ಬೆಳವಣಿಗೆಗೆ ಹೇಗೆ ಉಪಯೋಗಿಸುತ್ತಾರೋ ಅದೇ ರೀತಿಯಲ್ಲಿ ಸಹಕಾರ ಸಂಘಗಳು ತಂತ್ರಜ್ಞಾನದ (ಇಂತರ್‌ನೆಟ್) ಮೂಲಕ ಪಡೆದು ಅದರಿಂದ ವಿಶ್ವ ಆರ್ಥಿಕತೆಯಲ್ಲಿ ಸಹಕಾರ ಔದ್ಯೋಗಿಕ ಸಂಸ್ಥೆಗಳು ಹೇಗೆ, ಅಭಿವೃದ್ಧಿಗೊಳ್ಳಬೇಕು ತನ್ನ ಪಾಲನ್ನು ಹೆಚ್ಚಿಸಿಕೊಳ್ಳಬೇಕು ಎಂಬುದರ ಬಗ್ಗೆ ಆಲೋಚಿಸಿ ಅಗತ್ಯ ಕ್ರಮಕೈಗೊಳ್ಳ ಬೇಕಾದ್ದು ಸಹಕಾರದ ಭವಿಷ್ಯದ ದೃಷ್ಟಿಯಿಂದ ಅತಿ ಅಗತ್ಯ.

**ಸಹಕಾರ ಔದ್ಯೋಗಿಕ ಸಂಸ್ಥೆಯ ಪ್ರಾಮುಖ್ಯತೆ ಮತ್ತು ಗಾತ್ರದ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಮೂಡಿಸುವುದು.**

ಸಹಕಾರ ರಂಗದ ಆರ್ಥಿಕ ದತ್ತಾಂಶ ಮತ್ತು ಅಂಕಿ ಅಂಶಗಳನ್ನು ಒಟ್ಟಾರೆ ವಿಶ್ವ ಆರ್ಥಿಕತೆಯಲ್ಲಿ ಸಹಕಾರದ ಪಾಲು ಇವುಗಳ ಬಗ್ಗೆ ಸಾರ್ವಜನಿಕರಲ್ಲೂ ಮತ್ತು ಅಭಿಪ್ರಾಯ ಮೂಡಿಸಬಲ್ಲ ನಾಯಕರುಗಳಿಗೆ ಮನವರಿಕೆ ಮಾಡಿಕೊಡಬೇಕಾದ ಅವಶ್ಯಕತೆ ಇದೆ. ಸಹಕಾರ ವಲಯದಿಂದ ಆಗಿರುವ ಪರಿಣಾಮಗಳ ಬಗ್ಗೆ ಅವರಿಗೆ ಅರಿವಿರುವುದಿಲ್ಲ. ಅದೇ ಖಾಸಗಿವಲಯದಲ್ಲಿ ಮಾಧ್ಯಮ ಮತ್ತು ವಾರ್ತಾಪತ್ರಿಕೆಗಳಲ್ಲಿ ಪ್ರತಿದಿನ ಷೇರು ಮಾರುಕಟ್ಟೆ ವಿವರಗಳು ಲಭ್ಯವಾಗುತ್ತಿರುತ್ತದೆ. ಸಹಕಾರ ಸಂಘಗಳಲ್ಲಿ ಉದ್ಯೋಗಾವಕಾಶಗಳ ಬಗ್ಗೆ, ಉದ್ಯೋಗ ಸೃಷ್ಟಿ ಬಗ್ಗೆ ಮಾಹಿತಿ ಇದ್ದಲ್ಲಿ ಸರ್ಕಾರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ಪರ ಚೌಕಾಶಿ ಮಾಡಲು ಸಾಧ್ಯ. ವಿಶ್ವದ ಅರ್ಧ ಜನಸಂಖ್ಯೆಯ ಜೀವನ ಮಟ್ಟ ಸುಧಾರಿಸಲು ಕಾರಣವಾಗಿರುವ ಸಹಕಾರ ವಲಯದ ವಿಶ್ವ ಆರ್ಥಿಕತೆಯ ಕೊಡುಗೆ ಯಾರಿಗೂ ಗೋಚರವೇ (ತಿಳಿಯದೇ) ಆಗಿಲ್ಲ. ರಾಷ್ಟ್ರದ ತೆರಿಗೆ ಸಂಗ್ರಹಣೆಯಲ್ಲೂ ಸಹಕಾರದ ಪಾಲಿದ್ದರೂ, ಅದು ಸರ್ಕಾರಕ್ಕೆ ಗಳಿಕೆಗೆ ಕಾರಣವಾಗಿದೆ ಎಂಬುದನ್ನು ಸಾರ್ವಜನಿಕರು, ರಾಜಕೀಯದಲ್ಲು ನಿರ್ಲಕ್ಷಿಸಲಾಗುತ್ತಿದೆ. ಸಹಕಾರ ಚಳುವಳಿಯು ಈ ಕಂದಕವನ್ನು ಹೇಗೆ ಭರಿಸುತ್ತದೆ ಎಂಬುದು ಮುಖ್ಯ ಸವಾಲಾಗಿ ಪರಿಣಮಿಸಿದೆ. 2014ರ ಅಮೇರಿಕದಲ್ಲಿ ನಡೆದ ಸಮ್ಮೇಳನವು ಇದನ್ನು ಪ್ರತಿಧ್ವನಿಸಿತು. "ಅಮೇರಿಕೆಯಲ್ಲಿ ಸಹಕಾರ ಸಂಸ್ಥೆಗಳ ಆರ್ಥಿಕ ಮತ್ತು ಸಾಮಾಜಿಕ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದೇ ಒಂದು ತಡೆಗೋಡೆಯಾಗಿದೆ".

# 6ನೇ (ಆರನೇ) ತತ್ವ

# ಸಹಕಾರ ಸಂಘಗಳ ನಡುವೆ ಸಹಕಾರ

ಸ್ಥಳೀಯ, ಪ್ರಾಂತೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಚನೆಗಳಲ್ಲಿ ಒಟ್ಟಿಗೆ ಕೆಲಸ ಮಾಡುವುದರಿಂದ ಸಹಕಾರ ಸಂಘಗಳು ಸದಸ್ಯರಿಗೆ ಪರಿಣಾಮಕಾರಿಯಾಗಿ ಸೇವೆ ಒದಗಿಸುತ್ತವೆ ಮತ್ತು ಸಹಕಾರ ಚಳುವಳಿಯನ್ನು ಬಲಪಡಿಸುತ್ತದೆ.

## 1. ಪರಿಚಯ

ಈ 6ನೇ ತತ್ವವು ಸಹಕಾರ ಮೌಲ್ಯವಾದ ಒಗ್ಗಟ್ಟಿನ ಅಭಿವ್ಯಕ್ತಿ. ಈ ತತ್ವವೇ ಇತರೇ ಸಂಸ್ಥೆಗಳಿಂದ ಸಹಕಾರ ಸಂಘಗಳನ್ನು ಪ್ರತ್ಯೇಕಗೊಳಿಸುತ್ತದೆ. ಇತರೆ ಸಂಸ್ಥೆಗಳು ನಮ್ಮ ಮೌಲ್ಯಗಳನ್ನು ಹಂಚಿಕೊಳ್ಳಬಹುದು. ಆದರೆ ಅವುಗಳಿಗೆ ನಮ್ಮ ಮೌಲ್ಯಗಳೂ ಮತ್ತು ತತ್ವಗಳಿಗೆ ಬದ್ಧತೆ ಇರುವುದಿಲ್ಲ. ಸಹಕಾರ ವ್ಯಾಪಾರ ಔದ್ಯೋಗಿಕ ಸಂಸ್ಥೆಗಳು ಉತ್ಕೃಷ್ಟತೆಯ ಮುದ್ರೆ ಎಂದರೆ ಸಹಕಾರ ಸಂಘಗಳ ನಡುವೆ ಸಹಕಾರ ತತ್ವ ಏಕೆ? ಏಕೆಂದರೆ ಇಡೀ ಮಾನವ ಸಮಾಜಕ್ಕೆ ಭವಿಷ್ಯದಲ್ಲಿ ಆರ್ಥಿಕ ಸಮಾನತೆಯ ಸುಸ್ಥಿರತೆಯನ್ನು ಸೃಷ್ಟಿಸುವ ಸಾಮಾನ್ಯ ಆಶಯ ಹೊಂದಿರುವುದನ್ನು ಸ್ಪಷ್ಟವಾಗಿ ಅಭಿವ್ಯಕ್ತ ಪಡಿಸುತ್ತದೆ.

ಸಹಕಾರ ಸಂಘಗಳ ರಚನೆಯಲ್ಲಿ ಎರಡು ಆಯಾಮಗಳನ್ನು ಕಾಣುತ್ತೇವೆ. ಮೊದಲನೇ ಆಯಾಮ ಆರ್ಥಿಕತೆಯ ವಸ್ತುಗಳಾದ ವಸ್ತುಗಳು ಮತ್ತು ಸೇವೆಯ ವ್ಯಾಪಾರ ವಹಿವಾಟು ನಡೆಸುವುದು. ಎರಡನೆಯದು ಇವು ಸದಸ್ಯರ ಸಾಮಾಜಿಕ ಘಟಕಗಳಾಗಿ ಇತರೆ ಸಹಕಾರ ಸಂಘಗಳೊಡಗೂಡಿ ವ್ಯವಹಾರ ನಡೆಸುತ್ತವೆ. ಸಹಕಾರ ಸಂಘಗಳಿಗೆ ಸದಸ್ಯರಾಗುವುದರಿಂದ ಆ ಸಹಕಾರ ಸಂಘವನ್ನು ಬೆಳೆಸುವುದಲ್ಲದೇ ಸಹಕಾರ ಚಳುವಳಿ ಬೆಳೆಯಲು ಕಾರಣರಾಗುತ್ತಾರೆ. ಇತರೆ ಸಹಕಾರ ಸಂಘಗಳೊಡನೆ ಸಹಕರಿಸಿ ವೃತಾ ಸ್ಪರ್ಧೆಗಿಳಿಯದೇ ಸಹಕಾರ ಸಂಘಗಳಲ್ಲಿ ಸಂಪತ್ತು ಸೃಷ್ಠಿಸಲಾಗುತ್ತದೆ. ಸದಸ್ಯರು ಕೇವಲ ತಮ್ಮ ಸಹಕಾರ ಸಂಘದ ವ್ಯವಹಾರದಿಂದ ಪ್ರಯೋಜನ ಪಡೆಯುವುದಲ್ಲದೇ ಇದೇ ಸಹಕಾರ ವಲಯದ ವ್ಯವಹಾರಗಳಿಂದ ಪ್ರಯೋಜನ ಪಡೆದಂತಾಗುತ್ತದೆ.

ಸಹಕಾರ ಸಂಘಗಳ ನಡುವೆ ಸಹಕಾರಕ್ಕೂ ಖಾಸಗಿ ಕಂಪನಿಗಳು ಮತ್ತೊಂದು ಕಂಪನಿಯ ವ್ಯವಹಾರ ತೆಗೆದುಕೊಳ್ಳುವುದು ಒಗ್ಗೂಡುವುದುಕ್ಕೂ ಬಹಳ ಅಂತರವಿದೆ. ಕೆಲವೊಮ್ಮೆ ಸಹಕಾರ ಸಂಘಗಳು ಒಗ್ಗೂಡಬಹುದು ಆದರೆ ಸಹಕಾರ ಸಂಘಗಳ ನಡುವೆ ಸಹಕಾರ ಎಂದರೆ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಸಹಕಾರ ಗುಂಪುಗಳ ರಚನೆ, ಮಾಧ್ಯಮಿಕ ಸಹಕಾರ ಸಂಘಗಳು ಮತ್ತು ಮಹಾ ಮಂಡಳಗಳನ್ನು ರಚಿಸಿಕೊಳ್ಳುವುದಾಗಿದೆ. ಇದರಿಂದ ಪರಸ್ಪರ ಲಾಭಕ್ಕಾಗಿ ಸಾಮಾನ್ಯ ಸಂಪತ್ತಿನ ಸೃಷ್ಟಿಯಾಗುತ್ತದೆ.

ಆರಂಭದ ದಿನಗಳಿಂದಲೂ ಸಹಕಾರ ಸಂಘಗಳು ಒಟ್ಟಿಗೆ ಕೆಲಸಮಾಡುವ ಅವಶ್ಯಕತೆ ಕಂಡುಕೊಂಡು ಅದಕ್ಕೆ ಮಾನ್ಯತೆ ನೀಡಿವೆ. ರಾಕ್‌ಡೇಲ್ ಅಗ್ರಗಾಮಿಗಳು 1844ರಲ್ಲಿ ತಮ್ಮ ಅಂಗಡಿ ತೆರೆಯುವ ಹತ್ತು ವರ್ಷಕ್ಕೂ ಮುನ್ನ ನಡೆದ ಬ್ರಿಟನ್‌ನಿನ ಸಮ್ಮೇಳನದಲ್ಲಿ ಇದರ ಅವಶ್ಯಕತೆ ಮನಗಂಡಿತು. ವಿಶ್ವಾದ್ಯಂತ ತಕ್ಷಣವೇ ಸಹಕಾರ ಸಂಘಗಳು ಒಟ್ಟುಗೂಡಿ ತಮ್ಮ ಉತ್ತುಂಗ ಸಂಸ್ಥೆಗಳನ್ನು ಸ್ಥಾಪಿಸಿದವು.

1895ರಲ್ಲಿ ವಿಶ್ವದ ಪ್ರಾತಿನಿಧಿಕ ಸಂಸ್ಥೆಯಾಗಿ ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈಗ ಇದು

ಅತ್ಯಂತ ಹೆಚ್ಚಿನ ಸದಸ್ಯತ್ವವುಳ್ಳ ವಿಶ್ವದ ಅತಿದೊಡ್ಡ ಸರ್ಕಾರೇತರ ಸಂಸ್ಥೆಯಾಗಿದೆ. ಅತ್ಯಂತ ಯಶಸ್ವಿಯಾಗಿ ತಲುಪಬಲ್ಲ, ಮಾನ್ಯತೆ ಪಡೆದ ಮತ್ತು ತನ್ನ ಪ್ರಭಾವ ಬೀರಬಲ್ಲ ಸಂಸ್ಥೆಯಾಗಿದೆ. ವಿಶ್ವ ಸಂಸ್ಥೆ (ಗಒ) ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಖಐಔ) ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (ಈಂಔ)ಗಳೊಡನೆ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

6ನೇ ತತ್ವವು ಸಹಕಾರ ಮೌಲ್ಯವಾದ "ಒಗ್ಗಟ್ಟು"ನೊಡನೆ ಪ್ರಮುಖವಾಗಿ ಮಿಳಿತವಾಗಿದೆ. ಸಹಕಾರ ಸಂಘಗಳು ಒಟ್ಟಿಗೆ ಇದ್ದರೆ ಉತ್ತಮ. ಒಟ್ಟಿಗೆ ಕಾರ್ಯವೆಸಗುವುದರಿಂದ ಅನುಭವ ಗಳಿಕೆ, ಗಾತ್ರ ಮತ್ತು ಅವಶ್ಯ ಬೆಂಬಲವನ್ನು ಗಳಿಸಿ ತಿಳುವಳಿಕೆ (ಅರಿವು) ಸ್ಥಿರತೆ ಪ್ರಭಾವ ಬೀರಬಹುದು. ಮತ್ತು ಸಂಪನ್ಮೂಲಗಳು ಮತ್ತುವೆಚ್ಚಗಳನ್ನು ಹಂಚಿಕೊಳ್ಳಬಹುದು.

1966ರ ವಿಯನ್ನಾ ಸಮ್ಮೇಳನದಲ್ಲಿ ಈ ತತ್ವವನ್ನು ಮೊದಲಿಗೆ "ಸೃಷ್ಟೀಕರಣ"ವಾಗಿ ಮೂಡಿಬಂತು. ಇದರಿಂದ ನೂತನವಾದ ಸಹಕಾರ ಆರ್ಥಿಕತೆಯ ದೃಷ್ಟಿಕೋನ ಮೂಡಿಬಂದಿತು. ಪ್ರತಿ ಸಹಕಾರ ಸಂಘವು ಮತ್ತೊಂದನ್ನು ಪೋಷಿಸಬೇಕು ಮತ್ತು ಬೆಂಬಲ ನೀಡಬೇಕು ಎಂಬುದನ್ನು ಮನಗಾಣಲಾಯಿತು. ಸಮ್ಮೇಳನದ ಶಿಫಾರಸ್ಸು ಈ ಕೆಳಗಿನ ಶಿಫಾರಸ್ಸುಗಳನ್ನು ಒಳಗೊಂಡಿರುತ್ತದೆ.

"______ ಸಹಕಾರ ಸಂಘಗಳ ನಡುವೆ ಪರಸ್ಪರ ಸಹಕಾರ ಎಂಬ ಬೆಳವಣಿಗೆಯ ತತ್ವವನ್ನು ಸೇರಿಸಲು ಆಲೋಚಿಸಲಾಗಿದೆ:–

ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ಸಹಕಾರ ಸಂಸ್ಥೆಗಳು ಇತರೆ ಸಹಕಾರ ಸಂಘಗಳೊಡನೆ ಪ್ರತಿ ಸಾಧ್ಯವಾಗುವ ರೀತಿಯಲ್ಲಿ ಕ್ರಿಯಾತ್ಮಕವಾಗಿ ಸಹಕರಿಸಿ ತನ್ನ ಸದಸ್ಯರ ಹಿತಾಸಕ್ತಿ ಮತ್ತು ಸಮೂಹದ ಅವಶ್ಯ ಸೇವೆ ಸಲ್ಲಿಸುವುದು". ವರದಿಯು ಮುಂದುವರಿದು ವಿವರಿಸಿರುತ್ತದೆ.

"–––––––ತತ್ವಗಳು ಆರಂಭಿಕವಾಗಿ ನಿಯಮಗಳಾಗಿ ಸೃಷ್ಟಿಯಾಗಿ ಸಂಘದ ವ್ಯಕ್ತಿಗತ ಸದಸ್ಯರಿಗೆ ಅನ್ವಯಿತವಾಗಿದೆಯಾದರು ಇವರು ಪ್ರಾಥಮಿಕ ಸಂಘಗಳಿಗೆ ಮಾತ್ರ ಅನ್ವಯಿಸುವುದಿಲ್ಲ. ಕೇವಲ ವ್ಯಕ್ತಿಗಳಲ್ಲದೆ, ಸಹಕಾರ ಸಂಘಗಳಿಗೂ ಅನ್ವಯಿಸುತ್ತದೆ.

ಆರ್ಥಿಕತೆಯಲ್ಲಿ ಸಹಕಾರದ ಪರಿಕಲ್ಪನೆ ಒಂದು ಬುದ್ಧಿವಂತಿಕೆಯ ಭಾಗವಾಗಿದ್ದು ಬೌತಿಕವಾಗಿ ಕಂಡುಬರುತ್ತಿಲ್ಲ. ಸರಳ ಕಾರಣವೆಂದರೆ ಚಳುವಳಿಯ ವಿವಿಧ ಶಾಖೆಗಳಲ್ಲಿ ಬಾಂಧವ್ಯ ಮತ್ತು ಒಗ್ಗಟ್ಟು ಇಲ್ಲದೇ ಇರುವುದೇ ಆಗಿದೆ."

ಒಬ್ಬಂಟಿಯಾಗಿ ಕೆಲಸಮಾಡುವಾಗ ಅದರ ಪರಿಪೂರ್ಣ ಶಕ್ತಿಯನ್ನು ಉಪಯೋಗಿಸಲಾಗದೇ ಇರುವ ಬಗ್ಗೆ ವರದಿ ತಿಳಿಸುತ್ತದೆ. ಸಹಕಾರ ಚಳುವಳಿಯ ಪರಿಕಲ್ಪನೆ ಮತ್ತು ಆಶ್ವಾಸನೆಗಳು ಈಡೇರಬೇಕೆಂದರೆ ಸಹಯೋಗ, ಸಹಕಾರ ಮತ್ತು ಸಮನ್ವಯತೆಯಿಂದ ವಿವಿಧ ಸಹಕಾರ ಸಂಘಗಳು ಕಾರ್ಯನಿರ್ವಹಿಸಬೇಕು. ವಿಸ್ತಾರವಾಗುತ್ತಿರುವ ಆರ್ಥಿಕ ವಲಯ, ಸಾಮಾಜಿಕ ವಸ್ತುಗಳು ಮತ್ತು ಭೌಗೋಳಿಕ ವಲಯಗಳಲ್ಲಿ ಸಹಕಾರ ವಲಯ ಮೇಲಿನಂತೆ ಕಾರ್ಯನಿರ್ವಹಿಸಿದಾಗ ಮಾತ್ರ ಯಶಸ್ಸು ಸಾಧ್ಯ. ಮುಂದುವರೆದು ವರದಿಯಲ್ಲಿ "ಪ್ರತಿ ರಾಷ್ಟ್ರದಲ್ಲಿ ಅಥವ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ಚಳುವಳಿಯು ಪೂರ್ಣ ಪ್ರಮಾಣದಲ್ಲಿ ಉತ್ತುಂಗಕ್ಕೆ ತಲುಪಬೇಕಾದರೆ––––– ಯಾವುದೇ ನಿರ್ಬಂಧಗಳಿಲ್ಲದೆ ಸಹಕಾರ ಸಂಘಗಳು ಒಂದೊಕ್ಕೊಂದು ಬೆಂಬಲ ನೀಡಬೇಕು.

## 2. ಪದಗಳು ಮತ್ತು ಪದಪುಂಜ(ಗುಚ್ಚ)ಗಳ ಅರ್ಥೈಸುವಿಕೆ

"ಸಹಕಾರ ಸಂಘಗಳು ಪರಿಣಾಮಕಾರಿಯಾಗಿ ಸೇವೆಸಲ್ಲಿಸುತ್ತವೆ ಮತ್ತು ಒಟ್ಟಿಗೆ ಕೆಲಸಮಾಡುವುದರಿಂದ ಸಹಕಾರ ಚಳುವಳಿಯನ್ನು ಬಲಪಡಿಸುತ್ತದೆ" ಸಹಕಾರ ಸಂಘಗಳು ಸ್ಥಳೀಯವಾಗಿ ಇನ್ನೂ ಅಧಿಕ ಸಾಧನೆ ಮಾಡಲಾಗುವುದಲ್ಲದೇ

ಮತ್ತೂ ಹೆಚ್ಚಿನ ಸಾಧನೆಯನ್ನು ಆರ್ಥಿಕತೆಯಲ್ಲಿ ತನ್ನ ಗಾತ್ರವನ್ನು ಒಟ್ಟಿಗೆ ಕಾರ್ಯನಿರ್ವಹಿಸಿ ಪರಸ್ಪರ ಸಾಮರ್ಥ್ಯವನ್ನು ಹಿಗ್ಗಿಸಿಕೊಳ್ಳುವುದರಿಂದ ಸಾಧ್ಯವಾಗುತ್ತದೆ. ಇದರಲ್ಲಿ ಹಿತಾಸಕ್ತಿಗಳ ಸಮತೋಲನವನ್ನು ಕಾಯ್ದುಕೊಳ್ಳ ಬೇಕಾಗುತ್ತದೆ. ಸ್ವಾತಂತ್ರ್ಯತೆ ಮತ್ತು ಪ್ರಜಾಸತ್ತಾತ್ಮಕ ಹತೋಟಿಯನ್ನು ಕಾಯ್ದುಕೊಂಡು ಎಲ್ಲ ಸಹಕಾರ ಸಂಘಗಳು ಅದರ ಫಲಪಡೆಯು ವಂತಾಗಬೇಕು. ಎಲ್ಲ ಸಹಕಾರ ರಚನೆಗಳಿಗೂ ಇದು ಶಾಶ್ವತಸವಾಲು ಮತ್ತು ಸಹಕಾರ ಸಂಘಗಳಿಗೆ ಸತ್ವ ಪರೀಕ್ಷೆ.

"ಸ್ಥಳಿಯ, ರಾಷ್ಟ್ರೀಯ, ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ರಚನೆಯಲ್ಲಿ ಒಟ್ಟಿಗೆ ಕೆಲಸ ಮಾಡುವ ಮೂಲಕ" ವಾಕ್ಯದ ಮೊದಲ ಭಾಗ "ಏಕೆ" ಎಂಬುದಕ್ಕೆ ಉತ್ತರವಾದರೆ ಎರಡನೇ ಭಾಗ "ಹೇಗೆ" ಎಂಬುದಕ್ಕೆ ಉತ್ತರಿಸುತ್ತದೆ. 6ನೇ ತತ್ವವು ಕೇವಲ ತಾತ್ಕಾಲಿಕ ಸಹಯೋಗವನ್ನು ಪ್ರತಿಪಾದಿಸುವುದಿಲ್ಲ. ಅದು ನಿರಂತರ ಸಹಯೋಗವನ್ನು ಪ್ರತಿಪಾದಿಸುತ್ತದೆ. ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಸಹಯೋಗ, ಹಂಚಿಕೊಂಡು ಗುರಿ ಸಾಧನೆಗಾಗಿ ದೀರ್ಘಾವಧಿ ತೊಡಗಿಸುಕೊಳ್ಳುವಿಕೆ ಮತ್ತು ಅನನ್ಯಬದ್ಧತೆ.

## 3. ಮಾರ್ಗದರ್ಶಿ ಟಿಪ್ಪಣಿ

**ಸಹಕಾರ ಸಂಘಗಳ ನಡುವೆ ಸಹಕಾರ ಮೂಲ ಪರಿಕಲ್ಪನೆ**

6ನೇ ಸಹಕಾರ ತತ್ವವು ಸಹಕಾರ ಸಂಘಗಳ ನಡುವೆ ಸಹಕಾರವನ್ನು ಒತ್ತಾಯ ಪೂರ್ವಕವಾಗಿ ಪ್ರತಿಪಾದಿಸುತ್ತದೆ. ಸ್ವ–ಸಹಾಯ ಸಹಕಾರ ಚಳುವಳಿಯ ಆಧಾರಸ್ತಂಭ. ರಾಷ್ಟ್ರಮಟ್ಟದಲ್ಲಿ ಮತ್ತು ವಿಶ್ವಮಟ್ಟದಲ್ಲಿ ಆರ್ಥಿಕತೆಯಲ್ಲಿ ಸಹಕಾರ ಔದ್ಯೋಗಿಕ ಸಂಸ್ಥೆಯ ವಲಯವನ್ನು ವಿಸ್ತಾರ ಗೊಳಿಸಲು ಪ್ರಮುಖ ಅವಶ್ಯಕತೆ ಪರಸ್ಪರ ಸ್ವ–ಸಹಾಯ. ಹಂಚಿಕೊಂಡ ಗುರಿಸಾಧಿಸಲು, ಸಹಕಾರ ಸಂಘಗಳ ನಡುವೆ ಸಹಕಾರವು ಅಲ್ಪಮಟ್ಟಿನ ತ್ಯಾಗವನ್ನು ಬಯಸುತ್ತದೆ. ಒಂದು ಸಹಕಾರ ಸಂಘದ ಅಲ್ಪಾವಧಿ ಲಾಭಕ್ಕೆ ಮಿಗಿಲಾಗಿ ಸಾಮೂಹಿಕ ಪರಸ್ಪರ ಹಿತಾಸಕ್ತಿ ಮೇಲ್ಪಂಕ್ತಿಯನ್ನು ಪಡೆಯುವುದು ಸವಾಲಾಗಿ ಪರಿಣಮಿಸುತ್ತದೆ.

ಪರಿಣಾಮಕಾರಿ ಸಹಕಾರವು ಸಮಯ, ಸಂಪನ್ಮೂಲಗಳ ಮತ್ತು ತೊಂದರೆ ನಿವಾರಣಾ ನೈಪುಣ್ಯತೆಯನ್ನು ಬಯಸುತ್ತದೆ ಮತ್ತು ಎರಡನೆಯ ಪ್ರಜಾಸತ್ತಾತ್ಮಕ ತತ್ವ ಅನ್ವಯತೆಯ ಅಗತ್ಯತೆ ಇದೆ. ಎಲ್ಲಿ ಸಹಕಾರ ಸಂಘಗಳು ಪರಸ್ಪರ ಲಾಭಕ್ಕಾಗಿ ಒಟ್ಟಿಗೆ ಕೆಲಸ ಮಾಡುತ್ತವೆಯೋ ಅಲ್ಲಿ ಮುಕ್ತ, ಪಾರದರ್ಶಕ, ಹೊಣೆಗಾರಿಕೆಯುಳ್ಳ ಪ್ರಜಾಸತ್ತಾತ್ಮಕ ನಿರ್ಧಾರ ಕೈಗೊಳ್ಳ ಬೇಕಾಗುತ್ತದೆ.

**ಸಹಕಾರ ಸಂಘಗಳನಡುವೆ ಸಹಕಾರದ ಪ್ರಮುಖ ಗುಣಗಳು**

ಸಹಕಾರ ಸಂಘಗಳ ನಡುವೆ ಸಹಕಾರದ ಪರಿಣಾಮಕಾರಿ ರೂಢಿಗೆ ಅಗತ್ಯ ಪ್ರಮುಖ ಗುಣಗಳು.

- ಮುಕ್ತತೆ ಮತ್ತುಪಾರದರ್ಶಕತೆ:– ಸ್ಥಳೀಯ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಹಕಾರ ರಚನೆಗಳಲ್ಲಿ ಪರಸ್ಪರ ವ್ಯೆವಹಾರ ಗಳಲ್ಲಿ ಮುಕ್ತತೆ ಮತ್ತು ಪಾರದರ್ಶಕತೆಯನ್ನು ಗೌರವಿಸುತ್ತಾರೆ ಮತ್ತು ರೂಢಿಯಲ್ಲಿರಿಸಿಕೊಂಡಿರುತ್ತಾರೆ.
- ಹೊಣೆಗಾರಿಕೆ:– ಅಂತರ ಸಹಕಾರಿ ಕ್ರಿಯಗಳಲ್ಲಿ ಕೇವಲ ಆಡಳಿತ ಮಂಡಳಿ ಅಥವ ವ್ಯವಸ್ಥಾಪನೆಯ ನಿರ್ಧಾರವಾಗದೆ ಸಾಮಾನ್ಯ ಸಭೆಯ ನಿರ್ಧಾರವಾಗಿರತಕ್ಕದ್ದು. ವಾರ್ಷಿಕ ವರದಿಗಳಲ್ಲಿ ಅಂತರ ಸಹಕಾರ ಸಂಘಗಳ ವ್ಯವಹಾರಗಳನ್ನು ಒಳಗೊಳ್ಳತಕ್ಕದ್ದು ಮತ್ತು ಹೇಗೆ 6ನೇ ತತ್ವವನ್ನು ಅನ್ವಯಸಲಾಗಿದೆ ಎಂಬುದರ ಬಗ್ಗ ವಿವರಣೆ ಇರತಕ್ಕದ್ದು.
- ಪ್ರಾತಿನಿಧ್ಯ:– ಸಮೂಹದ ಮತ್ತು ಸದಸ್ಯ ಸಹಕಾರ ಸಂಘಗಳ ಪ್ರಾತಿನಿಧ್ಯ ಮತ್ತು ಸಮಾನತೆಯನ್ನು ವಿವಿಧ ಸಹಕಾರ

ಸಂಘಗಳ ನಡುವೆ ಕಾಪಾಡುವಂತೆ ನಿರ್ಧಾರಗಳನ್ನು ತೆಗೆದುಕೊಳ್ಳವುದು.

- ಹೊಂದಿಕೊಳ್ಳುವಿಕೆ(ನಮ್ಯತೆ):– ಸಹಕಾರವೆಂದರೆ ವಿವಿಧ ಜನಗಳು, ಪಕ್ಷಗಳು ಮತ್ತು ವಿವಿಧ ಧ್ವನಿಗಳು ಅವರ ಹಿನ್ನೆಲೆ ಮತ್ತು ಅಭಿಪ್ರಾಯಗಳು ವಿಭಿನ್ನ ಅಪರಿಚಿತರು ಒಟ್ಟುಗೂಡಿದ್ದಾರೆ. ಸಹಕಾರಿಗಳಲ್ಲಿ ಹೊಂದಾಣಿಕೆಗೆ ಬದ್ಧತೆ ಇದ್ದರೆ ರಾಜಿಯಾಗುವುದು, ನೂತನ ಅನ್ವೇಷಣೆ ಮತ್ತು ಪರಿಣಾಮಕಾರಿ ಫಲಿತಾಂಶವನ್ನು ತರಬಲ್ಲದು. ಇದು ನಮ್ಮನ್ನು ಭಾಷಿಕವಾಗಿ "ಸಹಕಾರ" ಎಂದರೆ "ಒಟ್ಟಿಗೆ ಕೆಲಸಮಾಡುವುದು" ಎಂಬ ಅರ್ಥದೆಡೆಗೆ ಕೊಂಡಯ್ಯು ತ್ತದೆ. ಒಟ್ಟಿಗೆ ಕೆಲಸ ಮಾಡುವುದೆಂದರೆ ಹೊಂದಾಣಿಕೆ ಮತ್ತು ಒಬ್ಬರನ್ನು ಮತ್ತೊಬ್ಬರನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಯಾವುದೇ ಒಬ್ಬ ವ್ಯಕ್ತಿ ಅಥವ ಗುಂಪು ಈ ವಿಧಿಯಲ್ಲಿ ಪ್ರಾಬಲ್ಯ ಪಡೆಯಬಾರದು/ ಪ್ರಭಲರಾಗಬಾರದು.

- ಪರಸ್ಪರತೆ:– ಪರಣಾಮಕಾರಿ ಸಹಕಾರವು ಪರಸ್ಪರ ಲಾಭವನ್ನು ಒಳಗೊಳ್ಳತ್ತದೆ. ಒಂದು ಸಹಕಾರ ಸಂಘದ ಜೀವನ ಚರಿತ್ರೆಯಲ್ಲಿ ಅನೇಕ ಬಾರಿ ಅದಕ್ಕೆ ಇತರೆ ಸಹಕಾರ ಸಂಘದ ಬೆಂಬಲ ದೊರೆತಿರುತ್ತದೆ ಅಥವ ಇದು ಬೆಂಬಲ ನೀಡಿರುತ್ತದೆ. ಪರಸ್ಪರತೆ ನಂಬಿಕೆ ಮತ್ತು ಪರಸ್ಪರನಂಬಿಕೆಯ ಆಧಾರದ ಮೇಲೆ ನಿಂತಿರುತ್ತದೆ. 6ನೇ ತತ್ವವನ್ನು ಒಪ್ಪಿರುವ ಸಹಕಾರ ಸಂಘಗಳು ಪರಸ್ಪರ ಸಹಾಯ ಹಸ್ತ ನೀಡುವ, ತೆಗೆದುಕೊಳ್ಳುವ ಕ್ರಿಯೆಯಲ್ಲಿ ಹಿಂದಿನಿಂದಲೂ ತೊಡಗಿಸಿಕೊಂಡಿವೆ.

- ಸಹಕಾರ ಅಸ್ಮಿತೆಯ ಪಾಲನೆ:– ಇದು ಹೆಸರಿಗೆ ಮಾತ್ರ ಸಹಕಾರ ಎಂಬುದಕ್ಕಿಂತ ಮೇಲ್ಮಟ್ಟದಲ್ಲಿರುತ್ತದೆ. ಇದು ಮೈತ್ರಿ ಸಂಸ್ಥೆಯ ವ್ಯಾಖ್ಯೆಯಲ್ಲಿನ ಸಹಕಾರ ಮೌಲ್ಯ ಮತ್ತು ತತ್ವಗಳನ್ನು ತತ್ವಶಃ ಪಾಲಿಸುವುದು.

- ರಚನಾಸ್ವರೂಪವು ಸಹಕಾರಕ್ಕೆ ನೀಡುವ ನೆರವು:– ಸಹಕಾರದ ಯಶಸ್ಸಿನ ಹಿಂದೆ ಸಹಕಾರದ ಎಲ್ಲ ಹಂತದ ರಚನೆಯು ರಚನೆಯಾದ ದೀರ್ಘಚರಿತ್ರೆ ಇದೆ. 6ನೇ ತತ್ವ ರೀತಿಯ ವಿವಿಧ ಹಂತದ ರಚನೆ ರೂಪುಗಳ್ಳಲು ಅಲ್ಲಿಯ ರಾಜಕೀಯ7 ಮತ್ತು ಆರ್ಥಿಕ ಪರಿಸ್ಥಿತಿಯನ್ನು ಅವಲಂಭಿಸಿದೆ. ಅರಿಯಬೇಕಾದ ಅಂಶವೆಂದರೆ ಸಹಕಾರ ಸಂಘಗಳ ನಡುವೆ ಸಹಕಾರಾಧಾರಿತ ಸಹಕಾರ ರಚನೆಯ ಅವಶ್ಯಕತೆಯನ್ನು ಮನಗಂಡಿದ್ದುದಾಗಿದೆ.

ಮಾಧ್ಯಮಿಕ ಸಂಸ್ಥೆಗಳು ಮತ್ತು ಉತ್ತುಂಗ ಸಂಸ್ಥೆಗಳು ರಚನೆಯಾಗಲು ಯೋಜನಾತ್ಮಕವಾದ ಸಹಯೋಗದಿಂದ ಸಾಧ್ಯವಾಯಿತು. ಅನೌಪಚಾರಿಕವಾಗಿ ರಚನೆಯಾದ ಈ ಸಂಸ್ಥೆಗಳು ನಂಬಿಕೆ ಮತ್ತು ಒಗ್ಗಟ್ಟನ್ನು ಹುಟ್ಟುಕಾಶಿ ಔಪಚಾರಿಕ ಸಂಸ್ಥೆಗಳ ನಿರ್ಮಾಣಕ್ಕೆ ಕಾರಣವಾಗಿದೆ. ಈ ಜಾಲವು ಹೆಚ್ಚು ಗಟ್ಟಿತನದಿಂದ ಕೂಡಿರುವುದಿಲ್ಲ ಮತ್ತು ಬಿಗಿಯಾದ ನೀತಿಗಳನ್ನು ಹೊಂದಿರುವುದಾಗಲಿ ಮತ್ತು ಅತ್ಯಂತ ವಿಕೇಂದ್ರೀಕೃತ ವ್ಯವಸ್ಥೆಯಾಗಿರುತ್ತದೆ. ಆದರೂ ಕೆಲವು ಅನೌಪಚಾರಿಕ ವ್ಯವಸ್ಥ ಅಸ್ತಿತ್ವದಲ್ಲಿದೆ ಎಂದೇ ಹೇಳಬೇಕು. ಈ ಜಾಲ ಅತ್ಯಂತ ಪ್ರಮುಖ ಪಾತ್ರ ನಿರ್ವಹಿಸಿರುವುದೆಂದರೆ ಸಹಕಾರ ಸಂಘಗಳು ಮತ್ತು ವ್ಯಕ್ತಿಗತ ಸದಸ್ಯರನ್ನು ಒಗ್ಗೂಡಿಸಿರುವುದು.

ಸಹಕಾರ ಮಹಾಮಂಡಳಗಳು ಪ್ರಾತಿನಿಧ್ಯ ನೀಡುವಲ್ಲಿ ಮತದಾನ ಮತ್ತು ಕಾರ್ಯಾಚರಣೆಯಲ್ಲಿ ಹೆಚ್ಚು ರಚನಾಸ್ವರೂಪವನ್ನು ಹೊಂದಿವೆ. ಇವು ಅಭಿವೃದ್ಧಿ, ಶಿಕ್ಷಣ ಮತ್ತು ಸಲಹೆ ನೀಡುವಲ್ಲಿ ಮುಂಚೂಣಿಯಲ್ಲಿವೆ. ಮಹಾಮಂಡಳಗಳು ಲಭ್ಯ ಸೀಮಿತ ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಸಣ್ಣ ಸದಸ್ಯ ಸಂಘಗಳಿಗೆ ಶಕ್ತಿ ತುಂಬುವಲ್ಲಿ ಪ್ರಮುಖಪಾತ್ರ ನಿರ್ವಹಿಸುತ್ತಿದ್ದು, ಆರನೇ ತತ್ವದ ಪಾಲನೆ ಮಾಡುತ್ತಿವೆ.

ಮೊದಲನೆ ತತ್ವವಾದ ಮುಕ್ತ ಮತ್ತು ಸ್ವಯಂ ಸದಸ್ಯತ್ವ ಮಹಾಮಂಡಳ ಮತ್ತು ಇತರೆ ಸಹಕಾರ ರಚನೆಗಳಿಗೂ ಅನ್ವಯವಾಗುತ್ತದೆ ಮತ್ತು ಅವು ನಿಯಂತ್ರಣಕೂಟವಾಗಿ ಕೆಲಸ ಮಾಡದಿರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕಾಗುತ್ತದೆ.

ರಾಷ್ಟ್ರದ ಆರ್ಥಿಕ ಪ್ರಗತಿಯಲ್ಲಿ ರಾಷ್ಟ್ರೀಯ ಸಹಕಾರ ಮಹಾಮಂಡಳಗಳು ಉತ್ತುಂಗ ಸಂಸ್ಥೆಗಳು ಪ್ರಮುಖ ಪಾತ್ರ ನಿರ್ವಹಿಸಬೇಕು ಆಗಲೇ ಅದು ಅವುಗಳ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಸಾಧ್ಯ. ಎಲ್ಲ ವಲಯಗಳಲ್ಲೂ ಇವು ರಚನೆಯಾಗಿದ್ದು, 5ನೇ ತತ್ವದಲ್ಲಿದ್ದಂತೆ ಸಹಕಾರ ಔದ್ಯೋಗಿಕ ಸಂಸ್ಥೆಯಾಗಿ ಸಾರ್ವಜನಿಕರ, ಮಾಧ್ಯಮದ ರಾಜಕೀಯ ನಾಯಕರುಗಳ ಮತ್ತು ಅಭಿಪ್ರಾಯ ಮೂಡಿಸುವ ನಾಯಕರ ಮೇಲೆ ಪ್ರಭಾವ ಬೀರುತ್ತದೆ ಮತ್ತು ರಾಷ್ಟ್ರದ ಶಾಸನ ನಿರ್ಮಾಣ, ತೆರಿಗೆ ನೀತಿಯ ಮೇಲೆ ಇತರೆ ಸಂಸ್ಥೆಗಳ ರೀತಿಯಲ್ಲೆ ಸಹಕಾರ ಸಂಸ್ಥೆಗಳಣ್ನು ಪರಿಗಣಿಸುವಂತೆ ಮಾಡಬಲ್ಲವು.

**ಅಂತರ ಸಹಕಾರ ರಚನೆಯ ಉಭಯ ಪ್ರಾಮುಖ್ಯ**

ಸಹಕಾರ ರಚನಾಸ್ವರೂಪವು ಎರಡು ರೀತಿಯ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ. ವಸ್ತು ಮತ್ತು ಸೇವೆಯ ರೂಪದ ಆರ್ಥಿಕ ಆಯಾಮ ಮತ್ತೊಂದು ರಾಜಕೀಯ ಮತ್ತು ಸಾಮಾಜಿಕ ಆಯಾಮ. ಸಹಕಾರ ಸಂಘಗಳ ನಡುವೆ ವ್ಯಾಪಾರ ವಹಿವಾಟು ಮತ್ತು ಸಾಮಾನ್ಯ ಹಿತಾಸಕ್ತಿಗಳ ಹಂಚಿಕೆ ಸಾಮಾಚಿಕ ಮತ್ತು ರಾಜಕೀಯ ಆಯಾಮದ ಮೇಲೆಯೆ ಆರ್ಥಿಕ ಆಯಾಮವು ರೂಪುಗೊಳ್ಳುತ್ತದೆ. ಇದು ಎಲ್ಲ ಹಂತದ ರಚನಾ ಸ್ವರೂಪಗಳಲ್ಲಿಯೂ ಕಂಡುಬರುತ್ತದೆ.

ಈ ತತ್ವದ ಪರಿಕಲ್ಪನೆಗೆ ಬಲವಾದ ಬದ್ಧತೆಯಿಂದ ಸಮಯ ಮತ್ತು ಸಂಪನ್ಮೂಲಗಳನ್ನು ವಿನಿಯೋಗಿಸುವ ಸಹಕಾರ ಪರಿಶ್ರಮದ ಇಡೀ ಸಹಕಾರ ಚಳುವಳಿ ಮತ್ತು ಸಹಕಾರ ಸಂಘಗಳಿಂದ ಅತ್ಯುತ್ತಮ ಫಲಿತಾಂಶವನ್ನು ನಿರೀಕ್ಷಿಸಬಹುದು ಹೆಚ್ಚಿನ ಶ್ರಮ ಹೆಚ್ಚಿನ ಗುಣಾತ್ಮಕ ಫಲಿತಾಂಶವನ್ನು ನೀಡುತ್ತದೆ.

**ಮಾಧ್ಯಮಿಕ ಸಹಕಾರ ಸಂಘಗಳ ಪಾತ್ರ**

ಜಾಗತೀಕರಣವಾಗಿರುವ ಆರ್ಥಿಕತೆಯಲ್ಲಿ ಸಹಕಾರ ಸಂಘಗಳು ಯಶಸ್ಸುಗಳಿಸಬೇಕೆಂದರೆ ಅವು ಒಟ್ಟಿಗೆ ಕೆಲಸ ಮಾಡಬೇಕು ಸಣ್ಣ ಮತ್ತು ಅತಿ ಸಣ್ಣ ರೈತರು ಪ್ರಾಥಮಿಕ/ಗ್ರಾಮ ಮಟ್ಟದಲ್ಲಿ ತಮ್ಮ ಸಹಕಾರ ಸಂಘಗಳ ಮೂಲಕ ಒಟ್ಟಿಗೆ ಕೆಲಸಮಾಡಬೇಕು ಈ ಸಹಕಾರ ಸಂಘಗಳು ತಮ್ಮ ಮಾಧ್ಯಮಿಕ ಸಹಕಾರ ಸಂಘಗಳ ಮೂಲಕ ದಾಸ್ತಾನು ಮಾರುಕಟ್ಟೆ ಸೌಕರ್ಯಗಳನ್ನು ಸೃಷ್ಟಿಮಾಡಿಕೊಳ್ಳಬೇಕು. ಬಲಿಷ್ಟ ಉತ್ಪನ್ನ ಸಂಸ್ಥೆಗಳಾಗಿ ಮಾಧ್ಯಮಿಕ ಮತ್ತು ಉತ್ತುಂಗ ಸಂಸ್ಥೆಗಳು ಸೃಷ್ಟಿಯಾಗಬೇಕು

ಮಾಧ್ಯಮಿಕ ಸಹಕಾರ ಸಂಘಗಳು ಪ್ರಾಥಮಿಕ ಸಹಕಾರ ಸಂಘಗಳನ್ನು ತಮ್ಮ ಸದಸ್ಯರನ್ನಾಗಿ ಹೊಂದಿದ್ದು ಅವುಗಳು ಮಹಾಮಂಡಳ ಅಥವ ಉತ್ತುಂಗ ಸಂಸ್ಥೆಗಳನ್ನು ರೂಪಿಸಿದ್ದು ವ್ಯಾಪಾರ ವಹಿವಾಟುಗಳಲ್ಲಿ ಒಮ್ಮತದ ಧ್ವನಿಯೊಡನೆ ಮಾತನಾಡಲು ಸಶಕ್ತವಾಗಿವೆ. ಸಹಕಾರ ಸಂಘಗಳ ಪರವಾಗಿ ಮತ್ತು ಅವುಗಳ ರಕ್ಷಣೆಗಾಗಿ ಮಾಧ್ಯಮಿಕ ಸಂಘಗಳು ಸರ್ಕಾರ ನಿಯಂತ್ರಕರೊಡನೆ ವ್ಯವಹರಿಸುತ್ತಿವೆ. ಸಹಕಾರ ಸಂಘಗಳನ್ನು ಸ್ವತಂತ್ರವಾಗಿ ಮತ್ತು ಸಾಮೂಹಿಕವಾಗಿ ರಕ್ಷಿಸುತ್ತಿವೆ. ಇದರಿಂದಾಗಿ ಉತ್ಪಾದನೆ ಸಂಸ್ಥೆಗಳು ಉತ್ಪಾದಕರಿಗೆ ಉತ್ತಮ ಬೆಲೆ ದೊರೆಯಲು (ಚೌಕಾಶ ಶಕ್ತಿ ಹೆಚ್ಚಿಸಲು) ಕಾರಣವಾಗಿವೆ.

ವಿಶ್ವ ಸಂಸ್ಥೆಯ ಆಹಾರ ಮತ್ತು ವ್ಯವಸಾಯ ಸಂಸ್ಥೆ (FAO) ಪ್ರಾಥಮಿಕ ಸಂಘಗಳು ಮಾಧ್ಯಮಿಕ ಮತ್ತು ಮೇಲಿನ ಉನ್ನತ ಸಂಸ್ಥೆಗಳ ಮೂಲಕ ಕಾರ್ಯನಿರ್ವಹಿಸಿರುವುದನ್ನು ಶ್ಲಾಘಿಸಿದೆ.

ವಸತಿ ವಲಯದಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ಮಾಧ್ಯಮಿಕ ಮತ್ತು ಉನ್ನತ ಸಂಸ್ಥೆಗಳನ್ನು ರಚಿಸಿ ವೃತ್ತಿಪರ ವ್ಯವಸ್ಥಾಪನೆ ಯನ್ನು ಮಾಡುತ್ತಿವೆ. ಕಟ್ಟಡ ನಿರ್ಮಾಣ ವಸ್ತುಗಳು, ಕಟ್ಟಡ ನಿರ್ಮಾಣ ಸೇವೆ, ಶಿಕ್ಷಣ ತರಬೇತಿ ಸಲಹೆಗಳನ್ನು ನೀಡುತ್ತಿವೆ. ಪತ್ತಿನ ಕ್ಷೇತ್ರದಲ್ಲಿ ಅದರ ಒಕ್ಕೂಟಗಳು ವ್ಯವಹಾರ ಗಾತ್ರಕ್ಕನುಗುಣವಾಗಿ ಅಗತ್ಯ ಮಾಹಿತಿ

ತಂತ್ರಜ್ಞಾನ ಸೇವೆ ನೀಡುವಲ್ಲಿ ಸಮನ್ವಯತೆ ಸಾಧಿಸಿವೆ. ಗ್ರಾಹಕರ ಸಹಕಾರ ಸಂಘಗಳು ಸಗಟು ಖರೀದಿ, ಜಂಟಿ ಖರೀದಿ ವ್ಯವಸ್ಥೆಗಾಗಿ ಮಾಧ್ಯಮಿಕ ಸಹಕಾರ ಸಂಘಗಳನ್ನು ಸ್ಥಾಪಿಸಿವೆ. ಈ ವ್ಯವಸ್ಥೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ಗಡಿಗಳ ಅಡೆತಡೆ ಇಲ್ಲದೆ ನಿರ್ಮಾಣವಾಗಿರುತ್ತದೆ.

**ಮೈತ್ರಿ ಸಂಸ್ಥೆಯ ಪ್ರಮುಖ ಪಾತ್ರ: ಅಂತಿಮ ಅಂತರ ರಾಷ್ಟ್ರೀಯ ಸಹಕಾರ ರಚನೆ”**

ಸಹಕಾರ ಸಂಘಗಳ ನಡುವೆ ಸಹಕಾರಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಇಂಗ್ಲೆಂಡ್, ಲಂಡನ್‌ನಲ್ಲಿ 1895ರಲ್ಲಿ ಮೈತ್ರಿ ಸಂಸ್ಥೆಯ ಸ್ಥಾಪನೆ. ವಿಶ್ವದ ಎಲ್ಲ ರಾಷ್ಟ್ರಗಳ ಎಲ್ಲ ಸಹಕಾರ ಸಂಘಗಳು ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆಯ ಸದಸ್ಯರಾಗಿ ಭಾಗಿಯಾಗಿ ತಮ್ಮ ಹಕ್ಕನ್ನು ಚಲಾಯಿಸಬೇಕು

ವಿಶ್ವದಲ್ಲಿ ಅತಿ ಹೆಚ್ಚು ಸದಸ್ಯವುಳ್ಳ ಅತಿದೊಡ್ಡ ಪ್ರಜಾಸತ್ತಾತ್ಮಕ ಸಂಸ್ಥೆ ಅಂತರರಾಷ್ಟ್ರೀಯ ಮೈತ್ರಿ ಸಂಸ್ಥೆ. ಸಂಸ್ಥೆಗೆ 1940ರಿಂದಲೆ ವಿಶ್ವ ಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಪರಿಷತ್ತು ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಗಳು ಸಲಹಾ ಸಂಸ್ಥೆಯ ಸ್ಥಾನಮಾನ ನೀಡಿವೆ. ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯೊಡನೆ ಒಪ್ಪಂದ ಜ್ಞಾಪನಾ ಪತ್ರವನ್ನು (MOU) ಹೊಂದಿದೆ. ವಿವಿಧ ರಾಷ್ಟ್ರಗಳ ಸಂಸ್ಕೃತಿಗಳ ನಡುವಿನ ಸಹಕಾರ ಸಂಘಗಳಲ್ಲಿ ಗೆಳತನ ಗೌರವವನ್ನು ಮೈತ್ರಿ ಸಂಸ್ಥೆಯ ವಿಶ್ವದ ಮತ್ತು ಅದರ ಪ್ರಾದೇಶಿಕ ಸಂಸ್ಥೆಗಳು ನಿರ್ಮಾಣ ಮಾಡುತ್ತಿವೆ. ಅದರ ವಲಯ ಸಂಸ್ಥೆಗಳು ವಿಷಯಾವಾರು ಸಮಿತಿಗಳು ಸಹಕಾರ ವ್ಯವಹಾರಗಳಲ್ಲಿ ಜ್ಞಾನ ಮತ್ತು ವಿಶೇಷ ಅನುಭವ ಹಂಚಿಕೊಳ್ಳಲು ಸಹಾಯ ನೀಡಲು, ಬೆಂಬಲ ನೀಡಲು, ಬೆಂಬಲ ಮತ್ತು ಸಹಾಯದ ಮೂಲಕ ಪ್ರೋತ್ಸಾಹ ನೀಡುತ್ತಿವೆ. ರಾಷ್ಟ್ರೀಯ ಪ್ರಾದೇಶಿಕ ಮತ್ತು ವಿಶ್ವದಲ್ಲಿನ ಅಂತರ ವಲಯ ಬೆಂಬಲ ವಿಶ್ವ ಆರ್ಥಿಕತೆಯಲ್ಲಿ ಸಹಕಾರ ವಲಯ ನಿರ್ಮಾಣಗೊಳ್ಳಲು ಸಹಾಯ ಬೆಂಬಲ ನೀಡುತ್ತಿದೆ.

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಶಿಫಾರಸ್ಸು 193ರ ಶಿಫಾರಿಸಿನಂತೆ ಯಾವುದಾದರೂ ರಾಷ್ಟ್ರಗಳಲ್ಲಿ ಸಹಕಾರ ಚಳುವಳಿಗೆ ಅದರ ತತ್ವ ಪಾಲನೆಯಲ್ಲಿ ಧಕ್ಕೆ ಉಂಟಾದರೆ (ಬೆದರಿಕೆ) ಸಂಸ್ಥೆಯು ಮಧ್ಯ ಪ್ರವೇಶಿಸಿ ಸರಿ ಪಡಿಸಲು ಹಕ್ಕನ್ನು ಹೊಂದಿರುತ್ತದೆ. ಇದನ್ನು ಸಂಸ್ಥೆಯು ಪರಿಣಾಮಕಾರಿಯಾಗಿ ಬಳಸುತ್ತಿದೆ.

ಮೈತ್ರಿ ಸಂಸ್ಥೆಯು ಎಲ್ಲ ಸಹಕಾರ ಸಂಸ್ಥೆಗಳಿಗೆ ಸದಸ್ಯತ್ವ ಅಥವ ಸಹಸದಸ್ಯತ್ವದೊಂದಿಗೆ ಅದರ ಸಾಮಾನ್ಯ ಸಭೆಯಲ್ಲಿ ಪ್ರಾದೇಶಿಕ ಸಂಸ್ಥೆ ಮತ್ತು ವಲಯವಾರು ಸಂಸ್ಥೆಗಳಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ. ಅದರಂತೆ ಆರನೇ ತತ್ವವನ್ನು ಪಾಲಿಸುತ್ತಿದೆ. ಸದಸ್ಯತ್ವ ಶುಲ್ಕವನ್ನು ನೇರವಾಗಿ ಅಥವ ಅದರ ಉತ್ತುಂಗ ಅಥವ ಮಹಾಮಂಡಳಗಳ ಮೂಲಕ ಪಾವತಿಸಬಹುದಾಗಿದೆ. ಮೈತ್ರಿ ಸಂಸ್ಥೆಯ ಮೌಲ್ಯವನ್ನು ಎಂದಿಗೂ ಕಡೆಗಣಿಸಲಾಗದು.

**6ನೇ ತತ್ವವನ್ನು ಅನ್ವಯಿಸುವಲ್ಲಿ ಎದುರಾಗುವ ಸವಾಲುಗಳು:**

ಎಲ್ಲ ಸಹಕಾರ ಸಂಘಗಳು ತಮ್ಮದೇ ಆದ ಪ್ರಮಾಣದಲ್ಲಿ ಸವಾಲನ್ನು ಎದುರಿಸುತ್ತವೆ. ಮೊದಲನೆಯ ಸವಾಲು ಸಹಕಾರ ಸಂಘಗಳ ಪ್ರಜಾಸತ್ತಾತ್ಮಕ ಸಂಘಟನೆಯಾಗಿ ಕರ್ತವ್ಯ ನಿರ್ವಹಿಸುವುದು. ತಮ್ಮ ಸಂಬಂಧ ಗಳನ್ನು ಕುದುರಿಸಲು ಅವಶ್ಯ ತಂತ್ರಗಾರಿಕೆಯನ್ನು ಅಳವಡಿಸುವುದು. ಸದಸ್ಯರ ನಡುವೆ ಆಂತರಿಕ ಸಂಬಂಧಗಳು ವೃದ್ಧಿಯಾಗುವುದರಿಂದ ತಮ್ಮ ಸಹಕಾರ ಸಂಘದ ಅವಶ್ಯಕತೆ ಆಕಾಂಕ್ಷೆ ಮೀರಿ ವರ್ತಿಸುತ್ತಾರೆ.

**ನಮ್ಮೆಲ್ಲರ ಸಹಕಾರ ಅಸ್ಮಿತೆಯ ಉಪಯೋಗ:**

ಅಂತರರಾಷ್ಟ್ರೀಯ ಸಹಕಾರದ ಚಿಹ್ನೆಯನ್ನುಬಳಸುವುದು ಅನ್‌ಲೈನ್ ನಲ್ಲಿ, 'ಡಾಟ್ ಕೋ ಆಪ್'ನ್ನು ಬಳಸುವುದು ಸಹಕಾರ ಅಸ್ಮಿತೆಯನ್ನು ಪ್ರತಿಬಿಂಬಿಸುತ್ತದೆ. ಸಹಕಾರ ವ್ಯಾಪಾರಿ ಸಂಸ್ಥೆಗಳ ನಿಘಂಟಿನ ತಯಾರಿ, ಸ್ಥಳೀಯ, ಪ್ರಾಂತೀಯ ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸುವುದು, ಸಮ್ಮೇಳನಗಳನ್ನು ನಡೆಸುವ ಮೂಲಕ ಸಹಕಾರ 'ಬ್ರಾಂಡ್'ನ್ನು ಪ್ರಚಾರ ಪಡಿಸಿ ಮಾರುಕಟ್ಟೆಯನ್ನು ವೃದ್ಧಿಗೊಳಿಸುವುದು.

ಸುಸ್ಥಿರ ಆರ್ಥಿಕ ಅಭಿವೃದ್ಧಿ ಮಾದರಿ ಮತ್ತು ಸಂಪತ್ತು ಸೃಷ್ಟಿಯ ಹರಿಕಾರರಾಗಿ ಸಹಕಾರರಾಗಿ ಸಹಕಾರ ಸಂಘಗಳು ತಮ್ಮ ಸದೃಡ ಒಗ್ಗಟ್ಟಿನ ಸಹಕಾರ ಅಸ್ಮಿತೆಯನ್ನು ಉಪಯೋಗಿಸುವುದು.

**ಸಹಕಾರ ಸಂಘಗಳ ಸ್ಥಾನಿಕ ಕಾರ್ಯತಂತ್ರ ರೂಪಿಸುವಿಕೆ**

ಪ್ರತಿ ಸಹಕಾರ ಸಂಘವು ವಿಶಿಷ್ಟ ರಾಜಕೀಯ ಮತ್ತು ಸಾಮಾಜಿಕ ಸನ್ನಿವೇಶದಲ್ಲಿ ಬೆಳೆದಿರುತ್ತದೆ. ಆರನೇ ತತ್ವವು ವ್ಯಾಪಾರಿ ಮಾದರಿಯಲ್ಲಿ ತನ್ನದೇ ಸ್ಥಾನಿಕ ಕಾರ್ಯತಂತ್ರ ರೂಪಿಸುತ್ತದೆ. ಸತ್ಯವಾದ ಸಾಮಾಜಿಕ ಬದ್ಧತೆವುಳ್ಳ ಭಾಗವಹಿಸುವಿಕೆಯಲ್ಲಿ ನಾಯಕರುಗಳಾಗಿ ಹೆಮ್ಮೆಯಿಂದ ಪ್ರಜಾಸತ್ತಾತ್ಮಕ ಸಂಸ್ಥೆಗಳು ಎಂದು ಪ್ರತಿಪಾಧಿಸಲು ಸಾಧ್ಯವಾಗುತ್ತದೆ.

21ನೇ ಶತಮಾನದಲ್ಲಿ ಅನೇಕ ಜನರು ಅನೇಕ ರಾಷ್ಟ್ರಗಳಲ್ಲಿ ಸಹಕಾರ ವ್ಯವಹಾರವನ್ನು ಅವಲಂಭಿಸಿ ಸದೃಡ ಸುಸ್ಥಿರ ಸಹಕಾರ ಆರ್ಥಿಕತೆಯನ್ನು ನಿರ್ಮಾಣಮಾಡುತ್ತಿದ್ದಾರೆ. ಸ್ವ–ಸಹಾಯ ಮತ್ತು ಸ್ವಾವಲಂಭನೆ ಆಧಾರಿತ ಸಶಕ್ತತೆಯನ್ನು ಸಹಕಾರ ಸಂಘಗಳು ಒದಗಿಸುತ್ತವೆ. ವ್ಯತಿರಿಕ್ತವಾಗಿ ಈ ದಶಕಗಳ ವಿಶ್ವ ಆರ್ಥಿಕತೆಯಲ್ಲಿ ಕೆಲವೇ ಜನರಲ್ಲಿ ಸಂಪತ್ತು ಕ್ರೊಡಿಕರಣವಾಗುತ್ತದೆ. ಸಹಕಾರ ಸಂಘಗಳಲ್ಲಿ ಸಹಕಾರ ವಸ್ತು ಮತ್ತು ಸೇವೆ ಹಂಚಿಕೆ ಪರಸ್ಪರ ಸಹಾಯದ ಆಧಾರದಲ್ಲಿ ಮತ್ತು ಸಮೂಹ ಸೇವೆಯ ಆಸಕ್ತಿಯಿಂದ ನಡೆಯುತ್ತದೆ.

**ಆರ್ಥಿಕವಾಗಿ ಸಹಕಾರ ಸಂಘಗಳ ನಡುವೆ ಸಹಕಾರ**

ಸಹಕಾರ ಸಂಘಗಳ ನಡುವೆ ಆರ್ಥಿಕ ಸಹಕಾರವು ಅಗತ್ಯ ಬಂಡವಾಳ ಸಂಪನ್ಮೂಲವನ್ನು ಒದಗಿಸುತ್ತದೆ. ಸಣ್ಣ ಸಹಕಾರ ಸಂಘಗಳು ಮಹಾ ಮಂಡಳದಲ್ಲಿ ಕಾರ್ಯವೆಸಗುವುದರಿಂದ ಸಂಪನ್ಮೂಲಗಳನ್ನು ಪಡೆದು ಸಶಕ್ತವಾಗುವುದಲ್ಲದೇ ಸಂಶೋಧನೆ ಮತ್ತು ಅಭಿವೃದ್ಧಿಯ ಲಾಭವನ್ನು ಪಡೆಯಬಹುದು. ನೂತನ ಮತ್ತು ಅಭಿವೃದ್ಧಿಹೊಂದುತ್ತಿರುವ ಸಹಕಾರ ಸಂಘಗಳು ಅಭಿವೃದ್ಧಿ ಹೊಂದಿರುವ ಬೃಹತ್ ಸಂಘದಿಂದ ಸಹಾಯ ಪಡೆದು ಅದನ್ನು ಹೂಡಿಕೆ ಮಾಡಿ ಗಳಿಕೆಯಿಂದ ಬಂಡವಾಳವನ್ನು ವೃದ್ಧಿಗೊಳಿಸಿ ಪುನಃ ಸಹಕಾರ ಬಂಡವಾಳದ ಕ್ರೋಢೀಕರಣಕ್ಕೆ ಕಾರಣವಾಗಬಹುದು. ಸಹಕಾರದ ಬಂಡವಾಳವನ್ನು ಸಹಕಾರೇತರ ಸಂಸ್ಥೆಗಳಲ್ಲಿ ಹೂಡಿಕೆ ಮಾಡಬಾರದು. ಇದರಿಂದ ಆರ್ಥಿಕ ಗಳಿಕೆ ಜೊತೆಗೆ ಸಾಮಾಜಿಕ ಗಳಿಕೆ ಸಾಧ್ಯ. ಸಹಕಾರ ಆರ್ಥಿಕತೆಯ ಸಾಮರ್ಥ್ಯ ಮತ್ತು ವೈವಿಧ್ಯಮಯತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.

ಸದೃಡವಾದ ಸಹಕಾರ ಸಂಘಗಳು ನೂತನ ಮತ್ತು ಅಭಿವೃದ್ಧಿ ಶೀಲ ಸಹಕಾರ ಸಂಘಗಳಿಗೆ ಮೆದುಸಾಲ, ಕೊಡುಗೆ ನೀಡುವ ಮೂಲಕ ಅಭಿವೃದ್ಧಿಗೆ ಕಾರಣವಾಗುತ್ತದೆ. ಇದು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧ್ಯ. 6ನೇ ತತ್ವ ಪಾಲನೆ ಮಾಡಿದಂತಾಗುತ್ತದೆ. ಆರ್ಥಿಕ ಸಹಾಯದೊಡನೆ ವ್ಯಾಪಾರ ಅಭಿವೃದ್ಧಿ ಬೆಂಬಲ, ಶಿಕ್ಷಣ, ತರಭೇತಿ ಒದಗಿಸುವ ಮೂಲಕ ನೂತನ ಮತ್ತು ಅಭಿವೃದ್ಧಿಶೀಲ ಸಹಕಾರ ಸಂಘಗಳೊಡನೆ ಬಾಂಧವ್ಯ ಸ್ಥಾಪಿಸಿ ಒಗ್ಗಟ್ಟು ಪ್ರದರ್ಶಿಸಲು ಸಾಧ್ಯವಾಗುತ್ತದೆ. ಈ ಚಕ್ರವು ಸಂಪತ್ತು ಸೃಷ್ಟಿಗೆ ಕಾರಣವಾಗಿ ಪೀಳಿಗೆಯಿಂದ ಪೀಳಿಗೆಗೆ ಪುನರಾವರ್ತಿಸಲು ಸಾಧ್ಯವಾಗುತ್ತದೆ.

**ಸಹಕಾರದಿಂದ ಸಹಕಾರ ವ್ಯವಹಾರ(ಕೋ ಆಪ್ 2 ಕೋ ಆಪ್ ಟ್ರೇಡ್)**

ಪಾಲುಗಾರಿಕೆಯಿಂದ ಕಾರ್ಯಮಾಡುವುದರಿಂದ ಸಹಕಾರ ಆರ್ಥಿಕತೆ ಯನ್ನು ಸದೃಢಗೊಳಿಸಬಹುದು. ಸ್ಥಳೀಯ ಮತ್ತು ಜಾಗತಿಕ ಮಟ್ಟದಲ್ಲಿ ವ್ಯವಹಾರ ಸಂಬಂಧಗಳ ವೃದ್ಧಿ, ಸಹಕಾರ ಒಕ್ಕೂಟ (ಛಿಠಿಛಿಡಿಞಣಟ) /ಸಹವ್ಯವಸ್ಥೆಯಲ್ಲಿ ಕಾರ್ಯವೆಸಗುವುದರಿಂದ ವ್ಯವಹಾರ ಗಾತ್ರ ಹಿಗ್ಗಿಸಬಹುದು. ಸಹಕಾರ ಚಳುವಳಿಗೆ ಇದು ಇಂಬುಗೊಡುತ್ತದೆ.

ಸಹಕಾರ ಸಂಘಗಳಿಂದ ಸಹಕಾರ ಸಂಘಗಳಿಗೆ ವ್ಯವಹಾರ ಆರನೆ ತತ್ವದ ನೇರ ಅನುಷ್ಠಾನ. ವಲಯವಾರು ಮಹಾ ಮಂಡಳಗಳು ಇದನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತವೆ. ಒಟ್ಟಿಗೆ ಖರೀದಿಸಿ ಸರಬರಾಜು ಸರಪಳಿಯಲ್ಲಿ ಖರೀದಿದಾರರಿಗೂ ಸರಬರಾಜುದಾರರಿಗೂ ಲಾಭದಾಯಕರವಾಗಿ ಪರಿಣಮಿಸುತ್ತದೆ.

ಜಪಾನ್ ದೇಶದಲ್ಲಿ ಕೃಷಿ ಸಹಕಾರ ಸಂಘಗಳಿಗೂ ಬಳಕೆದಾರರ ಸಹಕಾರ ಸಂಘಗಳಿಗೂ ಇರುವ ಬಾಂಧವ್ಯ, ವ್ಯವಹಾರ ನ್ಯಾಯಯುತ ವ್ಯವಹಾರಿಕ ಚಳುವಳಿ ಅತ್ಯುತ್ತಮ ಉದಾಹರಣೆಯಾಗಿದೆ. ಉತ್ತರ ಭೂಗೋಳದ ಖರೀದಿ ಮತ್ತು ಮಾರಾಟ ಸಹಕಾರ ಸಂಘಗಳು ದಕ್ಷಿಣ ಭೂಗೋಳದ ಉತ್ಪಾದನ ಸಹಕಾರ ಸಂಘಗಳನ್ನು ಅವಲಂಭಿಸಿ ಭಾಂದವ್ಯ ಏರ್ಪಾಡಾಗಿರುವುದು ಒಟ್ಟಾರೆ ಮಾರುಕಟ್ಟೆಯಲ್ಲಿ ಸಹಕಾರ ತನ್ನ ಪಾಲನ್ನು ಹೆಚ್ಚಿಸಿಕೊಳ್ಳಲು ಕಾರಣವಾಗಿದೆ. ಇದರಿಂದ ಸಹಕಾರ ರೈತರ ಜೀವನ ಮಟ್ಟ ಸುಧಾರಿಸಲು ಮತ್ತು ಸಾಮಾಜಿಕ ನ್ಯಾಯ ಒದಗಲು ಸಾಧ್ಯವಾಗಿದೆ.

**ವಿವಿಧ ಸಹಕಾರ ವ್ಯಾಪಾರ ವಲಯಗಳ ನಡುವೆ ಸಹಕಾರ**

ವಿವಿಧ ಸಹಕಾರ ವ್ಯಾಪಾರ ವಲಯಗಳ ನಡುವೆ ವ್ಯವಹಾರಗಳನ್ನು ಇದರಿಂದ ಸಹ ಒಟ್ಟಾರೆ ಸಹಕಾರ ವಲಯದಲ್ಲಿ ಆರ್ಥಿಕ ವೃದ್ಧಿ ಸಾಧ್ಯವಾಗುತ್ತದೆ. ಸಹಕಾರ ವಲಯ ಬಿಟ್ಟು ಇತರೆ ವಲಯದೊಡನೆ ವ್ಯವಹಾರ ಮಾಡುವ ಬದಲಿಗೆ ಸಹಕಾರ ವಲಯ ಪತ್ತಿನ ಸಹಕಾರ ಸಂಘಗಳು ಕೃಷಿ ಉತ್ಪನ್ನ, ಕೃಷಿ ಅವಲಂಭಿತ ಉತ್ಪನ್ನ, ಇತರೆ ಸಂಘಗಳಿಗೆ ಪತ್ತು ಒದಗಿಸುವುದು ಉತ್ಪನ್ನ ಸಹಕಾರ ಸಂಘಗಳು ಬಳಕೆದಾರರ ಸಹಕಾರ ಸಂಘಗಳೊಡನೆ ಹೀಗೆ ಸಹಕಾರ ವಲಯದೊಳಗೆ ವ್ಯವಹಾರ ನಡೆದು ಒಟ್ಟಿಗೆ ಕೆಲಸ ಮಾಡಿದಲ್ಲಿ ನ್ಯಾಯಯುತ ವ್ಯವಹಾರ ನಡೆಸುವುದರಿಂದ ವಲಯದಲ್ಲಿ ಸಹಯೋಗ ಮೂಡಿ ಸಾಮಾಜಿಕ ಮತ್ತು ಕಾರ್ಮಿಕ ವರ್ಗಹಿತ ಕಾಪಾಡಿ ಸಹಕಾರ ಚಳುವಳಿಗಿಂತ ಮಿಗಿಲಾದ ಧ್ಯೇಯ ಸಾಧಿಸಿದಂತಾಗುತ್ತದೆ. ಸಹಕಾರ ಚಳುವಳಿಗಿಂತ ಮಿಗಿಲಾದ ವಿಶಾಲವಾದ ಧ್ಯೇಯವು ಬೆಳೆಯುವುದಕ್ಕೆ ಹೊಸ ಅವಕಾಶಗಳನ್ನು ಒದಗಿಸುತ್ತದೆ. ಸಹಕಾರ ಔದ್ಯೋಗಿಕ ಸಂಸ್ಥೆಯು ತನ್ನ ಪ್ರಸ್ತುತೆಯನ್ನು ಔಚಿತ್ಯವನ್ನು ತೋರಿಸಲು ಅನುವಾಗುತ್ತದೆ. ಇನ್ನೂ ಮುಂದುವರೆದು ಸಾಮಾಜಿಕ ಆರ್ಥಿಕ ಘಟಕಗಳು ಧರ್ಮಸಂಸ್ಥೆಗಳೊಡನೆ ವ್ಯವಹರಿಸುವುದು. ಸಾಮಾಜಿಕ ಆಯಾಮವನ್ನು ಮತ್ತಷ್ಟು ವಿಸ್ತರಿಸಿದಂತಾ ಗುತ್ತದೆ. ಒಟ್ಟಾರೆ ಆರ್ಥಿಕತೆಯಲ್ಲಿ ತನ್ನ ಒಗ್ಗಟ್ಟು ಪ್ರದರ್ಶಿಸಲು ಸಾಧ್ಯವಾಗುತ್ತದೆ.

ಕೆಲವು ವಲಯಗಳು ಅಥವ ಸಹಕಾರ ಸಂಘಗಳು ಬೆಳೆದು ವ್ಯವಹಾರಗಳಲ್ಲಿ ಸ್ಥಗಿತ ಪರಸ್ಥಿತಿ ಮುಟ್ಟಬಹುದು. ಅಂತಹ ವೇಳೆಯಲ್ಲಿ ಇತರೆ ಸಹಕಾರ ಸಂಘಗಳೊಡನೆ ಇತರೆ ರಾಷ್ಟ್ರದ ಸಹಕಾರ ಸಂಘಗಳೊಡನೆ ವ್ಯವಹರಿಸುವುದರಿಂದ ವ್ಯವಹಾರ ವಿಸ್ತಾರಗೊಳ್ಳುವುದಲ್ಲದೆ. ಜಾಗತಿಕ ನ್ಯಾಯ ಒದಗಿಸಲು ಅವಕಾಶವಾಗುತ್ತದೆ. ಇತರೆ ರಾಷ್ಟ್ರಗಳಲ್ಲಿ ವ್ಯವಹರಿಸುವಾಗ ಆ ರಾಷ್ಟ್ರದ ಕಾಯ್ದೆಗಳನ್ನು ಗೌರವಿಸಬೇಕಾಗುತ್ತದೆ.

**ಭವಿಷ್ಯದ ಸಹಕಾರ ನಾಯಕರಿಗೆ ಇರಬೇಕಾದ ದೃಷ್ಟಿಕೋನ**

ಆರನೇ ತತ್ವದ ಪ್ರಕಾರ ಸಹಕಾರ ಸಂಘಗಳು ಹಾಲಿ ಮತ್ತು ಭವಿಷ್ಯದಲ್ಲಿ ತಮ್ಮ ನಡುವೆ ಸಹಕಾರ ಚಳುವಳಿಯ ಬೆಳವಣಿಗೆ ದೃಷ್ಟಿಯಿಂದ ಅಗತ್ಯ. ಇದರೊಡನೆ ನಾಯಕತ್ವದ ನಾಯಕರ ಬೆಳವಣಿಗೆ ಅಗತ್ಯ. ನಾಯಕರು ಇತರೆ ನಾಗರೀಕ ಮತ್ತು ಸಾಮಾಜಿಕ ಬೆಳವಣಿಗೆಗಳನ್ನು ಗಮನಿಸಿ ಅಲ್ಲಿನ ತೊಂದರೆಗಳಿಗೆ ತಮ್ಮಿಂದ ಯಾವ ರೀತಿ ಅವುಗಳನ್ನು ನಿವಾರಿಸಬಹುದು

ಎಂಬುದರ ಬಗ್ಗೆ ಆಲೋಚಿಸಬೇಕು. ವಿಶಾಲವಾದ ಆರ್ಥಿಕ ಸಾಮಾಜಿಕ ಮತ್ತು ಪರಿಸರದ ಪರಿವರ್ತನೆಗೆ ಪೂರ್ವಭಾವಿಗೆ ನಾಯಕತ್ವದ ಬೆಳವಣಿಗೆ ಪ್ರಮುಖ ಅಂಶವಾಗಿರುತ್ತದೆ.

**ಸರ್ಕಾರಗಳ ಮೇಲೆ ಪ್ರಭಾವ ಬೀರುವುದು.**

ಸಹಕಾರ ಚಳುವಳಿಯು ಪ್ರಬಲವಾಗಿದ್ದಲ್ಲಿ ಸರ್ಕಾರಗಳು ಸಹಕಾರ ಚಳುವಳಿಗೆ ಪೂರಕವಾದ ಕಾಯ್ದೆ ಕಾನೂನುಗಳನ್ನು ರಚಿಸಲು ಪ್ರಭಾವಬೀರಲು ಸಾಧ್ಯ. ಸರ್ಕಾರಗಳೊಡನೆ ಸಹಯೋಗದಲ್ಲಿ ಕಾರ್ಯ ಸಾಧ್ಯ. ಅಲ್ಲದೆ ಸಹಕಾರ ಸಂಘಗಳು ಕಾರ್ಮಿಕ ಒಕ್ಕೂಟಗಳು, ಸಾಮಾಜಿಕ ಕಾರ್ಯನಿರತ ಸರ್ಕಾರೇತರ ಸಂಸ್ಥೆಗಳೊಡನೆ ಕಾರ್ಯನಿರ್ವಹಿಸಲು ಇದು ಸಹಕಾರಿಯಾಗುತ್ತದೆ.

**ಸಮಾಜವನ್ನು ಸಹಕಾರಿ ತಂತ್ರ ಸಮಾಜವಾಗಿ ಪರಿವರ್ತಿಸುವುದು**

ಒಂದು ಸಹಕಾರ ಸಂಘವು ಮತ್ತೊಂದು ಸಹಕಾರ ಸಂಘವಿಲ್ಲದೇ ಕಾರ್ಯನಿರ್ವಹಿಸುವುದಿಲ್ಲ ಎಂಬುದು ಆರನೇ ತತ್ವವಲ್ಲ. ಸಹಕಾರ ಸಂಘಗಳ ಸ್ವಯಂ ಸುಸ್ಥಿರ ಸಂಸ್ಥೆಗಳು. ಒಂಟಿಯಾಗಿ ಕಾರ್ಯ ನಿರ್ವಹಿಸಿ ಯಶಸ್ಸು ಗಳಿಸುತ್ತದೆ. ಆದರೆ ಒಟ್ಟಿಗೆ ಕಾರ್ಯನಿರ್ವಹಿಸಿದರೆ ಸಹಕಾರಿ ಸ್ವತಂತ್ರ ಸಮಾಜವಾಗಿ ಬೆಳೆಯುತ್ತದೆ ಮತ್ತು ಉಳಿಯುತ್ತದೆ.

ಸಹಕಾರ ಸಂಘಗಳು ಒಂಟಿಯಾಗಿ ಕೆಲಸ ನಿರ್ವಹಿಸದಲ್ಲಿ ಸಾಧನೆ ಮಾಡುವುದಾದರೆ ಒಟ್ಟಿಗೆ ಕೆಲಸ ನಿರ್ವಹಿಸಿದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಬಹುದು ಎಂಬುದನ್ನು ತಿಳಿದುಕೊಳ್ಳಬೇಕು. ಪ್ರತಿ ಸಹಕಾರ ಸಂಘದ ಸಾಧನೆಯ ಮೊತ್ತಕ್ಕಿಂತ ಹೆಚ್ಚಿನ ಸಾಧನೆ ಪರಸ್ಪರ ಸ್ವ ಸಹಾಯದಿಂದ ಮೌಲ್ಯದಿಂದ ಅಧಿಕಗೊಳ್ಳುತ್ತದೆ. ಒಟ್ಟಿಗೆ ಕೆಲಸ ಮಾಡುವಾಗ ನೈಪುಯಣ್ಯತೆ, ಚುರುಕುತನ, ಉತ್ಸಾಹ, ಅನುರಾಗ ಹೆಚ್ಚುತ್ತದೆ.

ಈ ಆರನೇ ತತ್ವದಲ್ಲಿ ಸಮಾಜದ ಪರಿವರ್ತನೆಯ ಧ್ಯೇಯ ಅಂತರ್ಗತವಾಗಿದೆ. ಸಹಕಾರದ ಚಳುವಳಿಯ ಅಗ್ರಗಾಮಿಗಳು, ಆರಂಭಿಕ ಸಹಕಾರಿಗಳು ಸಮಾಜ ಪರಿವರ್ತನೆ ಸಾಧ್ಯ ಎಂದು ನಂಬಿದ್ದರು. ಮೈತ್ರಿ ಸಂಸ್ಥೆಯ ದಶಕದ ನೀಲಿ ನಕ್ಷೆಯು ಜಾಗತಿಕ ಸಹಕಾರಿ ಸ್ವತಂತ್ರ ಸಮಾಜ ನಿರ್ಮಾಣದ ಆಶಯಹೊಂದಿದೆ.

ಉತ್ತಮ ಸಹಕಾರ ಪ್ರಪಂಚದ ನಿರ್ಮಾಣ ಕೇವಲ ಸಹಕಾರ ಸದಸ್ಯರ ಅಭ್ಯುದಯವಲ್ಲದೇ ಇತರೆ ನಾಗರಿಕ ಜನಪರ ಚಳುವಳಿಗೂ ವಿಸ್ತರಿಸಿದೆ. ಸಹಕಾರ ಚಳುವಳಿಯು ಇತರೆ ಚಳುವಳಿಗಳೊಂದಿಗೆ ಚಾರಿತ್ರ್ಯಾತ್ಮಕವಾಗಿ ಬಾಂಧವ್ಯ ಹೊಂದಿದೆ. ಸಾಮಾಜಿಕ ನ್ಯಾಯ, ಮಾನವ ಅಭಿವೃದ್ಧಿ ಜಂಟಿಯಾಗಿ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸಿದರೆ ಇದರೊಡನೆ ಆರ್ಥಿಕತೆಯೂ ಸೇರಿದಲ್ಲಿ ಜಾಗತಿಕ ಸಹಕಾರಿ ಸ್ವತಂತ್ರ ಸಮಾಜವನ್ನು ಕಟ್ಟಬಹುದಾಗಿದೆ. ಇದು ಆರನೇ ತತ್ವದ ಪರಿಪೂರ್ಣ ಅಭಿವ್ಯಕ್ತಿ ಸಹಕಾರ ಸಂಘಗಳು ಬಲವಾದ ಸಹಯೋಗದಿಂದ ಕಾರ್ಯನಿರ್ವಹಿಸಿದಲ್ಲಿ ಮಾತ್ರ ಇದು ಸಾಧ್ಯವಾಗುತ್ತದೆ.

## 4. ಭವಿಷ್ಯದಲ್ಲಿ ಪರಿಗಣಿಸಬೇಕಾದ ವಿಷಯಗಳು ಭವಿಷ್ಯದ ಸವಾಲುಗಳು

**6ನೇ ತತ್ವ ಸಹಕಾರ ಸಂಘಗಳ ನಡುವೆ ಸಹಕಾರ ಈ ಕೆಳಕಂಡ ಮುಂದಿನ ಸವಾಲುಗಳನ್ನು ಹೊಂದಿರುತ್ತವೆ.**

- ಕ್ರಿಯೆ ಮತ್ತು ಮಾತುಗಾರಿಕೆ ನಡುವೆ ಸಮತೋಲನ ಸಾಧಿಸುವುದು. ಪ್ರಾಂತೀಯ ಮತ್ತು ರಾಷ್ಟ್ರೀಯಸಹಕಾರ ರಚನೆಯಲ್ಲಿ ಮಾತುಕತೆಗಳು ನಡೆಯುತ್ತವೆ. ಆದರೆ ಪರಸ್ಪರ ಲಾಭಕ್ಕಾಗಿ ಆಚರಣೆಗೆ ತರಲಾಗುತ್ತಿಲ್ಲ, ಅಂತರ ಸಹಕಾರ ಸಂಘಗಳ ವ್ಯವಹಾರದಲ್ಲಿ ಭಾಗವಹಿಸುವಿಕೆ ಸಾಕಷ್ಟಿಲ್ಲ. ತನ್ನ ಶಕ್ತಿ ವ್ಯಯವಾಗುತ್ತದೆ ಮತ್ತು ಇದು ಇತರರ

ಮೇಲೆ ಋಣಾತ್ಮಕ ಪರಿಣಾಮ ಬೀರುತ್ತದೆ.

- ಪರಿಣಾಮಕಾರಿ ಶಕ್ತಿ ಹಂಚಿಕೆ, ಬೃಹತ್ ಮತ್ತು ಉತ್ತಮ ಸಂಪನ್ಮೂಲವುಳ್ಳ ಸಹಕಾರ ಸಂಘಗಳು ತಮ್ಮ ಗಾತ್ರ ಮತ್ತು ಪ್ರಭಾವವು ಪ್ರಭುತ್ವ ವಹಿಸಲು ಅವಕಾಶ ನೀಡದೆ ಅಂತರ ಸಹಕಾರ ಸಂಘಗಳಲ್ಲಿ ಸಣ್ಣ ಸಹಕಾರ ಸಂಘಗಳು ನಿರ್ಧಾರ ತೆಗೆದುಕೊಳ್ಳುವಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಅವಕಾಶ ನೀಡಬೇಕು.
- ತಡೆಗೋಡೆಗಳನ್ನು ಮೀರುವುದು, ಭೂಭೌಗೋಳಿಕ ಸ್ಥಳ, ಭಾಷೆ, ರಾಜಕೀಯ ಮತ್ತು ಪ್ರಾದೇಶಿಕ ವಿಭಾಗಗಳು, ಸಂಸ್ಥೆಯ ಗಾತ್ರ ಮತ್ತು ವ್ಯಾಪ್ತಿ ಮೀರಿ ಪರಿಣಾಮಕಾರಿ ಚರ್ಚೆ ಮತ್ತು ಕ್ರಿಯೆ ನಡೆಯಬೇಕಿದೆ.
- ಅಂತರ ವಲಯಗಳ ಕಾರ್ಯ ನಿರ್ವಹಿಸುವುದು: ಪ್ರತಿ ಸಹಕಾರ ವಲಯವೂ ತನ್ನದೇ ಆದ ಚರಿತ್ರೆ ಸಂಸ್ಕೃತಿಯನ್ನು ಹೊಂದಿದೆ. ಸಾಮಾನ್ಯ ಕ್ರಿಯೆಗೆ ಒಳಪಡುವಲ್ಲಿ ಇತರೆ ವಲಯವನ್ನು ಅರ್ಥಮಾಡಿಕೊಂಡು ಅದಕ್ಕೂ ಬೆಲೆ ನೀಡುವುದು.
- ಅರಿವು ನಿರ್ಮಾಣ; ಒಂದು ಸಹಕಾರ ಸಂಘವು ಮತ್ತೊಂದು ಸಹಕಾರ ಸಂಘದಲ್ಲಿನ ವ್ಯತ್ಯಾಸಗಳು ಮತ್ತು ಅವು ಎದುರಿಸುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಸವಾಲುಗಳ ಬಗ್ಗೆ ಅರಿಯುವುದು.
- ಪರಿಣಾಮಕಾರಿ ಸಂವಹನ; ಸಹಕಾರ ಸಂಘದಲ್ಲಿನ ವ್ಯವಸ್ಥಾಪಕರು ತಮ್ಮದೇ ದೈನಂದಿನ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದು ಒತ್ತಡದಲ್ಲಿರುತ್ತಾರೆ. ಇತರೆ ಸಂಘಗಳೊಡನೆ ನಿರಂತರ ಮತ್ತು ಪರಿಣಾಮಕಾರಿ ಸಂವಹನ ಸಾಧ್ಯವಾಗುವುದಿಲ್ಲ.
- ಯಾವ ಉದ್ದೇಶಕ್ಕಾಗಿ ಈ ಕ್ರಿಯೆಯಲ್ಲಿ ತೊಡಗಿಸಿಕೊಳ್ಳಲಾಗಿದೆ ಎಂಬ ಜ್ಞಾನ ಹಂಚಿಕೆಯ ಅಭಿವೃದ್ಧಿ; ಒಂದು ಸಹಕಾರ ಸಂಘದ ಅಥವ ವಲಯದ ಆದ್ಯತೆಯು ಮತ್ತೊಂದು ಸಂಘ ಅಥವ ವಲಯಕ್ಕಿಂತ ವಿಭಿನ್ನವಾಗಿರುವುದು.
- ಆರನೆಯ ತತ್ವದ ಅನುಷ್ಠಾನದ ಬಗ್ಗೆ ಕಾಲಕಾಲಕ್ಕೆ ಮೌಲ್ಯಮಾಪನ ಮಾಡುವುದು; ಸಹಕಾರ ಸಂಘಗಳು ಈ ತತ್ವಕ್ಕೆ ಬದ್ಧರಾಗಿರಬೇಕು. ಈ ತತ್ವದ ಅನುಷ್ಠಾನದ ಬಗ್ಗೆ ಆಗಿಂದಾಗ್ಯೆ ಪುನರ್ ಪರಿಶೀಲನೆ ಮತ್ತು ಮೌಲ್ಯಮಾಪನವಾಗುತ್ತಿರಬೇಕು.
- ಪರಿಣಾಮಕಾರಿ ಜಾಗತಿಕ ಸಹಕಾರ ವ್ಯವಹಾರವನ್ನು ಅಭಿವೃದ್ಧಿ ಪಡಿಸುವುದು; ಅಂತರರಾಷ್ಟ್ರೀಯ ಸಹಕಾರ ಚಳುವಳಿಯು ಜಾಗತಿಕ ಸಹಕಾರ ವ್ಯವಹಾರದ ಕೊರತೆಯನ್ನು ಎದುರಿಸುತ್ತಿದೆ. ಪಾಲುದಾರಿಕೆ ಅಥವ ಜಾಗತಿಕ ವ್ಯವಹಾರ ಒಪ್ಪಂದಗಳನ್ನು ಮಾಡಿಕೊಂಡು ವ್ಯವಹಾರ ನಡೆಸುವುದನ್ನು ಪರಿಗಣಿಸಬೇಕಾಗಿದೆ.
- ಪರಿಣಾಮಕಾರಿ ಜಾಗತಿಕ ಬ್ಯಾಂಕಿಂಗ್ ಮತ್ತು ವಿಮೆ ಅನುಕೂಲತೆಗಳನ್ನು ಅಭಿವೃದ್ಧಿ ಪಡಿಸುವುದು; ಜಾಗತಿಕ ಸಹಕಾರ ಚಳುವಳಿಯು ಜಾಗತಿಕ ಬ್ಯಾಂಕ್ ಮತ್ತು ವಿಮಾ ಸಂಸ್ಥೆ ಸ್ಥಾಪನೆ ಮಾಡುವ ಬಗ್ಗೆ ಆಲೋಚಿಸಬೇಕಾಗಿದೆ. ಈ ರೀತಿಯ ಜಾಗತಿಕ ಸೇವೆಯು ಜಾಗತಿಕ ವ್ಯಾಪಾರ ಮತ್ತು ವ್ಯವಹಾರಕ್ಕೆ ಅನುವು ಮಾಡಿಕೊಡುತ್ತದೆ.

# 7ನೇ (ಏಳನೇ) ತತ್ವ

# ಸಾಮಾಜಿಕ ಕಳಕಳಿ

ಸದಸ್ಯರು ಒಪ್ಪಿದ ನೀತಿಯಂತೆ ಸಹಕಾರ ಸಂಘಗಳು ಸಮುದಾಯ (ಸಮಾಜದ) ಸುಸ್ಥಿರ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿವೆ.

## 1. ಪರಿಚಯ:

1995ರ ಮೈತ್ರಿ ಸಂಸ್ಥೆಯ ಸಾಮಾನ್ಯ ಸಭೆಯ ನಿರ್ಧಾರದಂತೆ ಈ ತತ್ವವನ್ನು ಒಂದು ಪ್ರತ್ಯೇಕ ಮತ್ತು ವಿಶಿಷ್ಠ ತತ್ವವಾಗಿ ಪುನರ್ ರೂಪಿಸಲಾಯಿತು. ಅದರ ಮೊದಲಿಗೆ ಇದು ಆರನೇ ತತ್ವದಲ್ಲಿ ಅಡಕಗೊಂಡಿತ್ತು. 1966ರಲ್ಲಿ "ತಮ್ಮ ರಾಷ್ಟ್ರದಲ್ಲಿ ಮತ್ತು ವಿದೇಶದಲ್ಲಿ ಸದಸ್ಯರ ಮತ್ತು ಸಮುದಾಯ (ಸಮಾಜ) ಸೇವೆಗಾಗಿ ಒಂದಕ್ಕೆ ಮತ್ತೊಂದು ಸಹಕಾರ ಸಂಘವು ಸಹಕರಿಸುವುದು" ಎಂದು ವ್ಯಾಖ್ಯಾನಿಸಲಾಗಿತ್ತು.

ಸಹಕಾರ ಅಸ್ಮಿತೆಯ ವ್ಯಾಖ್ಯೆಯಲ್ಲಿ ಎರಡು ಸಹಕಾರ ಮೌಲ್ಯಗಳನ್ನು ಒಗ್ಗೂಡಿಸಿ ಈ ತತ್ವವು ಒಳಗೊಳ್ಳುತ್ತದೆ. "ಸ್ವ ಸಹಾಯ ಸ್ವಯಂ ಜವಾಬ್ದಾರಿ" ಮತ್ತು "ಪ್ರಾಮಾಣಿಕತೆ, ಮುಕ್ತತೆ ಸಾಮಾಜಿಕ ಜವಾಬ್ದಾರಿ, ಇತರರ ಬಗ್ಗೆ ಕಾಳಜಿ ಎಂಬ ನೈತಿಕ ಮೌಲ್ಯಗಳು" ಈ ಎರಡು ಮೌಲ್ಯಗಳು ಏಳನೇ ತತ್ವದ ಆಚರಣೆಯಲ್ಲಿ ಭಾಗಿಗಳಾಗುತ್ತವೆ.

ಸಹಕಾರ ಸಂಘಗಳು ಸಮುದಾಯದ ಒಳಗೆ ಕರ್ತವ್ಯ ನಿರ್ವಹಿಸುತ್ತಿವೆ. ಸಮುದಾಯದ ಬೇರಿನಲ್ಲಿಯೇ ಈ ಮೌಲ್ಯಗಳು ಹುದುಗಿದ್ದು ಸಮುದಾಯ ದಿಂದಲೇ ಸಹಕಾರ ಸಂಘಗಳು ಹೊರಹೊಮ್ಮಿದೆ. ಸಹಕಾರ ಸಂಘದ ಯಶಸ್ಸು ಆ ಸಮುದಾಯವನ್ನು ಸುಸ್ಥಿರ ರೀತಿಯಲ್ಲಿ ಅಭಿವೃದ್ಧಿ ಪಡಿಸಿ ಬೆಂಬಲಿಸು ವುದನ್ನು ಅವಲಂಭಿಸಿದೆ. ರಾಕ್‌ಡೇಲ್ ಅಗ್ರಗಾಮಿಗಳು "ಕಾನೂನು ಮೊದಲು" ತತ್ವದಲ್ಲಿಯೇ ಕೇವಲ ಸರಕು ಮತ್ತು ಸೇವೆಗಳನ್ನು ಒದಗಿಸುವುದಲ್ಲದೇ ಸದಸ್ಯರ ಮತ್ತು ಸಮುದಾಯದ ಜೀವನ ಶೈಲಿಯನ್ನು ಉತ್ತಮ ಗೊಳಿಸುವುದಾಗಿದ್ದು, ವಸತಿ ಸೌಲಭ್ಯವನ್ನು ಒದಗಿಸುವುದನ್ನು ಒಳಗೊಂಡಿತ್ತು ಎಂಬುದು ಸಾಮಾಜಿಕ ಕಳಕಳಿಯನ್ನು ಪ್ರತಿಧ್ವನಿಸುತ್ತದೆ.

ಆರಂಭಿಕ ಅಗ್ರಗಾಮಿಗಳು ಶಿಕ್ಷಣ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳುವುದರೊಂದಿಗೆ ಸಮುದಾಯಕ್ಕೆ ಸಾಮರ್ಥ್ಯ ತುಂಬಿದರು. ಸ್ಥಳೀಯ ಮತ್ತು ಸಹಕಾರ ಸಂಘಗಳ ಕೊಠಡಿಗಳನ್ನು ನಾಗರಿಕ ಸಂಘ; ಸ್ವಯಂ ಮತ್ತು ಸಮುದಾಯ ಸಂಸ್ಥೆಗಳಿಗೆ ಒದಗಿಸುತ್ತಿದ್ದರು. ಸದಸ್ಯ ಸಹಕಾರ ಸಂಘಗಳು ಅಭಿವೃದ್ಧಿ ಪ್ರಜಾಸತ್ತಾತ್ಮಕ ನಾಯಕತ್ವ ನೈಪುಣ್ಯತೆಯ ಅಭಿವೃದ್ಧಿ, ವರ್ಗಾವಣೆಗೊಂಡ ನೈಪುಣ್ಯತೆ ಸಮುದಾಯವನ್ನು ಸಶಕ್ತಗೊಳಿಸಿತು ಮತ್ತು ನಾಗರೀಕ ಸಮಾಜದ ಸಾಮರ್ಥ್ಯವನ್ನು ಹಿಗ್ಗಿಸಿತು.

ಮೈತ್ರಿ ಸಂಸ್ಥೆಯು ಪ್ರತಿಪಾದಿಸಿರುವ ಸಹಕಾರ ಅಸ್ಮಿತೆಯಲ್ಲಿ ನೈತಿಕ ಮೌಲ್ಯಗಳು ಸಹಕಾರ ಸಂಘಗಳ ಸರಳ ವ್ಯಾಪಾರಿ ಆರ್ಥಿಕತೆ ಮೀರಿ ಸಮುದಾಯದೊಡನೆ ವಿಶೇಷ ಸಂಬಂಧಗಳನ್ನು ಬೆಸೆಯುತ್ತದೆ. ಸಹಕಾರ ಸಂಘಗಳು ಆಯಾ ಸಮುದಾಯ ವ್ಯಕ್ತಿಗಳನ್ನೇ ಸದಸ್ಯರನ್ನಾಗಿ ಹೊಂದಿರುತ್ತಾರೆ. ಹಾಗಾಗಿ ಸದಸ್ಯರು ತಾವು ಸಹಾಯ ಪಡೆಯುವುದಲ್ಲದೇ ಸಮುದಾಯದ ಇತರರಿಗೂ ಸಹಾಯ ಮಾಡುವುದು ಅವರ ಕರ್ತವ್ಯವಾಗುತ್ತದೆ. ಸಹಕಾರ ಸಂಘಗಳ ವ್ಯಾಪ್ತಿಯು ಒಂದು ಸಮುದಾಯವಲ್ಲದೇ ಹಲವಾರು ಸಮುದಾಯಗಳನ್ನು ಒಳಗೊಂಡಿರಬಹುದು. ಪ್ರತಿ ಸಮುದಾಯವು ಪಾರಂಪರೆಯಾಗಿ

ಕೆಲವು ಗುಣಗಳನ್ನು ಹೊಂದಿರುತ್ತವೆ. ಹಾಗಾಗಿ ಎಲ್ಲ ವ್ಯಕ್ತಿಗಳಿಗೆ ಒಳಿತನ್ನು ಮಾಡುವ ಅವರ ಎಲ್ಲ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಾಮಾಜಿಕ ಮತ್ತು ನೈತಿಕ ಜವಾಬ್ದಾರಿಯನ್ನು ಸಹಕಾರ ಸಂಘವು ಹೊಂದಿರುತ್ತದೆ.

7ನೇ ತತ್ವದಲ್ಲಿ "ಸಹಕಾರ ಸಂಘಗಳು ಅವರ ಸಮುದಾಯಗಳ ಸುಸ್ಥಿರ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತದೆ" ಎಂದಿದೆ. ಇದರ ಅರ್ಥ ಪ್ರಥಮ ಪ್ರಾಶಸ್ತ್ಯ ಸ್ಥಳೀಯ ಅವರ ಸಮುದಾಯದ ಅಭಿವೃದ್ಧಿಗೆ ಸಹಕಾರ ಸಂಘಗಳ ಉದಾಹರಣೆಗಳು ಎಣಿಕೆಗೆ ಬಾರದಷ್ಟಿವೆ. ಇದು ಸಹಕಾರ ಸಂಘದ ಯಶಸ್ಸಿಗೂ ಕಾರಣವಾಗಿರುತ್ತದೆ. ಮೂಟ್ಟ ಸಹಕಾರ ಸಂಘಗಳಿಂದ ಬೆಳೆದ ಈ ಬದ್ಧತೆ ರಾಷ್ಟ್ರೀಯ ಪ್ರಾಂತೀಯ ಮತ್ತು ಜಾಗತಿಕವಾಗಿಯೂ ಪಸರಿಸಿದೆ.

7ನೇ ತತ್ವದಲ್ಲಿನ ಪದ ಪ್ರಯೋಗದಿಂದ ಸುಸ್ಥಿರ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ಥಳೀಯ ಮತ್ತು ಜಾಗತಿಕ ಕಳಕಳಿಗೆ ಇರುವ ಕೊಂಡಿ ತಿಳಿದುಬರುತ್ತದೆ. 1995ರ ಒಪ್ಪಂದದಲ್ಲಿ ವಿಶ್ವ ಸಂಸ್ಥೆಯೊಡನೆ ಸುಸ್ಥಿರ ಅಭಿವೃದ್ಧಿ ಗುರಿ ನಿಗದಿಪಡಿಸುವಲ್ಲಿ ಅಂತರ್ಗತವಾಗಿದೆ. 1987ರ ವಿಶ್ವ ಸಂಸ್ಥೆಯ ವರದಿ (ಬ್ರಂಟ್‌ಲ್ಯಾಂಡ್ ವರದಿ)ಯಲ್ಲಿ ಸುಸ್ಥಿರ ಅಭಿವೃದ್ಧಿ ಬಗ್ಗೆ ಉಲ್ಲೇಖಿಸಿದೆ. ಈ ಕೆಳಕಂಡಂತೆ ಸುಸ್ತಿರ ಅಭಿವೃದ್ಧಿಯನ್ನು ವ್ಯಾಖ್ಯಾನಿಸಲಾಗಿದೆ.

ಮುಂದಿನ ಪೀಳಿಗೆಯ ಅವಶ್ಯಕತೆಗಳನ್ನು ಪೂರೈಸಲು ಯಾವುದೇ ತೊಂದರೆಯಾಗದಂತೆ ಈಗಿನ ಅವಶ್ಯಕತೆಗಳ ಪೂರೈಕೆಯ ಅಭಿವೃದ್ಧಿ; ಇದು ಎರಡು ಪ್ರಮುಖ ಅಂಶಗಳನ್ನು ಒಳಗೊಂಡಿರುತ್ತದೆ.

- "ಅವಶ್ಯಕತೆ"ಯ ಪರಿಕಲ್ಪನೆ, ಅದರಲ್ಲಿಯೂ ವಿಶ್ವದ ಬಡವರ ಅತಿ ಅವಶ್ಯ ಅವಶ್ಯಕತೆಗಳು; ಅದಕ್ಕೆ ಎಲ್ಲದಕ್ಕಿಂತ ಮಿಗಿಲಾದ ಆಧ್ಯತೆ ನೀಡುವುದು;
- ತಾಂತ್ರಿಕತೆಯು ಮತ್ತು ಸಾಮಾಜಿಕ ಸಂಸ್ಥೆ ಒದಗಿಸುವ ಮಿತಿಯ ಕಲ್ಪನೆ ಈಗಿನ ಮತ್ತು ಭವಿಷ್ಯದ ಅವಶ್ಯಕತೆಗಳನ್ನು ಪೂರೈಸಲು ಪರಿಸರಕ್ಕಿರುವ ಶಕ್ತಿ.

**ಸಹಕಾರಕ್ಕೂ ಸುಸ್ಥಿರ ಅಭಿವೃದ್ಧಿಗೂ ಇರುವ "ಸಾಮಾನ್ಯ ಅಂಶಗಳು"ನ್ನು ಈ ಮುಂದೆ ವಿವರಿಸಿದೆ.**

"ಅಭಿವೃದ್ಧಿಯ ಪ್ರಮುಖ ಧ್ಯೇಯ ಮಾನವನ ಅವಶ್ಯಕತೆ ಮತ್ತು ಆಕಾಂಕ್ಷೆಗಳನ್ನು ತೃಪ್ತಿಗೊಳಿಸುವುದರಲ್ಲಿದೆ (ತೃಪ್ತಿಗೊಳಿಸುತ್ತದೆ). ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಅತ್ಯಂತ ಹೆಚ್ಚಿನ ಜನರ ಅತಿ ಅವಶ್ಯ ಅವಶ್ಯಕತೆಗಳಾದ ಆಹಾರ, ಬಟ್ಟೆ, ವಸತಿ, ಕೆಲಸ(ನೌಕರಿ) ಒದಗಿಸಲಾಗುತ್ತಿಲ್ಲ, ಈ ಮೂಲಭೂತ ಅವಶ್ಯಕತೆಗಳ ಪೂರೈಕೆ ಅಲ್ಲದೆ ತಮ್ಮ ಜೀವನ ಮಟ್ಟವನ್ನು ಉತ್ತಮಗೊಳಿಸಿಕೊಳ್ಳುವ ನ್ಯಾಯಯುತ ಆಕಾಂಕ್ಷೆಗಳು ಅವರಿಗಿದೆ. ಬಡತನ ಮತ್ತು ಅಸಮಾನತೆ ಇರುವ ವಿಶ್ವವು ಪರಿಸರ ಮತ್ತಿತರ ಬಿಕ್ಕಟ್ಟಿಗೆ ಯಾವಗಲೂ ಒಳಗಾಗುತ್ತದೆ. ಸುಸ್ಥಿರ ಅಭಿವೃದ್ಧಿಯು ಮೂಲಭೂತ ಅವಶ್ಯಕತೆಗಳನ್ನು ಎಲ್ಲರಿಗೂ ಒದಗಿಸುತ್ತದೆಯಲ್ಲದೆ ಉತ್ತಮ ಜೀವನದ ಆಕಾಂಕ್ಷೆ ಪೂರೈಕೆಗಾಗಿ ಅವಕಾಶಗಳನ್ನು ಒದಗಿಸುತ್ತದೆ"

"ಬಳಕೆಮಾನದಂಡಗಳು ಎಲ್ಲೆಡೆ ದೀರ್ಘಾವಧಿ ಸುಸ್ಥಿರತೆಯನ್ನು ಪರಿಗಣಿಸಿ ದಲ್ಲಿ ಮಾತ್ರ ಬದುಕಿನ (ಜೈವಿಕ) ಮಾನದಂಡಗಳು ಕನಿಷ್ಟ ಮೂಲಭೂತ ಅವಶ್ಯಕತೆಗಳನ್ನು ಮೀರಬಲ್ಲವು. ಆದರೂ ಹೆಚ್ಚಿನ ಸಂಖ್ಯೆಯ ನಾವು ವಿಶ್ವದ ಪರಿಸರದ ಮೂಲಗಳನ್ನು ಮೀರಿ ಬಳಸುತ್ತೇವೆ. ಉದಾಹರಣೆಗೆ ಶಕ್ತಿ ಮೂಲಗಳ ಬಳಕೆ ವಿಧಾನ, ನಾವು ಅರಿತಿರುವ ಅವಶ್ಯಕತೆ ಸಾಂಸ್ಕೃತಿಕ ಮತ್ತು ಸಮಾಜ ನಿರ್ಧರಿತವಾಗಿದೆ. ಸುಸ್ಥಿರ ಅಭಿವೃದ್ಧಿಯು ಪರಿಸರ ಸಾಧ್ಯತೆಯ ಎಲ್ಲೆಯೊಳಗಿನ ಸಾಧ್ಯತೆಗಳ ಮತ್ತು ಎಲ್ಲರೂ ಬಯಸುವ ನ್ಯಾಯಯುತ ಆಕಾಂಕ್ಷೆಗಳ ಮೌಲ್ಯಗಳನ್ನು ಉತ್ತೇಜಿಸುತ್ತದೆ".

**1992ರ ರಿಯೋದಲ್ಲಿ ನಡೆದ ವಿಶ್ವ ಸಮ್ಮೇಳನ ವಿಷಯ ಸಂಖ್ಯೆ 21 ಈ ಕೆಳಗಿನ ತತ್ವಗಳನ್ನು ಒಳಗೊಂಡಿದೆ.**

"ಸುಸ್ಥಿರ ಅಭಿವೃದ್ಧಿಯ ಕೇಂದ್ರ ಮಾನವ(ರು). ಅವರಿಗೆ ನಿಸರ್ಗದೊಡನೆ ಸಾಮರಸ್ಯದೊಂದಿಗೆ ಆರೋಗ್ಯಕರ ಮತ್ತು ಉತ್ಪಾದನೀಯ ಜೀವನ ನಡೆಸುವ ಹಕ್ಕಿದೆ (ತತ್ವ–1). ಈಗಿನ ಮತ್ತು ಭವಿಷ್ಯದ ಪೀಳಿಗೆಗಳ ಅಭಿವೃದ್ಧಿ ಮತ್ತು ಪರಿಸರ ಅವಶ್ಯಕತೆಗಳನ್ನು ನ್ಯಾಯಯುತವಾಗಿ ಪೂರೈಸುವ ಹಕ್ಕಿದೆ (ತತ್ವ–2). ಸುಸ್ಥಿರ ಅಭಿವೃದ್ಧಿ ಸಾಧನೆಗಾಗಿ ಪರಿಸರ ರಕ್ಷಣೆಯು ಅಭಿವೃದ್ಧಿ ವಿಧಿಯ ಅವಿಭಾಜ್ಯ ಅಂಗ, ಅದನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುವುದಿಲ್ಲ (ತತ್ವ–3).

1992ರಲ್ಲಿ ಟೋಕಿಯೋನಲ್ಲಿ ನಡೆದ ಮೈತ್ರಿಕೂಟದ ಸಮ್ಮೇಳನವು ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿಯದ್ದಾಗಿತ್ತು. "ಸಹಕಾರ ಸಂಘಗಳು ಮತ್ತು ಪರಿಸರ"ದ ಬಗ್ಗೆ ವಿಶೇಷ ವರದಿ ತಯಾರಿಸಲಾಗಿತ್ತು. ಮೈತ್ರಿ ಸಂಸ್ಥೆಯು ರಾಷ್ಟ್ರೀಯ ಮತ್ತು ವಲಯವಾರು ಸಂಸ್ಥೆಗಳಿಗೆ "ಸಹಕಾರ ವಿಷಯ ಸೂಚಿ 21"ರಲ್ಲಿ ಈ ವಿಷಯದಲ್ಲಿ ತನ್ನ ನೀತಿ ರೂಪಿಸಲು ಸಲಹೆ ನೀಡಿತ್ತು. ಇದು 1995ರ ಮೈತ್ರಿ ಸಂಸ್ಥೆಯ ಶತಮಾನೋತ್ಸವದಲ್ಲಿ ಅಂತಿಮ ರೂಪು ಪಡೆಯಿತು. ಅದರಂತೆ ಸಹಕಾರ ಸಂಘಗಳು ತಮ್ಮ ಸಂಸ್ಥೆಯ ಕಾರ್ಯಾಚರಣೆಯಲ್ಲಿ ಮತ್ತು ಸಹಕಾರ ಶಿಕ್ಷಣದಲ್ಲಿ ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡುವಂತೆ ತಿಳಿಸಲಾಯಿತು. ಸದರಿ ಸಮ್ಮೇಳನದಲ್ಲಿ ಸಹಕಾರ ಅಸ್ಮಿತೆಯ ಭಾಗವಾದ ವ್ಯಾಖ್ಯೆಯಲ್ಲಿ ಪರಿಸರ ರಕ್ಷಣೆಯನ್ನು ಸಾಮಾಜಿಕ (ಸಮುದಾಯ) ಕಳಕಳಿಯ ಭಾಗವಾಗಿ ಅಳವಡಿಸಿಕೊಳ್ಳಲಾಯಿತು.

7ನೇ ತತ್ವದಲ್ಲಿ "ಅವರ ಸಮುದಾಯದ ಸುಸ್ಥಿರ ಅಭಿವೃದ್ಧಿ" ಯು 1992ರ ವಿಶ್ವಸಂಸ್ಥೆ ಸಮ್ಮೇಳನ ಮತ್ತು ಮೈತ್ರಿ ಸಂಸ್ಥೆಯ 1995ರ ಸದಸ್ಯರೊಡನೆ ಒಪ್ಪಂದಕ್ಕೆ ಸಂಬಂಧವಿದೆ. ಈ ತತ್ವವು ಸಹಕಾರ ಸಂಘದ ಸದಸ್ಯರು ಮತ್ತು ಸಮುದಾಯದ ಲಾಭಕ್ಕಾಗಿ ಸುಸ್ಥಿರ ಆರ್ಥಿಕ ಪರಿಸರಾತ್ಮಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಒಟ್ಟಿಗೆ ಕೆಲಸ ಮಾಡಬೇಕು.

## 2. ಪದ ಮತ್ತು ಪದ ಪುಂಜ (ಗುಚ್ಚ)ದ ಅರ್ಥೈಸುವಿಕೆ

"ಸಹಕಾರ ಸಂಘಗಳು ಅವರ ಸಮುದಾಯಗಳ ಸುಸ್ಥಿರ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತವೆ". ಸಹಕಾರ ಮೌಲ್ಯಗಳಾದ "ಸಾಮಾಜಿಕ ಜವಾಬ್ಧಾರಿ ಮತ್ತು ಇತರರ ಬಗ್ಗೆ ಕಾಳಜಿ"ಯು ಅವು ಸಮುದಾಯ ಮತ್ತು ಸದಸ್ಯರಿಗೆ ಒದುಗಿಸುತ್ತಿರುವ ಲಾಭಗಳ ಮೂಲಕ ತಿಳಿದುಬರುತ್ತಿದೆ.

. "ಅವರ ಸಮುದಾಯಗಳ ಸುಸ್ತಿರ ಅಭಿವೃದ್ಧಿಗಾಗಿ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತವೆ" ಸುಸ್ಥಿರ ಅಭಿವೃದ್ಧಿ ಬಗ್ಗೆ ಹಿಂದೆ ವಿವರಿಸಲಾಗಿದೆ. ಪರಿಸರ ಸಂರಕ್ಷಣೆ ಅತಿ ಮುಖ್ಯ. 1997 ರಿಂದ ಅಂತರ ರಾಷ್ಟ್ರೀಯ ನ್ಯಾಯಾಲಯವು ಸುಸ್ಥಿರ ಅಭಿವೃದ್ಧಿಯನ್ನು ಸಾರ್ವಜನಿಕ ಅಂತರರಾಷ್ಟ್ರೀಯ ಕಾನೂನು ಆಗಿ (ಸುಸ್ಥಿರ ಅಭಿವೃದ್ಧಿಯ) ಪರಿಗಣಿಸಿದೆ. ಈ ಪರಿಕಲ್ಪನೆಯು ಮೂರು ಅಂಶಗಳನ್ನು ಹೊಂದಿದೆ. ಪರಿಸರ ಸಮತೋಲನ, ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸಂರಕ್ಷಣೆ. ಇವು ಪ್ರತಿಯೊಂದು ಸ್ವತಂತ್ರ ಮತ್ತು ಪುನರುತ್ಪೋದಕ ಆದುದರಿಂದ ಸಹವರ್ತಿಗಾಗಿ ಪರಿಗಣಿಸಬೇಕು.

"ಅವರ ಸಮುದಾಯದ ಅಭಿವೃದ್ಧಿ"ಯಲ್ಲಿ ಅವರ ಎಂಬುದು ಒಡೆತನದ ಸರ್ವನಾಮ. 'ಸಹಕಾರ' ಸಂಘವು ಯಾವ ಸಮುದಾಯಕ್ಕೆ ಸೇರಿದೆಯೋ ಮತ್ತು ಯಾವ ಸಮುದಾಯವು ಸಹಕಾರ ಸಂಘವನ್ನು ಹೊಂದಿದೆಯೋ ಆ ಸಮುದಾಯಕ್ಕೆ ಅನ್ವಯವಾಗುತ್ತದೆ. ಬೇರೆ ಪದಗಳಲ್ಲಿ ಸಹಕಾರ ಸಂಘ ಎಲ್ಲಿ ವ್ಯಾಪಾರ ನಡೆಸುತ್ತದೆಯೋ ಆ ಸಮುದಾಯ, ಈ ಪುಂಜವು ಪ್ರಥಮ ಪ್ರಾಶಸ್ತ್ಯವು ತನ್ನ ಸಮುದಾಯಕ್ಕೆ ಎಂಬುದನ್ನು ತಿಳಿಸುತ್ತದೆ.

"ಸದಸ್ಯರು ಒಪ್ಪಿದ ನೀತಿಯ ಮೂಲಕ" ಸಮುದಾಯದ ಸುಸ್ಥಿರ ಅಭಿವೃದ್ಧಿಯ ಮೇಲೆ ಪರಿಣಾಮ ಬೀರುವುದರಿಂದ ಆಡಳಿತ ಮಂಡಳಿಯು ಸಾಮಾನ್ಯ ಸಭೆಯ ಒಪ್ಪಿಗೆ ಪಡೆಯುವುದು ಸರಿಯಾದ ಕ್ರಮವಾಗುತ್ತದೆ. ಅದು ಸದಸ್ಯರ

ಪ್ರಜಾಸತ್ತಾತ್ಮಕ ಹಕ್ಕು, ಸ್ವ–ಹಿತಾಸಕ್ತಿ ಮತ್ತು ವಿಶಾಲ ಸಮುದಾಯದ ಕಳಕಳಿ ನಡುವೆ ಸಮತೋಲನ ಕಾಯ್ದುಕೊಳ್ಳುವಿಕೆ, ರೂಢಿಯಲ್ಲಿ ಸಹಕಾರ ಸಂಘದ ಸದಸ್ಯರು ಆರ್ಥಿಕ, ಪರಿಸರ, ಸಾಮಾಜಿಕ ಅಭಿವೃದ್ಧಿಯಲ್ಲಿ ಇನ್ನೂ ಹೆಚ್ಚಿನ ಬದ್ಧತೆಯನ್ನು ಹೊಂದಿರುವ ಉದಾಹರಣೆ ಗಳನ್ನು ಕಾಣುತ್ತೇವೆ.

## 3. ಮಾರ್ಗದರ್ಶಿ ಟಿಪ್ಪಣಿ

**ಸುಸ್ಥಿರ ಸಾಮಾಜಿಕ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುವುದು.**

ಸಹಕಾರ ಸಂಘಗಳು ತಮ್ಮ ಸಮುದಾಯದ ಬೇರಿನಿಂದ ಹೊರಹೊಮ್ಮಿದೆ ಎಂಬುದು ಹೆಮ್ಮೆಯ ವಿಷಯ. ಜನರು ತಮ್ಮ ಸಮುದಾಯದ ಒಳಗಿನ ಸಾಮಾನ್ಯ ಆರ್ಥಿಕ ಅವಶ್ಯಕತೆಗಳನ್ನು ನ್ಯಾಯಯುತ ಬೆಲೆಗೆ ಗುಣಾತ್ಮಕ ಆಹಾರ ಮತ್ತು ಸೇವೆ ಕೊಳ್ಳಲು, ಸ್ಥಳೀಯ ಉತ್ಪನ್ನಗಳನ್ನು ಮಾರಾಟ ಮಾಡಲು, ನೂತನ ಸ್ಥಳೀಯ ಉದ್ಯೋಗ ಸೃಷ್ಟಿ, ಸಾಲ ಮತ್ತು ವಿಮೆ ಮತ್ತಿತರ ಸೇವೆ ಪಡೆಯಲು ಸ್ಥಾಪಿಸಿರುವ ಸಂಸ್ಥೆಗಳು ಈ ದೃಷ್ಟಿಯಲ್ಲಿ ಸಹಕಾರ ಸಂಘಗಳು ಅವುಗಳ ಕಾರ್ಯನಿರ್ವಹಿಸುತ್ತಿರುವ ಸಮುದಾಯದ ಸುಸ್ಥಿರ ಸಾಮಾಜಿಕ ಅಭಿವೃದ್ಧಿಗೆ ಪರಿಣಾಮಕಾರಿ ಸಾಧನೆಗಳು.

ಅವರ ಆರ್ಥಿಕ ಮಿತಿಗೆ ಒಳಪಟ್ಟು ಅನೇಕ ಸಹಕಾರ ಸಂಘಗಳು ಇತರರ ಬಗ್ಗೆ ಕಾಳಜಿವಹಿಸುವುದರಲ್ಲಿ ಮತ್ತು ಮಾನವ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ತಮ್ಮ ಸಮುದಾಯಕ್ಕೆ ಒದಗಿಸುವಲ್ಲಿ ಗಣನೀಯ ಕೊಡುಗೆಯನ್ನು ನೀಡಿವೆ. ಸಾಮಾಜಿಕ, ಜವಾಬ್ದಾರಿಯ ಅಂಗವಾಗಿ ತಾವು ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಸದಸ್ಯರಿಗೆ ಮಾಹಿತಿ ಒದಗಿಸುತ್ತಿವೆ. ಈ ಬೌತಿಕ ವಲ್ಲದ ಅವಶ್ಯಕತೆಗಳು; ಸಮುದಾಯ ಮತ್ತು ಸಾಂಸ್ಕೃತಿಕ ಹಬ್ಬಗಳು, ದೃಶ್ಯಕಲೆ, ಸಹಕಾರ ಸಂಘವು ಸುಸ್ಥಿರ ಅಭಿವೃದ್ಧಿಗೆ, ಸಾಮಾಜಿಕ ಆಯಾಮವುಳ್ಳ ವಿಶಿಷ್ಟ ಕೊಡುಗೆ ಇದಾಗಿದೆ.

ಆರೋಗ್ಯ, ವಸತಿ, ಶಿಕ್ಷಣ, ಸಾಮಾಜಿಕ ಸೇವೆಗಳು ಕೆಲಸದಲ್ಲಿ ಸಮಾಜದ ನಿಮ್ನವರ್ಗದ ಕೆಲಸಗಳ ನಿರ್ವಹಣೆ ಸಮುದಾಯದ ಅಭಿವೃದ್ಧಿಗೆ ಸಹಾಯ ನೀಡುವಲ್ಲಿ ಸಹಕಾರಿ ಸಂಘಗಳು ಸುದೀರ್ಘ ಚರಿತ್ರೆ ಮತ್ತೆ ಹೆಮ್ಮೆಯ ಪರಂಪರೆಯನ್ನು ಹೊಂದಿದೆ. ಪ್ರಾಕೃತಿಕ ವಿಕೋಪ ಸಮಯಗಳಲ್ಲೂ ಸಹಕಾರ ಸಂಘಗಳು ಸಕಾರಾತ್ಮಕವಾಗಿ ಸ್ಪಂಧಿಸಿ ಪುನಶ್ಚೇತನ, ಪುನರ್ವಸತಿ ಕೆಲಸಗಳನ್ನು ಬದ್ಧತೆಯಿಂದ ನಿರ್ವಹಿಸಿವೆ. ಸುನಾಮಿ ಸಮಯದಲ್ಲಿ ಮೈತ್ರಿ ಸಂಸ್ಥೆ ಕೆಲಸಗಳನ್ನು ನೆನಪಿಸಿಕೊಳ್ಳಬೇಕಿದೆ.

ಅನೇಕ ರಾಷ್ಟ್ರಗಳಲ್ಲಿ ಸಾರ್ವಜನಿಕ ಸೇವೆಗಳು ಸರಿಯಾಗಿ ಲಭ್ಯವಿಲ್ಲದೆ ರಾಜಕೀಯ ವ್ಯಕ್ತಿಗಳ ಹಿತಾಸಕ್ತಿಯಿಂದ ಖಾಸಗಿ ಕಂಪನಿಗಳಿಗೆ ವಹಿಸಿದಾಗ ಪುನಃ ತೊಂದರೆಗೀಡಾದಾಗ ಸಾರ್ವಜನಿಕ ಸೇವೆಗಾಗಿಯೇ ಸಹಕಾರ ಸಂಘಗಳು ಸ್ಥಾಪನೆಯಾಗಿ ಅತಿಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಜಾಗತಿಕ ಆರ್ಥಿಕ ಹಿನ್ನೆಲೆ ಸಮಯದಲ್ಲಿಯೂ ಸಹಕಾರ ಸಂಘಗಳು ಸರ್ಕಾರಕ್ಕೆ ತನ್ನ ಬೆಂಬಲ ನೀಡಿವೆ. ಇಟಲಿ ದೇಶದಲ್ಲಿನ ಸಾಮಾಜಿಕ ಸಹಕಾರ ಸಂಘಗಳು ವೈವಿಧ್ಯಮಯ ಸೇವೆಗಳನ್ನು ಒದಗಿಸಿ ಜನರಿಗೆ ಕೆಲಸ ಮಾಡುವ ಅವಕಾಶವನ್ನು ಒದಗಿಸಿವೆ. ಇವು ತಮ್ಮ ಸದಸ್ಯರಿಗೆ ಮಾತ್ರವಲ್ಲದೇ ಇಡೀ ಸಮುದಾಯದ ಸೇವೆಯಲ್ಲಿ ತೊಡಗಿವೆ. ವಿವಿಧ ವರ್ಗಗಳಲ್ಲಿನ ವ್ಯತ್ಯಾಸಗಳನ್ನು ಸರಿಪಡಿಸಲು ಕ್ರಮ ತೆಗೆದುಕೊಂಡಿವೆ. 7ನೇ ತತ್ವಕ್ಕೆ ಇದು ಒಂದು ಅತ್ಯುತ್ತಮ ಉದಾಹರಣೆಯಾಗಿದ್ದು ಸಾಮಾನ್ಯ ಹಿತಕ್ಕಾಗಿ ಕರ್ತವ್ಯ ನಿರ್ವಹಿಸುತ್ತಿವೆ.

ಸಾಮಾಜಿಕ ಸಹಕಾರ ಸಂಘಗಳು, ಉಪಯೋಗ ಪಡೆಯುವ ಸದಸ್ಯರು, ಹೂಡಿಕೆ ಸದಸ್ಯರು, ಉತ್ತೇಜನ ನೀಡುವ ಸದಸ್ಯರು ಮತ್ತು ಸದಸ್ಯರಲ್ಲದ ಫಲಾನುಭವಿ ಗುಂಪುಗಳನ್ನು ಹೊಂದಿವೆ. ಈ ಸಹಕಾರ ಸಂಘಗಳು ವಿಶಿಷ್ಟವಾದ ಸಾಮಾಜಿಕ ಧ್ಯೇಯ ಹೊಂದಿದ್ದು ಸಾಮಾನ್ಯ ಹಿತಾಸಕ್ತಿಯ ಸರಕು ಮತ್ತು ಸೇವೆಗಳನ್ನು ಒದಗಿಸುತ್ತವೆ. 7ನೇ ತತ್ವದ ನೇರ

ಮತ್ತು ಪ್ರಾಥಮಿಕ ಕರ್ತವ್ಯ ನಿರ್ವಹಿಸುತ್ತಿವೆ.

**ಸಾಮಾಜಿಕ ಸುಸ್ಥಿರತೆ: ಶಾಂತಿ ಮತ್ತು ಸಾಮಾಜಿಕ ನ್ಯಾಯದ ಬದ್ಧತೆ.**

ಅಭಿವೃದ್ಧಿ ಶೀಲ ವಿಶ್ವಾದ್ಯಾಂತ ಸಹಕಾರ ಸಂಘಗಳು ಸುಸ್ಥಿರ ಸಾಮಾಜಿಕ ಅಭಿವೃದ್ಧಿಗಾಗಿ ವಿಸ್ತರಿಕೆ ಸೇವೆ/ಸಹಾಯ ನೀಡುತ್ತಿವೆ. ಇದು ಸಹಕಾರ ಸಂಘಗಳು ಹೆಮ್ಮೆ ಪಡುವ ವಿಷಯವಾಗಿದ್ದು ಮಾದರಿ ಎಂದು ಪರಿಗಣಿಸಿ ಇತರೆ ಸಹಕಾರ ಸಂಘಗಳು ಅನುಕರಿಸತಕ್ಕದ್ದಾಗಿದೆ. “ಸಮುದಾಯ” ಎಂಬುದು ಸ್ಥಳೀಯವಾದರೂ ಮಾಧ್ಯಮ ಮತ್ತು ವಿದ್ಯುನ್ಮಾನ ಸಂವಹನದಿಂದ ಜಾಗತಿಕ ಸಮುದಾಯವೇ ನಿರ್ಮಾಣವಾಗಿದ್ದು ಈ ಪ್ರಕ್ರಿಯೆ ಜಾಗತಿಕವಾಗಬೇಕಿದೆ.

ಸಹಕಾರಿ ಸಂಘಗಳು ಸ್ಥಳೀಯ ಸಮುದಾಯಗಳದ್ದಾದರೂ ಸಹಕಾರಿಗಳು ವಿಶ್ವದ ನಾಗರೀಕರು. ಘರ್ಷಣೆ ಎಂಬುದು ಸಹಕಾರದ ವಿರೋಧಾಭಾಸ. ಸಹಕಾರಿ ಸಂಘಗಳು ಶಾಂತಿ ಮತ್ತು ಸಾಮಾಜಿಕ ನ್ಯಾಯದ ಸುಧೀರ್ಘ ಪರಂಪರೆಯನ್ನು ಹೊಂದಿವೆ. ಸ್ಥಳೀಯ, ರಾಷ್ಟ್ರೀಯ, ಪ್ರಾದೇಶಿಕ ಮತ್ತು ಜಾಗತಿಕ ಸಮುದಾಯದ ಸುಸ್ಥಿರ ಅಭಿವೃದ್ಧಿಗೆ ಕೊನೆಗೊಳ್ಳದ ಶಾಂತಿ ಮತ್ತು ಸಾಮಾಜಿಕ ನ್ಯಾಯ ಪೂರ್ವಭಾವಿ ಅಗತ್ಯತೆ ಸಹಕಾರ ಸಂಘಗಳು ಮತ್ತು ಸಹಕಾರಿಗಳು ಶಾಂತಿ ಮತ್ತು ಸ್ಥಿರತೆಗೆ ಬದ್ಧರಾಗಿರುತ್ತಾರೆ ಎಂಬುದಕ್ಕೆ ಅನೇಕ ಉದಾಹರಣೆಗಳಿವೆ. ಸಹಕಾರ ಸಂಘಗಳು ಸುಸ್ಥಿರ ಅಭಿವೃದ್ಧಿಗೆ ಬದ್ಧರಾದಂತೆ ಶಾಂತಿ ಮತ್ತು ಸಾಮಾಜಿಕ ನ್ಯಾಯಕ್ಕೂ ಬದ್ಧರಾಗಿರುವಂತೆ ಕಾರ್ಯನಿರ್ವಹಿಸಬೇಕು.

**ಸಾಮಾಜಿಕ ಸುಸ್ಥಿರತೆ: ನೌಕರರು (ಸಿಬ್ಬಂದಿ) ಬಗ್ಗೆ ಕಾಳಜಿ**

ಸಹಕಾರ ಸಂಘಗಳು ಎಲ್ಲಿ ಕಾರ್ಯ ನಿರ್ವಹಿಸುತ್ತಿವೆಯೋ ಅಲ್ಲಿಯ ಸಮುದಾಯದಿಂದಲೇ ನೌಕರರನ್ನು ನೇಮಕಾತಿ ಮಾಡಿಕೊಂಡಿರಲಾಗಿರುತ್ತದೆ. ಸಮುದಾಯದ ಸುಸ್ಥಿರ ಅಭಿವೃದ್ಧಿಗೆ ನೌಕರರ ಮತ್ತು ನೌಕರ ಕುಟುಂಬ ವರ್ಗದವರ ಕ್ಷೇಮದ ಬಗ್ಗೆಯು ಕಾಳಜಿ ವಹಿಸಬೇಕಾಗುತ್ತದೆ. ಆಗ ಅವರು ಉತ್ತಮ ನೌಕರರಾಗಿಯೂ ಇರುತ್ತಾರೆ.

2002ರ ಅಂತರರಾಷ್ಟ್ರೀಯ ಕಾರ್ಮಿಕರ ಸಂಸ್ಥೆಯ ಶಿಫಾರಸ್ಸು 193 ಸಹಕಾರ ಸಂಘಗಳನ್ನು ಪ್ರೋತ್ಸಾಹಿಸುವ ಬಗ್ಗೆ ತಿಳಿಸುತ್ತದೆ. ಅದನ್ನು ಮೈತ್ರಿ ಸಂಸ್ಥೆಯು ತನ್ನ ಆಡಳಿತ ಮಂಡಳಿಯಲ್ಲಿ ಅನುಮೋಧಿಸಿರುತ್ತದೆ. ಅಂತರರಾಷ್ಟ್ರೀಯ ಕಾರ್ಮಿಕ ಮಾನದಂಡಗಳನ್ನು ಸಹಕಾರ ಸಂಘಗಳು ತಮ್ಮ ಸಿಬ್ಬಂದಿ ಸೇವಾ ನೀತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಬೇಕು. ಅದರ ಅನುಷ್ಠಾನದಲ್ಲಿ ಸಹಕಾರ ಸಂಘಗಳು ಇತರರಿಗೆ ಮಾದರಿಯಾಗಬೇಕು.

ನೂತನ ಸಹಕಾರ ಸಂಘಗಳು ಮತ್ತು ಸಣ್ಣ ಸಹಕಾರ ಸಂಘಗಳು ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಗಳ ಮಾನದಂಡಗಳನ್ನು ಪಾಲಿಸಲು ಅಗದೇ ಇರಬಹುದು. ದೊಡ್ಡ ಮತ್ತು ಸದೃಡ ಸಹಕಾರ ಸಂಘಗಳು ಇವುಗಳಿಗೆ ಸಹಾಯ ಹಸ್ತ ನೀಡಬೇಕಿದೆ. (ಆರನೆ ತತ್ವ) ಸಿಬ್ಬಂದಿ ನೀತಿ ನಿಯಮಗಳು ವಿಧಿವಿಧಾನಗಳು ತಜ್ಞರನ್ನು ಇವುಗಳೊಡನೆ ಹಂಚಿಕೊಳ್ಳಬಹುದು. ಆರ್ಥಿಕ ಮತ್ತು ವಿಮಾ ಸಹಕಾರ ಸಂಘಗಳು ತಮ್ಮ ಸೇವೆಯನ್ನು ಇವುಗಳಿಗೆ ನೀಡಬೇಕು. ಇವು ಮಾಧ್ಯಮಿಕ ಸಂಘಗಳನ್ನು ರಚಿಸಬಹುದು, ಅವುಗಳ ಮಹಾಮಂಡಳಗಳ ಸದಸ್ಯರಾಗಬಹುದು. ಅವುಗಳಿಂದ, ಸಲಹೆ, ಮಾನವ ಸಂಪನ್ಮೂಲ, ವ್ಯವಸ್ಥಾಪನ ಸೇವೆಯನ್ನು ಪಡೆಯಬಹುದು.

**ಸಾಮಾಜಿಕ ಸುಸ್ಥಿರತೆ, ಯುವ ಜನತೆ ಬಗ್ಗೆ ಕಾಳಜಿ**

ಈ ಹಿಂದ ತಿಳಿಸಿದಂತೆ ಪ್ರಜಾಸತ್ತಾತ್ಮಕ ಸಂಸ್ಥೆಯು ಹಾಲಿ ಪೀಳಿಗೆಗೆ ಸೇರಿದಷ್ಟೇ ಮುಂದಿನ ಪೀಳಿಗೆ ಸದಸ್ಯರಿಗೂ ಸೇರಿರುತ್ತದೆ. ಆದುದರಿಂದ ತಮ್ಮ ಸಮುದಾಯದ ಯುವ ಜನತೆಗೆ ಬೆಂಬಲ ಮತ್ತು ಪ್ರೋತ್ಸಾಹ ನೀಡಲೇಬೇಕು.

ಯುವ ಪ್ರತಿನಿಧಿಗಳಿಗೆ ಅವಕಾಶ ನೀಡುವ, ಯುವ ಚಟುವಟಿಕೆಗಳಿಗೆ ಬೆಂಬಲ ನೀಡುವ ಮತ್ತು ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಸಹಕಾರ ಶಿಕ್ಷಣಕ್ಕೆ ಬೆಂಬಲ ನೀಡುವ ಈ ಹಲವು ರೀತಿಗಳಲ್ಲಿ ಯುವ ಜನತೆಯ ಬಗ್ಗೆ ಕಾಳಜಿ ವಹಿಸಬಹುದು.

**ಸುಸ್ಥಿರ ಆರ್ಥಿಕ ಅಭಿವೃದ್ಧಿ**

"ಅವರ ಸಮುದಾಯದ ಸುಸ್ಥಿರ ಅಭಿವೃದ್ಧಿ" ಏಳನೇ ತತ್ವವು ಅಭಿವೃದ್ಧಿ ಶೀಲ ಮತ್ತು ಉದಯೋನ್ಮುಖ ಆರ್ಥಿಕತೆಯಲ್ಲಿ ಬಡತನ ಮತ್ತು ಸಿರಿತನ ಅಸಮಾನತೆ ಹೋಗಲಾಡಿಸುವುದಲ್ಲದೇ ಇತರೆಡೆ ಬೆಳೆಯುತ್ತಿರುವ (ಸ್ಥಳೀಯ ಸಮುದಾಯವು ಸೇರಿದಂತೆ) ಅಸಮಾನತೆಯನ್ನು ಹೋಗಲಾಡಿಸುವುದನ್ನು ಆಶಿಸುತ್ತದೆ. ಅತಿಯಶಸ್ವಿಯಾಗಿ ಸಹಕಾರ ಸಂಘಗಳು ಈ ದಿಶೆಯಲ್ಲಿ ಕಾರ್ಯ ನಿರ್ವಹಿಸಬಹುದು ಏಕೆಂದರೆ ಅವು ಕೆಲವೇ ವ್ಯಕ್ತಿಗಳ ಸೇವೆಯಲ್ಲಿ ತೊಡಗಿಕೊಂಡಿಲ್ಲ. ಅನೇಕ ಜನರ ಸೇವೆಯಲ್ಲಿ ತೊಡಗಿಸಿಕೊಂಡಿವೆ. ಜಾಗತಿಕ ಆರ್ಥಿಕತೆಯು ಬಡವ ಬಲ್ಲಿದನ ನಡುವಿನ ಅಂತರವನ್ನು ಹಿಗ್ಗಿಸಿದೆ. ಅಂತರರಾಷ್ಟ್ರೀಯ ಕಾರ್ಮಿಕ ಒಕ್ಕೂಟ ಶಿಫಾರಸ್ಸು 193 "ಸಹಕಾರ ಸಂಘಗಳಿಗೆ ಜಾಗತೀಕರಣವು ಹೊಸ ಮತ್ತು ವಿವಿಧ ಒತ್ತಡಗಳು ತೊಂದರೆಗಳು ಸವಾಲುಗಳು ಮತ್ತು ಅವಕಾಶಗಳನ್ನು ಒಡ್ಡಿದೆ. ಜಾಗತೀಕರಣದ ಲಾಭವನ್ನು ಒದಗಿಸಲು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಶಕ್ತಿಯುತ ಮಾನವ ಒಗ್ಗಟ್ಟಿನ ಅವಶ್ಯಕತೆ ಇದೆ".

ಸಾಮಾಜಿಕ ಅಭಿವೃದ್ಧಿಯ 'ವಿಶ್ವಸಂಸ್ಥೆ ಸಮ್ಮೇಳನ ಮಾನವಸನ್ನು ಅಭಿವೃದ್ಧಿಯ ಕೇಂದ್ರ ಬಿಂದು'ವಾಗಿಸಿದೆ. ಸುಸ್ಥಿರ ಅಭಿವೃದ್ಧಿಯ ಅತಿಕ್ರಮಿಸುವ ಗುರಿ ಸಂಪೂರ್ಣ ಉದ್ಯೋಗ, ಸಾಮಾಜಿಕ ಅನ್ಯೋನ್ಯತೆಯನ್ನು ಸಾಧಿಸುವುದು ಬಡತನ ನಿರ್ಮೂಲನೆಗಾಗಿ ಪ್ರಮಾಣಿಕರಿಸಿದೆ. ಸಮ್ಮೇಳನದಲ್ಲಿ ಒದಗಿಸಿರುವ ಹಿನ್ನೆಲೆ ಪತ್ರವು ಸಹಕಾರ ಸಂಘದ ಸದಸ್ಯರು ಮತ್ತು ಅವರ ಅವಲಂಭಿತರು ಮತ್ತು ನೌಕರರು ಮತ್ತು ಅವರ ಕುಟುಂಬದವರನ್ನು ಲೆಕ್ಕಕ್ಕೆ ತೆಗೆದುಕೊಂಡರೆ ವಿಶ್ವದ ಅರ್ಧಜನಸಂಖ್ಯೆಯೂ ಮೀರಿ ಜನ ತಮ್ಮ ಮೂಲಭೂತ ಜೀವನ ಮಟ್ಟ ಏರಿಸಿಕೊಳ್ಳಲು ಸಹಕಾರ ಸಂಘವನ್ನು ಅವಲಂಭಿಸಿರುತ್ತಾರೆ.

ಸಮ್ಮೇಳನವು ಸಂಪತ್ತು ಸೃಷ್ಟಿ ಮತ್ತು ಬಡತನ ನಿರ್ಮೂಲನದಲ್ಲಿ ಸಹಕಾರ ಸಂಘಗಳ ಪಾತ್ರವನ್ನು ಸರ್ಕಾರದ ಗಮನಕ್ಕೆ ತರಲಾಯಿತು. ಇದು 2012ರಲ್ಲಿ ಉತ್ತಮ ವಿಶ್ವ ನಿರ್ಮಾಣಕ್ಕಾಗಿ ಸಹಕಾರ ಸಂಘಗಳು" ಎಂಬ ಘೋಷವಾಕ್ಯಕ್ಕೆ ಕಾರಣವಾಯಿತು. ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಬಾನ್‌ರೆಮೂನ್ ರವರು "ಆರ್ಥಿಕ ಸಬಲತೆ ಮತ್ತು ಸಾಮಾಜಿಕ ಜವಾಬ್ದಾರಿ ಎರಡನ್ನು ಒಟ್ಟಿಗೆ ಸಾಧಿಸಲು ಸಾಧ್ಯ ಎಂಬುದಕ್ಕೆ ಸಹಕಾರ ಸಂಘಗಳೇ ಒಂದು ಜ್ಞಾಪನ (ಸಾಕ್ಷಿ)" ಎಂದು ಉದ್ಘೋಷಿಸಿರುತ್ತಾರೆ. ರಿಯೋ ಅಂತಿಮ ವರದಿಯಲ್ಲಿ ಸಹಕಾರ ಸಂಘಗಳು ಸುಸ್ಥಿರ ಅಭಿವೃದ್ಧಿ, ಬಡತನ ನಿರ್ಮೂಲನ ಮತ್ತು ಉದ್ಯೋಗ ಸೃಷ್ಟಿಗೆ ಕಾರಣವಾಗಿವೆ ಎಂದು ಶ್ಲಾಘಿಸಲಾಗಿದೆ.

ಖಾಸಗಿ ಹೂಡಿಕೆ ಸಂಸ್ಥೆಗಳಲ್ಲಿನ ಅತಿರೇಖಗಳು ಸಹಕಾರ ಸಂಘಗಳಲ್ಲಿ ಕಾಣಬರುವುದಿಲ್ಲ. ಕಾರಣವೇನೆಂದರೆ ಸಹಕಾರ ಸಂಘಗಳು ಸದಸ್ಯ ನಿಯಂತ್ರಿತ ವಾಗಿದ್ದು ಸ್ಥಳೀಯ ಬೇರುಗಳನ್ನು ಹೊಂದಿವೆ. ಖಾಸಗಿ ಹೂಡಿಕೆದಾರರಿಗೆ ಲಾಭ ತರುವ ಉದ್ದೇಶದಿಂದ ಈ ಸಂಸ್ಥೆಗಳು ಅತಿರೇಖಕ್ಕೆ ಇಳಿಯುತ್ತದೆ. ಅದು ವ್ಯವಹಾರ ನಡೆಸುವಲ್ಲಿ ಸಮುದಾಯದ ವೆಚ್ಚದಲ್ಲಿ ನಡೆಯುತ್ತದೆ.

ಸಹಕಾರ ಸಂಘಗಳು ದುರಾಡಳಿತ ಮತ್ತು ವಿಫಲ ವ್ಯವಸ್ಥಾಪನೆಯಿಂದ ವಿಫಲವಾಗಿರುವುದುಂಟು. ಆದುದರಿಂದ ಏಳನೇ ತತ್ವದ ಜವಾಬ್ದಾರಿಯನ್ನು ಅವರು ಮರೆಯಬಾರದು. ಸದಸ್ಯ ನಿಯಂತ್ರಿತ ಸಂಘವಾಗಿ ಉತ್ತಮ ಆಡಳಿತದಿಂದ

ಯಶಸ್ಸು ಸಾಧಿಸಬೇಕು.

ಆರ್ಥಿಕ ಪರಿಸರ ಮತ್ತು ಸಾಮಾಜಿಕ ಸುಸ್ಥಿರತೆಗೆ ಆರ್ಥಿಕ ಸಭಲತೆಯೆ ಪ್ರಮುಖ ಸಾಧನೆ. ಅದಿಲ್ಲದೆ ಬಡತನ ನಿರ್ಮೂಲನ ಮತ್ತು ಸಂಪತ್ತು ಅಸಮತೋಲನ ನಿರ್ಮೂಲನೆ ಸಾಧ್ಯವಾಗುವುದಿಲ್ಲ.

ಸಮುದಾಯದ ಸುಸ್ಥಿರ ಆರ್ಥಿಕ ಅಭಿವೃದ್ಧಿಗೆ ಸಹಕಾರ ಸಂಘಗಳಿಗೆ ಸಾಮರ್ಥ್ಯವಿರುವುದು ಸ್ಪಷ್ಟವಾಗಿದೆ. ಆದರೆ ಅವು ಹೇಗೆ ಏಳನೇ ತತ್ವವನ್ನು ರೂಢಿಗೆ ತರುತ್ತವೆ? ಅವು ಅವುಗಳ ವ್ಯಾಪಾರ ರೂಢಿಗಳಲ್ಲಿ ನೈತಿಕ ತತ್ವಗಳನ್ನು ಪಾಲಿಸುವ ಮೂಲಕ ನ್ಯಾಯಯುತ ವ್ಯಾಪಾರ, ಒಪ್ಪಂದ, ಸರಬರಾಜುದಾರರಿಗೆ ಸಕಾಲಿಕ ಪಾವತಿ, ಸಹಕಾರ ಸಂಘಗಳ ನಡುವೆ ವ್ಯಾಪಾರದ ಸಹಕಾರ ಮತ್ತು ಬೆಂಬಲದೊಡನೆ ಸಾಧಿಸುತ್ತವೆ.

**ಪರಿಸರ ಸುಸ್ಥಿರತೆ: ಪರಿಸರ ರಕ್ಷಣೆ, ಬೆಳೆಯುತ್ತಿರುವ ಮತ್ತು ಅತಿ ಶೀಘ್ರ ಸವಾಲು**

ಸಹಕಾರ ಚಳುವಳಿಯಲ್ಲಿ ಪರಿಸರ ರಕ್ಷಣೆ ಹೊಸ ಬದ್ಧತೆಯೇನಲ್ಲ. ಅನೇಕ ವರ್ಷಗಳಿಂದ ತನ್ನ ಬದ್ಧತೆಯನ್ನು ತೋರುತ್ತಾಬಂದಿರುತ್ತದೆ. 1980ರಲ್ಲಿ 2000ನೇ ವರ್ಷಕ್ಕೆ ಸಹಕಾರ ಸಂಘಗಳು ಎಂಬ ಶೀರ್ಷಿಕೆಯಲ್ಲಿ ಈ ಬದ್ಧತೆಯನ್ನು ವ್ಯಕ್ತ ಪಡಿಸಲಾಗಿರುತ್ತದೆ. ಯಾವುದೇ ಕಾರಣಕ್ಕೆ ಪರಿಸರಕ್ಕೆ ವಿಷ ಉಣಿಸುವುದಾಗಲಿ, ಹಾಳುಮಾಡುವುದಾಗಲಿ, ಮಾಡುವುದಿಲ್ಲ ಎಂದು ತಿಳಿಸಿದೆ. ಯುರೋಪ್, ಉತ್ತರ ಅಮೇರಿಕ ಮತ್ತು ಜಪಾನ್ ದೇಶಗಳಲ್ಲಿ 1980ರ ದಶಕದಲ್ಲಿ ಪರಿಸರ ಸ್ನೇಹಿ ವಸ್ತುಗಳ ಮಾರಾಟ ಹಸಿರು ಬಳಕೆಗೆ ಪ್ರಾಮುಖ್ಯತೆ ನೀಡಲಾಯಿತು. ಕೃಷಿ ಸಹಕಾರ ಸಂಘಗಳು ಸಾವಯವ ಉತ್ಪನ್ನಗಳ ಮಾರಾಟ ಆರಂಭಿಸಲಾಯಿತು. ಮೀನುಗಾರಿಕೆ ಸಹಕಾರ ಸಂಘಗಳು ನೀರಿನ ಮಾಲಿನ್ಯ ತಡೆಗೆ ಕ್ರಮ ತೆಗೆದುಕೊಂಡು ಗ್ರಾಹಕರ ಜೀವನ ಶೈಲಿಯ ಬದಲಾವಣೆಗೆ ಕಾರಣವಾದವು.

ಪರಿಸರದ ಬಗ್ಗೆ ಜಾಗತೀಕ ಅರಿವು ಉಂಟಾಗಿ ಸಹಕಾರ ಚಳುವಳಿಯ ಆದ್ಯ ಬದ್ಧತೆಗೆ ಕಾರಣವಾಗಿದೆ. 1995ರ ಇತ್ತೀಚಿಗೆ ತೊಂದರೆ ಕಡಿಮೆಯಾಗುವ ಬದಲಿಗೆ ಹೆಚ್ಚಳಗೊಂಡಿರುವುದರಿಂದ ಪರಿಸರದ ಬಗ್ಗೆ ಜಾಗತಿಕ ಅರಿವು ಮತ್ತಷ್ಟು ಹೆಚ್ಚಾಗಿದೆ. 2008ರಲ್ಲಿ ಮೈತ್ರಿ ಸಂಸ್ಥೆಯು "ಸಹಕಾರ ಔದ್ಯೋಗಿಕ ಸಂಸ್ಥೆಗಳ ಮೂಲಕ ವಾತಾವರಣ ಬದಲಾವಣೆಯನ್ನು ತಡೆಗಟ್ಟುವಿಕೆ" ಎಂಬ ಶೀರ್ಷಿಕೆಯಡಿ ಯಲ್ಲಿ ತಾಪಮಾನ ಏರಿಕೆಯಾಗುತ್ತಿರುವ ಬಗ್ಗೆ ಅರಿವು ಮೂಡಿಸಲಾಯಿತು. ಮೈತ್ರಿ ಸಂಸ್ಥೆ–ಅಮೇರಿಕಾ ಸಹಕಾರ ಸಮ್ಮೇಳನ 2009ರಲ್ಲಿ "ಬೆಳವಣಿಗೆ ಮತ್ತು ಸುಸ್ಥಿರ ಅಭಿವೃದ್ಧಿ" ಯನ್ನು ವಿಷಯವನ್ನಾಗಿರಿಸಿತ್ತು. ಇದರಿಂದ "ಸಹಕಾರಿ ಹಸಿರು ಒಪ್ಪಂದ" ಲೋಕಾರ್ಪಣೆ ಮಾಡಲು ಸಾಧ್ಯವಾಯಿತು. ಅದರೊಡನೆ ಕ್ರಿಯಾ ಯೋಜನೆಯನ್ನು ತಯಾರಿಸಲಾಯಿತು. ಮುಂದುವರಿದು 2010ರಲ್ಲಿ "ಗ್ರಹದ ಉಳಿವಿಗಾಗಿ ಸಹಕಾರದ ಬದ್ಧತೆ" ಎಂಬುದನ್ನು ವಿಷಯವಾಗಿಸಲಾಗಿತ್ತು.

ಈ ವಿಷಯಗಳನ್ನು ಮತ್ತೂ ಪುನರ್ ರೂಪಿಸಿ ಪುನರಾವರ್ತನೆ ಮಾಡಬೇಕಿದೆ. ಏಕೆಂದರೆ ಪ್ರಾಥಮಿಕ ಕೃಷಿಕ ಪರಿಸರಕ್ಕೆ ಧಕ್ಕೆ ಮತ್ತು ಹೆಚ್ಚಳವಾಗಿರುತ್ತದೆ. ಎಲ್ಲ ಸಹಕಾರ ಸಂಘಗಳು ತಮ್ಮ ಸಮುದಾಯ ಮತ್ತು ವ್ಯಾಪಾರ ವ್ಯವಹಾರಗಳಲ್ಲಿ ಪರಿಸರದ ಮೇಲಿನ ದುಷ್ಪರಿಣಾಮಗಳನ್ನು ಕಡಿತಗೊಳಿಸುವ ಬಗ್ಗೆ ಪರಿಸರ ಸುಸ್ಥಿರತೆಗಾಗಿ ಕಾರ್ಯತತ್ಪರತೆ ಇರಿಸಿಕೊಳ್ಳಬೇಕಿದೆ. ಅನೇಕ ಸಹಕಾರ ಸಂಘಗಳು ಈ ಬೆದರಿಕೆ ಹೋಗಲಾಡಿಸಲು ಹಸಿರು ಬಳಕೆ, ಸುಸ್ಥಿರ ಕೃಷಿ, ನವೀಕರಿಸ ಬಹುದಾದ ಇಂಧನ (ಶಕ್ತಿ) ಮತ್ತಿತರೆ ಪರಿಸರ ನೀತಿ, ಪರಿಸರ ಸ್ನೇಹಿಕ್ರಮಗಳನ್ನು ಅನುಸರಿಸುತ್ತಿವೆ.

ಪರಿಸರದ ಸವಾಲೆಷ್ಟಿದೆ ಎಂದರೆ ಅದನ್ನು ಸಮಾಜದ ವಿವಿಧ ವಲಯಗಳು ಮತ್ತು ಸರ್ಕಾರಗಳು ಸಹಪ್ರಯತ್ನದಿಂದ

ಮಾತ್ರವೇ ಎದುರಿಸಲು ಸಾಧ್ಯ. ಸಹಕಾರ ಸಂಘಗಳು ತಾವು ಪರಿಸರ ಸ್ನೇಹಿ ಕಾರ್ಯಗಳನ್ನು ಅನುಷ್ಠಾನಗೊಳಿಸುವುದಲ್ಲದೇ ಸಮಾಜದ ಇತರೆ ವಲಯಗಳಲ್ಲಿ ಅರಿವು ಉಂಟು ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಈ ವಿಷಯಗಳಲ್ಲಿ ಸಹಕಾರ ಸಂಘಗಳು ಮುಖಂಡತ್ವ ವಹಿಸುವಲ್ಲಿ ಸಮರ್ಥವಾಗಿವೆ. ಸಮಸ್ಯೆಯು ಗುರುತರವಾಗಿದ್ದು ಯಶಸ್ಸುಸಾಧಿಸಲು ಎಲ್ಲರ ಸಹಕಾರ ಅಗತ್ಯ. ಯಾರೇ ಒಬ್ಬರು ಪ್ರಯತ್ನ ಪಟ್ಟರೆ ಅದನ್ನು ಶ್ಲಾಘಿಸ ಬಹುದೇ ವಿನಃ ಅದು ಸಾಕಾಗುವುದಿಲ್ಲ ಮತ್ತು ಅವರಿಗೆ ಬೇಸರತರಿಸುತ್ತದೆ.

**ಸುಸ್ಥಿರತೆ ಬಗ್ಗೆ ನಮ್ಮ ಸಂಪೂರ್ಣ ಬದ್ಧತೆಯ ಅನುಕೂಲತೆಗಳು.**

ಮಾನವ ಪರಹಿತ ಚಿಂತನೆ ಮತ್ತು ಸಹಕಾರವು ಪರಸ್ಪರ ಅನುಕೂಲತೆಯ ಮೇಲೆ ನಿಂತಿದೆ. ಇದು ನಮ್ಮ ವಂಶವಾಹಿನಿಯಲ್ಲಿಯೇ ಬಂದಿದೆ. ಸಹಕಾರ ಸಂಘಗಳಿಗೆ ಸ್ಪಷ್ಟ ಮತ್ತು ತೋರಿಸಿಕೊಳ್ಳಬಲ್ಲ ಅನುಕೂಲತೆ ಇದೆ. ಅವು ತಾವು ಕಾರ್ಯನಿರತ ಸಮೂಹಗಳಲ್ಲಿ ಸುಸ್ಥಿರ ಅಭಿವೃದ್ಧಿಗಾಗಿ ಸಂಪೂರ್ಣ ಬದ್ಧರಾಗಿರುತ್ತವೆ.

ಸಂಪೂರ್ಣ ಬದ್ಧತೆಯು ಸಹಕಾರ ಲಾಭದಾಯಕವಾಗಿದೆ. ಏಕೆಂದರೆ ಈ ಏಳನೆ ತತ್ವವು ಐದನೇ ತತ್ವವಾದ ಸಾರ್ವಜನಿಕರಿಗೂ ಶಿಕ್ಷಣ ನೀಡಿ ಹೆಚ್ಚು ಹೊಸ ಸದಸ್ಯರನ್ನಾಗಿಸಿಕೊಳ್ಳಲು ಸಾಧ್ಯವಾಗಿ ಹೆಚ್ಚು ವ್ಯವಹಾರ ನಡೆಸಿ ಸಹಕಾರ ಸಂಘದ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಅವಕಾಶವಾಗುತ್ತದೆ. ಸುಸ್ಥಿರ ಅಭಿವೃದ್ಧಿಯ ಮೂರು ಅಂಶಗಳನ್ನು ಬೆಂಬಲಿಸುವುದರಲ್ಲಿ ಸಹಕಾರ ಸಂಘಗಳಿಗೆ ಹೆಮ್ಮೆಯಿದೆ. ತಮ್ಮ ಸಮೂಹ ಆಧಾರಿತ ಚಟುವಟಿಕೆಗಳನ್ನು ಪ್ರಕಟಿಸಲು ಉತ್ಸುಕರಾಗಿದ್ದಾರೆ. ಸ್ಥಳೀಯ ಆರ್ಥಿಕ ಅಭಿವೃದ್ಧಿಗಾಗಿ ಸ್ಥಳೀಯ ಸಂಪನ್ಮೂಲಗಳ ಬಳಕೆ, ಸಮೂಹ ಒಡೆತನದ ಅಂಗಡಿಗಳಿಗೆ ಮತ್ತಿತರೆ ಆಸ್ತಿಗಳಿಗೆ ಉತ್ತೇಜನ ನೀಡುವುದು, ಸ್ಥಳೀಯ ಸಹಕಾರ ಸಂಘಗಳ ಸ್ಥಾಪನೆಗೆ ಉತ್ತೇಜನ, ಪರಿಸರ ರಕ್ಷಣೆ ಜಾಗೃತಿ ಮೂಡಿಸುವ ಸಾಂಸ್ಕೃತಿಕ, ಕಲೆಗಳಿಗೆ ಉತ್ತೇಜನವನ್ನು (ಸಹಕಾರ ಸಂಘಗಳು ಸ್ಥಳೀಯವಾಗಿ ಮತ್ತು ಜಾಗತಿಕ ಮಟ್ಟದಲ್ಲಿ) ನೀಡುವುದು. ಸದಸ್ಯತ್ವದ ಪುನರ್ ನವೀಕರಣ ಮತ್ತು ವಿಸ್ಥರಿಸುವ ಪ್ರಕ್ರಿಯೆ ಇದಾಗಿದೆ. ಇದನ್ನು "ಸಹಕಾರ ಔದ್ಯೋಗಿಕ ಸಂಸ್ಥೆಯ ಸದ್ಗುಣಶೀಲ ಚಕ್ರ" ಎಂದು ವಿವರಿಸಲಾಗುತ್ತದೆ. ಈ ಸುಸ್ಥಿರ ಅಭಿವೃದ್ಧಿಯ ಬದ್ಧತೆ, ಹೊಸ ಸದಸ್ಯರ, ಹೆಚ್ಚಳವಾದ ವ್ಯವಹಾರ ಮತ್ತು ಹೆಚ್ಚಿನ ಉಳಿತಾಯದಿಂದ ಸಹಕಾರ ಸಂಘದ ಆರ್ಥಿಕ ಯಶಸ್ಸಿಗೆ ಕಾರಣವಾಗಿ ಲಾಭದಾಯಕವಾಗಿ ಪರಿಣಮಿಸುತ್ತದೆ. ಈ ದೀರ್ಘಾವಧಿ ಸುಸ್ಥಿರತೆಯು ದೀರ್ಘಾವಧಿ ಬದ್ಧತೆ ಮತ್ತು ಸಮುದಾಯದೊಡನೆ ಅವಿರತ ಸಂಬಂಧದಿಂದ ಮಾತ್ರ ಸಾಧ್ಯ. ಇದು ಸಹಕಾರ ಸಂಘ ಮತ್ತು ಸಮುದಾಯ ಎರಡಕ್ಕೂ ಪರಸ್ಪರ ಅನುಕೂಲಕರ ಎಂಬುದನ್ನು ಮನಗಾಣಬೇಕು.

**ಆರ್ಥಿಕ, ಪರಿಸರಾತ್ಮಕ ಮತ್ತು ಸಾಮಾಜಿಕ ಸುಸ್ಥಿರತೆಯ ಪರಿಣಾಮಗಳನ್ನು (ಪ್ರಭಾವ) ವರದಿ ಮಾಡುವುದು.**

ಸಹಕಾರ ಸಂಘಗಳು ಈ ವಿಷಯಗಳಲ್ಲಿ ತಮ್ಮ ಸಮುದಾಯಗಳಲ್ಲಿ ಹೇಗೆ ಎಷ್ಟರಮಟ್ಟಿಗೆ ಪ್ರಭಾವ (ಪರಿಣಾಮ) ಬೀರಿದೆ ಎಂಬುದರ ಬಗ್ಗೆ ವರದಿ ಮಾಡುವದು ಅತ್ಯುತ್ತಮ ರೂಢಿಯಾಗುತ್ತದೆ. ಅಲ್ಲದೆ ಅದು ಸಹಕಾರ ತತ್ವಗಳನ್ನು ಪಾಲಿಸುವುದನ್ನು ಹೇಗೆ ಒಳಗೊಂಡಿದೆ ಎಂಬುದನ್ನು ತಿಳಿಸುವುದು. ಮೈತ್ರಿ ಸಂಸ್ಥೆಯು ಸುಸ್ಥಿರತೆ ಸಲಹಾ ಗುಂಪನ್ನು ರಚಿಸಿದೆ.

ಸಹಕಾರ ಸಂಸ್ಥೆಗಳು ಜಾಗತಿಕ ಚಾಲನೆಯಲ್ಲಿ ಒಂದು ಭಾಗವಾಗಿ ಪಾರದರ್ಶಕ ವರದಿಗೆ ಬದ್ಧರಾಗಿರಬೇಕು. ಸುಸ್ಥಿರ ಸಲಹಾ ಗುಂಪು ಶಿಫಾರಸ್ಸು ಮಾಡಿರುವ ವರದಿ ಮಾದರಿಯಲ್ಲಿ ವರದಿ ಮಾಡುವುದಕ್ಕೆ ಎಲ್ಲ ಸಹಕಾರ ಸಂಘಗಳಿಗೂ ಉತ್ತೇಜಿಸುತ್ತದೆ.

## 4. ಭವಿಷ್ಯಕ್ಕಾಗಿ ಪರಿಗಣಿಸಬೇಕಾದ ಅಂಶಗಳು ಸುಸ್ಥಿರ ಅಭಿವೃದ್ಧಿಯ ಸವಾಲುಗಳನ್ನು ಪ್ರಕಟಿಸುವುದು

ಸಹಕಾರ ಸಂಘಗಳು ಸದಸ್ಯರು ಮತ್ತು ಸಾರ್ವಜನಿಕರು ಸ್ಥಳೀಯ ಮತ್ತು ಜಾಗತಿಕವಾಗಿ ಸುಸ್ಥಿರ ಅಭಿವೃದ್ಧಿಗಿರುವ ಸವಾಲುಗಳು ಮತ್ತು ಪರಿಣಾಮಕಾರಿ ಯಾಗಿ ಅದನ್ನು ಅನುಷ್ಠಾನಗೊಳಿಸುವ ಬಗ್ಗೆ ಎಚ್ಚರಿಸುವ ವಿಶೇಷ ಜವಾಬ್ದಾರಿ ಯನ್ನು ಹೊಂದಿವೆ. "ಸಹಕಾರ ದಶಕಕ್ಕಾಗಿ ನೀಲಿ ನಕ್ಷೆ" ಯನ್ನು ತಯಾರಿಸಿದ್ದು ಅದರಲ್ಲಿ "ಸುಸ್ಥಿರತೆ"ಗೆ ಆದ್ಯತೆ ನೀಡಲಾಗಿದೆ. ಅದರಲ್ಲಿ "ಸಹಕಾರ ಸಂಘಗಳು ಶೋಷಣೆಗೆ ಅವಕಾಶ ನೀಡದೆ ಸರಕು ಮತ್ತು ಸೇವೆಯನ್ನು ಒದಗಿಸುತ್ತಿವೆ. ಇದು ಕೆಲವು ಮೌಲ್ಯಗಳನ್ನು ಆಧರಿಸಿದ್ದು ಅದನ್ನು ನಾವು ಸುಸ್ಥಿರತೆ ಎಂದು ಕರೆಯುತ್ತಿದ್ದೇವೆ. ಮಾನವನ ಅವಶ್ಯಕತೆಯನ್ನು ಕೇಂದ್ರೀಕರಿಸಿ ವಿಶಿಷ್ಟ ರೀತಿಯ "ಹಂಚಿಕೊಂಡ ಮೌಲ್ಯಗಳನ್ನು ಸುಸ್ಥಿರತೆಯ ಬಿಕ್ಕಟ್ಟು ಎದುರಿಸುತ್ತಿರುವ ಈ ದಿನಗಳಲ್ಲಿ ಒದಗಿಸುತ್ತಿದೆ. ಸರಳವಾಗಿ ಹೇಳುವುದಾದರೆ ಸಹಕಾರವೇ ಒಂದು ಸುಸ್ಥಿರತೆಯ ಸಮೂಹ ಅನ್ವೇಷಣೆ. ಸಹಕಾರ ಸಂಘಗಳು ಯಾವುದೇ ಒಬ್ಬ ಭಾಗೀದಾರನಿಗೆ 'ಗರಿಷ್ಠ' ಲಾಭವಾಗದಂತೆ ಅನೇಕ ಭಾಗೀದಾರರುಗಳಿಗೆ 'ಹಿತಕರ' (ಪ್ರಶಸ್ತ) ಲಾಭವನ್ನು ತಂದುಕೊಡುತ್ತವೆ. ಬೆಳೆಯುತ್ತಿರುವ ಸಹಕಾರ ವಲಯಕ್ಕೆ ಸ್ಫೂರ್ತಿಯೇ ಆರ್ಥಿಕ, ಸಾಮಾಜಿಕ ಮತ್ತು ಪರಿಸರಾತ್ಮಕ ಸುಸ್ಥಿರತೆಯ ನಿರ್ಮಾಣ ಈ ಚಾರಿತ್ರ್ಯಾತ್ಮಕ ಸಂದರ್ಭದಲ್ಲಿ ಸಹಕಾರ ಸಂಘಗಳು ಏಕೆ ಅವಶ್ಯ ಮತ್ತು ಲಾಭದಾಯಕ ಪ್ರಶ್ನೆಗೆ ಉತ್ತರಿಸುತ್ತಿವೆ".

**ಸುಸ್ಥಿರ ಅಭಿವೃದ್ಧಿಗೆ ಗುರಿಗಳನ್ನು ನಿಗಧಿಪಡಿಸುವುದು.**

ನೀಲಿ ನಕ್ಷೆಯು ಆರ್ಥಿಕ, ಸಾಮಾಜಿಕ ಮತ್ತು ಪರಿಸರಾತ್ಮಕ ಮೂರು ವಲಯಗಳಗೆ ಗುರಿನಿಗದಿಪಡಿಸುತ್ತದೆ ಮತ್ತು ಇದರ ಸಾಧನೆ ಮಾಡುವ ಬಗೆಯನ್ನು ವಿವರಿಸುತ್ತದೆ. ಈ ಶಿಫಾರಸ್ಸುಗಳನ್ನು ಸಹಕಾರ ಸಂಘಗಳು ಅನುಷ್ಠಾನಗೊಳಿಸಿದಲ್ಲಿ "2020ಕ್ಕೆ ಆರ್ಥಿಕ ಸಾಮಾಜಿಕ, ಪರಿಸರಾತ್ಮಕ ಸುಸ್ಥಿರತೆಯ ನಾಯಕರಾಗುತ್ತವೆ. ಈ ಮಾದರಿಯನ್ನು ಜನರು ಅಪೇಕ್ಷಿಸುತ್ತಾರೆ ಮತ್ತು ಅತಿ ಶೀಘ್ರದ ಬೆಳವಣಿಗೆ ಔದ್ಯೋಗಿಕ ಸಂಸ್ಥೆಯ ಮಾದರಿಯಾಗುತ್ತದೆ". ಎಂದು ನೀಲಿನಕ್ಷೆಯಲ್ಲಿ ತಿಳಿಸಲಾಗಿದೆ. ಸುಸ್ಥಿರ ಅಭಿವೃದ್ಧಿ ಯೋಜನೆಗಳನ್ನು ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನೀತಿಗಳೊಡನೆ ಒದಗಿಸಲಾಗಿದೆ.

**ಜಾಗತಿಕ ಪರಿಸರ ಸಮಸ್ಯೆಗಳ ಗುರುತರತೆ**

ಮೈತ್ರಿ ಸಂಸ್ಥೆಯ 2011ರ ಸಮ್ಮೇಳನದಲ್ಲಿ ಜಾಗತಿಕ ತಾಪಮಾನ ಏರಿಕೆಯ ಇಂಗಾಲ ಸೂಸುವಿಕೆ ಪರಿಣಾಮಗಳನ್ನು, ಅತಿಯಾದ ಕ್ರಿಮಿಕೀಟ ನಾಶಕಗಳ ಬಳಕೆ, ಮಳೆ, ಕಾಡುಗಳ ನಾಶ, ಇವುಗಳ ತಡಗಟ್ಟುವಿಕೆಗೆ ಅಗತ್ಯ ತುರ್ತು ಕ್ರಮಗಳ ಬಗ್ಗೆ ಚರ್ಚೆಗಳಾದವು. ಈ ಕಾರ್ಯಕ್ರಮಗಳನ್ನು ಸ್ಥಳೀಯ ಅಗತ್ಯ ಕ್ರಿಯೆಗಳಾಗಿ ಪರಿವರ್ತಿಸುವ ಅಗತ್ಯವಿದೆ. ಸಹಕಾರ ಸಂಘಗಳು ಇಂಗಾಲ ಹೊರಸೂಸುವಿಕೆ ಕಡಿತಗೊಳಿಸಲು ಪಳೆಯುಳಿಕೆ ಇಂಧನಗಳ ಬಳಸುವಿಕೆಯನ್ನು ಕಡಿತಗೊಳಿಸಬೇಕು. ತಾವು ಬಳಸುತ್ತಿರುವ ಸಾಮಗ್ರಿಗಳು ಉದಾಹರಣೆಗೆ ಕಟ್ಟಡ ನಿರ್ಮಾಣ ಮರಗಳ ಮೂಲ ದಟ್ಟಕಾಡಿನಹಾಗದೆ ಇತರೆ ಮೂಲದ್ದಾಗಿರಬೇಕು.

**ಆರೋಗ್ಯ ರಕ್ಷಣೆ ಮತ್ತು ಇತರೆ ಅತ್ಯಗತ್ಯ ಸೇವೆಗಳ ಲಭ್ಯತೆ.**

ಜಾಗತಿಕ ಆರೋಗ್ಯ ಒತ್ತಾಸೆಯಲ್ಲಿ ಆರೋಗ್ಯ ರಕ್ಷಣೆಯ ಲಭ್ಯತೆ ಮತ್ತು ವೈದ್ಯಕೀಯ ಸೇವೆ ಮಾತ್ರ ಸೇರಿಲ್ಲ. ಶುದ್ಧ ನೀರು, ಶುಚಿತ್ವ ಸೇವೆ, ವಿದ್ಯುಚ್ಛಕ್ತಿ (ಆಹಾರ ಸಂರಕ್ಷಣೆ) ವಸತಿ, ರೋಗಾಣು ರಹಿತ ನೈರ್ಮಲ್ಯಗಳನ್ನು ಒಳಗೊಂಡಿದೆ, ಸಮೂಹದ ಬಗ್ಗೆ ಕಾಳಜಿಯಲ್ಲಿ ವಿಶ್ವ ಸಂಸ್ಥೆಯ ಆಶಯದಂತೆ ಎಷ್ಟರಮಟ್ಟಿಗೆ ಸಹಕಾರ ಸಂಘಗಳು ಕೈಜೋಡಿಸುತ್ತವೆ ಎಂಬುದು ಭವಿಷ್ಯದಲ್ಲಿ ಪ್ರಾಮುಖ್ಯತೆ ಗಳಿಸುತ್ತದೆ.

**ಎಲ್ಲರಿಗೂ ಲಭ್ಯವಾಗುವಂತೆ ತಂತ್ರಾಂಶ(ಸಾಫ್ಟ್‌ವೇರ್)**

ಎಲ್ಲ ಸಹಕಾರ ಸಂಘಗಳಿಗೂ ಕಡಿಮೆ ವೆಚ್ಚದಲ್ಲಿ ತಂತ್ರಾಂಶ ಲಭ್ಯವಾಗುವಂತೆ ಮಾಡುವುದು ಈ ದಿನದ ಅವಶ್ಯಕತೆ. ಬ್ಯಾಂಕಿಂಗ್ ಮತ್ತು ಪತ್ತುಕ್ಷೇತ್ರದಲ್ಲಿ ಅತಿ ಮುಖ್ಯ ಪಾತ್ರ ವಹಿಸುತ್ತಿದೆ. ಅದೇ ರೀತಿಯಲ್ಲಿ ಇತರೆ ಕ್ಷೇತ್ರ/ವಲಯಗಳಿಗೂ ಅನ್ವಯವಾಗುತ್ತದೆ.

**ಇತರೆ ಸಂಸ್ಥೆಗಳೊಡನೆ ಸಹಯೋಗ**

ಸುಸ್ಥಿರ ಅಭಿವೃದ್ಧಿಗಾಗಿ ಕೇವಲ ಸಹಕಾರ ಸಂಘಗಳಿಂದ ಸಾಧ್ಯವಿರುವುದಿಲ್ಲ. ಇತರೆ ಸಂಸ್ಥೆ ಸರ್ಕಾರದ ಸಂಯೋಗ ಅತಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಅವುಗಳೊಡನೆ ಸೂಕ್ತ ಒಪ್ಪಂದಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಸಮುದಾಯ ಸಂಸ್ಥೆಗಳು ಖಾಸಗಿ ಕಂಪನಿಗಳು, ಸ್ವಯಂಸೇವಾ ಸಂಸ್ಥೆಗಳು, ಧರ್ಮ ಸಂಸ್ಥೆಗಳು ಮತ್ತು ಸ್ಥಳೀಯ ಪ್ರಾಂತೀಯ ಆಡಳಿತ ಸಂಸ್ಥೆಗಳು ಸರ್ಕಾರಗಳೊಡನೆ ಸಹಯೋಗ ಒಡಂಬಡಿಕೆಗಳನ್ನು ಮಾಡಿಕೊಳ್ಳುವುದು. ಇದರಲ್ಲಿ ಸಹಕಾರ ಸಂಘದ ಸದಸ್ಯ ಸ್ವಾತಂತ್ರ್ಯಕ್ಕೆ ಪ್ರಜಾಸತ್ತಾತ್ಮಕ ಆಡಳಿತಕ್ಕೆ ಧಕ್ಕೆ ಉಂಟಾಗದಂತೆ ಎಚ್ಚರ ವಹಿಸುವುದು.

**ಜಾಗತಿಕ ಶಾಂತಿ ಮತ್ತು ಸಾಮಾಜಿಕ ಸೌಹಾರ್ಧತೆಯನ್ನು ಅಭಿವೃದ್ಧಿಪಡಿಸುವುದು**

ಸಹಕಾರ ಸಂಘಗಳು ಜಾಗತಿಕ ಶಾಂತಿ ಮತ್ತು ಸೌಹಾರ್ಧತೆ ಅಭಿವೃದ್ಧಿ ಪಡಿಸುವಲ್ಲಿ ಅತಿ ಪ್ರಮುಖ ಪಾತ್ರವನ್ನು ನಿರ್ವಹಿಸಿರುತ್ತವೆ. ಸಹಕಾರ ಮೌಲ್ಯಗಳು ಮತ್ತು ತತ್ವಗಳನ್ನು ಪಾಲಿಸುವುದರಿಂದಲೇ ಶಾಂತಿ ಮತ್ತು ಸಮೃದ್ಧಿಯನ್ನು ಸಾಧಿಸಬಹುದಾಗಿದೆ. ಎಲ್ಲ ಸಹಕಾರ ಸಂಘಗಳು ಸ್ಥಳೀಯ ಸಮುದಾಯದ ಮತ್ತು ಮೀರಿ ಶಾಂತಿ, ಸಾಮಾಜಿಕ ಒಗ್ಗಟ್ಟು ಸಾಮಾಜಿಕ ನ್ಯಾಯ ಮತ್ತು ಎಲ್ಲರ ಸಮೃದ್ಧಿಗೆ ಶ್ರಮಿಸಬೇಕು.

**ನಾಗರಿಕ ಸಮಾಜ ನಿರ್ಮಾಣಕ್ಕೆ ಸಹಾಯ**

7ನೇ ತತ್ವವನ್ನು ಅನ್ವಯಮಾಡಿ ನಾಗರಿಕ ಸಮಾಜ ನಿರ್ಮಾಣ ಮಾಡುವ ಬಗ್ಗೆ ಸಹಕಾರ ಸಂಘಗಳು ಆಲೋಚಿಸಬೇಕು. ಎಲ್ಲ ಹಂತದ ಸಮುದಾಯಗಳ ಸುಸ್ಥಿರ ಅಭಿವೃದ್ಧಿಯಿಂದ ಇದು ಸಾಧ್ಯ. ಮೊದಲು ಸಮುದಾಯದ ಭಾಗವಾಗಿ ಮುಂದುವರೆದು ಜಾಗತಿಕ ಸಮುದಾಯದ ಭಾಗವಾಗಿ ಅಭಿವೃದ್ಧಿಪಡಿಸಬೇಕು. ಸಹಕಾರ ಚಳುವಳಿಯು ಈ ಹಿಂದೆ ಹುಟ್ಟುಹಾಕಿದಂತೆ ಹೋರಾಟಗಾರರನ್ನು ಹುಟ್ಟುಹಾಕಬೇಕಿದೆ. ಈ ಹೋರಾಟಗಾರರು ಸಹಕಾರ ಚಳುವಳಿಯನ್ನು ಮುಂದಕ್ಕೆ ಒಯ್ಯುವುದಲ್ಲದೆ ಮತ್ತು ವಿಶಾಲವಾದ ಪ್ರಗತಿಪರ ಸಂಸ್ಥೆಗಳನ್ನು ಕಟ್ಟುತ್ತಾರೆ. ಸಹಕಾರ ಸಂಘಗಳು ಯಾವಾಗಲೂ ಮಾಡಿರುವಂತೆ ಮುಂದೆಯೂ ನಾಗರಿಕ ಸಮಾಜ ನಿರ್ಮಿಸಲು ತಮ್ಮದೇ ಆದ ಕೊಡುಗೆ ನೀಡಬಲ್ಲವು. ಪ್ರಜಾಸತ್ತೆ ಉಳಿವಿಗೆ ಕಾರಣವಾಗುತ್ತದೆ.

# ಋಗ್ವೇದದಲ್ಲಿ ಸಹಕಾರದ ಐಕ್ಯ ಮೂಲಮಂತ್ರ

ಓಂ ಸಂಗಚ್ಛಧ್ವಂ ಸಂ ವದಧ್ವಂ ಸಂ ವೋ ಮನಾಂಸಿ ಜಾನತಾಮ್ ।
ದೇವಾ ಭಾಗಂ ಯಥಾ ಪೂರ್ವೇ ಸಂ ಜಾನಾನಾ ಉಪಾಸತೇ॥
ಒಂದಾಗಿ ನಡೆಯಿರಿ ಒಮ್ಮತದಿಂದ ಮಾತನಾಡಿರಿ
ನಿಮ್ಮ ಅಂತರಂಗದ ಭಾವನೆಗಳು ಒಂದೇ ರೀತಿ ಇರಲಿ.
ಹಿಂದೆ ದೇವತೆಗಳು ಪರಸ್ಪರ ಸಹಕಾರದಿಂದ ತಮ್ಮ ತಮ್ಮ
ಪಾಲನ್ನು ಪಡೆದುಕೊಂಡಂತೆ ನೀವೂ ಒಟ್ಟಿಗೆ ಸಾಧನೆ
ಮಾಡಿ ನಿಮ್ಮ ಅಭೀಷ್ಟವನ್ನು ಈಡೇರಿಸಿಕೊಳ್ಳಿ.

ಸಮಾನೋ ಮಂತ್ರಃ ಸಮಿತಿಃ ಸಮಾನೀ
ಸಮಾನಂ ಮನಃ ಸಹ ಚಿತ್ತಮೇಷಾಮ್।
ಸಮಾನಂ ಮಂತ್ರಮಭಿ ಮಂತ್ರಯೇ ವಃ
ಸಮಾನೇನ ವೋ ಹವಿಷಾ ಜುಹೋಮಿ॥
ನಿಮ್ಮ ಕಾರ್ಯವಿಚಾರ ಒಂದೇ ಆಗಿರಲಿ. ಅಂದರೆ ಎಲ್ಲರ
ನಿರ್ಣಯ ಒಮ್ಮುಖವಾಗಿರಲಿ. ಸೇರುವ ಸಭೆಯೂ ಒಂದೇ
ಆಗಿರಲಿ. ಎಲ್ಲರ ಚಿತ್ತ ಮನಸ್ಸುಗಳು ಒಂದಾಗಿರಲಿ. ಇಂತಹ
ಐಕ್ಯಕ್ಕಾಗಿಯೇ ಪ್ರಯತ್ನಿಸೋಣ.

ಸಮಾನೀ ವ ಆಕೂತಿ ಸಮಾನಾ ಹೃದಯಾನಿ ವಃ ।
ಸಮಾನಮಸ್ತು ವೋ ಮನೋ ಯಥಾ ವಃ ಸುಸಹತಿ ॥
ಸಂಕಲ್ಪಗಳು ಸಮಾನವಾಗಿರಲಿ. ಹೃದಯಗಳೂ ಒಂದಾಗಲಿ,
ಮನಸ್ಸುಗಳು ಒಂದಾಗಲಿ. ಅಂತಹ ಪರಸ್ಪರ ಸಹಕಾರದಿಂದ
ಕಾರ್ಯವು ಸುಗಮವಾಗಲಿ.
ಓಂ ಶಾಂತಿಃ ಶಾಂತಿಃ ಶಾಂತಿಃ

## ಸಹಕಾರಿ ಧ್ವಜದಲ್ಲಿನ 7 ಬಣ್ಣಗಳು

- ಸಹಕಾರ ಬೇಸಾಯ
- ಸಹಕಾರಿ ಉದ್ದಿಮೆ
- ಸಹಕಾರಿ ಮಾರಾಟ
- ಸಹಕಾರಿ ಪತ್ತು ಮತ್ತು ಹಣಕಾಸು
- ಸಹಕಾರಿ ಶಿಕ್ಷಣ ಮತ್ತು ಪ್ರಚಾರ
- ಮಾನವನ ಇತರೆ ಸಹಕಾರಿ ಚಟುವಟಿಕೆಗಳು
- ಸಹಕಾರಿ ಆರೋಗ್ಯ

## 7 ಸಹಕಾರಿ ತತ್ವಗಳು

1. ಮುಕ್ತ ಹಾಗೂ ಸ್ವಯಂ ಪ್ರೇರಿತ ಸದಸ್ಯತ್ವ
2. ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ
3. ಆರ್ಥಿಕ ಚಟುವಟಿಕೆಗಳ ಸದಸ್ಯರ ಪಾಲು
4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ
5. ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ
6. ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ
7. ಸಾಮಾಜಿಕ ಕಳಕಳಿ


**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.**

ಸೌಹಾರ್ದ ಸಹಕಾರಿ ಸೌಧ, ನಂ.68, 17&18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055

ದೂ : 080-23378375-80, ವೆಬ್ ತಾಣ : www.Souharda.coop